
ಮಂಗಳವಾರ, ಫೆಬ್ರುವರಿ 15, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 46 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮಕುಶಲ
'ವಿಶ್ರಾಂತಿ' ಎನ್ನುವುದು 'ಕೆಲಸ' ಎಂಬುದರ ವಿರುದ್ಧಪದ ಎಂಬ ಭಾವನೆ ನಮ್ಮದು. ಕೆಲವೊಮ್ಮೆ ವಿಶ್ರಾಂತಿ ಎನ್ನುವ ಪದ ನಿದ್ರೆಗೆ ಸಮಾನಾರ್ಥವಾಗಿ ಬಳಕೆಯಾಗುತ್ತದೆ



ಜೆಡಿಎಸ್‌ನಲ್ಲಿ ಅಸಮಾಧಾನದ ಅಲೆ 6
ಆಳ-ಅಗಲ ಪಂಜಾಬ್ ಕಣದಲ್ಲಿ ಕ್ರೀಡಾಕಲಿಗಳು
'ಕೋವಿಡ್ ಎದುರಿಸುವಲ್ಲಿ ಸರ್ಕಾರ ಯಶಸ್ವಿ' 7

ಸೆನ್ಸೆಕ್ಸ್	ನಿಫ್ಟಿ	₹/$
56,405	16,842	75.60

ಬಿಪಿಎಲ್ ಕಾರ್ಡ್ ಹೊಂದಿರುವ 21,232 ಸರ್ಕಾರಿ ನೌಕರರಿಗೆ ದಂಡ

• ರಾಜೇಶ್ ರೈ ಚಟ್ಲ

ಪ್ರಜಾವಾಣಿ ವಿಶೇಷ

ಬೆಂಗಳೂರು: ರಾಜ್ಯದಲ್ಲಿ 21,232 ಸರ್ಕಾರಿ ನೌಕರರು ಬಿಪಿಎಲ್ (ಆದ್ಯತಾ) ಪಡಿತರ ಚೀಟಿ ಹೊಂದಿರುವುದು ಪತ್ತೆಯಾಗಿದೆ. ಈ ಪೈಕಿ, ಕೆಲವರು ಕಡುಬಡವರಿಗೆ ನೀಡಲಾಗುವ ಅಂತ್ಯೋದಯ ಅನ್ನ ಯೋಜನೆ (ಎಎವೈ) ಕಾರ್ಡ್ ಹೊಂದಿದ್ದಾರೆ!

ಇದೀಗ, ಆಹಾರ ಇಲಾಖೆಯ ಆಯುಕ್ತರ ಸೂಚನೆಯಂತೆ ತಾಲ್ಲೂಕು ಹಂತದಲ್ಲಿ ಇಲಾಖೆಯ ಅಧಿಕಾರಿಗಳ ಮೂಲಕ 'ಅಗತ್ಯ ವಸ್ತುಗಳ ಕಾಯ್ದೆ ಹಾಗೂ ಸೇವಾ ನಿಯಮ'ಗಳಡಿ ಕಾರಣ ಕೇಳಿ ಈ ನೌಕರರಿಗೆ ನೋಟಿಸ್ ನೀಡಲಾಗುತ್ತಿದೆ. ಅಲ್ಲದೆ, ಅಂಥ ನೌಕರರಿಗೆ ತಲಾ ₹ 40 ಸಾವಿರದಿಂದ ₹ 1.50 ಲಕ್ಷದವರೆಗೆ ದಂಡ ವಿಧಿಸಲಾಗಿದೆ.

ಸರ್ಕಾರ ನಿಗದಿಪಡಿಸಿರುವ ಮಾನದಂಡ ಉಲ್ಲಂಘಿಸಿ ಎಎವೈ ಮತ್ತು ಬಿಪಿಎಲ್ ಪಡಿತರ ಚೀಟಿ ಹೊಂದಿರುವ ಸರ್ಕಾರಿ ಹಾಗೂ ಅರೆ ಸರ್ಕಾರಿ ನೌಕರರ ಮಾಹಿತಿಯನ್ನು ನೀಡುವಂತೆ ಇ-ಆಡಳಿತಕ್ಕೆ (ಆರ್ಥಿಕ ಇಲಾಖೆ) ಆಹಾರ ಇಲಾಖೆ ತಿಳಿಸಿತ್ತು. ಅದರಂತೆ, ಎಚ್‌ಆರ್‌ಎಂಎಸ್ (ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆ) ದತ್ತಾಂಶದಲ್ಲಿರುವ ನೌಕರರಲ್ಲಿ ಯಾರೆಲ್ಲ ಎಎವೈ, ಬಿಪಿಎಲ್ ಪಡಿತರ ಚೀಟಿ ಹೊಂದಿದ್ದಾರೆ ಎಂಬ ಮಾಹಿತಿಯನ್ನು ಆಹಾರ ಇಲಾಖೆ ಪಡೆದುಕೊಂಡಿದೆ.

'ಬಿಪಿಎಲ್ ಪಡಿತರ ಚೀಟಿಯನ್ನು ಸರ್ಕಾರ ಹಾಗೂ ಸರ್ಕಾರದ ವಿವಿಧ ಸಂಸ್ಥೆಗಳಲ್ಲಿ ಕೆಲಸ ಮಾಡುವ ಯಾವುದೇ ನೌಕರ ಅಥವಾ ಅವರ ಅವಲಂಬಿತ ಕುಟುಂಬ ಹೊಂದಿದ್ದರೆ, ಒಂದು ತಿಂಗಳಲ್ಲಿ ಅದನ್ನು ಆಹಾರ ಇಲಾಖೆಗೆ ಹಿಂದಿರುಗಿಸಿ ರದ್ದುಪಡಿಸಿಕೊಳ್ಳಬೇಕು. ಇಲ್ಲದಿದ್ದರೆ ಅಂಥವರ ವಿರುದ್ಧ ಶಿಸ್ತುಕ್ರಮ ಮತ್ತು ಕ್ರಿಮಿನಲ್ ಮೊಕದ್ದಮೆ ಹೂಡಿ, ನಷ್ಟ ವಸೂಲು ಮಾಡಲಾಗುವುದು' ಎಂದು ಮುಖ್ಯ ಕಾರ್ಯದರ್ಶಿಯಾಗಿದ್ದ ಟಿ.ಎಂ. ವಿಜಯಭಾಸ್ಕರ್ ಅವರು 2020ರ ಜೂನ್ 10ರಂದು ಸುತ್ತೋಲೆ ಹೊರಡಿಸಿದ್ದರು.

ಅನರ್ಹರು ಹೊಂದಿರುವ ಎಎವೈ, ಬಿಪಿಎಲ್ ಪಡಿತರ ಚೀಟಿಯನ್ನು ವಿವಿಧ ಇಲಾಖೆಗಳ ಸಹಯೋಗದಲ್ಲಿ ಪತ್ತೆ ಮಾಡಲು ಆಹಾರ ಸಚಿವರ ಅಧ್ಯಕ್ಷತೆಯಲ್ಲಿ ವರ್ಷದ ಹಿಂದೆ (2021ರ ಫೆ. 17ರಂದು) ನಡೆದ ಇಲಾಖೆ ಅಧಿಕಾರಿಗಳ ಸಭೆಯಲ್ಲಿ ತೀರ್ಮಾನಿಸಲಾಗಿತ್ತು. ಇದೀಗ, ಎಚ್‌ಆರ್‌ಎಂಎಸ್ ದತ್ತಾಂಶದ ಮೂಲಕ ಎಎವೈ, ಬಿಪಿಎಲ್ ಕಾರ್ಡ್‌ದಾರರ ಮಾಹಿತಿ ಪಡೆದು, ಅದನ್ನು ಎನ್‌ಐಸಿ (ನ್ಯಾಷನಲ್ ಇನ್ಫಾರ್ಮೆಟಿಕ್ಸ್ ಸೆಂಟರ್)ಗೆ ನೀಡಿ ಪರಿಶೀಲನೆ ನಡೆಸಲಾಗಿದೆ. ಆ ಪಟ್ಟಿಯನ್ನು ಆಧರಿಸಿ, ಎಲ್ಲ ಜಿಲ್ಲಾಧಿಕಾರಿಗಳು ಮತ್ತು ಇಲಾಖೆಯ ಜಂಟಿ ಹಾಗೂ ಉಪ ನಿರ್ದೇಶಕರಿಗೆ ಹಲವು ಬಾರಿ ಪತ್ರ ಬರೆದಿರುವ ಆಹಾರ ಇಲಾಖೆ ಆಯುಕ್ತರು, ಸರ್ಕಾರಿ, ಅರೆ ಸರ್ಕಾರಿ ನೌಕರರು ಹೊಂದಿರುವ ಎಎವೈ ಮತ್ತು ಬಿಪಿಎಲ್ ಪಡಿತರ ಚೀಟಿಯನ್ನು ಎಪಿಎಲ್ (ಆದ್ಯತೇತರ) ಪಡಿತರ ಚೀಟಿಯಾಗಿ ಪರಿವರ್ತಿಸುವಂತೆ ಸೂಚಿಸಿದ್ದರು.

'ಹಲವು ಬಾರಿ ಸೂಚನೆ ನೀಡಿದ್ದರೂ ಎಎವೈ, ಬಿಪಿಎಲ್ ಕಾರ್ಡ್ ಹೊಂದಿದ್ದ ಅನೇಕ ಸರ್ಕಾರಿ ನೌಕರರು ಅದನ್ನು ರದ್ದುಪಡಿಸಿಕೊಂಡಿಲ್ಲ. ಎಪಿಎಲ್ ಕಾರ್ಡ್ ಆಗಿಯೂ ಪರಿವರ್ತಿಸಿಕೊಂಡಿಲ್ಲ. ಹೀಗಾಗಿ, ದಂಡ ವಿಧಿಸುವ ಜೊತೆಗೆ, ಕಾರಣ ಕೇಳಿ ನೋಟಿಸ್ ನೀಡಲಾಗುತ್ತಿದೆ' ಎಂದು ಆಹಾರ ಇಲಾಖೆ ಮೂಲಗಳು ತಿಳಿಸಿವೆ.


'ಆರು ತಿಂಗಳ ಕಾಲಾವಕಾಶ ಕೊಡಿ'

'ಸರ್ಕಾರಿ ಹುದ್ದೆಗೆ ನೇಮಕಗೊಂಡ ಬಳಿಕ ಕುಟುಂಬ (ತಂದೆ, ತಾಯಿ) ಹೊಂದಿರುವ ಬಿಪಿಎಲ್ ಪಡಿತರ ಚೀಟಿಯಿಂದ ಹೆಸರು ತೆಗೆದುಹಾಕಿಸಿದ್ದೇನೆ. ಆದರೂ ನೋಟಿಸ್ ನೀಡಲಾಗಿದೆ' ಎಂದು ಹೆಸರು ಬಹಿರಂಗಪಡಿಸಲು ಬಯಸದ ಸರ್ಕಾರಿ ನೌಕರರೊಬ್ಬರು ತಿಳಿಸಿದರು.

'ಅವಿವಾಹಿತರಾಗಿರುವವರು ಸೇವಾ ಪುಸ್ತಕದಲ್ಲಿ ತಂದೆ-ತಾಯಿ ಹೆಸರು ನಾಮನಿರ್ದೇಶನ ಮಾಡಿದ್ದಾರೆ. ಅವರು ಬಿಪಿಎಲ್ ಕಾರ್ಡ್ ಹೊಂದಿದ್ದರೂ ದಂಡ ಕಟ್ಟುವಂತೆ ಇಲಾಖೆ ಸೂಚಿಸಿದೆ. ಎಎವೈ, ಬಿಪಿಎಲ್ ಕಾರ್ಡ್‌ನಲ್ಲಿ ಹೆಸರಿರುವವರು ಅದನ್ನು ರದ್ದುಪಡಿಸಿಕೊಳ್ಳಬೇಕೆಂಬ ಸರ್ಕಾರದ ಆದೇಶ ಶೇ 95ರಷ್ಟು ನೌಕರರಿಗೆ ಗೊತ್ತಿಲ್ಲ. ಆದ್ದರಿಂದ, ಆರು ತಿಂಗಳ ಕಾಲಾವಕಾಶ ನೀಡಿ, ದಂಡ ವಸೂಲಿಯಿಂದ ಮುಕ್ತಗೊಳಿಸಬೇಕು' ಎಂದೂ ಕೆಲವು ನೌಕರರು ಆಗ್ರಹಿಸಿದ್ದಾರೆ.

ನೋಟಿಸ್‌ನಲ್ಲಿ ಏನಿದೆ?

'ನೀವು ಎಎವೈ/ ಬಿಪಿಎಲ್ ಕಾರ್ಡ್ (ಕಾರ್ಡ್ ಸಂಖ್ಯೆ) ಹೊಂದಿದ್ದು, ಸರ್ಕಾರಿ ಸೇವೆಯಲ್ಲಿದ್ದರೂ ಅದನ್ನು ಹಿಂದಿರುಗಿಸಿಲ್ಲ. ಸರ್ಕಾರದ ಯೋಜನೆಗಳನ್ನು ಅಕ್ರಮವಾಗಿ ಬಳಸುತ್ತಿದ್ದೀರಿ. ಸುಳ್ಳು ಮಾಹಿತಿ ನೀಡಿ ಪಡಿತರ ಚೀಟಿ ಪಡೆಯುವುದು ಕಾನೂನುರೀತ್ಯ ಅಪರಾಧ. ಆಹಾರ ಇಲಾಖೆಗೆ ಈ ಬಗ್ಗೆ ವಿವರಣೆ ನೀಡದಿದ್ದರೆ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗುವುದು' ಎಂದು ನೋಟಿಸ್‌ನಲ್ಲಿ ಎಚ್ಚರಿಕೆ ನೀಡಲಾಗಿದೆ.



ಎಎವೈ, ಬಿಪಿಎಲ್ ಕಾರ್ಡ್ ಹೊಂದಿರುವ ಆದಾಯ ತೆರಿಗೆ ಪಾವತಿದಾರರು ಮತ್ತು ಸರ್ಕಾರಿ ನೌಕರರ ಕಾರ್ಡ್ ರದ್ದುಪಡಿಸಿ, ದಂಡ ವಸೂಲಿ ಜೊತೆಗೆ ಕಾನೂನು ಕ್ರಮಕ್ಕೆ ನೋಟಿಸ್ ನೀಡಲಾಗುತ್ತಿದೆ
ಉಮೇಶ ಕತ್ತಿ, ಆಹಾರ ಸಚಿವ

ಶಾಲೆ ಶುರು: ಕೆಲವೆಡೆ ವಾಗ್ವಾದ

ಹಿಜಾಬ್ ಧರಿಸಿ ಬಂದಿದ್ದ ವಿದ್ಯಾರ್ಥಿಗಳ ಮನವೊಲಿಕೆ • ಮುಂಜಾಗ್ರತೆಯಾಗಿ ಪೊಲೀಸ್ ಭದ್ರತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಜಾಬ್-ಕೇಸರಿ ಶಾಲು ಕುರಿತ ಹೈಕೋರ್ಟ್ ಮಧ್ಯಂತರ ಆದೇಶದ ನಡುವೆಯೇ ರಾಜ್ಯದಾದ್ಯಂತ ಪ್ರೌಢಶಾಲಾ ತರಗತಿಗಳು ಸೋಮವಾರ ಪುನರಾರಂಭವಾದವು. ಮೊದಲ ದಿನ ಅಲ್ಲಲ್ಲಿ ವಿದ್ಯಾರ್ಥಿನಿಯರು, ಕೆಲ ಶಿಕ್ಷಕಿಯರು ಹಿಜಾಬ್ ಧರಿಸಿ ಬಂದಿದ್ದರು. ಇದು ವಾಗ್ವಾದಕ್ಕೆ ಕಾರಣವಾಯಿತು. ಕೆಲವೆಡೆ ವಿದ್ಯಾರ್ಥಿನಿಯರು ಹಿಜಾಬ್ ತೆಗೆದಿಟ್ಟು ತರಗತಿಗೆ ತೆರಳಿದರೆ, ಇನ್ನು ಕೆಲವೆಡೆ ನಿರಾಕರಿಸಿ ಪೋಷಕರೊಡನೆ ಮನೆಗೆ ಹಿಂತಿರುಗಿದರು.

ಶಾಲೆಗಳ ಗೇಟ್ ಬಳಿಯೇ ವಿದ್ಯಾರ್ಥಿನಿಯರನ್ನು ಅಡ್ಡಗಟ್ಟಿ ಹಿಜಾಬ್ ತೆಗೆಸುತ್ತಿದ್ದ ವಿಡಿಯೊಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದವು. ವಿದ್ಯಾರ್ಥಿನಿಯರಿಂದ ಸಾರ್ವಜನಿಕವಾಗಿ ಹಿಜಾಬ್ ತೆಗೆಸಿದ್ದು ಸರಿಯಲ್ಲ ಎಂಬ ಆಕ್ಷೇಪಗಳು ಕೇಳಿಬಂದವು.

ಮಂಗಳೂರು, ಉಡುಪಿ ಸೇರಿದಂತೆ ಬಹುತೇಕ ಕಡೆ ಶಾಲೆಗಳ ಬಳಿ ಬಿಗಿ ಬಂದೋಬಸ್ತ್ ಏರ್ಪಡಿಸಲಾಗಿತ್ತು. ಸಣ್ಣ ಮಟ್ಟಿಗೆ ವಾಗ್ವಾದ ಘಟನೆಗಳನ್ನು ಹೊರತುಪಡಿಸಿದರೆ ಪರಿಸ್ಥಿತಿ ಬಹುತೇಕ ಶಾಂತಿಯುತವಾಗಿತ್ತು.

ಶಿವಮೊಗ್ಗದಲ್ಲಿ ಸರ್ಕಾರಿ ಪ್ರೌಢ ಶಾಲೆಯ 13 ವಿದ್ಯಾರ್ಥಿನಿಯರು ಹಿಜಾಬ್ ತೆಗೆಯಲು ನಿರಾಕರಿಸಿದ್ದು, ಎಸ್‌ಎಸ್‌ಎಲ್‌ಸಿ ಸಿದ್ಧತಾ ಪರೀಕ್ಷೆಗೂ ಹಾಜರಾಗದೇ ವಾಪಸಾದರು. 'ನಾವು ಹೈಕೋರ್ಟ್‌ನ ಅಂತಿಮ ಆದೇಶದವರೆಗೂ ಕಾಯುತ್ತೇವೆ' ಎಂದು ಈ ವಿದ್ಯಾರ್ಥಿನಿಯರು ತಿಳಿಸಿದರು.

'ವಿದ್ಯಾರ್ಥಿನಿಯರ ಮನವೊಲಿಸುವ ಶಿಕ್ಷಕರ ಯತ್ನ ವಿಫಲವಾಯಿತು. ಪರೀಕ್ಷೆ ಮುಖ್ಯ. ಈ ಹಿಂದೆ ಬರುತ್ತಿದ್ದಂತೆ ಹಿಜಾಬ್ ಧರಿಸದೇ ಬನ್ನಿ ಎಂದು ಮಕ್ಕಳಿಗೆ ಮನವಿ ಮಾಡುತ್ತೇನೆ' ಎಂದು ಶಿವಮೊಗ್ಗ ಜಿಲ್ಲಾ ಉಸ್ತುವಾರಿ ಸಚಿವ ಕೆ.ಸಿ.ನಾರಾಯಣಗೌಡ ಅವರು ಪ್ರತಿಕ್ರಿಯಿಸಿದರು.

7ನೇ ಪುಟ ನೋಡಿ

ಪಿಯು, ಪದವಿ ತರಗತಿ ನಾಳೆಯಿಂದ ಆರಂಭ

ಬೆಂಗಳೂರು: ಇದೇ ಬುಧವಾರದಿಂದ (ಫೆ.16) ಪಿಯುಸಿಯಿಂದ ಸ್ನಾತಕೋತ್ತರ ಪದವಿವರೆಗಿನ ತರಗತಿಗಳನ್ನು ಪುನರಾರಂಭಿಸಲು ರಾಜ್ಯ ಸರ್ಕಾರ ತೀರ್ಮಾನಿಸಿದೆ.

ಹಿಜಾಬ್ ಮತ್ತು ಕೇಸರಿ ಶಾಲು ವಿವಾದದ ಕಾರಣಕ್ಕೆ ಈ ಹಿಂದೆ ರಜೆ ಘೋಷಿಸಲಾಗಿತ್ತು. 9-10ನೇ ತರಗತಿಗಳಿಗೆ ಸೋಮವಾರ ತರಗತಿಗಳು ಶುರುವಾಗಿದ್ದವು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್, ಗೃಹ ಸಚಿವ ಆರಗ ಜ್ಞಾನೇಂದ್ರ, ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಮತ್ತು ಹಿರಿಯ ಅಧಿಕಾರಿಗಳ ಜತೆ ಸೋಮವಾರ ರಾತ್ರಿ ಸಭೆ ನಡೆಸಿದರು.

4ನೇ ಪುಟ ನೋಡಿ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಉಡುಪಿ ಜಿಲ್ಲೆಯಲ್ಲಿ 295 ಪ್ರೌಢಶಾಲೆಗಳಿದ್ದು, ನ್ಯಾಯಾಲಯದ ಆದೇಶದಂತೆ ವಿದ್ಯಾರ್ಥಿಗಳು ಸಮವಸ್ತ್ರ ಮಾತ್ರ ಧರಿಸಿ ಹಾಜರಾಗಿದ್ದಾರೆ
ರಘುಪತಿ ಭಟ್, ಶಾಸಕ

'ಸಮವಸ್ತ್ರ ಬಣ್ಣದ ಹಿಜಾಬ್‌ಗೆ ಅವಕಾಶ ಕೊಡಿ'

ಬೆಂಗಳೂರು: 'ಮುಸ್ಲಿಂ ವಿದ್ಯಾರ್ಥಿನಿಯರು ಸಮವಸ್ತ್ರದ ಬಣ್ಣಕ್ಕೆ ಹೊಂದಿಕೊಂಡಂತೆ ಹಿಜಾಬ್ ಮಾದರಿಯ ಸ್ಕಾರ್ಫ್ ಧರಿಸಿ ತರಗತಿಗಳಿಗೆ ಪ್ರವೇಶಿಸಲು ಅನುಮತಿ ನೀಡಬೇಕು' ಎಂದು ಹಿಜಾಬ್ ಪ್ರಕರಣದ ಅರ್ಜಿದಾರರ ಪರ ವಕೀಲರು ಹೈಕೋರ್ಟ್‌ಗೆ ಮನವಿ ಮಾಡಿದ್ದಾರೆ.

ಹಿಜಾಬ್ ಧರಿಸಿ ಪ್ರವೇಶಿಸುವುದನ್ನು ನಿರ್ಬಂಧಿಸಿದ್ದ ಕೆಲ ಶಾಲೆ-ಕಾಲೇಜುಗಳ ನಿರ್ಧಾರ ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ದಾಖಲಾಗಿರುವ ಎಲ್ಲ ರಿಟ್ ಅರ್ಜಿಗಳ ವಿಚಾರಣೆಯನ್ನು, ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ, ನ್ಯಾಯಮೂರ್ತಿಗಳಾದ ಕೃಷ್ಣ ಎಸ್.ದೀಕ್ಷಿತ್ ಮತ್ತು ಖಾಜಿ ಜೈಬುನ್ನಿಸಾ ಮೊಹಿಯುದ್ದೀನ್ ಅವರಿದ್ದ ಮೂವರು ಸದಸ್ಯರ ಸಾಂವಿಧಾನಿಕ ನ್ಯಾಯಪೀಠ ಸೋಮವಾರ ಮುಂದುವರಿಸಿತು.



'ಪ್ರಜಾಪ್ರಭುತ್ವದ ನಾಲ್ಕನೇ ಅಂಗವಾದ ಮಾಧ್ಯಮಗಳು ಅತ್ಯಂತ ಜವಾಬ್ದಾರಿಯುತವಾಗಿ ನಡೆದುಕೊಳ್ಳಬೇಕು. ಈ ಸಂದರ್ಭದಲ್ಲಿ ನಾವು ಯಾವುದೇ ನಿರ್ದೇಶನ ನೀಡುತ್ತಿಲ್ಲ. ಆದರೂ, ಜವಾಬ್ದಾರಿಯಿಂದ ನಡೆದುಕೊಳ್ಳುವಂತೆ ಕೋರುತ್ತೇವೆ
ಋತುರಾಜ್ ಅವಸ್ಥಿ
ಮುಖ್ಯ ನ್ಯಾಯಮೂರ್ತಿ

7ನೇ ಪುಟ ನೋಡಿ



ರೈತರ ಪ್ರತಿಭಟನೆ ರಾಜ್ಯ ಸರ್ಕಾರ ಜಾರಿಗೊಳಿಸಿರುವ ಕೃಷಿ ಕಾಯ್ದೆಯನ್ನು ವಾಪಸ್ ಪಡೆಯುವಂತೆ ಒತ್ತಾಯಿಸಿ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ನೇತೃತ್ವದಲ್ಲಿ ಸೋಮವಾರ ವಿಧಾನಸೌಧಕ್ಕೆ ಮುತ್ತಿಗೆ ಹಾಕಲು ಹೊರಟಿದ್ದ ರೈತರನ್ನು ಪೊಲೀಸರು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದ ಬಳಿಯೇ ತಡೆದರು ಪ್ರಜಾವಾಣಿ ಚಿತ್ರ/ರಂಜು ಪಿ.

ಸುದ್ದಿ 6

ಚೀನಾದ ವಿವಿಧ 54 ಆ್ಯಪ್‌ಗಳಿಗೆ ನಿಷೇಧ

ನವದೆಹಲಿ (ಪಿಟಿಐ): ಭದ್ರತೆ ಮತ್ತು ಖಾಸಗೀತನಕ್ಕೆ ಧಕ್ಕೆ ಬರಲಿದೆ ಎಂಬ ಕಾರಣಕ್ಕಾಗಿ ಕೇಂದ್ರ ಸರ್ಕಾರ ಹೊಸದಾಗಿ ಚೀನಾದ 54 ಮೊಬೈಲ್ ಆ್ಯಪ್‌ಗಳಿಗೆ ನಿಷೇಧ ಹೇರಿದೆ. ಟೆನ್ಸೆಂಟ್ ಎಕ್ಸ್‌ರಿವರ್, ನೈಸ್ ವಿಡಿಯೊ ಬೈಡೂ, ವಿವಾ ವಿಡಿಯೊ ಎಡಿಟರ್ ಅಪ್ಲಿಕೇಷನ್‌ಗಳು ಇದರಲ್ಲಿ ಸೇರಿವೆ.

ಮೂಲಗಳ ಪ್ರಕಾರ, ಈ 54 ಅಪ್ಲಿಕೇಷನ್‌ಗಳ ಮೂಲಕ ಬಳಕೆದಾರರ ಮಾಹಿತಿಗಳನ್ನು ಸಂಗ್ರಹಿಸಲಾಗುತ್ತಿತ್ತು. ಇವುಗಳನ್ನು ವೈರಿ ದೇಶದಲ್ಲಿ ನೆಲೆ ಇರುವ ಸರ್ವರ್‌ಗಳಿಗೆ ರವಾನಿಸಲಾಗುತ್ತಿತ್ತು. ಈ ಆ್ಯಪ್‌ಗಳು ದೇಶದ ಏಕತೆಗೆ ಭಂಗ ತರುವಂತಹದ್ದಾಗಿದ್ದವು ಎಂದು ತಿಳಿಸಿದೆ.

ಬ್ಯೂಟಿ ಕ್ಯಾಮೆರಾ, ಸ್ವೀಟ್ ಸೆಲ್ಫಿ ಎಚ್.ಡಿ, ಬ್ಯೂಟಿ ಕ್ಯಾಮೆರಾ, ರೈಸ್ ಆಫ್ ಕಿಂಗ್‌ಡಂ, ಲಾಸ್ಟ್ ಕ್ರುಸೆಡ್, ಗರೆನಾ ಫ್ರೀ ಫೈರ್-ಇಲ್ಯುಮಿನೇಟ್, ಆಸ್ಟ್ರಾಕ್ರಾಫ್ಟ್, ಫ್ಯಾನ್ಸಿಯು ಪ್ರೊ, ಮೂನ್ ಚಾಟ್, ಬಾರ್‌ಕೋಡ್ ಸ್ಕ್ಯಾನರ್, ಕ್ಯೂಆರ್ ಕೋಡ್ ಸ್ಕ್ಯಾನ್, ಲಿಕಾ ಕ್ಯಾಮ್ ಕೂಡಾ ಸೇರಿವೆ.

ಜೂನ್ 2020ರಲ್ಲಿ ಕೇಂದ್ರ ಸರ್ಕಾರವು ಟಿಕ್ ಟಾಕ್, ಯುಸಿ ಬ್ರೌಸರ್ ಒಳಗೊಂಡಂತೆ ಚೀನಾದ 59 ಆ್ಯಪ್‌ಗಳಿಗೆ ನಿಷೇಧ ಹೇರಿತ್ತು.

ಏಳು ತಿಂಗಳ ಗರಿಷ್ಠ ಮಟ್ಟಕ್ಕೆ ಚಿಲ್ಲರೆ ಹಣದುಬ್ಬರ

ನವದೆಹಲಿ (ಪಿಟಿಐ): ದೇಶದಲ್ಲಿ ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಆಧಾರಿತ ಚಿಲ್ಲರೆ ಹಣದುಬ್ಬರ ಪ್ರಮಾಣವು ಜನವರಿಯಲ್ಲಿ ಶೇಕಡ 6.01ಕ್ಕೆ ತಲುಪಿದೆ. ಇದು ಏಳು ತಿಂಗಳ ಗರಿಷ್ಠ ಪ್ರಮಾಣ. ಕೆಲವು ಆಹಾರ ವಸ್ತುಗಳ ಬೆಲೆಯಲ್ಲಿ ಆದ ಹೆಚ್ಚಳವೇ ಹಣದುಬ್ಬರ ಜಾಸ್ತಿ ಆಗಲು ಕಾರಣ. ಜನವರಿಯಲ್ಲಿನ ಹಣದುಬ್ಬರ ದರವು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ನಿಗದಿ ಮಾಡಿಕೊಂಡಿರುವ ಗರಿಷ್ಠ ಮಟ್ಟಕ್ಕಿಂತ ಹೆಚ್ಚು.

ಎಣ್ಣೆ ಮತ್ತು ಕೊಬ್ಬಿನ ಅಂಶ ಇರುವ ಪದಾರ್ಥಗಳ ವಿಭಾಗದಲ್ಲಿ ಜನವರಿಯಲ್ಲಿ ಹಣದುಬ್ಬರವು ಶೇ 18.7ರಷ್ಟು ಆಗಿದೆ ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ಸೋಮವಾರ ಬಿಡುಗಡೆ ಮಾಡಿರುವ ಅಂಕಿ-ಅಂಶಗಳು ಹೇಳುತ್ತವೆ. ಬಟ್ಟೆ ಮತ್ತು ಪಾದರಕ್ಷೆ, ಸಾರಿಗೆ ಮತ್ತು ಸಂವಹನ ವರ್ಗದಲ್ಲಿ ವಾರ್ಷಿಕ ಹಣದುಬ್ಬರ ಪ್ರಮಾಣವು ಶೇ 9ನ್ನು ದಾಟಿದೆ.

ಡಿಸೆಂಬರ್ ತಿಂಗಳ ಹಣದುಬ್ಬರ ಪ್ರಮಾಣವನ್ನು ಪರಿಷ್ಕರಿಸಲಾಗಿದ್ದು, ಅದು ಶೇ 5.66 ಎಂದು ಕೇಂದ್ರ ತಿಳಿಸಿದೆ. ಹಿಂದಿನ ವರ್ಷದ ಜನವರಿಯಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇ 4.06ರಷ್ಟು ಇತ್ತು. 2021ರ ಜೂನ್‌ನಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇ 6.26ರಷ್ಟು ಆಗಿತ್ತು.

ಮಾಂಸ ಮತ್ತು ಮೀನು (ಶೇ 5.47ರಷ್ಟು ಹಣದುಬ್ಬರ), ಧಾನ್ಯಗಳು ಮತ್ತು ಉತ್ಪನ್ನಗಳು (ಶೇ 3.39ರಷ್ಟು), ತರಕಾರಿ (ಶೇ 5.19ರಷ್ಟು) ವಿಭಾಗಗಳಲ್ಲಿ ಕೂಡ ಹಣದುಬ್ಬರವು ಜಾಸ್ತಿ ಆಗಿದೆ.

ಚಿಲ್ಲರೆ ಹಣದುಬ್ಬರ ಪ್ರಮಾಣವನ್ನು ಶೇ 4ರಲ್ಲಿ ಮಿತಿಗೊಳಿಸುವ ಹೊಣೆ ಆರ್‌ಬಿಐ ಮೇಲೆ ಇದೆ. ಹಣದುಬ್ಬರವು ಶೇ 6ರವರೆಗೆ ತಲುಪಲು ಅವಕಾಶ ಇದೆ. ರೆಪೊ ದರದಲ್ಲಿ ವ್ಯತ್ಯಾಸ ಮಾಡುವ ಸಂದರ್ಭದಲ್ಲಿ ಆರ್‌ಬಿಐ, ಚಿಲ್ಲರೆ ಹಣದುಬ್ಬರ ಪ್ರಮಾಣವನ್ನು ಪರಿಗಣಿಸುತ್ತದೆ.

ಸಗಟು ಹಣದುಬ್ಬರ ಇಳಿಕೆ: ಜನವರಿಯಲ್ಲಿ ಸಗಟು ಹಣದುಬ್ಬರ ಪ್ರಮಾಣವು ಶೇ 12.96ಕ್ಕೆ ಇಳಿಕೆ ಕಂಡಿದೆ. ಆದರೆ, ಸತತ ಹತ್ತು ತಿಂಗಳುಗಳಿಂದ ಸಗಟು ಹಣದುಬ್ಬರ ಪ್ರಮಾಣವು ಎರಡಂಕಿ ಮಟ್ಟದಲ್ಲಿಯೇ ಇದೆ. ಹಿಂದಿನ ವರ್ಷದ ಜನವರಿಯಲ್ಲಿ ಸಗಟು ಹಣದುಬ್ಬರ ಪ್ರಮಾಣವು ಶೇ 2.51ರಷ್ಟು ಇತ್ತು.

ಷೇರುಪೇಟೆ: ಸೆನ್ಸೆಕ್ಸ್ 1,747 ಅಂಶ ಕುಸಿತ

ಮುಂಬೈ (ಪಿಟಿಐ): ರಷ್ಯಾ ಮತ್ತು ಉಕ್ರೇನ್ ನಡುವಿನ ಬಿಕ್ಕಟ್ಟು ತೀವ್ರವಾಗುತ್ತಿರುವ ಕಾರಣ ವಿಶ್ವದೆಲ್ಲೆಡೆ ಹೂಡಿಕೆದಾರರು ಅಪಾಯ ಹೆಚ್ಚಿರುವ ಹೂಡಿಕೆ ಉತ್ಪನ್ನಗಳು, ಷೇರುಗಳ ಮಾರಾಟಕ್ಕೆ ಮುಂದಾದರು. ಇದರ ಪರಿಣಾಮವು ಮುಂಬೈ ಷೇರುಪೇಟೆಯ ಮೇಲೆಯೂ ಆಯಿತು. ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 1,747 ಅಂಶ ಇಳಿಕೆ ಕಂಡಿತು. ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 531 ಅಂಶ ಕುಸಿಯಿತು.

ಅಮೆರಿಕದ ಡಾಲರ್ ಎದುರು ರೂಪಾಯಿಯು 24 ಪೈಸೆಯಷ್ಟು ಮೌಲ್ಯ ಕಳೆದುಕೊಂಡಿದ್ದು ಹಾಗೂ ವಿದೇಶಿ ಬಂಡವಾಳ ಹೊರಹರಿವು ಮುಂದುವರಿದಿದ್ದು ಕೂಡ ಸೂಚ್ಯಂಕಗಳ ಇಳಿಕೆಗೆ ಕಾರಣವಾದವು ಎಂದು ವರ್ತಕರು ತಿಳಿಸಿದ್ದಾರೆ. ಸೋಮವಾರದ ವಹಿವಾಟಿನ ಕೊನೆಯಲ್ಲಿ ಸೆನ್ಸೆಕ್ಸ್ 56,405 ಅಂಶಗಳಿಗೆ, ನಿಫ್ಟಿ 16,842 ಅಂಶಗಳಿಗೆ ತಲುಪಿವೆ. 2021ರ ಫೆಬ್ರುವರಿ 26ರ ನಂತರದ ಅತಿದೊಡ್ಡ ಕುಸಿತವನ್ನು ಸೆನ್ಸೆಕ್ಸ್ ಸೋಮವಾರ ಕಂಡಿದೆ.

ಎರಡು ದಿನಗಳ ವಹಿವಾಟಿನಲ್ಲಿ ಹೂಡಿಕೆದಾರರ ಸಂಪತ್ತಿನ ಮೌಲ್ಯವು ₹ 12.38 ಲಕ್ಷ ಕೋಟಿಗಿಂತ ಹೆಚ್ಚು ನಷ್ಟವಾಗಿದೆ.

12ನೇ ಪುಟ ನೋಡಿ

ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲು ₹50 ಸಾವಿರ ಠೇವಣಿ

ಎಸ್ಸೆಸ್ಸೆಲ್ಸಿ ತೇರ್ಗಡೆಯಾದರಷ್ಟೇ ಕಸಾಪ ಸದಸ್ಯತ್ವ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಸದಸ್ಯರಾಗಲು 10ನೇ ತರಗತಿ ತೇರ್ಗಡೆಯಾಗಿರಬೇಕು. ಇಲ್ಲದಿದ್ದರೆ ಪರಿಷತ್ತು ನಡೆಸುವ ಪರೀಕ್ಷೆಯನ್ನು ಎದುರಿಸಬೇಕು. ಹೊರನಾಡು, ಹೊರದೇಶದಲ್ಲಿರುವ ಕನ್ನಡಿಗರಿಗೆ ಈ ಶೈಕ್ಷಣಿಕ ಅರ್ಹತೆ ಹಾಗೂ ಪರೀಕ್ಷೆ ಅನ್ವಯವಾಗದು.

ಪರಿಷತ್ತಿನ ಬೈ-ಲಾ ತಿದ್ದುಪಡಿಗೆ ಸಂಬಂಧಿಸಿದಂತೆ ರಚಿಸಲಾದ ಕರಡಿನಲ್ಲಿ ನಮೂದಿಸಲಾಗಿರುವ ಪ್ರಸ್ತಾವಿತ ತಿದ್ದುಪಡಿ ಇವಾಗಿವೆ. ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಅರಳಿ ನಾಗರಾಜ್ ನೇತೃತ್ವದಲ್ಲಿ ರಚಿಸಲಾದ ಸಮಿತಿ ಕರಡು ಸಿದ್ಧಪಡಿಸಿದೆ. ಇದರ ಪ್ರತಿ 'ಪ್ರಜಾವಾಣಿ'ಗೆ ಲಭ್ಯವಾಗಿದೆ.

ಪ್ರಸ್ತಾವಿತ ತಿದ್ದುಪಡಿಯಲ್ಲಿ ಅಧಿಕಾರದ ಕೇಂದ್ರೀಕರಣಕ್ಕೆ ಆದ್ಯತೆ ನೀಡಲಾಗಿದೆ. ಕಾರ್ಯಕಾರಿ ಸಮಿತಿಯಲ್ಲಿ ಪ್ರತಿನಿಧಿಗಳ ಸಂಖ್ಯೆ 81ಕ್ಕೆ ಹೆಚ್ಚಳ, ಅಧ್ಯಕ್ಷ ಸ್ಥಾನದ ಸ್ಪರ್ಧೆಗೆ ಠೇವಣಿ ಮೊತ್ತ ₹ 50 ಸಾವಿರಕ್ಕೆ ಏರಿಕೆ ಸೇರಿದಂತೆ ಹಲವು ತಿದ್ದುಪಡಿಗಳನ್ನು ಶಿಫಾರಸು ಮಾಡಲಾಗಿದೆ.

ಪರಿಷತ್ತಿನ ಸದಸ್ಯರಾಗಲು ಕನ್ನಡ ಓದು-ಬರಹ ಬರಬೇಕೆಂಬುದು ಹಿಂದಿನಿಂದಲೂ ಇದೆ. ಈಗ ಹೊಸದಾಗಿ ಶೈಕ್ಷಣಿಕ ಅರ್ಹತೆ ಹಾಗೂ ಪರೀಕ್ಷೆಯನ್ನು ಸೇರ್ಪಡೆ ಮಾಡಲಾಗಿದೆ. ಗಡಿ ರಾಜ್ಯ, ಹೊರ ರಾಜ್ಯ, ಕೇಂದ್ರಾಡಳಿತ ಪ್ರದೇಶ, ಹೊರದೇಶದ ಕನ್ನಡಿಗರಿಗೆ ಸದಸ್ಯರಾಗಲು ಷರತ್ತಿನಿಂದ ವಿನಾಯಿತಿ ನೀಡಲಾಗಿದೆ. ಪರಿಷತ್ತಿನ ಸದಸ್ಯರು, ಸದಸ್ಯ ಸಂಸ್ಥೆಗಳು ಅನುಚಿತ ನಡವಳಿಕೆ ಇತ್ಯಾದಿ ಆರೋಪಕ್ಕೆ ಒಳಗಾದರೆ, ಮೇಲ್ನೋಟಕ್ಕೆ ಸರಿ ಎನಿಸಿದರೆ ಕೇಂದ್ರ ಘಟಕದ ಅಧ್ಯಕ್ಷರು ಅಂತಹವರನ್ನು ನೇರವಾಗಿ ಅಮಾನತು ಮಾಡಬಹುದು. ಇದಕ್ಕೆ ಕಾರ್ಯಕಾರಿ ಸಮಿತಿಯ ಒಪ್ಪಿಗೆ ಬೇಕಿಲ್ಲ ಎಂದು ಹೇಳಲಾಗಿದೆ.

ತಾತ್ಕಾಲಿಕವಾಗಿ ಜಿಲ್ಲೆ ಸೇರಿದಂತೆ ವಿವಿಧ ಘಟಕಗಳಿಗೆ ಅಧ್ಯಕ್ಷರ ನೇಮಕಾತಿ ಅಧಿಕಾರವನ್ನು ಕೇಂದ್ರ ಘಟಕದ ಅಧ್ಯಕ್ಷರಿಗೆ ನೀಡುವ ಬಗ್ಗೆ ಕರಡು ಪ್ರತಿಯಲ್ಲಿ ಉಲ್ಲೇಖಿಸಲಾಗಿದೆ.

7ನೇ ಪುಟ ನೋಡಿ

'ಸಮಿತಿ ವರದಿ ಬಗ್ಗೆ ಚರ್ಚಿಸಿ ಕ್ರಮ'

'ಬೈ-ಲಾ ತಿದ್ದುಪಡಿಗೆ ಸಂಬಂಧಿಸಿದಂತೆ ಕಾನೂನು ತಜ್ಞರನ್ನು ಒಳಗೊಂಡ ಸಮಿತಿ ರಚಿಸಲಾಗಿತ್ತು. ಸಮಿತಿ ನೀಡಿದ ಸಲಹೆಗಳನ್ನೆಲ್ಲ ಅನುಷ್ಠಾನ ಮಾಡಬೇಕೆಂದಿಲ್ಲ. ಈ ಬಗ್ಗೆ ಕಾರ್ಯಕಾರಿ ಸಮಿತಿಯಲ್ಲಿ ಚರ್ಚೆ ನಡೆಸಿ, ನಿಬಂಧನೆಗೆ ಕಾನೂನಿನ ಅಡಿಯಲ್ಲಿ ತಿದ್ದುಪಡಿ ತರಲಾಗುವುದು. 1915ರಲ್ಲಿ ರಚನೆಯಾದ ನಿಬಂಧನೆಯಲ್ಲಿಯೇ ಕನ್ನಡ ಓದು-ಬರಹ ಬರಬೇಕೆಂದು ತಿಳಿಸಲಾಗಿದೆ. ಚುನಾವಣೆಗೆ ಹೋದಾಗ ಕೆಲವರಿಗೆ ಓದು, ಬರಹ ಬರದಿದ್ದನ್ನು ನೋಡಿದ್ದೇನೆ. ಸದಸ್ಯತ್ವ ಪಡೆದಿದ್ದವರಲ್ಲಿ ಕೆಲವರಿಗೆ ಸಹಿ ಹಾಕಲು ಬರುತ್ತಿರಲಿಲ್ಲ. ಅಂತಹವರು ಹೆಬ್ಬೆಟ್ಟು ಒತ್ತುತ್ತಿದ್ದರು. ಹೀಗಾಗಿ, ಶಿಕ್ಷಣ ಮತ್ತು ಪರೀಕ್ಷೆಯ ಸಲಹೆ ಬಂದಿದೆ' ಎಂದು ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದರು.


'ಗಡಿ ನಾಡಿನ ರಾಜ್ಯಗಳಲ್ಲಿ ಶೇ 7ರಿಂದ ಶೇ 10 ರಷ್ಟು ಮಂದಿಗೆ ಕನ್ನಡ ಓದಲು, ಬರೆಯಲು ಬರುವುದಿಲ್ಲ. ಭಾಷೆ ಮತ್ತು ಸಂಸ್ಕೃತಿ ಅಭಿವೃದ್ಧಿ ಹೊಂದಲು ಕನ್ನಡ ಕಲಿಕೆ ಅಗತ್ಯ. 7ನೇ ತರಗತಿ ಉತ್ತೀರ್ಣರಾದವರಿಗೂ ಸದಸ್ಯತ್ವ ನೀಡಲು ನಿರ್ಧರಿಸಲಾಗಿದೆ. ಕನ್ನಡ ಓದಲು-ಬರೆಯಲು ಬರದವರಿಗೆ ಸರಳ ಕನ್ನಡ ಕಲಿಸಿ, ಪರೀಕ್ಷೆ ಮಾಡಲಾಗುತ್ತದೆ' ಎಂದು ಹೇಳಿದರು.

ಸಾಮರಸ್ಯ ಕಾಪಾಡುವ ನಿರ್ಣಯ ಮಂಡಿಸಲು ತಯಾರಿ?

ಬೆಂಗಳೂರು: ಶಾಲೆಗಳಲ್ಲಿ ಆಡೋಡಿ, ನಲಿದು ಬೆಳೆಯುವ ವಯಸ್ಸಿನಲ್ಲಿ ಪರಸ್ಪರರ ಮಧ್ಯೆ ನಂಬಿಕೆ, ಸಾಮರಸ್ಯ, ಸಹಬಾಳ್ವೆಯ ವಿಶಾಲ ಮನೋಭಾವ ಇರುವ ವ್ಯಕ್ತಿತ್ವ ರೂಪುಗೊಳ್ಳುತ್ತದೆ. ಅಂತಹ ಕೇಂದ್ರಗಳಲ್ಲಿ ಅಸಹನೆ, ಅಪನಂಬಿಕೆಯನ್ನು ಹುಟ್ಟುಹಾಕುವ ಕೆಲಸವನ್ನು ಯಾರೊಬ್ಬರೂ ಮಾಡುವುದು ಸರಿಯಲ್ಲ ಎಂಬ ನಿರ್ಣಯವನ್ನು ವಿಧಾನಮಂಡಲದ ಉಭಯ ಸದನಗಳಲ್ಲಿ ಮಂಡಿಸುವ ಸಾಧ್ಯತೆ ಇದೆ.

7

ಚಿನಕುರಳಿ
ಪ್ರಕಾಶ್ ಶೆಟ್ಟಿ



'ಸದಸ್ಯತ್ವ ನೋಂದಣಿಯಲ್ಲಿ ಯಶಸ್ವಿಯಾದವರಿಗೆ ಟಿಕೆಟ್'

ಪ್ರಜಾವಾಣಿ ವಾರ್ತೆ


ಹರಿಪ್ರಸಾದ್

ಬೆಂಗಳೂರು: ಸದಸ್ಯತ್ವ ನೋಂದಣಿಯಲ್ಲಿ ಯಶಸ್ವಿಯಾದವರಿಗೆ ಬಿಬಿಎಂಪಿ ಚುನಾವಣೆಯಲ್ಲಿ ಟಿಕೆಟ್ ನೀಡುವುದಾಗಿ ಕಾಂಗ್ರೆಸ್ ವರಿಷ್ಠರು ಭರವಸೆ ನೀಡಿದ್ದಾರೆ. ಚುನಾವಣೆಯಲ್ಲಿ ಸ್ಪರ್ಧಿಸುವ ಇಚ್ಛೆ ಇರುವವರು ಸದಸ್ಯತ್ವ ನೋಂದಣಿಯಲ್ಲಿ ಸಕ್ರಿಯವಾಗಿ ಕೆಲಸ ಮಾಡಿ ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ.ಹರಿಪ್ರಸಾದ್ ಹೇಳಿದರು.

ಕಾಂಗ್ರೆಸ್ ಸದಸ್ಯತ್ವ ನೋಂದಣಿಗೆ ಸಂಬಂಧಿಸಿದಂತೆ ಕೆಪಿಸಿಸಿ ಕಚೇರಿಯಲ್ಲಿ ಸೋಮವಾರ ನಡೆದ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಯ ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು, 'ಹೆಚ್ಚು ಸದಸ್ಯತ್ವ ನೋಂದಣಿ ಮಾಡಿ ತೋರಿಸಿ. ಭರವಸೆಯಂತೆ ಟಿಕೆಟ್ ನೀಡದಿದ್ದರೆ ನಿಮ್ಮ ಪರವಾಗಿ ನಾನು ಹೋರಾಟ ಮಾಡುತ್ತೇನೆ' ಎಂದರು.

ರಾಜ್ಯದಲ್ಲಿ ಆಗಿರುವ ಒಟ್ಟು ಸದಸ್ಯತ್ವ ನೋಂದಣಿಯಲ್ಲಿ ಅರ್ಧದಷ್ಟನ್ನು ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವ್ಯಾಪ್ತಿಯಲ್ಲಿ ಮಾಡಬೇಕು. ಬಿಬಿಎಂಪಿ ಚುನಾವಣೆಯಲ್ಲಿ ಗೆಲುವು ಸಾಧಿಸುವ ಉದ್ದೇಶದಿಂದ ಪ್ರತಿ ಮನೆಯನ್ನೂ ತಲುಪಬೇಕು. ಚುನಾವಣೆಗಳಲ್ಲಿ ಒಗ್ಗಟ್ಟಾಗಿ ಕೆಲಸ ಮಾಡಬೇಕು ಎಂದು ಹೇಳಿದರು.

ಹಿಂಬಡ್ತಿ ಬೇಡ: ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮಾತನಾಡಿ, 'ಸದಸ್ಯತ್ವ ನೋಂದಣಿಗೆ ಹಿಂಬಡ್ತಿ ಬೇಡ. ಕೆಪಿಸಿಸಿ ಅಧ್ಯಕ್ಷನಾಗಿ ನಾನು ಕೂಡ ಸದಸ್ಯತ್ವ ನೋಂದಣಿ ಮಾಡುತ್ತಿದ್ದೇನೆ. ಸೋಮವಾರ ರೈಲಿನಿಂದ ಇಳಿದ ಸಂದರ್ಭದಲ್ಲೇ 11 ಜನರ ಸದಸ್ಯತ್ವ ನೋಂದಣಿ ಮಾಡಿದ್ದೇನೆ' ಎಂದರು.

ಸದಸ್ಯತ್ವ ಪಡೆಯಲು ನಿರಾಕರಿಸುವವರ ಪ್ರತ್ಯೇಕ ಪಟ್ಟಿ ಸಿದ್ಧಪಡಿಸಬೇಕು. ಇದರಿಂದ ಮುಂದಿನ ದಿನಗಳಲ್ಲಿ ಅವರನ್ನು ಪಕ್ಷಕ್ಕೆ ಕರೆತರಲು ಅನುಕೂಲವಾಗುತ್ತದೆ ಎಂದು ಸಲಹೆ ನೀಡಿದರು.

ಸಿದ್ದರಾಮಯ್ಯ ಬಣ್ಣ ಬಯಲು ಮಾಡುವೆ: ಎಚ್‌ಡಿಕೆ


ಕುಮಾರಸ್ವಾಮಿ

ಬೆಂಗಳೂರು: 'ಸಿದ್ದರಾಮಯ್ಯ ಸರ್ಕಾರದ ಅವಧಿಯಲ್ಲಿ ಆಗಿರುವ ಭ್ರಷ್ಟಾಚಾರ, ಕಳಂಕಿತ ಅಧಿಕಾರಿಗಳಿಗೆ ನೀಡಿದ್ದ ರಕ್ಷಣೆ ಕುರಿತು ವಿಧಾನಸಭೆಯಲ್ಲಿ ಪ್ರಸ್ತಾಪ ಮಾಡುವೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಅಧಿವೇಶನದ ಹಿನ್ನೆಲೆಯಲ್ಲಿ ಶಾಸಕಾಂಗ ಪಕ್ಷದ ಸಭೆ ನಡೆಸಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, 'ನಮ್ಮದು ಕಳಂಕರಹಿತ ಸರ್ಕಾರ ಎಂದು ಬಿಂಬಿಸಿಕೊಳ್ಳುತ್ತಿರುವ ಸಿದ್ದರಾಮಯ್ಯನವರ ಅಸಲಿ ಬಣ್ಣ ಬಯಲು ಮಾಡುತ್ತೇನೆ' ಎಂದರು.

'ಈಗಿರುವ ಬಿಜೆಪಿ ಸರ್ಕಾರದ ಬಗ್ಗೆ ಕಾಂಗ್ರೆಸ್ ಮಾತನಾಡುತ್ತಿದೆ. ಆದರೆ, ಅದಕ್ಕೂ ಮೊದಲು ಐದು ವರ್ಷ ಆಡಳಿತ ನಡೆಸಿದ ಕಾಂಗ್ರೆಸ್ ಸರ್ಕಾರದಲ್ಲಿ ಏನೆಲ್ಲಾ ನಡೆಯಿತು ಎನ್ನುವುದು ಕೂಡ ಜನರಿಗೆ ಗೊತ್ತಾಗಬೇಕಲ್ಲವೇ' ಎಂದು ಅವರು ಪ್ರಶ್ನಿಸಿದರು.

ಕೈಗಾರಿಕಾ ಇಲಾಖೆ, ಬಂಡವಾಳ ಹೂಡಿಕೆ ಹಾಗೂ ಪ್ರವಾಸೋದ್ಯಮ ಇತ್ಯಾದಿ ಕ್ಷೇತ್ರಗಳಲ್ಲಿ ಸಾಕಷ್ಟು ಗೊಂದಲ, ಅವ್ಯವಹಾರಕ್ಕೆ ಕಾಂಗ್ರೆಸ್ ಸರ್ಕಾರ ಕಾರಣವಾಗಿದೆ. ಅವೆಲ್ಲವನ್ನೂ ಕಲಾಪದಲ್ಲಿ ತೆರೆದಿಡಲು ನಿರ್ಧರಿಸಿದ್ದೇನೆ ಎಂದರು.

ಮಹದಾಯಿ ನದಿ ನೀರಿನ ವಿಚಾರದಲ್ಲಿ ಕಾಂಗ್ರೆಸ್ ಪಕ್ಷ ನಾಟಕವಾಡುತ್ತಿದೆ. ಇಲ್ಲಿ ಒಂದು ಮಾತು, ಗೋವಾದಲ್ಲಿ ಇನ್ನೊಂದು ಮಾತು ಹೇಳುತ್ತಿದೆ. ಆ ಪಕ್ಷದ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ಅವರು ಮಹದಾಯಿ ನೀರಿಗಾಗಿ ರಾಜ್ಯದಲ್ಲಿ ಪಾದಯಾತ್ರೆ ಮಾಡುತ್ತೇವೆ ಎನ್ನುತ್ತಿದ್ದಾರೆ. ಇಬ್ಬಗೆಯ ನೀತಿ ಎಂದರೆ ಇದೇ ಅಲ್ಲವೇ ಎಂದು ಪ್ರಶ್ನಿಸಿದರು.

'ಹಿಜಾಬ್ ಮತ್ತು ಕೇಸರಿ ಶಾಲು ವಿವಾದಗಳ ಹಿಂದಿರುವ ಸಂಘಟನೆಗಳವರೆ ರಾಜ್ಯದ ಸಾಮರಸ್ಯವನ್ನು ಹಾಳು ಮಾಡಬೇಡಿ. ಇದು ಶಾಂತಿಯುತ ರಾಜ್ಯ. ಹಾಗೆಯೇ ಮಕ್ಕಳ ಪೋಷಕರಿಗೂ ಹೇಳುತ್ತೇನೆ. ಯಾವುದೇ ಕಾರಣಕ್ಕೂ ಮಕ್ಕಳು ಸ್ವಾರ್ಥ ಸಂಘಟನೆಗಳಿಂದ ಪ್ರೇರೇಪಿತರಾಗದಂತೆ ತಡೆಯಿರಿ' ಎಂದು ಅವರು ಹೇಳಿದರು.

ಐಐಎಸ್ಸಿ ಪ್ರಾಂಗಣದಲ್ಲಿ 'ಬಾಗ್ಚಿ–ಪಾರ್ಥಸಾರಥಿ ಆಸ್ಪತ್ರೆ'

ಪ್ರಜಾವಾಣಿ ವಾರ್ತೆ


ಐಐಎಸ್ಸಿ ಅಂತರ್‌ಶಿಸ್ತೀಯ ವಿಜ್ಞಾನಗಳ ವಿಭಾಗದ ಡೀನ್ ಪ್ರೊ.ನವಕಾಂತ್ ಭಟ್ (ಎಡದಿಂದ ಎರಡನೆಯವರು), ನಿರ್ದೇಶಕ ಪ್ರೊ. ಗೋವಿಂದನ್ ರಂಗರಾಜನ್ ಅವರ ಜೊತೆ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಸ್ಥಾಪನೆಗೆ ದೇಣಿಗೆ ನೀಡಿದ ಸುಶ್ಮಿತಾ, ಎನ್ ಎಸ್ ಪಾರ್ಥಸಾರಥಿ, ಸುಬ್ರೊತೊ ಬಾಗ್ಚಿ ಹಾಗೂ ರಾಧಾ ಇದ್ದಾರೆ

ಬೆಂಗಳೂರು: ಇಲ್ಲಿನ ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್ಸಿ) ಪ್ರಾಂಗಣದಲ್ಲಿ 800 ಹಾಸಿಗೆಗಳ ಸಾಮರ್ಥ್ಯದ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಹಾಗೂ ಸ್ನಾತಕೋತ್ತರ ವೈದ್ಯಕೀಯ ವಿದ್ಯಾಲಯ ನಿರ್ಮಾಣವಾಗಲಿದೆ. ಉದ್ಯಮಿ ಸುಬ್ರೊತೊ ಬಾಗ್ಚಿ ಮತ್ತು ಸುಶ್ಮಿತಾ ಹಾಗೂ ಎನ್.ಎಸ್. ಪಾರ್ಥಸಾರಥಿ ಮತ್ತು ರಾಧಾ ಅವರು ಈ ಆಸ್ಪತ್ರೆ ನಿರ್ಮಾಣಕ್ಕಾಗಿ ₹ 450 ಕೋಟಿ ದೇಣಿಗೆ ನೀಡಿದ್ದಾರೆ.

ಈ ಕುರಿತು ಮಾಹಿತಿ ನೀಡಿರುವ ಐಐಎಸ್ಸಿ ನಿರ್ದೇಶಕ ಪ್ರೊ.ಗೋವಿಂದನ್ ರಂಗರಾಜನ್, 'ಶತಮಾನಕ್ಕೂ ಹೆಚ್ಚಿನ ಇತಿಹಾಸ ಹೊಂದಿರುವ ನಮ್ಮ ಸಂಸ್ಥೆ ವಿಜ್ಞಾನ ಮತ್ತು ಎಂಜಿನಿಯರಿಂಗ್ ಕ್ಷೇತ್ರದಲ್ಲಿ ಸಂಶೋಧನೆ ಮತ್ತು ಶಿಕ್ಷಣ ಒದಗಿಸುತ್ತಿದೆ. ವಿಜ್ಞಾನ ಮತ್ತು ಎಂಜಿನಿಯರಿಂಗ್ ಜೊತೆ ವೈದ್ಯಕೀಯ ಕ್ಷೇತ್ರದ ಸಂಶೋಧನೆ ಮತ್ತು ಶಿಕ್ಷಣವನ್ನು ಬೆಸೆಯಲು ಪ್ರಾಂಗಣದಲ್ಲಿ ಮಲ್ಟಿ-ಸ್ಪೆಷಾಲಿಟಿ ಆಸ್ಪತ್ರೆ ಸ್ಥಾಪಿಸುವ ಯೋಜನೆ ರೂಪಿಸಿದ್ದೇವೆ. ಈ ಸಲುವಾಗಿ ಪ್ರಾಂಗಣದಲ್ಲಿ 'ಬಾಗ್ಚಿ-ಪಾರ್ಥಸಾರಥಿ ಆಸ್ಪತ್ರೆ'ಯನ್ನು ಸ್ಥಾಪಿಸಲು ಉದ್ಯಮಿಗಳಾದ ಸುಶ್ಮಿತಾ ಮತ್ತು ಸುಬ್ರೊತೊ ಬಾಗ್ಚಿ ಹಾಗೂ ರಾಧಾ ಮತ್ತು ಎನ್.ಎಸ್. ಪಾರ್ಥಸಾರಥಿ ಅವರು ನೆರವು ಒದಗಿಸುತ್ತಿದ್ದಾರೆ' ಎಂದು ತಿಳಿಸಿದ್ದಾರೆ.

'ಸಂಸ್ಥೆಯಲ್ಲಿ ಒಗ್ಗೂಡಿತ ಉಭಯ ಪದವಿ (ಎಂ.ಡಿ.-ಪಿಎಚ್.ಡಿ) ಯೋಜನೆಯನ್ನು ಆರಂಭಿಸಲಾಗುತ್ತದೆ. ಹೊಸ ಮಾದರಿಯ ಶೈಕ್ಷಣಿಕ ಕಾರ್ಯಕ್ರಮವು ವೈದ್ಯ-ವಿಜ್ಞಾನಿಗಳನ್ನು ರೂಪಿಸುವ ಉದ್ದೇಶವನ್ನು ಹೊಂದಿದೆ. ಇಲ್ಲಿನ ವೈದ್ಯಾಧಿಕಾರಿಗಳು ಆಸ್ಪತ್ರೆಯಲ್ಲಿ ಮತ್ತು ಸಂಸ್ಥೆಯ ವಿಜ್ಞಾನ ಮತ್ತು ಎಂಜಿನಿಯರಿಂಗ್ ಪ್ರಯೋಗಾಲಯಗಳಲ್ಲಿ ತರಬೇತಿ ಪಡೆಯಲಿದ್ದಾರೆ' ಎಂದು ಅವರು ವಿವರಿಸಿದರು.

> ಆಸ್ಪತ್ರೆ ಮತ್ತು ವೈದ್ಯಕೀಯ ವಿದ್ಯಾಲಯ ಸ್ಥಾಪನೆಯು ಐಐಎಸ್ಸಿಯ ಮಹತ್ವದ ಹೆಜ್ಜೆ. ಈ ಯೋಜನೆಗಾಗಿ ದೇಣಿಗೆ ನೀಡಿದವರಿಗೆ ನಾವು ಕೃತಜ್ಞತೆ ಸಲ್ಲಿಸುತ್ತೇವೆ
>
> **ಪ್ರೊ. ಗೋವಿಂದನ್ ರಂಗರಾಜನ್,** ಐಐಎಸ್ಸಿ ನಿರ್ದೇಶಕ

'ಹೊಸ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯನ್ನು ಲಾಭರಹಿತವಾಗಿ ನಿರ್ವಹಿಸಲಾಗುತ್ತದೆ. ಈ ಯೋಜನೆಗೆ ಬಾಗ್ಚಿ ಹಾಗೂ ಪಾರ್ಥಸಾರಥಿ ದಂಪತಿಗಳು ಒಟ್ಟು ₹ 425 ಕೋಟಿ ನೆರವು ನೀಡಲಿದ್ದಾರೆ. ಆಸ್ಪತ್ರೆ ಸ್ಥಾಪನೆಗಾಗಿ ಸ್ವೀಕರಿಸುತ್ತಿರುವ ಈ ದೇಣಿಗೆ ನಮ್ಮ ಸಂಸ್ಥೆ ಇದುವರೆಗೆ ಸ್ವೀಕರಿಸಿರುವ ಖಾಸಗಿ ದೇಣಿಗೆಗಳಲ್ಲೇ ಗರಿಷ್ಠ ಮೊತ್ತದ್ದು' ಎಂದರು.


ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಕಟ್ಟಡದ ನೀಲ ನಕ್ಷೆ

'ಬಾಗ್ಚಿ-ಪಾರ್ಥಸಾರಥಿ ಆಸ್ಪತ್ರೆಯು ರೋಗನಿರ್ಣಯ, ಚಿಕಿತ್ಸೆ ಮತ್ತು ಸಂಶೋಧನೆಗೆ ಸುಧಾರಿತ ಸೌಲಭ್ಯಗಳನ್ನು ಹೊಂದಿರಲಿದೆ. ಕ್ಯಾನ್ಸರ್ ವಿಜ್ಞಾನ (ಅಂಕಾಲಜಿ), ಹೃದ್ರೋಗ ವಿಜ್ಞಾನ, ನರವಿಜ್ಞಾನ, ಅಂತಃಸ್ರಾವ ವಿಜ್ಞಾನ (ಎಂಡೋಕ್ರೈನಾಲಜಿ), ಉದರ ವಿಜ್ಞಾನ (ಗ್ಯಾಸ್ಟ್ರೋಎಂಟರಾಲಜಿ), ಮೂತ್ರಪಿಂಡ ವಿಜ್ಞಾನ (ನೆಫ್ರಾಲಜಿ ಮತ್ತು ಯುರಾಲಜಿ), ಚರ್ಮರೋಗ ವಿಜ್ಞಾನ ಮತ್ತು ಪ್ಲಾಸ್ಟಿಕ್ ಸರ್ಜರಿ, ಅಂಗಾಂಗ ಕಸಿ, ರೋಬೋಟಿಕ್ ಶಸ್ತ್ರಚಿಕಿತ್ಸೆ, ನೇತ್ರವಿಜ್ಞಾನ ಸೇರಿದಂತೆ ಹಲವು ವಿಶೇಷ ವಿಭಾಗಗಳನ್ನು ಆರಂಭಿಸಲಾಗುತ್ತದೆ' ಎಂದು ಮಾಹಿತಿ ನೀಡಿದರು.

'ರಾಷ್ಟ್ರೀಯ ವೈದ್ಯಕೀಯ ಆಯೋಗದ ಮಾನದಂಡಗಳ ಪ್ರಕಾರ, ನಿರ್ದಿಷ್ಟ ಎಂ.ಡಿ- ಪಿಎಚ್. ಡಿ, ಎಂ.ಡಿ/ಎಂ.ಎಸ್ ಮತ್ತು ಡಿ.ಎಂ/ ಎಂಸಿಎಚ್ ಕಾರ್ಯಕ್ರಮಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಅವರ ತರಗತಿ ಮತ್ತು ಪ್ರಯೋಗಾಲಯ ಕಲಿಕೆಯೊಂದಿಗೆ ಆಸ್ಪತ್ರೆಯ ಸೂಕ್ತ ವಿಭಾಗಗಳಲ್ಲಿ ತರಬೇತಿ ನೀಡಲಾಗುತ್ತದೆ. ಸಮಗ್ರ ವಿದ್ಯುನ್ಮಾನ ವೈದ್ಯಕೀಯ ದಾಖಲೆ ವ್ಯವಸ್ಥೆ (ಇಂಟಿಗ್ರೇಟೆಡ್ ಎಲೆಕ್ಟ್ರಾನಿಕ್ ಮೆಡಿಕಲ್ ರೆಕಾರ್ಡ್ ಸಿಸ್ಟಮ್ಸ್) ಮತ್ತು ಹ್ಯಾಪ್ಟಿಕ್ 'ಇಂಟರ್‌ಫೇಸ್'ಗಳೊಂದಿಗೆ ಸಮಗ್ರ ಟೆಲಿಮೆಡಿಸಿನ್ ವ್ಯವಸ್ಥೆಯೊಂದಿಗೆ ಆಸ್ಪತ್ರೆಯು ಸುಧಾರಿತ ಡಿಜಿಟಲ್ ತಂತ್ರಜ್ಞಾನಗಳು ಮತ್ತು ಪರಿಹಾರಗಳನ್ನು ಒಳಗೊಂಡಿರಲಿದೆ' ಎಂದು ತಿಳಿಸಿದರು.

ಸುಬ್ರೊತೊ ಬಾಗ್ಚಿ ಹಾಗೂ ಎನ್.ಎಸ್. ಪಾರ್ಥಸಾರಥಿ ಅವರು ಮೈಂಡ್‌-ಟ್ರೀ ಸಂಸ್ಥೆಯ ಸಹಸಂಸ್ಥಾಪಕರು.

'ಜನರ ಸೇವೆಗಾಗಿ ಕ್ಷೇತ್ರವನ್ನೇ ತ್ಯಾಗ ಮಾಡುತ್ತೇನೆ'

ಪ್ರಜಾವಾಣಿ ವಾರ್ತೆ

ಹಾವೇರಿ: 'ರಾಜ್ಯದಾದ್ಯಂತ ನಾನು ಪ್ರವಾಸ ಮಾಡಿದ್ದೇನೆ. ರಾಜ್ಯದಲ್ಲಿ ಸಿದ್ದರಾಮಯ್ಯ ಪರವಾದ ಒಲವಿದ್ದು, ಜನರ ಸೇವೆಗಾಗಿ ಚಾಮರಾಜಪೇಟೆ ಕ್ಷೇತ್ರವನ್ನು ಸಿದ್ದರಾಮಯ್ಯ ಅವರಿಗೆ ಬಿಟ್ಟುಕೊಡುತ್ತಿದ್ದೇನೆ' ಎಂದು ಶಾಸಕ ಜಮೀರ್ ಅಹಮದ್ ಖಾನ್ ಅವರು ಹೇಳಿದರು.

ಶಿಗ್ಗಾವಿ ತಾಲ್ಲೂಕಿನ ಹುಲಗೂರು ಗ್ರಾಮದ ಹಾಜಿ ದರ್ಗಾಕ್ಕೆ ಸೋಮವಾರ ಭೇಟಿ ನೀಡಿದ ಸಂದರ್ಭದಲ್ಲಿ ಅವರು ಮಾಧ್ಯಮದವರೊಂದಿಗೆ ಮಾತನಾಡಿ, 'ನಾನು ಶಾಸಕನಾಗುವುದಕ್ಕಿಂತ ನನಗೆ ರಾಜ್ಯದ ಜನರ ಹಿತ ಮುಖ್ಯ. ನನಗೆ ಯಾವ ಕ್ಷೇತ್ರವೂ ಬೇಡ. ರಾಜ್ಯಕ್ಕೆ ಮತ್ತು ಸಿದ್ದರಾಮಯ್ಯ ಅವರಿಗೆ ಒಳ್ಳೆಯದಾದರೆ ಸಾಕು ಎಂದು ನನ್ನ ಕ್ಷೇತ್ರವನ್ನು ತ್ಯಾಗ ಮಾಡುತ್ತಿದ್ದೇನೆ' ಎಂದು ಹೇಳಿದರು.

ಫಾರೂಕ್‌ಗೆ ನಿರ್ಬಂಧ

ಶ್ರೀನಗರ: ಪುಲ್ವಾಮ ದಾಳಿಯ ವರ್ಷಾಚರಣೆಯ ಹಿನ್ನೆಲೆಯಲ್ಲಿ ಭದ್ರತಾ ಕಾರಣದಿಂದ ಸೋಮವಾರ ಜಮ್ಮು ಮತ್ತು ಕಾಶ್ಮೀರದ ಮಾಜಿ ಮುಖ್ಯಮಂತ್ರಿ, ಸಂಸದ ಫಾರೂಕ್ ಅಬ್ದುಲ್ಲಾ ಅವರಿಗೆ ಮನೆಯಿಂದ ಹೊರಬರದಂತೆ ಇಲ್ಲಿನ ಆಡಳಿತವು ನಿರ್ಬಂಧ ವಿಧಿಸಿದೆ

ಸುದ್ದಿ 2 ನಿಮಿಷ

ಅನುದಾನ ಹಂಚಿಕೆಯಲ್ಲಿ ತಾರತಮ್ಯ: ಕಾಂಗ್ರೆಸ್ ಹೋರಾಟ

ಬೆಂಗಳೂರು: ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನ ಹಂಚಿಕೆಯಲ್ಲಿ ಕಾಂಗ್ರೆಸ್ ಶಾಸಕರ ಕ್ಷೇತ್ರಗಳನ್ನು ಕಡೆಗಣಿಸಿರುವುದನ್ನು ವಿರೋಧಿಸಿ ವಿಧಾನಮಂಡಲದ ಉಭಯ ಸದನಗಳಲ್ಲಿ ತೀವ್ರ ಹೋರಾಟ ನಡೆಸಲು ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗಿದೆ.

ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಸೋಮವಾರ ನಡೆದ ಸಭೆಯಲ್ಲಿ ಈ ನಿರ್ಧಾರಕ್ಕೆ ಬರಲಾಗಿದೆ. ಬಿಟ್ ಕಾಯಿನ್ ಹ್ಯಾಕಿಂಗ್ ಹಗರಣ, ಗುತ್ತಿಗೆದಾರರಿಂದ ಶೇಕಡ 40ರಷ್ಟು ಕಮಿಷನ್ ಪಡೆಯುತ್ತಿರುವ ಆರೋಪ ಸೇರಿದಂತೆ ಹಲವು ವಿಷಯಗಳನ್ನು ಅಧಿವೇಶನದಲ್ಲಿ ಪ್ರಸ್ತಾಪಿಸಿ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲು ತೀರ್ಮಾನಿಸಲಾಗಿದೆ.

ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಸಿದ್ದರಾಮಯ್ಯ, 'ಬಿಜೆಪಿ ಶಾಸಕರ ಕ್ಷೇತ್ರಗಳಿಗೆ ತಲಾ ₹ 50 ಕೋಟಿ ಅನುದಾನ ಹಂಚಿಕೆ ಮಾಡಲಾಗಿದೆ. ಕಾಂಗ್ರೆಸ್ ಶಾಸಕರ ಕ್ಷೇತ್ರಗಳಿಗೆ ನಯಾಪೈಸೆಯನ್ನೂ ನೀಡಿಲ್ಲ. ಈ ಕುರಿತು ಸಭೆಯಲ್ಲಿ ಸುದೀರ್ಘ ಚರ್ಚೆ ನಡೆಸಿದ್ದೇವೆ. ಈ ವಿಷಯವನ್ನು ಎರಡೂ ಸದನಗಳಲ್ಲಿ ಪ್ರಸ್ತಾಪಿಸಿ, ಹೋರಾಟ ನಡೆಸಲು ನಿರ್ಧರಿಸಿದ್ದೇವೆ' ಎಂದರು.

ಗುತ್ತಿಗೆದಾರರ ಸಂಘವು ಸರ್ಕಾರದ ವಿರುದ್ಧ ಮಾಡಿರುವ ಕಮಿಷನ್ ಆರೋಪ, ರಾಷ್ಟ್ರೀಯ ಶಿಕ್ಷಣ ನೀತಿ ಸೇರಿದಂತೆ ಹಲವು ವಿಷಯಗಳನ್ನು ಅಧಿವೇಶನದಲ್ಲಿ ಪ್ರಸ್ತಾಪಿಸಲು ತೀರ್ಮಾನಿಸಲಾಗಿದೆ ಎಂದು ತಿಳಿಸಿದರು.

ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿಧಾನಸಭೆ ವಿರೋಧ ಪಕ್ಷದ ಉಪ ನಾಯಕ ಯು.ಟಿ. ಖಾದರ್ ಸಭೆಯಲ್ಲಿದ್ದರು.



'ಯುಗಾದಿಗೆ ಮನೆಗಳ ಹಸ್ತಾಂತರ'

ಬೆಂಗಳೂರು: ಯಶವಂತಪುರ ವೃತ್ತ ಬಳಿಯ ಭೈರಹನುಮಯ್ಯ ಕೊಳೆಗೇರಿಯಲ್ಲಿ ಬಡವರಿಗಾಗಿ ಬಿಬಿಎಂಪಿ ವತಿಯಿಂದ ನಿರ್ಮಿಸುತ್ತಿರುವ 100 ಮನೆಗಳ ಕಾಮಗಾರಿಯ ಪ್ರಗತಿಯನ್ನು ಉನ್ನತ ಶಿಕ್ಷಣ ಸಚಿವ ಸಿ.ಎನ್. ಅಶ್ವತ್ಥನಾರಾಯಣ ಅವರು ಸೋಮವಾರ ಪರಿಶೀಲಿಸಿದರು.

'ಒಟ್ಟು ₹10 ಕೋಟಿ ವೆಚ್ಚದಲ್ಲಿ ಈಗಾಗಲೇ 60 ಮನೆಗಳ ಕಾಮಗಾರಿ ಪೂರ್ಣಗೊಂಡಿದೆ. ಈ ಮನೆಗಳನ್ನು ಮೊದಲು ಇಲ್ಲಿ ವಾಸವಿದ್ದವರಿಗೆ ಯುಗಾದಿ ಹಬ್ಬದಂದು ಹಸ್ತಾಂತರಿಸಲಾಗುವುದು' ಎಂದು ಸಚಿವರು ತಿಳಿಸಿದರು.

'ಈಗ ನಿರ್ಮಿಸಿರುವ ಮನೆಗಳಿಗೆ ವಿದ್ಯುತ್, ನೀರು ಮತ್ತು ಒಳಚರಂಡಿ ವ್ಯವಸ್ಥೆ ಕಲ್ಪಿಸುವುದು ಬಾಕಿ ಇದೆ. ಮುಂದಿನ ವಾರದಲ್ಲಿ ಆ ಕೆಲಸಗಳನ್ನು ಪೂರ್ಣಗೊಳಿಸಲಾಗುವುದು. ಉಳಿದ 40 ಮನೆಗಳನ್ನು ಸಹ ತ್ವರಿತವಾಗಿ ನಿರ್ಮಿಸಿ, ಬಡವರಿಗೆ ಹಂಚಲಾಗುವುದು' ಎಂದು ಹೇಳಿದರು.

ಬಿಬಿಎಂಪಿ ಕಾರ್ಯನಿರ್ವಾಹಕ ಎಂಜಿನಿಯರ್ ಜಯಶಂಕರ್, ಸುಷ್ಮಾ, ಜಯಪಾಲ್ ಇದ್ದರು.

'ಮಕ್ಕಳಲ್ಲಿ ರಕ್ತ ಕ್ಯಾನ್ಸರ್ ಹೆಚ್ಚಳ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಕ್ಕಳಲ್ಲಿ ಕ್ಯಾನ್ಸರ್ ಪ್ರಕರಣಗಳು ಹೆಚ್ಚಳವಾಗುತ್ತಿದ್ದು, ರೋಗಕ್ಕೆ ಒಳಪಡುತ್ತಿರುವ 14 ವರ್ಷದೊಳಗಿನವರಲ್ಲಿ ಅರ್ಧದಷ್ಟು ಮಕ್ಕಳು ರಕ್ತದ ಕ್ಯಾನ್ಸರ್‌ಗೆ (ಲ್ಯುಕೇಮಿಯಾ) ಒಳಪಡುತ್ತಿದ್ದಾರೆ ಎಂದು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ತಿಳಿಸಿದೆ.

ಫೆ.15ರಂದು ಅಂತರರಾಷ್ಟ್ರೀಯ ಮಕ್ಕಳ ಕ್ಯಾನ್ಸರ್ ದಿನದ ಪ್ರಯುಕ್ತ ಸಂಸ್ಥೆಯು ಜಾಗೃತಿ ಕಾರ್ಯಕ್ರಮ ಹಮ್ಮಿಕೊಂಡಿದೆ. ರಾಜ್ಯದಲ್ಲಿನ 87,304 ಕ್ಯಾನ್ಸರ್ ಪ್ರಕರಣಗಳಲ್ಲಿ 1,323 (ಶೇ 3.1) ಪ್ರಕರಣಗಳು ಮಕ್ಕಳಲ್ಲಿ ಕಂಡುಬಂದಿವೆ. 679 ಬಾಲಕರು ಮತ್ತು 644 ಬಾಲಕಿಯರು ಕ್ಯಾನ್ಸರ್ ಪೀಡಿತರಾಗಿದ್ದಾರೆ. ಬೆಂಗಳೂರಿನ ಜನಸಂಖ್ಯೆ ಆಧಾರಿತ ಕ್ಯಾನ್ಸರ್ ನೋಂದಣಿ ವ್ಯವಸ್ಥೆಯಲ್ಲಿ ಪ್ರತಿ 10 ಲಕ್ಷಕ್ಕೆ 192 ಪ್ರಕರಣಗಳು ದಾಖಲಾಗುತ್ತಿವೆ. 114 ಬಾಲಕರು ಹಾಗೂ 78 ಬಾಲಕಿಯರು ಈ ರೋಗಕ್ಕೆ ಒಳಗಾಗುತ್ತಿದ್ದಾರೆ. ಮಕ್ಕಳ ಕ್ಯಾನ್ಸರ್‌ಗಳನ್ನು ತಡೆಗಟ್ಟಲಾಗುವುದಿಲ್ಲ. ಆದರೆ, ಅವುಗಳನ್ನು ಮೊದಲೇ ಪತ್ತೆ ಹಚ್ಚಬಹುದು ಎಂದು ಸಂಸ್ಥೆ ಹೇಳಿದೆ.

'ಅಂತರರಾಷ್ಟ್ರೀಯ ಮಕ್ಕಳ ಕ್ಯಾನ್ಸರ್ ವರ್ಗೀಕರಣದ ಪ್ರಕಾರ ಶೇ 44.7 ರಷ್ಟು ಪ್ರಕರಣಗಳು ಲ್ಯುಕೇಮಿಯಾ. ವೈದ್ಯರು ಆರಂಭಿಕ ಹಂತದಲ್ಲಿಯೇ ತಪಾಸಣೆ ನಡೆಸಿ, ಕ್ಯಾನ್ಸರ್ ಪತ್ತೆ ಮಾಡಬೇಕು. ಯಾವುದೇ ಶಂಕಿತ ಕ್ಯಾನ್ಸರ್ ಗೆಡ್ಡೆ ಇದ್ದರೆ ಮಕ್ಕಳ ಕ್ಯಾನ್ಸರ್ ಕೇಂದ್ರದಲ್ಲಿ ತಪಾಸಣೆಗೆ ಒಳಪಡುವಂತೆ ಶಿಫಾರಸು ಮಾಡಬೇಕು. ತಡವಾಗಿ ತಪಾಸಣೆ, ಚಿಕಿತ್ಸೆ ನೀಡಿದಲ್ಲಿ ಸಮಸ್ಯೆ ಗಂಭೀರ ಸ್ವರೂಪ ಪಡೆದುಕೊಳ್ಳಲಿದೆ. ಸಾರ್ವಜನಿಕರು ಮತ್ತು ವೈದ್ಯಕೀಯ ವೃತ್ತಿಪರರಲ್ಲಿ ಮಕ್ಕಳ ಕ್ಯಾನ್ಸರ್ ಕುರಿತು ಜಾಗೃತಿ ಮೂಡಿಸುವುದು ಅಗತ್ಯ' ಎಂದು ಸಂಸ್ಥೆ ನಿರ್ದೇಶಕ ಡಾ.ಸಿ. ರಾಮಚಂದ್ರ ತಿಳಿಸಿದ್ದಾರೆ.

ಕಿದ್ವಾಯಿ: ಅಸ್ಥಿಮಜ್ಜೆ ಕಸಿಗೆ ಇಂದು ಚಾಲನೆ


ರಾಮಚಂದ್ರ

ಬೆಂಗಳೂರು: ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ಅಸ್ಥಿಮಜ್ಜೆ (ಬೋನ್ ಮ್ಯಾರೊ) ಕಸಿ ಚಿಕಿತ್ಸೆಗೆ ಮಂಗಳವಾರ ಚಾಲನೆ ದೊರೆಯಲಿದೆ.

ಸಂಸ್ಥೆಯ ಆವರಣದಲ್ಲಿ ಈಗಾಗಲೇ ಅಸ್ಥಿಮಜ್ಜೆ ಕಸಿ ಘಟಕ ನಿರ್ಮಾಣವಾಗಿದೆ. ಖಾಸಗಿ ಆಸ್ಪತ್ರೆಗಳಲ್ಲಿ ₹ 30 ಲಕ್ಷದಿಂದ ₹ 50 ಲಕ್ಷ ವೆಚ್ಚವಾಗುವ ಕಸಿಯನ್ನು ಸಂಸ್ಥೆಯಲ್ಲಿ ಬಡತನ ರೇಖೆಗಿಂತ ಕೆಳಗಿನ (ಬಿಪಿಎಲ್) ಕುಟುಂಬದವರಿಗೆ ಬಹುತೇಕ ಉಚಿತವಾಗಿ ಒದಗಿಸಲಾಗುತ್ತದೆ.

ಸಂಸ್ಥೆಯ ಆವರಣದಲ್ಲಿ 42 ಹಾಸಿಗೆಗಳ ಸಾಮರ್ಥ್ಯದ ವೈದ್ಯಕೀಯ ಐಸಿಯು ಘಟಕ ನಿರ್ಮಾಣವಾಗಲಿದ್ದು, ಇದರ ಭೂಮಿ ಪೂಜೆ ಮಂಗಳವಾರ ನಡೆಯಲಿದೆ. ₹ 4 ಕೋಟಿ ವೆಚ್ಚದಲ್ಲಿ ಇದನ್ನು ರಾಜಶೇಖರ್ ಎಂಬುವವರು ನಿರ್ಮಿಸಿಕೊಡುತ್ತಿದ್ದಾರೆ.

'ರೋಗಿಗಳನ್ನು ರಕ್ತದ ಕ್ಯಾನ್ಸರ್‌ನಿಂದ ಮುಕ್ತ ಮಾಡಲು ಅಸ್ಥಿಮಜ್ಜೆ ಕಸಿ ಸಹಾಯಕ. ಆದರೆ, ಸಂಕೀರ್ಣ ಚಿಕಿತ್ಸೆಗೆ ರೋಗಿಗಳು ಖಾಸಗಿ ಆಸ್ಪತ್ರೆಗಳನ್ನೇ ಹೆಚ್ಚಾಗಿ ಅವಲಂಬಿಸಬೇಕಾಗಿದೆ. ಈಗ ಸಂಸ್ಥೆಯಲ್ಲಿಯೇ ಈ ಕಸಿಯನ್ನು ಒದಗಿಸಲಾಗುತ್ತಿದೆ. ಅಂತರರಾಷ್ಟ್ರೀಯ ಮಕ್ಕಳ ಕ್ಯಾನ್ಸರ್ ದಿನದ ಪ್ರಯುಕ್ತ ಇದಕ್ಕೆ ಚಾಲನೆ ನೀಡಲಾಗುತ್ತಿದೆ' ಎಂದು ಸಂಸ್ಥೆ ನಿರ್ದೇಶಕ ಡಾ.ಸಿ. ರಾಮಚಂದ್ರ ತಿಳಿಸಿದರು.

ಕೋವಿಡ್: ಸಕ್ರಿಯ ಪ್ರಕರಣ ಮತ್ತಷ್ಟು ಇಳಿಕೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಸಕ್ರಿಯ ಪ್ರಕರಣಗಳ ಸಂಖ್ಯೆ ಮತ್ತಷ್ಟು ಇಳಿಕೆಯಾಗಿದೆ. ಸದ್ಯ 31,215 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ಕೋವಿಡ್ ಪರೀಕ್ಷೆಗಳ ಸಂಖ್ಯೆ ಇಳಿಕೆ ಕಂಡಿದ್ದು, ಒಂದು ದಿನದ ಅವಧಿಯಲ್ಲಿ 69 ಸಾವಿರ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ ಹೊಸ ಪ್ರಕರಣಗಳ ಸಂಖ್ಯೆ 1,568ಕ್ಕೆ ಇಳಿಕೆಯಾಗಿದೆ. ಸೋಂಕು ದೃಢ ಪ್ರಮಾಣ ಶೇ 2.25 ರಷ್ಟು ವರದಿಯಾಗಿದೆ. ಈವರೆಗೆ ವರದಿಯಾದ ಒಟ್ಟು ಪ್ರಕರಣಗಳ ಸಂಖ್ಯೆ 39.28 ಲಕ್ಷಕ್ಕೆ ಏರಿಕೆಯಾಗಿದೆ.

ಹೊಸ ಪ್ರಕರಣಗಳು 26 ಜಿಲ್ಲೆಗಳಲ್ಲಿ ಎರಡು ಅಂಕಿಯಲ್ಲಿದೆ. ಬೆಂಗಳೂರಿನಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಮತ್ತಷ್ಟು ಇಳಿಕೆ ಕಂಡಿದ್ದು, 754 ಮಂದಿ ಸೋಂಕಿತರಾಗಿದ್ದಾರೆ. ಶಿವಮೊಗ್ಗದಲ್ಲಿ 91, ಮೈಸೂರಿನಲ್ಲಿ 78, ಬೆಳಗಾವಿಯಲ್ಲಿ 63, ದಕ್ಷಿಣ ಕನ್ನಡದಲ್ಲಿ 55 ಹಾಗೂ ಬಳ್ಳಾರಿಯಲ್ಲಿ 50 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 50ಕ್ಕಿಂತ ಕಡಿಮೆ ಇವೆ.

ಸೋಂಕಿತರಲ್ಲಿ ಬೆಂಗಳೂರಿನಲ್ಲಿ 2,089 ಮಂದಿ ಸೇರಿದಂತೆ ರಾಜ್ಯದಲ್ಲಿ 6,025 ಮಂದಿ ಚೇತರಿಸಿಕೊಂಡಿದ್ದಾರೆ.

ಎಎಪಿ ಆಟೊ ಘಟಕ: 17ಕ್ಕೆ ಪ್ರತಿಭಟನೆ

ಬೆಂಗಳೂರು: 'ರ್‍ಯಾಪಿಡೊ ಬೈಕ್ ಟ್ಯಾಕ್ಸಿಗಳಿಂದ ಆಟೊ ಚಾಲಕರಿಗೆ ಆಗುತ್ತಿರುವ ತೊಂದರೆ ಖಂಡಿಸಿ ಹಾಗೂ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಫೆ.17ರಂದು ಮೌರ್ಯ ವೃತ್ತದಲ್ಲಿ ಆಟೊ ಚಾಲಕರ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ' ಎಂದು ಆಮ್ ಆದ್ಮಿ ಪಕ್ಷದ (ಎಎಪಿ) ಆಟೊ ಘಟಕದ ಅಧ್ಯಕ್ಷ ಅಯೂಬ್ ಖಾನ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,'ಕೋವಿಡ್‌ನಿಂದಾಗಿ ಎರಡು ವರ್ಷಗಳಿಂದ ಆಟೊ ಚಾಲಕರು ಸಂಕಷ್ಟದಲ್ಲಿದ್ದಾರೆ. ಇದರ ನಡುವೆ ರ್‍ಯಾಪಿಡೊ ಬೈಕ್ ಟ್ಯಾಕ್ಸಿಗಳು ಕಾನೂನುಬಾಹಿರವಾಗಿ ಸೇವೆ ನೀಡುತ್ತಾ ಆಟೊ ಚಾಲಕರ ಆದಾಯಕ್ಕೆ ಪೆಟ್ಟು ನೀಡಿವೆ ಎಂದರು.

ನಗರದ ಕೋವಿಡ್ ಅಂಕಿ–ಅಂಶ

ಒಟ್ಟು ಪ್ರಕರಣಗಳು	17,71,622 ▲
ಸಕ್ರಿಯ ಪ್ರಕರಣಗಳು	12,890 ▼
ಗುಣಮುಖರಾದವರು	17,41,957 ▲
ಒಟ್ಟು ಸಾವು	16,774 ▲
ದಿನದ ಏರಿಕೆ	
ಹೊಸ ಪ್ರಕರಣ	754 ▼
ಗುಣಮುಖ	2,089 ▼
ಸಾವು	05 ▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ರಾಜ್ಯ ಕೋವಿಡ್ ಅಂಕಿ–ಅಂಶ

ಒಟ್ಟು ಸೋಂಕಿತರು (39,26,669 ನಿನ್ನೆಯ ವಿವರ)	39,28,237 ▲
ಸಕ್ರಿಯ ಪ್ರಕರಣಗಳು	31,215 ▼
ಗುಣಮುಖರಾದವರು	38,57,323 ▲
ಒಟ್ಟು ಸಾವು	39,665 ▲
ದಿನದ ಏರಿಕೆ	
ಹೊಸ ಪ್ರಕರಣ	1,568 ▼
ಗುಣಮುಖ	6,025 ▲
ಸಾವು	25 ▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕೋವಿಡ್ ಅಂಕಿ–ಅಂಶ

ಆಧಾರ: ಮೈಗೌ.ಇನ್/ ಕೋವಿಡ್19 ವರ್ಲ್ಡೋಮೀಟರ್

	ವಿಶ್ವ	ಭಾರತ
ಒಟ್ಟು ಪ್ರಕರಣ	41.31 ಕೋಟಿ ▲	4.26 ಕೋಟಿ
ಸಕ್ರಿಯ ಪ್ರಕರಣ	7.34 ಕೋಟಿ ▼	4.78 ಲಕ್ಷ ▼
ಗುಣಮುಖ	33.38 ಕೋಟಿ ▲	4.16 ಕೋಟಿ ▼
ಸಾವು	58.37 ಲಕ್ಷ ▲	5.09 ಲಕ್ಷ ▲
ದಿನದ ಮಾಹಿತಿ		
ಹೊಸ ಪ್ರಕರಣ	15.14 ಲಕ್ಷ ▼	34,113 ▼
ಗುಣಮುಖ	18.95 ಲಕ್ಷ ▼	91,930 ▼
ಸಾವು	5,784 ▼	346 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಜರ್ಮನಿ	ಫ್ರಾನ್ಸ್	ಬ್ರೆಜಿಲ್
1.08 ಲಕ್ಷ ▼	86,562	57,288

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು

ಅಮೆರಿಕ	ಫ್ರಾನ್ಸ್	ಜರ್ಮನಿ
2.85 ಕೋಟಿ	49.07 ಲಕ್ಷ ▼	34.27 ಲಕ್ಷ ▼

ಎಲ್ಲಿ ಹೆಚ್ಚು ಸಾವು (ಒಟ್ಟು)

ಮಹಾರಾಷ್ಟ್ರ	1.43 ಲಕ್ಷ
ಕೇರಳ	62,199 ▲
ತಮಿಳುನಾಡು	37,915 ▲

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ಮಹಾರಾಷ್ಟ್ರ	78.42 ▲
ಕೇರಳ	64.07 ▲
ತಮಿಳುನಾಡು	34.36 ▲

ಭಾರತದ ಕೋವಿಡ್ ಸಂಖ್ಯೆ ವಿವರ: ಸೋಮವಾರ ಬೆಳಿಗ್ಗೆ 8ರವರೆಗಿನ ಮಾಹಿತಿ

ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

ಕಾವೇರಿ ಐದನೇ ಹಂತದ ಯೋಜನೆ • ₹5,500 ಕೋಟಿ ಮೊತ್ತದ ಯೋಜನೆ • ಪ್ರಗತಿಯಲ್ಲಿ ಸಂಸ್ಕರಣಾ ಘಟಕ, ಪೈಪ್‌ಲೈನ್ ಅಳವಡಿಕೆ ಕಾಮಗಾರಿ

110 ಹಳ್ಳಿಗಳಿಗೆ 'ಕಾವೇರಿ' ಕನವರಿಕೆ

• ಸಚ್ಚಿದಾನಂದ ಕುರಗುಂದ

ಬೆಂಗಳೂರು: ಬಿಬಿಎಂಪಿಗೆ 110 ಹಳ್ಳಿಗಳ ಸೇರ್ಪಡೆಯಾಗಿ 14 ವರ್ಷಗಳೇ ಕಳೆದಿವೆ. ಇನ್ನೂ ಬಹುತೇಕ ಗ್ರಾಮಗಳ ನಿವಾಸಿಗಳಿಗೆ ಕಾವೇರಿ ನೀರು ಪೂರೈಸಲು ಸಾಧ್ಯವಾಗಿಲ್ಲ. ಕಾಮಗಾರಿ ವಿಳಂಬವಾಗುತ್ತಿದೆ ಎನ್ನುವ ದೂರುಗಳಿವೆ. ಈ ನಡುವೆ ಜಲ ಮಂಡಳಿಯು ಕಾವೇರಿ ಐದನೇ ಹಂತದಲ್ಲಿ ಈ ಗ್ರಾಮಗಳಿಗೆ ಶುದ್ಧ ಕುಡಿಯುವ ನೀರು ಪೂರೈಸುವ ಯೋಜನೆಯನ್ನು ಗಡುವಿನೊಳಗೆ ಪೂರ್ಣಗೊಳಿಸಲು ಪ್ರಯತ್ನ ನಡೆಸುತ್ತಿದೆ.

ದಾಸರಹಳ್ಳಿ, ರಾಜರಾಜೇಶ್ವರಿ ನಗರ, ಬೊಮ್ಮನಹಳ್ಳಿ, ಮಹದೇವಪುರ ಮತ್ತು ಬ್ಯಾಟರಾಯನಪುರ ವಲಯಗಳಿಗೆ ಕುಡಿಯುವ ನೀರು ಪೂರೈಸಲು ಈ ಯೋಜನೆ ರೂಪಿಸಲಾಗಿದೆ. ಸುಮಾರು 50 ಲಕ್ಷ ನಿವಾಸಿಗಳಿಗೆ ದಿನಕ್ಕೆ 7.55 ಕೋಟಿ ಲೀಟರ್ ಕುಡಿಯುವ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಯನ್ನು ಒದಗಿಸಲು ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಜಪಾನ್ ಅಂತರರಾಷ್ಟ್ರೀಯ ಸಹಕಾರ ಸಂಸ್ಥೆಯ (ಜೈಕಾ) ಸಹಯೋಗದೊಂದಿಗೆ ಒಟ್ಟು ₹5,500 ಕೋಟಿ ಮೊತ್ತದಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಒಟ್ಟು ಮೊತ್ತದಲ್ಲಿ ಶೇ 84ರಷ್ಟನ್ನು ಜೈಕಾ ಸಾಲ ನೀಡಿದೆ. ಉಳಿದ ಶೇ 8ರಷ್ಟು ಮೊತ್ತವನ್ನು ಜಲಮಂಡಳಿ ಮತ್ತು ಶೇ 8ರಷ್ಟು ಮೊತ್ತವನ್ನು ರಾಜ್ಯ ಸರ್ಕಾರ ಭರಿಸುತ್ತಿದೆ.2018ರ ಜನವರಿ 24ರಂದು ಸಾಲ ಒಪ್ಪಂದಕ್ಕೆ ಸಹಿ ಹಾಕಲಾಗಿತ್ತು. ಈ ಯೋಜನೆಯನ್ನು 2023ರಲ್ಲಿ ಪೂರ್ಣಗೊಳಿಸಬೇಕು ಎಂಬ ಗಡುವು ವಿಧಿಸಲಾಗಿದೆ. ಆದರೆ, ನಿಗದಿಪಡಿಸಿದ ಅವಧಿಯಲ್ಲೇ ಯೋಜನೆ ಪೂರ್ಣಗೊಳ್ಳುವುದು ಅನುಮಾನ.

ಈ ಯೋಜನೆಗೆ ಪ್ರಸಕ್ತ ವರ್ಷದ ಜನವರಿ ಅಂತ್ಯದವರೆಗೆ ಜಲಮಂಡಳಿಯು ₹1,617 ಕೋಟಿ (ಶೇ 32.73) ವೆಚ್ಚ ಮಾಡಿದ್ದು, ಶೇ 37.62 ಭೌತಿಕ ಪ್ರಗತಿಯನ್ನಷ್ಟೇ ಸಾಧಿಸಿದೆ. 2019ರ ಜನವರಿಯಿಂದಲೇ ಈ ಯೋಜನೆಯ ನಿರ್ವಹಣೆಗೆ ಸಲಹಾಸಂಸ್ಥೆಗಳನ್ನು (ಪಿಎಂಸಿ) ನೇಮಿಸಲಾಗಿದೆ. ಓರಿಯಂಟಲ್ ಕನ್ಸಲ್ಟಂಟ್ ಗ್ಲೋಬಲ್ ಜಪಾನ್, ಎನ್‌ಜೆಎಸ್ ಎಂಜಿನಿಯರ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್, ಟಾಟಾ ಕನ್ಸಲ್ಟಿಂಗ್ ಎಂಜಿನಿಯರ್ಸ್ ಮತ್ತು ಅಮೆರಿಕದ ಬ್ಲ್ಯಾಕ್ ಆ್ಯಂಡ್ ವೀಚ್ ಸಂಸ್ಥೆಗಳು ಇದರಲ್ಲಿ ಸೇರಿವೆ.

2021ರ ಮಾರ್ಚ್ ವೇಳೆಗೆ ₹ 450 ಕೋಟಿ ಮೊತ್ತದವರೆಗಿನ ಕಾಮಗಾರಿ ಪೂರ್ಣಗೊಂಡಿರಬೇಕು ಎಂದು ಜೈಕಾ ಗಡುವು ನೀಡಿತ್ತು. ಆಗ ತ್ವರಿತಗತಿಯಲ್ಲಿ ನಡೆಯುತ್ತಿದ್ದ ಕಾಮಗಾರಿಗಳಿಂದಾಗಿ ಜೈಕಾ ಸೂಚಿಸಿದ್ದಕ್ಕಿಂತ ಶೇ 10ರಷ್ಟು ಹೆಚ್ಚು ಕಾಮಗಾರಿ ಪೂರ್ಣಗೊಂಡಿತ್ತು. ಹೀಗಾಗಿ, ₹530 ಕೋಟಿಯವರೆಗಿನ ಕಾಮಗಾರಿ ಮುಗಿದಿತ್ತು. ಬಳಿಕ, ಕೋವಿಡ್ ಮತ್ತಿತರ ಕಾರಣಗಳಿಂದ ಕೆಲಕಾಲ ಕಾಮಗಾರಿ ನಿಧಾನಗತಿಯಲ್ಲಿ ಸಾಗಿತು. ಈ ಎಲ್ಲ ತೊಡಕುಗಳ ನಡುವೆ ಕೊಳವೆಮಾರ್ಗ ಅಳವಡಿಸುವುದು, ಪಂಪಿಂಗ್ ಸ್ಟೇಷನ್ ನಿರ್ಮಿಸುವುದು ಮತ್ತು ಕೊಳಚೆ ಸಂಸ್ಕರಣಾ ಘಟಕಗಳನ್ನು ನಿರ್ಮಿಸುವ ಕಾರ್ಯ ಭರದಿಂದ ಸಾಗಿದೆ. ಜತೆಗೆ, ಪೈಪ್‌ಲೈನ್ ಅಳವಡಿಸಲು ಅಗೆದ ರಸ್ತೆಯಲ್ಲಿ ಡಾಂಬರೀಕರಣವನ್ನೂ ಕೈಗೊಳ್ಳಲಾಗುತ್ತಿದೆ ಎಂದು ಅಧಿಕಾರಿಗಳು ವಿವರಿಸುತ್ತಾರೆ.



ಟಿ.ಕೆ. ಹಳ್ಳಿಯಿಂದ ಹಾರೋಹಳ್ಳಿ ನಡುವೆ ಪೈಪ್‌ಲೈನ್ ಅಳವಡಿಸುತ್ತಿರುವ ಕಾಮಗಾರಿ.



ಸಿಂಗಪುರದಲ್ಲಿ ಪೈಪ್ ಅಳವಡಿಕೆ ಕಾಮಗಾರಿ



ಗೊಟ್ಟಿಗೆರೆಯಲ್ಲಿ ಕೈಗೊಂಡಿರುವ ರಾಫ್ಟ್ ಕಾಂಕ್ರೀಟ್ ಕಾಮಗಾರಿ

ಯೋಜನೆಯ ಪ್ರಮುಖ ಕಾಮಗಾರಿಗಳು

- ಟಿ.ಕೆ.ಹಳ್ಳಿಯಲ್ಲಿ 775 ಎಂಎಲ್‌ಡಿ ನೀರು ಸಂಸ್ಕರಣಾ ಘಟಕ ಮತ್ತು ಪಂಪಿಂಗ್ ಸ್ಟೇಷನ್ ನಿರ್ಮಿಸಲಾಗುತ್ತಿದ್ದು, ಇದುವರೆಗೆ ₹185.07 ಕೋಟಿ ವೆಚ್ಚ
- ಹಾರೋಹಳ್ಳಿ, ತಾತಗುಣಿಯಲ್ಲೂ ಪಂಪಿಂಗ್ ಸ್ಟೇಷನ್‌ಗಳ ನಿರ್ಮಾಣ. ಇದುವರೆಗೆ ₹52.61 ಕೋಟಿ ವೆಚ್ಚ.
- ಟಿ.ಕೆ.ಹಳ್ಳಿಯಿಂದ ಹಾರೋಹಳ್ಳಿವರೆಗೆ 43.5 ಕಿ.ಮೀ. ಉದ್ದದ ನೀರು ಪೂರೈಕೆ ಮಾರ್ಗ ಕಲ್ಪಿಸಲಾಗುತ್ತಿದ್ದು, ಇದುವರೆಗೆ ₹513.73 ಕೋಟಿ ವೆಚ್ಚ ಮಾಡಲಾಗಿದೆ. ಇಲ್ಲಿಯವರೆಗೆ 27.55 ಕಿ.ಮೀ. ಪೈಪ್‌ಲೈನ್ ಅಳವಡಿಸಲಾಗಿದೆ.
- ಹಾರೋಹಳ್ಳಿಯಿಂದ ವಾಜರಹಳ್ಳಿವರೆಗಿನ 25.5 ಕಿ.ಮೀ. ಉದ್ದದ ನೀರು ಪೂರೈಕೆ ಮಾರ್ಗಕ್ಕೆ ಇದುವರೆಗೆ ₹229.58 ಕೋಟಿ ವೆಚ್ಚ ಮಾಡಲಾಗಿದೆ. ಇಲ್ಲಿಯವರೆಗೆ 11.40 ಕಿ.ಮೀ. ಪೈಪ್‌ಲೈನ್ ಅಳವಡಿಸಲಾಗಿದೆ.

'2023ರ ಮಾರ್ಚ್‌ಗೆ ಪೂರ್ಣ'



2023ರ ಮಾರ್ಚ್ ವೇಳೆಗೆ 110 ಹಳ್ಳಿಗಳಿಗೆ ಕುಡಿಯುವ ನೀರು ಪೂರೈಸುವ ಯೋಜನೆ ಪೂರ್ಣಗೊಳ್ಳಲಿದೆ ಎಂದು ಜಲಮಂಡಳಿಯ ಅಧ್ಯಕ್ಷ ಎನ್. ಜಯರಾಂ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

'ಕೋವಿಡ್ ಕಾರಣಕ್ಕೆ ಕಾಮಗಾರಿ ಅನುಷ್ಠಾನ ಸ್ವಲ್ಪಮಟ್ಟಿಗೆ ವಿಳಂಬವಾಯಿತು. ಕೋವಿಡ್ ಎರಡನೇ ಅಲೆಯ ಸಂದರ್ಭದಲ್ಲಿ ಆಮ್ಲಜನಕ ಸಿಲಿಂಡರ್‌ಗಳನ್ನು ಆಸ್ಪತ್ರೆಗೆ ನೀಡಲಾಗುತ್ತಿತ್ತು. ಇದರಿಂದ, ಪೈಪ್‌ಲೈನ್ ಜೋಡಣೆ ಮತ್ತು ಇತರ ಕಾರ್ಯಗಳಿಗೆ ಆಮ್ಲಜನಕ ಸಿಲಿಂಡರ್‌ಗಳು ದೊರೆಯಲಿಲ್ಲ. ಇದೇ ಸಂದರ್ಭದಲ್ಲಿ ಕಾರ್ಮಿಕರ ಸಮಸ್ಯೆಯೂ ಎದುರಾಯಿತು. ಹೀಗಾಗಿ, ಕೆಲಸ ವಿಳಂಬವಾಯಿತು. ಈಗ ಕಾಮಗಾರಿ ತ್ವರಿತಗತಿಯಲ್ಲಿ ನಡೆಯುತ್ತಿದೆ' ಎಂದು ಅವರು ವಿವರಿಸಿದರು.

'ಎತ್ತಿನಹೊಳೆ ಯೋಜನೆ ಅಡಿಯಲ್ಲಿ 1.5 ಟಿಎಂಸಿ ಅಡಿ ನೀರನ್ನು ತಿಪ್ಪಗೊಂಡನಹಳ್ಳಿ ಜಲಾಶಯಕ್ಕೆ ಪೂರೈಸಲು ಉದ್ದೇಶಿಸಲಾಗಿದೆ. ಈ ಯೋಜನೆ ಪೂರ್ಣಗೊಂಡ ಬಳಿಕ, ಜಲಾಶಯದಿಂದಲೂ ನೀರು ದೊರೆಯುತ್ತದೆ. ಓಜೋನೈಸೇಷನ್ ತಂತ್ರಜ್ಞಾನ ಬಳಸಿ ಈ ನೀರನ್ನು ಪಡೆಯಲಾಗುವುದು' ಎಂದು ವಿವರಿಸಿದರು.

'ಯೋಜನೆಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಮತ್ತು ಕೆಪಿಟಿಸಿಎಲ್ ಸೇರಿದಂತೆ ಅಗತ್ಯ ಇರುವ ವಿವಿಧ ಇಲಾಖೆಗಳಿಂದಲೂ ಅನುಮೋದನೆ ಪಡೆದುಕೊಂಡು ಕಾಮಗಾರಿ ಕೈಗೊಳ್ಳಲಾಗಿದೆ' ಎಂದು ತಿಳಿಸಿದರು.

ಅಗೆದ ರಸ್ತೆ ದುರಸ್ತಿಯಾಗದೆ ಜನರಿಗೆ ಸಮಸ್ಯೆ



ಕುಡಿಯುವ ನೀರು ಹಾಗೂ ಒಳಚರಂಡಿ ಅಳವಡಿಕೆ ಸಲುವಾಗಿ 110 ಹಳ್ಳಿಗಳ ವ್ಯಾಪ್ತಿಯ ರಸ್ತೆಗಳನ್ನು ಅಗೆಯಲಾಗಿದೆ. ವರ್ಷಗಳು ಕಳೆದ ಬಳಿಕವೂ ಈ ರಸ್ತೆಗಳನ್ನು ದುರಸ್ತಿಪಡಿಸಿಲ್ಲ. ಇದರಿಂದಾಗಿ ಸ್ಥಳೀಯ ನಿವಾಸಿಗಳು ನಿತ್ಯವೂ ನಾನಾ ರೀತಿಯ ಸಮಸ್ಯೆಗಳನ್ನು ಎದುರಿಸುವಂತಾಗಿದೆ. ಕೆಲವು ಕಡೆ ರಸ್ತೆ ಅಪಘಾತದಿಂದ ದ್ವಿಚಕ್ರ ವಾಹನ ಸವಾರರು ಗಾಯಗೊಂಡ ಪ್ರಕರಣಗಳೂ ನಡೆದಿವೆ. ಕೊಳವೆ ಅಳವಡಿಸಿದ ಪ್ರದೇಶಗಳಲ್ಲಿ ದೂಳಿನ ಸ್ನಾನ ಮಾಮೂಲಿ ಎಂಬಂತಾಗಿದೆ.

'ಕಾವೇರಿ ಐದನೇ ಹಂತದ ಯೋಜನೆಯ ಅಡಿಯಲ್ಲಿ ಪೈಪ್‌ಲೈನ್ ಅಳವಡಿಸುವ ಕಾಮಗಾರಿ ದಾಸರಹಳ್ಳಿ ವಿಧಾನ ಸಭಾ ಕ್ಷೇತ್ರದಲ್ಲಿ ಬಹುತೇಕ ಪೂರ್ಣಗೊಂಡಿವೆ. ಆದರೆ, ಪೈಪ್‌ಲೈನ್ ಕಾಮಗಾರಿಗಾಗಿ ಅಗೆಯಲಾದ ರಸ್ತೆಗಳನ್ನು ದುರಸ್ತಿಗೊಳಿಸದ ಕಾರಣ ಜನರಿಗೆ ತೊಂದರೆಯಾಗಿದೆ' ಎಂದು ಶಾಸಕ ಆರ್. ಮಂಜುನಾಥ್ ದೂರಿದರು.

'ಕ್ಷೇತ್ರದಲ್ಲಿರುವ 18–20 ಅಡಿ ಅಗಲದ ರಸ್ತೆಗಳಲ್ಲಿ ಬೆಸ್ಕಾಂ, ಜಲಮಂಡಳಿ ಸೇರಿದಂತೆ ವಿವಿಧ ಇಲಾಖೆಗಳು ಕಾಮಗಾರಿ ಕೈಗೊಳ್ಳುತ್ತಿವೆ. ಇದರಿಂದ ಬಹಳಷ್ಟು ಸಮಸ್ಯೆಗಳಾಗಿವೆ. ದಾಸರಹಳ್ಳಿ ಕ್ಷೇತ್ರಕ್ಕೆ ಕೇವಲ ₹ 25 ಕೋಟಿ ಅನುದಾನ ನೀಡಲಾಗಿದೆ. ಇದು ಯಾವುದಕ್ಕೂ ಸಾಲದು. ಕನಿಷ್ಠ ₹150 ಕೋಟಿ ನೀಡುವಂತೆ ಪದೇ ಪದೇ ಕೋರಿದ್ದರೂ ಸರ್ಕಾರ ಸ್ಪಂದಿಸುತ್ತಿಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದರು.



ತ್ಯಾಜ್ಯ ನೀರಿನ ಸಮತೋಲನ ಟ್ಯಾಂಕ್



ದೊಡ್ಡಕನ್ನಹಳ್ಳಿಯಲ್ಲಿ ನಡೆಯುತ್ತಿರುವ ಕಾಂಕ್ರೀಟ್ ಗೋಡೆ ನಿರ್ಮಾಣ ಕಾಮಗಾರಿ

ವಿದ್ಯುತ್ ವ್ಯತ್ಯಯ ಇಂದು

ಬೆಂಗಳೂರು: ನೆಲದಡಿಯಲ್ಲಿ ಕೇಬಲ್ ಅಳವಡಿಸುವ ಕಾರ್ಯ ಕೈಗೊಂಡಿರುವುದರಿಂದ ಫೆ.15ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ಬೆಸ್ಕಾಂ ಪಶ್ಚಿಮ ವೃತ್ತದಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಸ್ಥಳಗಳು: ಎಂ.ಸಿ. ಬಡಾವಣೆ, ಬಾಪೂಜಿ ಬಡಾವಣೆ, ಕಾಮಾಕ್ಷಿಪಾಳ್ಯ, ಬಿಎಚ್‌ಇಎಲ್ ಬಡಾವಣೆ, ಕೃಷ್ಣಗಾರ್ಡನ್, ಟಿ.ಜಿ. ಪಾಳ್ಯ ಮುಖ್ಯ ರಸ್ತೆ, ಉಲ್ಲಾಳ ನಗರ, ಮಾರುತಿ ನಗರ, ಕೋಡಿಪಾಳ್ಯ, ಅನ್ನಪೂರ್ಣೇಶ್ವರಿ ಬಡಾವಣೆ, ಗಂಗಾನಗರ, ಅಂಬೇಡ್ಕರ್ ನಗರ, ಉಲ್ಲಾಳ ಬಸ್ ನಿಲ್ದಾಣ ಸುತ್ತಮುತ್ತ ಪ್ರದೇಶಗಳು.

ನಗರದಲ್ಲಿ ಇಂದು

ಆಂಜನೇಯಸ್ವಾಮಿ ಬ್ರಹ್ಮರಥೋತ್ಸವ: ವಿವಿಧ ಧಾರ್ಮಿಕ ಕಾರ್ಯಕ್ರಮಗಳು, ಸ್ಥಳ-ದೇವಸ್ಥಾನದ ಆವರಣ, ಹೇರೋಹಳ್ಳಿ, ವಿಶ್ವನೀಡಂ ಅಂಚೆ, ಮಾಗಡಿ ರಸ್ತೆ (ಬೆಳಿಗ್ಗೆ 9.30ರಿಂದ ಸಂಜೆ 7ರವರೆಗೆ)

'ನಗರದ ಬಸ್ ಸೇವೆಯು ಸಾರ್ವಜನಿಕರ ಕೈಗೆಟಕುವ ದರದಲ್ಲಿ ಇದೆಯೇ?–ಸಾರ್ವಜನಿಕ ಅಹವಾಲು: ಭಾಗವಹಿಸುವವರು–ಆಶಿಶ್ ವರ್ಮ, ಸಿಂಥಿಯಾ ಸ್ಟೀಫನ್, ಮನು ಮಥಾಯ್, ಸೌಮ್ಯಾ ರೆಡ್ಡಿ, ತಾರಾ ಕೃಷ್ಣಸ್ವಾಮಿ, ಆಯೋಜನೆ–ಬೆಂಗಳೂರು ಬಸ್ ಪ್ರಯಾಣಿಕರ ವೇದಿಕೆ, ಸ್ಥಳ–ಆಶೀರ್ವಾದ್, ಸೇಂಟ್ ಮಾರ್ಕ್ ರಸ್ತೆ, ಮಧ್ಯಾಹ್ನ 2.30

ಚಂದ್ರಶೇಖರ ಪಾಟೀಲ ಅವರಿಗೆ ನುಡಿನಮನ: ಅತಿಥಿಗಳು–ವೀರಭದ್ರ ಚನ್ನಮಲ್ಲ ದೇಶಿಕೇಂದ್ರ ಸ್ವಾಮೀಜಿ, ಬರಗೂರು ರಾಮಚಂದ್ರಪ್ಪ, ಸಾ.ರಾ. ಗೋವಿಂದು, ಇಂದಿರಾ ಕೃಷ್ಣಪ್ಪ, ಮೀನಾ ಪಾಟೀಲ, ಶಂಕರ್ ಹೂಗಾರ, ಆಯೋಜನೆ–ಕರ್ನಾಟಕ ಸ್ವಾಭಿಮಾನ ವೇದಿಕೆ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಸ್ಥಳ–ಗಾಂಧಿಭವನ, ಸಂಜೆ 4

ಎಂಬಸ್ಸಿ ಮಾನ್ಯತಾ ಮೇಲ್ಸೇತುವೆ ಉದ್ಘಾಟನೆ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸ್ಥಳ–ಮಾನ್ಯತಾ ಟೆಕ್‌ಪಾರ್ಕ್, ನಾಗವಾರ, ಸಂಜೆ 5

ಪ್ರಜಾತಾಂತ್ರಿಕ ಧರ್ಮನಿರಪೇಕ್ಷ ಮೌಲ್ಯಗಳನ್ನು ಎತ್ತಿ ಹಿಡಿಯಿರಿ–ಐಕ್ಯತೆ ಮುರಿಯುವ ಶಕ್ತಿಗಳನ್ನು ಸೋಲಿಸಿ' ಚರ್ಚೆ: ಮಾತನಾಡುವವರು–ಚಂದ್ರ ಪೂಜಾರಿ, ಕೆ.ಸಿ.ರಘು, ಸುಧಾ ಕಾಮತ್, ಅಧ್ಯಕ್ಷತೆ–ಬಿ.ಆರ್.ಅಪರ್ಣ, ಆಯೋಜನೆ–ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ, ಸಂಜೆ 5.30

'ರಾಜ್ಯದ ಪ್ರಸಕ್ತ ಶೈಕ್ಷಣಿಕ ಸಮಸ್ಯೆಗಳು ಹಾಗೂ ಸವಾಲುಗಳು' ಕುರಿತು ವೆಬಿನಾರ್: ಭಾಗವಹಿಸುವವರು–ಪ್ರೊ.ಎ.ಮುರಿಗೆಪ್ಪ, ಅಲ್ಲಮಪ್ರಭು ಬೆಟ್ಟದೂರು, ಜಹೀರುದ್ದೀನ್ ಅಲಿಖಾನ್, ರಿಚರ್ಡ್ ರೇಗೊ, ಪ್ರೀತಿ ಶುಭಚಂದ್ರ, ಅಧ್ಯಕ್ಷತೆ–ರಾಜಶೇಖರ್, ಆಯೋಜನೆ–ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿ, ಸಂಜೆ 5.30 (ಆನ್‌ಲೈನ್ ಕಾರ್ಯಕ್ರಮ)

ವೈದ್ಯಕೀಯ ಕೋರ್ಸ್‌ಗಳ ತರಗತಿ ವಿಳಂಬ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರವೇಶ ಪ್ರಕ್ರಿಯೆ ಇನ್ನೂ ಸಂಪೂರ್ಣ ಮುಗಿಯದ ಕಾರಣ, ಪ್ರಸಕ್ತ ಸಾಲಿನ ವೈದ್ಯಕೀಯ, ದಂತ ವೈದ್ಯಕೀಯ ಮತ್ತು ಆಯುಷ್ ಕೋರ್ಸ್‌ಗಳ ತರಗತಿಗಳು ವಿಳಂಬವಾಗಲಿವೆ.

ಮೊದಲ ಸುತ್ತಿನ ಸೀಟು ಹಂಚಿಕೆ ಇತ್ತೀಚೆಗಷ್ಟೇ ಮುಗಿದಿದ್ದು, ಪ್ರವೇಶ ಪತ್ರವನ್ನು ಡೌನ್‌ಲೋಡ್ ಮಾಡಿಕೊಳ್ಳುವ ಕೊನೆಯ ದಿನಾಂಕವನ್ನು ಫೆ.15ರವರೆಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ವಿಸ್ತರಿಸಿದೆ. ಜತೆಗೆ, ಕಾಲೇಜಿಗೆ ವಿದ್ಯಾರ್ಥಿಗಳು ವರದಿಗೆ ಮಾಡಿಕೊಳ್ಳುವುದಕ್ಕೆ ಫೆ.16ರ ಸಂಜೆ 5.30ರವರೆಗೆ ಅವಕಾಶ ಕಲ್ಪಿಸಲಾಗಿದೆ.

ಆದರೆ, ಯುಜಿ-ನೀಟ್ 2021ರ ತಂಡದ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸ್‌ಗಳ ತರಗತಿಗಳನ್ನು ಫೆ.14ರಿಂದ ಆರಂಭಿಸುವಂತೆ ರಾಷ್ಟ್ರೀಯ ವೈದ್ಯಕೀಯ ಮಂಡಳಿ (ಎನ್‌ಎಂಸಿ) ಸೂಚಿಸಿತ್ತು.

ಕೆಇಎ ಇಲ್ಲಿಯವರೆಗೆ ಒಂದು ಸುತ್ತಿನ ಪ್ರಕ್ರಿಯೆಯನ್ನು ಪೂರ್ಣಗೊಳಿಸಿರುವುದರಿಂದ ತರಗತಿಗಳು ಇನ್ನೂ 10 ದಿನಗಳ ಕಾಲ ವಿಳಂಬವಾಗುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಚಿವರನ್ನೇ ಕರೆಸಬೇಕಾ?

ಬೆಂಗಳೂರು: ಫಾರ್ಮಸಿ ಇನ್‌ಸ್ಪೆಕ್ಟರ್‌ಗಳ ನೇಮಕಾತಿಯ ಅರ್ಹತಾ ನಿಯಮಗಳಿಗೆ ಸಹಿ ಹಾಕಲು ಸಂಬಂಧಿಸಿದ ಸಚಿವರಿಗೆ ಎರಡು ತಿಂಗಳಿಂದಲೂ ಸಾಧ್ಯವಾಗಿಲ್ಲ ಎಂದಾದರೆ, ಆ ಸಚಿವರನ್ನೇ ಕೋರ್ಟ್‌ಗೆ ಕರೆಯಿಸಬೇಕಾದೀತು ಎಂದು ಹೈಕೋರ್ಟ್ ಎಚ್ಚರಿಸಿದೆ.

ಈ ಕುರಿತಂತೆ ಅಶೋಕ್ ಸ್ವಾಮಿ ಹೇರೂರು ಎಂಬುವರು 2015ರಲ್ಲಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರದ ಪರ ವಕೀಲರು,'ನಿಯಮಗಳಿಗೆ ಸಚಿವ ಸಂಪುಟದ ಅನುಮೋದನೆ ಸಿಕ್ಕಿದೆ. ಸದ್ಯ ಕಡತ ಸಹಿಗಾಗಿ ಎರಡು ವಾರಗಳ ಕಾಲಾವಕಾಶ ಬೇಕು' ಎಂದು ಕೋರಿದರು.

ಇದಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ನ್ಯಾಯಪೀಠ, 'ನಿಯಮಗಳಿಗೆ ಸಚಿವ ಸಂಪುಟದ ಅನುಮೋದನೆ ಸಿಕ್ಕಿದೆ ಎಂದು 2021ರ ಡಿಸೆಂಬರ್ 14ರಂದೇ ಸರ್ಕಾರ ಹೇಳಿತ್ತು. ಆದರೆ, ಎರಡು ತಿಂಗಳು ಕಳೆದರೂ ಕಡತ ಇನ್ನೂ ಸಚಿವರ ಮುಂದಿದೆ ಎಂದರೆ ಏನರ್ಥ. ಸಚಿವರು ಎಂದಾಕ್ಷಣ ಅವರಿಗೇನೂ ವಿನಾಯಿತಿ ಇಲ್ಲ. ಅವರನ್ನೇ ಕೋರ್ಟ್‌ಗೆ ಕರೆಯಿಸಬೇಕಾ' ಎಂದು ಸರ್ಕಾರಿ ವಕೀಲರನ್ನು ಖಾರವಾಗಿ ಪ್ರಶ್ನಿಸಿತು.

'ಈ ಪ್ರಕರಣದ ಬಗ್ಗೆ ಸ್ವತಃ ಮುಖ್ಯಮಂತ್ರಿಗಳೇ ಗಮನಹರಿಸಬೇಕು. ಆದ್ದರಿಂದ, ಇದನ್ನು ಮುಖ್ಯಮಂತ್ರಿಯವರ ಮುಂದೆ ಮಂಡಿಸಿ' ಎಂದು ನಿರ್ದೇಶಿಸಿದ ನ್ಯಾಯಪೀಠ ವಿಚಾರಣೆಯನ್ನು ಮಾರ್ಚ್ 3ಕ್ಕೆ ಮುಂದೂಡಿದೆ.

ಕೋವಿಡ್ ಸಂಕಷ್ಟ: ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದಿಂದ ಅಹವಾಲು ಸ್ವೀಕಾರ ಪ್ರಾರಂಭ

ವಿದ್ಯುತ್ ದರ ಹೆಚ್ಚಳ ಪ್ರಸ್ತಾವಕ್ಕೆ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್‌ನಿಂದಾಗಿ ಎಲ್ಲ ವರ್ಗದವರು ಕಳೆದ ಎರಡು ವರ್ಷಗಳಿಂದ ಸಂಕಷ್ಟ ಎದುರಿಸುತ್ತಿದ್ದಾರೆ. ಈಗ ಪ್ರತಿ ಯೂನಿಟ್ ವಿದ್ಯುತ್‌ಗೆ ₹1.58 ದರ ಹೆಚ್ಚಿಸುವ ಬೆಸ್ಕಾಂ ಕೋರಿಕೆ ಅವೈಜ್ಞಾನಿಕ. ನಷ್ಟ ಸರಿದೂಗಿಸಲು ವಿದ್ಯುತ್ ಖರೀದಿಯ ಮೋಸದ ವ್ಯವಹಾರ ತಡೆಯಬೇಕು. ಹಾಗೂ ವ್ಯವಸ್ಥೆಯ ಲೋಪಗಳನ್ನು ಸರಿಪಡಿಸಬೇಕು'

ಇವು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ಕೆಇಆರ್‌ಸಿ) ನಗರದಲ್ಲಿ ಸೋಮವಾರ ಏರ್ಪಡಿಸಿದ್ದ ಸಾರ್ವಜನಿಕ ವಿಚಾರಣೆ ಸಭೆಯಲ್ಲಿ ಗ್ರಾಹಕರು, ಕೈಗಾರಿಕೋದ್ಯಮಿಗಳು ಹಾಗೂ ವಿವಿಧ ಸಂಘ–ಸಂಸ್ಥೆಗಳ ಮುಖಂಡರಿಂದ ವ್ಯಕ್ತವಾದ ಅಭಿಪ್ರಾಯಗಳಿವು. ಬೆಸ್ಕಾಂ ಸಲ್ಲಿಸಿರುವ ವಿದ್ಯುತ್ ದರ ಪರಿಷ್ಕರಣೆ ಕೋರಿಕೆ ಪ್ರಸ್ತಾವಕ್ಕೆ ಆಯೋಗದ ಅಧ್ಯಕ್ಷ ಮಂಜುನಾಥ್ ಎಚ್.ಎಂ. ಹಾಗೂ ಸದಸ್ಯ ಎಂ.ಡಿ. ರವಿ ಅವರು ಗ್ರಾಹಕರಿಂದ ಅಹವಾಲುಗಳನ್ನು ಸ್ವೀಕರಿಸಿದರು.

ಒಟ್ಟು 70 ಆಕ್ಷೇಪಣೆಗಳು ಸಲ್ಲಿಕೆಯಾಗಿದ್ದು, 25 ಪ್ರತಿನಿಧಿಗಳು ಮೌಖಿಕವಾಗಿ ಅಭಿಪ್ರಾಯ ಮಂಡಿಸಿದರು. ಬಹುತೇಕರು ವಿದ್ಯುತ್ ದರ ಹೆಚ್ಚಳಕ್ಕೆ ವಿರೋಧ ವ್ಯಕ್ತಪಡಿಸಿದರು. ಕಳಪೆ ಗುಣಮಟ್ಟದ ಮೀಟರ್ ಅಳವಡಿಕೆ, ನೆಲದಡಿ ವಿದ್ಯುತ್ ಕೇಬಲ್ ಅಳವಡಿಕೆಯಲ್ಲಿ ದೋಷ, ವಿದ್ಯುತ್ ಪರಿವರ್ತಕಗಳ ನಿರ್ವಹಣೆ ಕೊರತೆ, ವಿದ್ಯುತ್ ಕಳ್ಳತನ ಸೇರಿದಂತೆ ವ್ಯವಸ್ಥೆಯಲ್ಲಿನ ವಿವಿಧ ಲೋಪಗಳನ್ನು ಸರಿಪಡಿಸುವಂತೆ ಸಲಹೆ ನೀಡಿದರು.

ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘದ (ಕಾಸಿಯಾ) ಇಂಧನ ಸಮಿತಿಯ ಶ್ರೀನಾಥ್ ಭಂಡಾರಿ ಮತ್ತು ಮಲ್ಲಪ್ಪ ಗೌಡ, 'ಹೈಟೆನ್ಷನ್ ಲೈನ್ ಸಂಪರ್ಕ ಹೊಂದಿರುವ ಕೈಗಾರಿಕಾ ಗ್ರಾಹಕರು ಅಗ್ಗವಾಗಿರುವ ಮುಕ್ತ ಮೂಲಗಳಿಂದ ವಿದ್ಯುತ್ ಪಡೆಯುತ್ತಿದ್ದು, ಬೆಸ್ಕಾಂನಿಂದ ದೂರ ಸರಿಯುತ್ತಿದ್ದಾರೆ. ಅದರಿಂದಾಗಿ ಹೈಟೆನ್ಷನ್ ಲೈನ್ ಬಳಕೆ ಶೇ 23 ರಷ್ಟು ಕಡಿಮೆಯಾಗಿದೆ. ಲೋಟೆನ್ಷನ್ ಲೈನ್ ಬಳಕೆಯೂ ಕಡಿಮೆಯಾಗಿದೆ. ಮಾರುಕಟ್ಟೆಯ ಪೈಪೋಟಿಯಿಂದ ಕೈಗಾರಿಕೆಗಳು ಹೈರಾಣಾಗಿವೆ. ವಿದ್ಯುತ್ ದರವನ್ನೂ ಹೆಚ್ಚಳ ಮಾಡಿದರೆ ಬಾಗಿಲು ಮುಚ್ಚಬೇಕಾಗುತ್ತವೆ' ಎಂದು ಕಳವಳ ವ್ಯಕ್ತಪಡಿಸಿದರು.

'ಪ್ರತಿ ಯೂನಿಟ್‌ಗೆ ಸರಾಸರಿ ವೆಚ್ಚ ₹ 8.17 ಆಗಿದೆ. ಕೃಷಿ ಪಂಪ್‌ಸೆಟ್‌ಗಳಿಗೆ ಸರಬರಾಜು ಮಾಡಲಾದ ವಿದ್ಯುತ್‌ನ ಪ್ರತಿ ಯೂನಿಟ್‌ಗೆ ₹ 3.90 ಸಬ್ಸಿಡಿ ನೀಡುತ್ತಿರುವುದು ಇತರ ಗ್ರಾಹಕರ ಮೇಲೆ ದೊಡ್ಡ ಹೊರೆಯಾಗಿ ಪರಿಣಮಿಸಿದೆ. ಸರ್ಕಾರದ ಸ್ಥಾವರಗಳಿಂದ ಬಾಕಿ ಉಳಿದಿರುವ ₹ 698.85 ಕೋಟಿಗಳನ್ನು ಗ್ರಾಹಕರ ಮೇಲೆ ವರ್ಗಾವಣೆ ಮಾಡಬಾರದು. ಅದನ್ನು ಸರ್ಕಾರದಿಂದ ವಸೂಲಿ ಮಾಡಬೇಕು. ಅನಧಿಕೃತ ಕೃಷಿ ಪಂಪ್‌ಸೆಟ್‌ಗಳು ಬೆಸ್ಕಾಂನ ಚಟುವಟಿಕೆಗಳಿಗೆ ಕಂಟಕಪ್ರಾಯವಾಗಿವೆ. 24,874 ಅನಧಿಕೃತ ಕೃಷಿ ಪಂಪ್‌ಸೆಟ್‌ಗಳನ್ನು ಕ್ರಮಬದ್ಧಗೊಳಿಸಬೇಕು' ಎಂದು ಆಗ್ರಹಿಸಿದರು.

ಪೀಣ್ಯ ಕೈಗಾರಿಕಾ ಸಂಘದ ಲಕ್ಷ್ಮೀಕಾಂತ್, 'ಸಂಘದಡಿ 10 ಸಾವಿರ ಕೈಗಾರಿಕೆಗಳು ನೋಂದಾಯಿಸಲ್ಪಟ್ಟಿವೆ. ಕೋವಿಡ್‌ನಿಂದ ಶೇ 50 ರಷ್ಟು ಕೈಗಾರಿಕೆಗಳು ಮುಚ್ಚಿವೆ. ಎರಡು ವರ್ಷಗಳು ವಿದ್ಯುತ್ ದರ ಹೆಚ್ಚಳ ಮಾಡಬಾರದು' ಎಂದು ಮನವಿ ಮಾಡಿಕೊಂಡರು.

ಕೈಗಾರಿಕೋದ್ಯಮಿ ನರಸಿಂಹಯ್ಯ, 'ಗುಣಮಟ್ಟದ ವಿದ್ಯುತ್ ಪೂರೈಕೆ ಆಗುತ್ತಿಲ್ಲ. ಎಲ್ಲ ಕೈಗಾರಿಕೆಗಳು ಕೋಮಾ ಸ್ಥಿತಿ ತಲುಪಿವೆ. ಕಾರ್ಮಿಕರಿಗೆ ವೇತನ ನೀಡುವುದೇ ಕಷ್ಟವಾಗಿದೆ. ವಾರದಲ್ಲಿ ಆರು ದಿನ ಸರಿಯಾಗಿ ವಿದ್ಯುತ್ ಪೂರೈಕೆಯಾಗುತ್ತಿಲ್ಲ. ಇದರಿಂದ ಜನರೇಟರ್‌ಗಳನ್ನು ಬಳಸಬೇಕಾಗಿದೆ. ಹಣ ಪಾವತಿ ಒಂದು ದಿನ ತಡವಾದರೂ ವಿದ್ಯುತ್ ಕಡಿತ ಮಾಡಲಾಗುತ್ತಿದೆ. ಆನ್‌ಲೈನ್ ಹಣ ಪಾವತಿ ವ್ಯವಸ್ಥೆಯನ್ನೂ ಸರಿಯಾಗಿ ರೂಪಿಸಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

'ವಿದ್ಯುತ್ ಪರಿವರ್ತಕಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡುತ್ತಿಲ್ಲ. ಒಮ್ಮೆ ಅಳವಡಿಸಿದರೆ 10–15 ವರ್ಷಗಳು ಅತ್ತ ತಿರುಗಿ ನೋಡುತ್ತಿಲ್ಲ. ಪ್ರತಿ ವಿದ್ಯುತ್ ಪರಿವರ್ತಕದ ಮೇಲೆ ಅದರ ನಿರ್ವಹಣೆಯ ವಿವರವನ್ನು ನಮೂದಿಸಬೇಕು. ಕೆಲವರಿಗೆ ಅರ್ಜಿ ಸಲ್ಲಿಸಿದ ಮೂರು ದಿನಗಳಲ್ಲಿಯೇ ವಿದ್ಯುತ್ ಸಂಪರ್ಕ ದೊರೆತರೆ, ಇನ್ನೂ ಕೆಲವರಿಗೆ ತಿಂಗಳು ಬೇಕಾಗುತ್ತವೆ' ಎಂದು ಕೃಷ್ಣಪ್ಪ ಹೇಳಿದರು.

ಪೀಣ್ಯದ ಎಸ್.ಎಂ. ಹುಸೇನ್, 'ಬೆಸ್ಕಾಂ ನಷ್ಟವನ್ನು ಗ್ರಾಹಕರ ಮೇಲೆ ಹೇರುವುದು ಸರಿಯಲ್ಲ. ಅಧಿಕಾರಿಗಳು ಗ್ರಾಹಕ ಸ್ನೇಹಿಯಾಗಿಲ್ಲ' ಎಂದು ದೂರಿದರು.

'ಅಧಿಕ ದರಕ್ಕೆ ವಿದ್ಯುತ್ ಮಾರಾಟ'

'ವಿದ್ಯುತ್ ಇಲಾಖೆಯು ಬೇರೆ ರಾಜ್ಯಗಳಿಗೆ ಯೂನಿಟ್‌ಗೆ ₹ 3ರಂತೆ ಮಾರಾಟ ಮಾಡುತ್ತಿದೆ. ರಾಜ್ಯದ ಉದ್ಯಮಿಗಳಿಗೆ ವಾಣಿಜ್ಯ ವ್ಯವಹಾರಕ್ಕೆ ಯೂನಿಟ್‌ಗೆ ₹ 7ಕ್ಕೆ ನಿಗದಿಪಡಿಸಲಾಗಿದೆ. ಇದು ಅನ್ಯಾಯ' ಎಂದು ಬೃಹತ್ ಬೆಂಗಳೂರು ಹೋಟೆಲ್‌ಗಳ ಸಂಘದ ಅಧ್ಯಕ್ಷ ಪಿ.ಸಿ. ರಾವ್ ದೂರಿದರು.

'ವಿದ್ಯುತ್ ಮೇಲಿನ ತೆರಿಗೆಯನ್ನು ಶೇ 9ರಿಂದ ಶೇ 4ಕ್ಕೆ ಇಳಿಕೆ ಮಾಡಬೇಕು. ಪ್ರಿಪೇಯ್ಡ್ ಮೀಟರ್‌ಗಳನ್ನು ಅಳವಡಿಸಬೇಕು. ಸ್ಥಿರ ಶುಲ್ಕವನ್ನು ಕಡಿಮೆ ಮಾಡಬೇಕು. ಸರ್ಕಾರಿ ಸಂಸ್ಥೆಗಳು ಬಾಕಿ ಉಳಿಸಿಕೊಂಡಿರುವ ವಿದ್ಯುತ್ ಬಿಲ್‌ಗಳನ್ನು ವಸೂಲಿ ಮಾಡಬೇಕು' ಸಲಹೆ ನೀಡಿದರು.

ಇದೇ 28ರವರೆಗೆ ಅಹವಾಲು ಸ್ವೀಕಾರ

ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ ಗ್ರಾಹಕರಿಂದ ಇದೇ 28ರವರೆಗೆ ಅಹವಾಲು ಸ್ವೀಕರಿಸಲಿದೆ. ವಿದ್ಯುತ್ ದರ ಪರಿಷ್ಕರಿಸುವಂತೆ ಕೆಇಆರ್‌ಸಿಗೆ ವಿದ್ಯುತ್ ಸರಬರಾಜು ಕಂಪನಿಗಳು (ಎಸ್ಕಾಂಗಳು) ಪ್ರಸ್ತಾವ ಸಲ್ಲಿಸಿವೆ. ಎಲ್ಲ ಎಸ್ಕಾಂಗಳು ಮತ್ತು ಕೆಪಿಟಿಸಿಎಲ್‌ಗೆ ಸಂಬಂಧಿಸಿದ ವಾರ್ಷಿಕ ಆದಾಯದ ವಿವರಗಳನ್ನು ಕೆಇಆರ್‌ಸಿ ಪರಾಮರ್ಶೆ ನಡೆಸಲಿದೆ.

ಕಳೆದ ವರ್ಷ ಬೆಸ್ಕಾಂ ಪ್ರತಿ ಯೂನಿಟ್ ವಿದ್ಯುತ್‌ಗೆ ₹1.35 ಹೆಚ್ಚಿಸುವಂತೆ ಪ್ರಸ್ತಾವ ಸಲ್ಲಿಸಿತ್ತು. ಆದರೆ, ಕೆಇಆರ್‌ಸಿ ಪ್ರತಿ ಯೂನಿಟ್ ವಿದ್ಯುತ್‌ಗೆ 30 ಪೈಸೆ ಹೆಚ್ಚಿಸಿತ್ತು.



ಕುಂಬಳಗೋಡು ಬಳಿಯ ಬಿಜಿಎಸ್ ನಾಲೆಡ್ಜ್ ಸಿಟಿ'ಯಲ್ಲಿ ನಡೆದ ಸಂಸ್ಥಾಪಕರ ದಿನಾಚರಣೆ ಕಾರ್ಯಕ್ರಮದಲ್ಲಿ ಆದಿಚುಂಚನಗಿರಿಯ ನಿರ್ಮಲಾನಂದನಾಥ ಸ್ವಾಮೀಜಿ, ಪ್ರಕಾಶನಾಥ ಸ್ವಾಮೀಜಿ, ಆನಂದ ಗುರೂಜಿ, ವಿನಯ್ ಗುರೂಜಿ ಪಾಲ್ಗೊಂಡಿದ್ದರು.

'ಮರಳಿ ತಾಯ್ನಾಡಿಗೆ' ಯೋಜನೆ ಜಾರಿ: ರಾಜ್ಯಪಾಲ ಥಾವರಚಂದ್ ಗೆಹಲೋತ್

ಬೆಂಗಳೂರು: ವಿದೇಶದಲ್ಲಿರುವ ಭಾರತೀಯರ ಜ್ಞಾನವನ್ನು ಇಲ್ಲಿ ಬಳಸಿಕೊಳ್ಳುವುದಕ್ಕಾಗಿ 'ಮರಳಿ ತಾಯ್ನಾಡಿಗೆ' ಎಂಬ ಯೋಜನೆಯನ್ನು ಅನುಷ್ಠಾನಕ್ಕೆ ತರಲಾಗುವುದು ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಪ್ರಕಟಿಸಿದರು.

ವಿಧಾನಮಂಡಲದಲ್ಲಿ ಸೋಮವಾರ ಜಂಟಿ ಅಧಿವೇಶನ ಉದ್ದೇಶಿಸಿ ಮಾತನಾಡಿದ ಅವರು, 'ಮರಳಿ ತಾಯ್ನಾಡಿಗೆ ಯೋಜನೆಯ ಅನುಷ್ಠಾನಕ್ಕೆ ಸೂಕ್ತ ನೀತಿ ರೂಪಿಸಲಾಗುವುದು ಮತ್ತು ಅನುದಾನವನ್ನೂ ಬಿಡುಗಡೆಗೊಳಿಸಲಾಗುವುದು' ಎಂದರು.

ಆದ್ಯತಾ ವಲಯದ ಕುಟುಂಬ (ಪಿಎಚ್‌ಎಚ್) ಪಡಿತರ ಚೀಟಿ ಹೊಂದಿರುವ ಎಲ್ಲ ಕುಟುಂಬಗಳಿಗೆ ಪ್ರತಿ ತಿಂಗಳು ತಲಾ 5 ಕೆ.ಜಿ. ಆಹಾರ ಧಾನ್ಯವನ್ನು ವಿತರಣೆ ಮಾಡಲಾಗುತ್ತಿದೆ. ಏಪ್ರಿಲ್ 1ರಿಂದ ರಾಜ್ಯ ಸರ್ಕಾರ ಕೂಡ ಹೆಚ್ಚುವರಿಯಾಗಿ ತಲಾ 1 ಕೆ.ಜಿ. ಅಕ್ಕಿಯನ್ನು ಉಚಿತವಾಗಿ ವಿತರಿಸಲಿದೆ ಎಂದು ತಿಳಿಸಿದರು.

ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಉಡುತಡಿಯಲ್ಲಿ ₹ 9 ಕೋಟಿ ವೆಚ್ಚದಲ್ಲಿ 20 ಅಡಿ ಎತ್ತರದ ಅಕ್ಕಮಹಾದೇವಿ ಪ್ರತಿಮೆ, ಪ್ರವಾಸಿಗರ ತಂಗುದಾಣ ಮತ್ತು ಉದ್ಯಾನ ನಿರ್ಮಿಸಲಾಗುವುದು. ಬೆಳಗಾವಿಯ ಸುವರ್ಣ ವಿಧಾನಸೌಧದ ಆವರಣದಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ಮತ್ತು ಸಂಗೊಳ್ಳಿ ರಾಯಣ್ಣ ಪ್ರತಿಮೆಗಳನ್ನು ಸ್ಥಾಪಿಸಲಾಗುವುದು ಎಂದು ಹೇಳಿದರು.

ಸುದ್ದಿ 2 ನಿಮಿಷ

ಆನ್‌ಲೈನ್ ಜೂಜು ನಿಷೇಧ ಕಾಯ್ದೆ ತಿದ್ದುಪಡಿ ರದ್ದುಪಡಿಸಿದ ಹೈಕೋರ್ಟ್

ಬೆಂಗಳೂರು: ಆನ್‌ಲೈನ್ ಜೂಜು ನಿಷೇಧಿಸಿ ಕರ್ನಾಟಕ ಪೊಲೀಸ್ ಕಾಯ್ದೆ-1963ಕ್ಕೆ ತರಲಾಗಿದ್ದ ತಿದ್ದುಪಡಿಯನ್ನು ಹೈಕೋರ್ಟ್ ರದ್ದುಪಡಿಸಿದೆ. 'ಆನ್ ಲೈನ್ ಬೆಟ್ಟಿಂಗ್ ನಿಷೇಧಕ್ಕೆ ಸಂಬಂಧಿಸಿದಂತೆ ಸಂವಿಧಾನದ ನಿಯಮಗಳಿಗೆ ಅನುಸಾರವಾಗಿ ಹೊಸ ಕಾಯ್ದೆ ತರಲು ಈ ತೀರ್ಪು ಯಾವುದೇ ತಡೆ ಒಡ್ಡುವುದಿಲ್ಲ' ಎಂದು ಸ್ಪಷ್ಟಪಡಿಸಿದೆ.

ತಿದ್ದುಪಡಿ ರದ್ದು ಕೋರಿ 'ಆಲ್ ಇಂಡಿಯಾ ಗೇಮಿಂಗ್ ಫೆಡರೇಷನ್ ಆಫ್ ಇಂಡಿಯಾ' ಹಾಗೂ 'ಗ್ಯಾಲಕ್ಟಸ್ ಫನ್‌ವೇರ್ ಟೆಕ್ನಾಲಜೀಸ್' ಸೇರಿದಂತೆ ಹಲವು ಕಂಪನಿಗಳು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಮಾನ್ಯ ಮಾಡಿ ಸೋಮವಾರ ಈ ಕುರಿತ ತೀರ್ಪು ಪ್ರಕಟಿಸಿದೆ.

ತಿದ್ದುಪಡಿ ಕಾಯ್ದೆಯನ್ನು 2021ರ ಸೆಪ್ಟೆಂಬರ್ 21ರಂದು ವಿಧಾನಸಭೆ ಮತ್ತು ಅದೇ ತಿಂಗಳ 23ರಂದು ವಿಧಾನಪರಿಷತ್ ಅಂಗೀಕರಿಸಿತ್ತು. 2021ರ ಅಕ್ಟೋಬರ್ 4ರಂದು ರಾಜ್ಯಪಾಲರು ಅಧಿಸೂಚನೆ ಹೊರಡಿಸಿದ್ದರು. ಅಕ್ಟೋಬರ್ 5ರಂದು ತಿದ್ದುಪಡಿ ಕಾಯ್ದೆ ಜಾರಿಗೆ ಬಂದಿತ್ತು. 2021ರ ಡಿಸೆಂಬರ್ 22ರಂದು ವಿಚಾರಣೆ ಪೂರ್ಣಗೊಳಿಸಿದ್ದ ವಿಭಾಗೀಯ ನ್ಯಾಯಪೀಠ ತೀರ್ಪು ಕಾಯ್ದಿರಿಸಿತ್ತು.



ರಾಜ್ಯದ ಒಳಗೆ ಮತ್ತು ಗಡಿಭಾಗದಲ್ಲಿನ ಜೂಜಾಟ ತಡೆಯುವ ನಿಟ್ಟಿನಲ್ಲಿ ಸರ್ಕಾರ ಕರ್ನಾಟಕ ಪೊಲೀಸ್ ಕಾಯ್ದೆ ತಿದ್ದುಪಡಿ ಮಸೂದೆಯನ್ನು ಅಂಗೀಕರಿಸಿತ್ತು.

₹ 50 ಲಂಚ ಪಡೆದುದಕ್ಕೆ ಕಡ್ಡಾಯ ನಿವೃತ್ತಿ: ಪರಿಶೀಲಿಸಲು ಆದೇಶ

ಬೆಂಗಳೂರು: 'ಹದಿನೆಂಟು ವರ್ಷಗಳ ಕಾಲ ಕರ್ತವ್ಯ ನಿರ್ವಹಿಸಿದ ಸರ್ಕಾರಿ ಉದ್ಯೋಗಿ ₹ 50 ಲಂಚ ಪಡೆದಿದ್ದರು ಎಂಬ ಕಾರಣಕ್ಕೆ ಅವರಿಗೆ ಕಡ್ಡಾಯ ನಿವೃತ್ತಿಯ ಶಿಕ್ಷೆ ನೀಡಿರುವುದು ತರವಲ್ಲ' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಈ ಕುರಿತಂತೆ ಎಂ.ಎಸ್ ಕಡಕೋಳ ಎಂಬುವರು ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್.ಜಿ.ಪಂಡಿತ್ ಹಾಗೂ ನ್ಯಾಯಮೂರ್ತಿ ಅನಂತ ರಾಮನಾಥ್ ಹೆಗ್ಡೆ ಅವರಿದ್ದ ವಿಭಾಗೀಯ ನ್ಯಾಯಪೀಠ ಶಿಕ್ಷೆ ರದ್ದುಪಡಿಸಿದ್ದು, 'ಪ್ರಕರಣವನ್ನು ಪುನಃ ಪರಿಗಣಿಸಿ ಎರಡು ತಿಂಗಳಲ್ಲಿ ಕ್ರಮ ಕೈಗೊಳ್ಳಿ' ಎಂದು ಶಿಸ್ತು ಪ್ರಾಧಿಕಾರಕ್ಕೆ ಆದೇಶಿಸಿದೆ.

ಏನಿದು ಪ್ರಕರಣ?: ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಚಂದ್ರಾಹಾಸ ಎಂಬುವವರು 1998ರಲ್ಲಿ ಬ್ಯಾಡಗಿಯಿಂದ ಧಾರವಾಡಕ್ಕೆ ವರ್ಗಾವಣೆ ಮಾಡಲಾಗಿತ್ತು. 'ಈ ವರ್ಗಾವಣೆ ಕಡತವನ್ನು ವಿಲೇವಾರಿ ಮಾಡಲು ₹ 150 ಲಂಚ ಕೇಳಿದ್ದಾರೆ' ಎಂದು ದೂರು ನೀಡಲಾಗಿತ್ತು. ಈ ದೂರಿನ ಅನ್ವಯ ₹ 50 ಲಂಚ ಪಡೆಯುವ ವೇಳೆ ಲೋಕಾಯುಕ್ತ ಪೊಲೀಸರು ಬಂಧಿಸಿ, ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯ ಕಲಂ 7, 13(1) ಹಾಗೂ 13(2)ರ ಅಡಿಯಲ್ಲಿ ಪ್ರಕರಣ ದಾಖಲಿಸಿದ್ದರು.

ತನಿಖಾಧಿಕಾರಿ ದೋಷಾರೋಪಣೆ ಪಟ್ಟಿ ಸಲ್ಲಿಸಿದ ಬಳಿಕ ಶಿಸ್ತು ಪ್ರಾಧಿಕಾರ 2004ರ ಸೆಪ್ಟೆಂಬರ್ 7ರಂದು ಕಡ್ಡಾಯ ನಿವೃತ್ತಿ ಶಿಕ್ಷೆ ವಿಧಿಸಿತ್ತು. ಈ ಆದೇಶವನ್ನು ಕರ್ನಾಟಕ ಆಡಳಿತ ನ್ಯಾಯಮಂಡಳಿ (ಕೆಎಟಿ) ಪ್ರಶ್ನಿಸಲಾಗಿತ್ತು. ಕೆಎಟಿ ಈ ಅರ್ಜಿಯನ್ನು 2016ರ ಜೂನ್ 1ರಂದು ತಿರಸ್ಕರಿಸಿತ್ತು. ಕೆಎಟಿ ಆದೇಶ ಪ್ರಶ್ನಿಸಿ ಕಡಕೋಳ ಹೈಕೋರ್ಟ್ ಮೆಟ್ಟಿಲೇರಿದ್ದರು.

ವಿದ್ಯಾಸಾಗರ್ ಶಾಲೆಯಲ್ಲಿ 'ವಿದ್ಯಾರ್ಥಿನಿಯರ ನಿಂದನೆ' ಪ್ರಕರಣ

ರಾಜೀನಾಮೆ ನೀಡಿದ ಗಣಿತ ಶಿಕ್ಷಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಸ್ಲಿಂ ವಿದ್ಯಾರ್ಥಿನಿಯರು ಹಾಗೂ ಅವರ ಸಮುದಾಯವನ್ನು ನಿಂದಿಸಿದ್ದಾರೆ' ಎಂಬ ಆರೋಪ ಎದುರಿಸುತ್ತಿದ್ದ 'ವಿದ್ಯಾಸಾಗರ್ ಇಂಗ್ಲಿಷ್ ಪಬ್ಲಿಕ್ ಸ್ಕೂಲ್‌'ನ ಗಣಿತ ಶಿಕ್ಷಕಿ ಶಶಿಕಲಾ ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ.

ಶನಿವಾರ ಬೆಳಿಗ್ಗೆ ಶಾಲೆಗೆ ಬಂದಿದ್ದ ಕೆಲವರು, ಏಕಾಏಕಿ ಪ್ರತಿಭಟನೆ ನಡೆಸಿ ಶಿಕ್ಷಕಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದರು. ಸ್ಥಳಕ್ಕೆ ಭೇಟಿ ನೀಡಿದ್ದ ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ಬೈಲಾಂಜನಪ್ಪ ಶಿಕ್ಷಕಿಯನ್ನು ಅಮಾನತು ಮಾಡುವಂತೆ ಶಾಲೆ ಆಡಳಿತ ಮಂಡಳಿಗೆ ಸೂಚನೆ ನೀಡಿದ್ದರು.

ಶಿಕ್ಷಕಿಯನ್ನು ಮಧ್ಯಾಹ್ನ ಅಮಾನತು ಮಾಡಿದ್ದ ಆಡಳಿತ ಮಂಡಳಿ, ತನ್ನ ತೀರ್ಮಾನವನ್ನು ರಾತ್ರಿ ಹಿಂಪಡೆದಿತ್ತು. ಸೋಮವಾರದಿಂದ ಕರ್ತವ್ಯಕ್ಕೆ ಬಂದು ಪಾಠ ಮುಂದುರಿಸುವಂತೆ ಶಿಕ್ಷಕಿಗೆ ಹೇಳಿತ್ತು. ಇದರ ನಡುವೆಯೇ ಶಿಕ್ಷಕಿ ರಾಜೀನಾಮೆ ನೀಡಿದ್ದಾರೆ.

'ತಪ್ಪು ಗ್ರಹಿಕೆಯಿಂದ ಕೆಲ ಪಟ್ಟಭದ್ರ ಹಿತಾಸಕ್ತಿಗಳು, ಶಾಲೆ ಎದುರು ಗಲಾಟೆ ಮಾಡಿದ್ದವು. ಶಿಕ್ಷಕಿಯದ್ದು ತಪ್ಪಿರಲಿಲ್ಲ. ಹೀಗಾಗಿ, ಕೆಲಸಕ್ಕೆ ವಾಪಸು ಬರುವಂತೆ ಹೇಳಲಾಗಿತ್ತು. ಅನಾರೋಗ್ಯ ಕಾರಣ ನೀಡಿ ಅವರು ರಾಜೀನಾಮೆ ನೀಡಿದ್ದಾರೆ' ಎಂದು ಶಾಲಾ ಆಡಳಿತ ಮಂಡಳಿ ಕಾರ್ಯದರ್ಶಿ ಡಾ. ಎಸ್. ರಾಜು 'ಪ್ರಜಾವಾಣಿ'ಗೆ ತಿಳಿಸಿದರು.

ರಾಜೀನಾಮೆ ಬಗ್ಗೆ ಪ್ರತಿಕ್ರಿಯೆ ಪಡೆಯಲು ಶಿಕ್ಷಕಿ ಲಭ್ಯರಾಗಲಿಲ್ಲ.

ಪೋಷಕರ ಸಭೆ: ಶಾಲಾ ಆಡಳಿತ ಮಂಡಳಿ ಸದಸ್ಯರು ಶಿಕ್ಷಕರು ಮತ್ತು ಪೋಷಕರ ಸಭೆ ನಡೆಸಿದರು.

'ವಿವಿಧ ಧರ್ಮಗಳ ವಿದ್ಯಾರ್ಥಿಗಳಿರುವ ಶಾಲೆ ಇದು. ಪೋಷಕರಲ್ಲದ ಹಲವರು ಶಾಲೆ ಬಳಿ ಬಂದು ಗಲಾಟೆ ಮಾಡಿದ್ದಾರೆ. ಇದರಿಂದ ಮಕ್ಕಳ ಭವಿಷ್ಯಕ್ಕೆ ಪೆಟ್ಟು ಬೀಳಲಿದೆ' ಎಂದು ಆಡಳಿತ ಮಂಡಳಿ ಸದಸ್ಯರು ಹೇಳಿದರು.

ಪೋಷಕರು, 'ಘಟನೆ ಮರುಕಳಿಸದಂತೆ ಆಡಳಿತ ಮಂಡಳಿ ಕ್ರಮ ಕೈಗೊಳ್ಳಬೇಕು. ಶಾಂತಿ ಕಾಪಾಡಲು ಸಹಕಾರ ನೀಡುತ್ತೇವೆ' ಎಂದು ಭರವಸೆ ನೀಡಿದರು.

ಮೂರು ಕಡೆ ದಾಳಿ: 78 ಕೆ.ಜಿ ಗಾಂಜಾ ಜಪ್ತಿ

ಅಪರಾಧ ಸುದ್ದಿ

ಬೆಂಗಳೂರು: ಬಾಣಸವಾಡಿ, ರಾಮಮೂರ್ತಿನಗರ ಹಾಗೂ ಉಪ್ಪಾರಪೇಟೆ ಪೊಲೀಸರು ಪ್ರತ್ಯೇಕ ಕಾರ್ಯಾಚರಣೆ ನಡೆಸಿ, 78 ಕೆ.ಜಿ ಗಾಂಜಾ ಜಪ್ತಿ ಮಾಡಿದ್ದಾರೆ.

'ಮಾದಕ ವಸ್ತು ಸಾಗಣೆ ಹಾಗೂ ಮಾರಾಟದ ವಿರುದ್ಧ ಪೊಲೀಸರು ನಿರಂತರವಾಗಿ ಕಾರ್ಯಾಚರಣೆ ನಡೆಸುತ್ತಿದ್ದಾರೆ. ಮಾಹಿತಿ ಸಂಗ್ರಹಿಸಿ ಆರೋಪಿಗಳನ್ನು ಬಂಧಿಸುತ್ತಿದ್ದಾರೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಉಪ್ಪಾರಪೇಟೆ ಠಾಣೆ ವ್ಯಾಪ್ತಿಯಲ್ಲಿ ಆಟೊದಲ್ಲಿ ಗಾಂಜಾ ಪೊಟ್ಟಣ ಇರಿಸಿಕೊಂಡು ಮಾರಲಾಗುತ್ತಿತ್ತು. ದಾಳಿ ಮಾಡಿ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ. ಅವರಿಂದ 43 ಕೆ.ಜಿ ಗಾಂಜಾ ಹಾಗೂ ಆಟೊ ಜಪ್ತಿ ಮಾಡಲಾಗಿದೆ' ಎಂದರು.

'ಬಾಣಸವಾಡಿ ಜಾನಕಿರಾಮ್ ಬಡಾವಣೆಯಲ್ಲಿ ಮೂವರು ಆರೋಪಿಗಳನ್ನು ಬಂಧಿಸಿ, 20 ಕೆ.ಜಿ ಗಾಂಜಾ ಜಪ್ತಿ ಮಾಡಲಾಗಿದೆ. ತ್ರಿಪುರಾದ ಖಮರುಲ್ಲಾ ಇಸ್ಲಾಂ, ಸಾಹಿದ್ ಮಿಯಾ ಹಾಗೂ ಖುರ್ಷಿದ್ ಮಿಯಾ ಬಂಧಿತರು. ತಮ್ಮೂರಿನಿಂದ ರೈಲಿನಲ್ಲಿ ಗಾಂಜಾ ತರುತ್ತಿದ್ದ ಆರೋಪಿಗಳು, ನಗರದಲ್ಲಿ ವ್ಯವಸ್ಥಿತ ಜಾಲದ ಮೂಲಕ ಮಾರುತ್ತಿದ್ದರು.'

'ರಾಮಮೂರ್ತಿನಗರ ಠಾಣೆ ವ್ಯಾಪ್ತಿಯಲ್ಲಿ ಆಶೀಫ್ ಶೇಖ್ ಹಾಗೂ ಶಿವರಾಜ್ ಎಂಬುವರನ್ನು ಬಂಧಿಸಲಾಗಿದೆ. ಅವರಿಂದ 15 ಕೆ.ಜಿ ಗಾಂಜಾ ಜಪ್ತಿ ಮಾಡಲಾಗಿದೆ' ಎಂದೂ ಅಧಿಕಾರಿ ತಿಳಿಸಿದರು.

'ಒಡಿಶಾದಿಂದ ಗಾಂಜಾ ಖರೀದಿಸಿ ತರುತ್ತಿದ್ದ ಆರೋಪಿಗಳು, ನಗರದಲ್ಲಿ ಪರಿಚಯಸ್ಥ ಗ್ರಾಹಕರಿಗೆ ಮಾರುತ್ತಿದ್ದರು. ಕೆಲ ಕಾಲೇಜು ವಿದ್ಯಾರ್ಥಿಗಳು, ಕೆಲ ಕಂಪನಿಗಳ ಉದ್ಯೋಗಿಗಳು ಹಾಗೂ ಕೆಲ ಕಾರ್ಮಿಕರು ಆರೋಪಿಗಳ ಬಳಿ ಗಾಂಜಾ ಖರೀದಿಸುತ್ತಿದ್ದರು' ಎಂದೂ ಅವರು ಹೇಳಿದರು.

ಆಕ್ಷೇಪಣೆ ಸಲ್ಲಿಸದಿದ್ದರೆ ದಂಡ

ಬೆಂಗಳೂರು: 'ಕರ್ನಾಟಕ ಪಂಚಾಯತ್ ರಾಜ್ ಮತ್ತು ಗ್ರಾಮ ಸ್ವರಾಜ್ ಕಾಯ್ದೆಗೆ ತಿದ್ದುಪಡಿ ತಂದಿರುವುದನ್ನು ಪ್ರಶ್ನಿಸಿ ರಾಜ್ಯ ಚುನಾವಣಾ ಆಯೋಗ ಸಲ್ಲಿಸಿರುವ ಅರ್ಜಿಗೆ ಎರಡು ವಾರಗಳಲ್ಲಿ ಆಕ್ಷೇಪಣೆ ಸಲ್ಲಿಸದೇ ಇದ್ದರೆ ದಂಡ ವಿಧಿಸಲಾಗುವುದು' ಎಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಎಚ್ಚರಿಸಿದೆ.

ಈ ಸಂಬಂಧ ರಾಜ್ಯ ಚುನಾವಣಾ ಆಯೋಗ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರದ ಪರ ವಕೀಲರು, 'ಆಯೋಗ ಸಲ್ಲಿಸಿರುವ ಅರ್ಜಿಗೆ ಸರ್ಕಾರದ ಆಕ್ಷೇಪಣೆಯ ಕರಡು ಸಿದ್ಧವಾಗಿದೆ. ಆದರೆ, ಅದನ್ನು ಅಂತಿಮಗೊಳಿಸಿ ಕೋರ್ಟ್‌ಗೆ ಸಲ್ಲಿಸಲು ಎರಡು ವಾರಗಳ ಕಾಲಾವಕಾಶ ಬೇಕು' ಎಂದು ಮನವಿ ಮಾಡಿದರು.

ಇದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ಆಯೋಗದ ಪರ ಹಿರಿಯ ವಕೀಲ ಕೆ.ಎನ್. ಫಣೀಂದ್ರ, 'ಕಳೆದ ಡಿಸೆಂಬರ್ ತಿಂಗಳಿಂದಲೂ ಸರ್ಕಾರ ಇದೇ ರೀತಿ ಸಮಯ ಕೇಳುತ್ತಲೇ ಇದೆ. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯ್ತಿ ಹಾಗೂ ತಾಲ್ಲೂಕು ಪಂಚಾಯ್ತಿಗಳು ಸದ್ಯ ಆಡಳಿತಾಧಿಕಾರಿ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಇದು ಸಾಂವಿಧಾನಿಕ ಕರ್ತವ್ಯದ ಸ್ಪಷ್ಟ ಉಲ್ಲಂಘನೆ' ಎಂದರು.

ಈ ಆಕ್ಷೇಪಣೆ ಆಲಿಸಿದ ನ್ಯಾಯಪೀಠ, ಸರ್ಕಾರಕ್ಕೆ ಎರಡು ವಾರಗಳ ಕಾಲಾವಕಾಶ ನೀಡಿ, 'ಇದು ಕಡೆಯ ಅವಕಾಶ. ಮತ್ತೆ ಸಮಯ ನೀಡಲಾಗುವುದಿಲ್ಲ. ಎರಡು ವಾರಗಳಲ್ಲಿ ಆಕ್ಷೇಪಣೆ ಸಲ್ಲಿಸಲು ವಿಫಲವಾದರೆ ದಂಡ ವಿಧಿಸಲಾಗುವುದು' ಎಂದು ಸರ್ಕಾರದ ಪರ ವಕೀಲರಿಗೆ ಎಚ್ಚರಿಕೆ ನೀಡಿ ವಿಚಾರಣೆಯನ್ನು ಮಾರ್ಚ್ 5ಕ್ಕೆ ಮುಂದೂಡಿದೆ.

152 ಮೂಟೆ ಅನ್ನಭಾಗ್ಯ ಅಕ್ಕಿ ವಶ



ರಾಮನಗರ: ಚನ್ನಪಟ್ಟಣದ ಮದೀನಾ ಚೌಕ್ ರಸ್ತೆಯಲ್ಲಿರುವ ಗೋದಾಮುವೊಂದರಲ್ಲಿ ಅಕ್ರಮವಾಗಿ ಸಂಗ್ರಹಣೆ ಮಾಡಿದ್ದ 152 ಮೂಟೆ ಅನ್ನಭಾಗ್ಯ ಅಕ್ಕಿಯನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಅನ್ನಭಾಗ್ಯ ಯೋಜನೆಯಡಿ ನ್ಯಾಯಬೆಲೆ ಅಂಗಡಿ ಹಾಗೂ ಅಂಗನವಾಡಿಗಳಿಗೆ ಬಿಡುಗಡೆ ಮಾಡಿದ್ದ ಅಕ್ಕಿ ಇದಾಗಿದೆ. ಕಾಳಸಂತೆಯಲ್ಲಿ ಮಾರಾಟ ಮಾಡುವ ಸಲುವಾಗಿ ಇದನ್ನು ಸಂಗ್ರಹಿಸಿದ್ದು, ವಾಹನದಲ್ಲಿ ತುಂಬಿಸಿ ಬೇರೆಡೆಗೆ ಸಾಗಿಸಲು ಪ್ರಯತ್ನ ನಡೆದಿತ್ತು. ಈ ವೇಳೆ ಪೊಲೀಸರು ದಾಳಿ ಮಾಡಿ ಅಕ್ಕಿ ಹಾಗೂ ಸಾಗಣೆಗೆ ಬಳಸಿದ್ದ ವಾಹನವನ್ನು ವಶಕ್ಕೆ ಪಡೆದರು.

ಬಂಧನಕ್ಕೂ ಮುನ್ನ ವಿಡಿಯೊ ಹರಿಯಬಿಟ್ಟಿದ್ದ ವಕೀಲ

'ಐಪಿಎಸ್ ಅಧಿಕಾರಿ ಷಡ್ಯಂತ್ರ: ಗಲಾಟೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಸಿಟಿ ಸಿವಿಲ್ ನ್ಯಾಯಾಲಯದ ಆವರಣದಲ್ಲಿ ಗಲಾಟೆ ನಡೆದಿರುವುದರ ಹಿಂದೆ ಐಪಿಎಸ್ ಅಧಿಕಾರಿಯೊಬ್ಬರ ಷಡ್ಯಂತ್ರವಿರುವ ಆರೋಪ ಕೇಳಿಬಂದಿದೆ.

ಫೆ. 10. 11ರಂದು ನಡೆದಿದ್ದ ಗಲಾಟೆ ಕುರಿತು ಗಾಯಾಳು ವಕೀಲ ನಾರಾಯಣ ಸ್ವಾಮಿ ಹಾಗೂ ಇತರರು ದೂರು ನೀಡಿದ್ದರು. ಕೊಲೆ ಯತ್ನ ಆರೋಪದಡಿ ವಕೀಲ ಜಗದೀಶ್ ಕೆ.ಎನ್. ಮಹಾದೇವ್ ಅವರನ್ನು ಭಾನುವಾರ ಬೆಳಿಗ್ಗೆ ಬಂಧಿಸಲಾಗಿದೆ. ಸದ್ಯ ಅವರು ನ್ಯಾಯಾಂಗ ಬಂಧನದಲ್ಲಿದ್ದಾರೆ.

ಬಂಧನದ ಮುನ್ನಾದಿನವಾದ ಶನಿವಾರ ರಾತ್ರಿ ವಿಡಿಯೊವೊಂದನ್ನು ಚಿತ್ರೀಕರಿಸಿರುವ ಜಗದೀಶ್, ಅದನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹರಿಯಬಿಟ್ಟಿದ್ದಾರೆ. ಐಪಿಎಸ್ ಅಧಿಕಾರಿ ಹಾಗೂ ಇತರರ ವಿರುದ್ಧ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಅವರಿಗೆ ದೂರು ನೀಡುವುದಾಗಿ ಅವರು ಹೇಳಿದ್ದಾರೆ.

'ಐಪಿಎಸ್ ಅಧಿಕಾರಿ ರವಿ ಚನ್ನಣ್ಣನವರ ಭ್ರಷ್ಟಾಚಾರದ ವಿರುದ್ಧ ಹೋರಾಟ ನಡೆಸುತ್ತಿದ್ದೇನೆ. ಅವರು ದಾಖಲಿಸಿದ್ದ ಮಾನನಷ್ಟ ಮೊಕದ್ದಮೆಗೆ ಆಕ್ಷೇಪಣೆ ಸಲ್ಲಿಸಲು ನ್ಯಾಯಾಲಯಕ್ಕೆ ಹೋಗಿದ್ದಾಗಲೇ 100ಕ್ಕೂ ಹೆಚ್ಚು ವಕೀಲರು ಅಡ್ಡಗಟ್ಟಿ, ಗಲಾಟೆ ಮಾಡಿದರು. ಅವರೆಲ್ಲರೂ ಸೇರಿ ನನ್ನನ್ನು ಕೊಲೆ ಮಾಡಲು ಸಂಚು ರೂಪಿಸಿದ್ದರೆಂಬ ಮಾಹಿತಿ ಇದೆ' ಎಂದು ಜಗದೀಶ್ ವಿಡಿಯೊದಲ್ಲಿ ತಿಳಿಸಿದ್ದಾರೆ.



ಜಗದೀಶ್ ಕೆ.ಎನ್. ಮಹಾದೇವ್

'ಪೊಲೀಸರು, ನ್ಯಾಯಾಲಯದ ಬಗ್ಗೆ ಗೌರವವಿದೆ. ನನ್ನ ಮೇಲೆ ದಾಳಿ ಮಾಡಿದವರ ವಿರುದ್ಧ ಹೋರಾಟ ಮುಂದುವರಿಯಲಿದೆ. ನ್ಯಾಯಾಲಯದ ಆವರಣದಲ್ಲಿ ನಡೆದ ಗಲಾಟೆ ಬಗ್ಗೆ ಸೂಕ್ತ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಲು ಕೋರಿ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಅವರಿಗೆ ದೂರು ನೀಡಲಿದ್ದೇನೆ' ಎಂದೂ ಹೇಳಿದ್ದಾರೆ.

'ನಾನು, ಕಾರಿನ ಚಾಲಕ, ಇಬ್ಬರು ಮಹಿಳಾ ವಕೀಲರು ಸೇರಿ 6 ಮಂದಿ ನ್ಯಾಯಾಲಯಕ್ಕೆ ಹೋಗಿದ್ದೆವು. ವಕೀಲ ನಾರಾಯಣ ಸ್ವಾಮಿ ಹಾಗೂ ಇತರರು, ನಮ್ಮನ್ನು ಅಡ್ಡಗಟ್ಟಿದರು. 'ವಕೀಲರು ಹಾಗೂ ಪ್ರತಿಷ್ಠಿತ ವ್ಯಕ್ತಿಗಳ ಬಗ್ಗೆ ಸಾಮಾಜಿಕ ಮಾಧ್ಯಮಗಳಲ್ಲಿ ಬಾಯಿಗೆ ಬಂದಂತೆ ಮಾತಾಡುತ್ತಿಯಲ್ಲ' ಎಂದು ಎಳೆದಾಡಿದರು. ಸಮಯ ಕಳೆದಂತೆ ನೂರಕ್ಕೂ ಹೆಚ್ಚು ವಕೀಲರು ಸ್ಥಳದಲ್ಲಿ ಸೇರಿದರು. ನನ್ನ ಮಗನನ್ನು ಎಳೆದಾಡಿ ಹೊಡೆದರು. ಕೂಗಾಡಿದ್ದಕ್ಕೆ ಪೊಲೀಸರು ಸ್ಥಳಕ್ಕೆ ಬಂದು, ನಮ್ಮನ್ನು ನ್ಯಾಯಾಲಯದ ಆವರಣದಿಂದ ಹೊರಗೆ ಕರೆತಂದರು.'

'ನ್ಯಾಯಾಲಯದ ಆವರಣದಲ್ಲಿ ನಾನೇ ಗಲಾಟೆ ಮಾಡಿರುವುದಾಗಿ ಹೇಳಿ ವಕೀಲರ ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ ಅವರು ಕಮಿಷನರ್ ಅವರಿಗೆ ದೂರು ನೀಡಿದ್ದಾರೆ. ಘಟನೆ ನಡೆದ ವೇಳೆ ಅವರು ಸ್ಥಳದಲ್ಲಿ ಇರಲಿಲ್ಲ. ಏನಾಯಿತೆಂಬುದು ಅವರಿಗೆ ಗೊತ್ತಿಲ್ಲ. ನಮ್ಮ ಮೇಲಾದ ದಾಳಿಯ ದೃಶ್ಯಗಳು ನ್ಯಾಯಾಲಯದ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದ್ದು, ಅದನ್ನು ಅವರು ಪರಿಶೀಲಿಸಲಿ' ಎಂದೂ ಜಗದೀಶ್ ವಿಡಿಯೊದಲ್ಲಿ ತಿಳಿಸಿದ್ದಾರೆ.

₹ 100 ಕೋಟಿ ಸಾಲದ ಆಮಿಷ: ಬಂಧನ

ಬೆಂಗಳೂರು: ₹ 100 ಕೋಟಿ ಸಾಲದ ಆಮಿಷವೊಡ್ಡಿ ಕಮಿಷನ್ ರೂಪದಲ್ಲಿ ಮುಂಗಡವಾಗಿ ₹ 1 ಕೋಟಿ ಪಡೆದು ವಂಚಿಸಿದ್ದ ಆರೋಪದಡಿ ಐವರನ್ನು ಎಲೆಕ್ಟ್ರಾನಿಕ್ ಸಿಟಿ ಪೊಲೀಸರು ಬಂಧಿಸಿದ್ದಾರೆ.

'ಮೈಸೂರಿನ ವಿನ್ಸೆಂಟ್ ಎಂಬುವವರು ವಂಚನೆ ಬಗ್ಗೆ ದೂರು ನೀಡಿದ್ದರು. ಆರೋಪಿಗಳಾದ ಸಂಜಯ್ ಭೂಷಣ್ ಶುಕ್ಲಾ, ಸಂತೋಷ್ ತಿವಾರಿ ಸೇರಿ ಐವರನ್ನು ಬಂಧಿಸಲಾಗಿದೆ. ಅವರಿಂದ ₹ 22.94 ಲಕ್ಷ ನಗದು ಜಪ್ತಿ ಮಾಡಲಾಗಿದೆ. ವಿವಿಧ ಬ್ಯಾಂಕ್ ಖಾತೆಗಳಲ್ಲಿ ₹ 64.79 ಲಕ್ಷ ಸಹ ಪತ್ತೆಯಾಗಿದೆ' ಎಂದು ಮೂಲಗಳು ಹೇಳಿವೆ.

'ಜ. 29ರಂದು ನಗರಕ್ಕೆ ಬಂದಿದ್ದ ಆರೋಪಿಗಳು, ಹೋಟೆಲೊಂದರ ಕೊಠಡಿಯಲ್ಲಿ ಉಳಿದುಕೊಂಡಿದ್ದರು. ಅಲ್ಲಿಯೇ ದೂರುದಾರ ವಿನ್ಸೆಂಟ್ ಅವರನ್ನು ಭೇಟಿಯಾಗಿದ್ದರು. ₹ 100 ಕೋಟಿ ಸಾಲ ಕೊಡಿಸುವುದಾಗಿ ಹೇಳಿದ್ದ ಆರೋಪಿಗಳು, ಕಮಿಷನ್ ಹಣವೆಂದು ಮುಂಗಡವಾಗಿ ₹ 1 ಕೋಟಿ ಪಡೆದುಕೊಂಡಿದ್ದರು. ಅದಾದ ನಂತರ ಪರಾರಿಯಾಗಿದ್ದರು.'

'ತನಿಖೆಗಾಗಿ ವಿಶೇಷ ತಂಡ ರಚಿಸಲಾಗಿತ್ತು. ವಿಳಾಸ ಪತ್ತೆ ಮಾಡಿ ಆರೋಪಿಗಳನ್ನು ಬಂಧಿಸಲಾಗಿದೆ. ಮುಂಬೈ ಹಾಗೂ ಮಧ್ಯಪ್ರದೇಶದ ಆರೋಪಿಗಳು, ವಂಚನೆಯನ್ನೇ ವೃತ್ತಿ ಮಾಡಿಕೊಂಡಿದ್ದರು. ದಕ್ಷಿಣ ಭಾರತದ ಹಲವು ರಾಜ್ಯಗಳ ಜನರನ್ನು ವಂಚಿಸಿರುವ ಮಾಹಿತಿ ಇದೆ' ಎಂದೂ ಮೂಲಗಳು ತಿಳಿಸಿವೆ.



ಆನೇಕಲ್ ತಾಲ್ಲೂಕಿನ ಚಂದಾಪುರ ನಾರಾಯಣ ಹೃದಯಾಲಯದಲ್ಲಿ ಐಸಿಯು ಬೆಡ್‌ಗಳ ಸೌಲಭ್ಯವನ್ನು ಬಿಸಿಸಿಐ ಅಧ್ಯಕ್ಷ ಸೌರವ್ ಗಂಗೂಲಿ ಉದ್ಘಾಟಿಸಿದರು. ಡಾ.ದೇವಿಪ್ರಸಾದ್ ಶೆಟ್ಟಿ, ಕಿರಣ್‌ಮುಜುಂದಾರ್ ಷಾ, ಸಂಜಯ್ ಚಟರ್ಜಿ ಇದ್ದರು

ಆರೋಗ್ಯ ಪ್ರತಿಯೊಬ್ಬರ ಆಸ್ತಿ: ಗಂಗೂಲಿ

ಆನೇಕಲ್: 'ಸ್ವಸ್ಥ ಸಮಾಜದ ನಿರ್ಮಾಣಕ್ಕೆ ಆರೋಗ್ಯ ಅತಿಮುಖ್ಯವಾದುದ್ದು. ಸಿನಿಮಾ ನಟರಾಗಲಿ ಅಥವಾ ಕ್ರೀಡಾಪಟುವಾಗಿರಲಿ ಪ್ರತಿಯೊಬ್ಬರಿಗೂ ಆರೋಗ್ಯವೇ ಮಹಾಭಾಗ್ಯ. ಈ ನಿಟ್ಟಿನಲ್ಲಿ ಆಸ್ಪತ್ರೆಗಳು ಅತ್ಯುತ್ತಮ ಸೌಲಭ್ಯಗಳನ್ನು ಸಾರ್ವಜನಿಕರಿಗೆ ಕಲ್ಪಿಸಲು ಶ್ರಮಿಸುತ್ತಿದೆ' ಎಂದು ಬಿಸಿಸಿಐ ಅಧ್ಯಕ್ಷ ಸೌರವ್ ಗಂಗೂಲಿ ತಿಳಿಸಿದರು.

ತಾಲ್ಲೂಕಿನ ಚಂದಾಪುರ ನಾರಾಯಣ ಹೃದಯಾಲಯದಲ್ಲಿ 100 ಐಸಿಯು ಬೆಡ್‌ಗಳ ಸೌಲಭ್ಯವನ್ನು ಉದ್ಘಾಟಿಸಿ 'ಐಪಿಎಲ್ 2022ರ ಪಂದ್ಯಾವಳಿಯನ್ನು ಭಾರತದಲ್ಲಿ ನಡೆಸುವ ಬಗ್ಗೆ ಇನ್ನೂ ತೀರ್ಮಾನ ಕೈಗೊಂಡಿಲ್ಲ. ತಜ್ಞರ ವರದಿಗಳನ್ನು ಅನುಸರಿಸಿ ಮುಂಬರುವ ದಿನಗಳಲ್ಲಿ ತೀರ್ಮಾನಗಳನ್ನು ಕೈಗೊಳ್ಳಲಾಗುವುದು' ಎಂದರು.

ಪಿಯು, ಪದವಿ ತರಗತಿ ನಾಳೆಯಿಂದ ಆರಂಭ

ಒಂದನೇ ಪುಟದಿಂದ

ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಸಚಿವ ಬಿ.ಸಿ.ನಾಗೇಶ್, ಹೈಕೋರ್ಟ್ ಮಧ್ಯಂತರ ಆದೇಶವನ್ನು ಪಾಲಿಸಿ, ಬುಧವಾರದಿಂದ ಎಲ್ಲ ತರಗತಿಗಳನ್ನು ಪುನರಾರಂಭಿಸಲು ತೀರ್ಮಾನಿಸಲಾಗಿದೆ ಎಂದರು.

ಇವತ್ತು ಶಾಲೆ ಆರಂಭಿಸಿದ ನಂತರ ನಡೆದಿರುವ ಘಟನೆಗಳ ಮಾಹಿತಿಯನ್ನು ಕಲೆ ಹಾಕಲಾಗುತ್ತಿದೆ. ಶಾಲೆ ಮತ್ತು ಕಾಲೇಜುಗಳೂ ಸೇರಿದಂತೆ ಎಲ್ಲರೂ ಹೈಕೋರ್ಟ್ ಆದೇಶವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದರು.

ಮಾರ್ಗಸೂಚಿ ಚಿಂತನೆ: ಹಿಜಾಬ್ ಮತ್ತು ಕೇಸರಿ ಶಾಲು ವಿವಾದದ ಕಾರಣ ಶಾಲಾ–ಕಾಲೇಜುಗಳಲ್ಲಿ ಸಮವಸ್ತ್ರ ಪಾಲನೆಯಲ್ಲಿರುವ ನ್ಯೂನ್ಯತೆಗಳನ್ನು ಸರಿಪಡಿಸುವ ಮತ್ತು ಮಾರ್ಗಸೂಚಿ ರೂಪಿಸುವ ಬಗ್ಗೆ ಚರ್ಚಿಸಲಾಗುವುದು ಎಂದು ಮುಖ್ಯಮಂತ್ರಿ ಬೊಮ್ಮಾಯಿ ಹೇಳಿದರು.

ಇವತ್ತು ತರಗತಿ ಆರಂಭವಾಗಿದ್ದು, ಕೆಲವು ಜಿಲ್ಲೆಗಳಲ್ಲಿ ಬೇರೆ ಬೇರೆ ರೀತಿಯ ಪ್ರಕರಣಗಳು ವರದಿಯಾಗಿವೆ. ಹೈಕೋರ್ಟ್ ಆದೇಶವನ್ನು ಪಾಲನೆ ಮಾಡುವ ಹೊಣೆಗಾರಿಕೆ ಶಾಲಾ ಆಡಳಿತ ಮಂಡಳಿಗಳು, ಪ್ರಾಂಶುಪಾಲರು ಹಾಗೂ ಪೋಷಕರ ಮೇಲಿದೆ. ಇದರಿಂದ ಶಾಂತಿಯುತ ವಾತಾವರಣದಲ್ಲಿ ಅಂತಿಮ ತೀರ್ಪು ನೀಡಲು ಸಾಧ್ಯವಾಗಲಿದೆ. ಅಲ್ಲಿಯವರೆಗೆ ತಾಳ್ಮೆಯಿಂದ ಕಾಯಬೇಕು ಎಂದು ಅವರು ಮನವಿ ಮಾಡಿದರು.

ಕಾರು ಪಲ್ಟಿ: ಚಾಲಕ ಸಾವು, ಐವರಿಗೆ ಗಾಯ

ಹಿರಿಯೂರು: ತಾಲ್ಲೂಕಿನ ಆದಿವಾಲ ಗ್ರಾಮದ ರಾಷ್ಟ್ರೀಯ ಹೆದ್ದಾರಿ ನಾಲ್ಕರಲ್ಲಿ ಭಾನುವಾರ ಚಾಲಕನ ನಿಯಂತ್ರಣ ತಪ್ಪಿದ ಕಾರು ರಸ್ತೆ ವಿಭಜಕದಿಂದ ಹಾರಿ ಪಕ್ಕದ ರಸ್ತೆಗೆ ಬಿದ್ದ ಪರಿಣಾಮ ಚಾಲಕ ಸ್ಥಳದಲ್ಲೇ ಮೃತಪಟ್ಟಿದ್ದು, ಐವರು ಗಾಯಗೊಂಡಿದ್ದಾರೆ.

ಬೆಂಗಳೂರಿನ ನಂದಿನಿ ಬಡಾವಣೆಯ ಅಫ್ರೋಜ್ ಖಾನ್ (45) ಮೃತಪಟ್ಟವರು. ಕಾರಿನಲ್ಲಿದ್ದ ಸೈಯದ್ ಸಿದ್ದಿಕಾ ಬಾನು, ರೇಷ್ಮ, ಅಲ್ಮಾಜ್ ಖಾನುಂ, ಅಮಾನತ್ ಖಾನ್, ವಾಸಿಂಖಾನ್ ಗಾಯಗೊಂಡಿದ್ದಾರೆ.

ಕಾರು ಚಿತ್ರದುರ್ಗದಿಂದ ಬೆಂಗಳೂರು ಕಡೆ ಹೋಗುತ್ತಿತ್ತು. ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಂಕ್ಷಿಪ್ತ ಸುದ್ದಿ

ಹನುಮನ ಜನ್ಮಸ್ಥಳ: ಟಿಟಿಡಿ ನಿಲುವಿನ ಟೀಕೆ

ಕೊಪ್ಪಳ: ತಿರುಪತಿ ಬಳಿ ಇರುವ ಅಂಜನಾದ್ರಿಯೇ ಆಂಜನೇಯನ ಜನ್ಮಭೂಮಿ ಎಂದು ಸಾಬೀತುಪಡಿಸಲು ಕೇಂದ್ರ ಸರ್ಕಾರದ ಮಟ್ಟದಲ್ಲಿ ವಿಫಲವಾಗಿರುವ ತಿರುಮಲ ತಿರುಪತಿ ದೇವಸ್ಥಾನವು (ಟಿಟಿಡಿ) ಮತ್ತೆ ಕಾಮಗಾರಿ ಅಭಿವೃದ್ಧಿ ಹೆಸರಿನಲ್ಲಿ ಅಂಜನಾದ್ರಿ ವಿವಾದ ಹುಟ್ಟು ಹಾಕುತ್ತಿರುವುದು ಬೇಸರದ ಸಂಗತಿ ಎಂದು ಇಲ್ಲಿನ ಸಾಹಿತಿ, ಸಂಶೋಧಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಈಗಾಗಲೇ ಸಂಬಂಧಿಸಿದ ಎಲ್ಲ ದಾಖಲೆಗಳನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರಕ್ಕೆ ನೀಡಲಾಗಿದೆ. ರಾಜ್ಯಪಾಲರ ಮೂಲಕವೂ ಸಂದೇಶ ರವಾನಿಸಲಾಗಿದೆ. ಸಂಸತ್ತಿನಲ್ಲಿ ಈ ವಿಷಯ ಪ್ರಸ್ತಾವನೆಗೆ ಮುಂದಾಗಿದ್ದ ಆಂಧ್ರಪ್ರದೇಶ ಸರ್ಕಾರದ ಕ್ರಮವನ್ನು ಕೇಂದ್ರ ಸರ್ಕಾರ ತಿರಸ್ಕರಿಸಿದೆ. ಕೊಪ್ಪಳ ಜಿಲ್ಲೆಯ ಆನೆಗೊಂದಿ ಬಳಿಯ ಅಂಜನಾದ್ರಿಯಲ್ಲಿ ವ್ಯಾಪಕ ಅಭಿವೃದ್ಧಿ ಕಾರ್ಯ ಹಮ್ಮಿಕೊಳ್ಳಲು ಮಾಸ್ಟರ್ ಪ್ಲ್ಯಾನ್ ರೂಪಿಸಲಾಗಿದೆ.

'ಸುಡುಗಾಡು ಸಿದ್ಧ' ಪದ ದುರ್ಬಳಕೆಗೆ ಖಂಡನೆ

ಬೆಂಗಳೂರು: 'ಸುಡುಗಾಡು ಸಿದ್ಧ ಮಾಡಿದ್ದನ್ನು ನಾವು ಸರಿ ಮಾಡಿದ್ದೇವೆ' ಎಂದು ವಸತಿ ಸಚಿವ ವಿ.ಸೋಮಣ್ಣ ಹೇಳಿಕೆ ನೀಡಿದ್ದಾರೆ. ಇದು ಸುಡುಗಾಡುಸಿದ್ಧ ಸಮುದಾಯಕ್ಕೆ ಕಳಂಕ ತರುವ ಹೇಯ ಹೇಳಿಕೆ' ಎಂದು ರಾಜ್ಯ ಸುಡುಗಾಡುಸಿದ್ಧರ ಸಂಘದ ಪ್ರಧಾನ ಕಾರ್ಯದರ್ಶಿ ಹನುಮಂತಪ್ಪ ಖಂಡನೆ ವ್ಯಕ್ತಪಡಿಸಿದ್ದಾರೆ.

'ಸುಡುಗಾಡು ಸಿದ್ಧರು ಈ ನೆಲದ ಪ್ರಾಚೀನ ಸಮುದಾಯದವರು. ಸದ್ಯ ರಾಜ್ಯದಲ್ಲಿ ಈ ಸಮುದಾಯಕ್ಕೆ ಸೇರಿದ 20 ಲಕ್ಷ ಮಂದಿ ಇದ್ದಾರೆ. ಪಾರಂಪರಿಕ ಸಿದ್ಧ ಔಷಧಿ ನೀಡುತ್ತಾ ತಲೆತಲಾಂತರಗಳಿಂದ ಜನರ ಆರೋಗ್ಯ ಮತ್ತು ಸಮಾಜದ ಸ್ವಾಸ್ಥ್ಯ ಕಾಪಾಡಿಕೊಂಡು ಬಂದಿದ್ದಾರೆ'.

ಸಚಿವ ಪ್ರಭು ಚವ್ಹಾಣ್ ವಜಾಕ್ಕೆ ಆಗ್ರಹ

ಬೆಂಗಳೂರು: 'ಪಶುಸಂಗೋಪನಾ ಸಚಿವ ಪ್ರಭು ಚವ್ಹಾಣ್ ಅವರಿಗೆ ಸಂಬಂಧಿಸಿದ ನಕಲಿ ಜಾತಿ ಪ್ರಮಾಣಪತ್ರ ಪ್ರಕರಣದ ಮರು ತನಿಖೆಗೆ ನ್ಯಾಯಾಲಯ ಆದೇಶಿಸಿರುವುದರಿಂದ ಅವರನ್ನು ಕೂಡಲೇ ಸಂಪುಟದಿಂದ ವಜಾಗೊಳಿಸಬೇಕು' ಎಂದು ದಲಿತ ಸಂಘರ್ಷ ಸಮಿತಿಯ (ಭೀಮಶಕ್ತಿ) ಅಧ್ಯಕ್ಷ ಜೆ.ವೆಂಕಟೇಶ್ ಹೆಬ್ಬಾಳ್ ಆಗ್ರಹಿಸಿದರು.

ವಂಚನೆ: ಬಿಬಿಎಂಪಿ ಮಾಜಿ ಸದಸ್ಯ ವಶಕ್ಕೆ

ಬೆಂಗಳೂರು: ಶಾಸಕರೊಬ್ಬರಿಂದ ₹ 1 ಕೋಟಿ ಪಡೆದು ವಂಚಿಸಿದ ಪ್ರಕರಣದಲ್ಲಿ ಬಿಬಿಎಂಪಿಯ ಮಾಜಿ ಸದಸ್ಯ ಕೆ. ದೇವದಾಸ್ ಅವರನ್ನು ಆಂಧ್ರಪ್ರದೇಶ ಪೊಲೀಸರು ವಶಕ್ಕೆ ಪಡೆದು, ಕರೆದೊಯ್ದಿದ್ದಾರೆ.

'ಮೈಕೊ ಲೇಔಟ್ ಠಾಣೆ ವ್ಯಾಪ್ತಿಯಲ್ಲಿ ದೇವದಾಸ್ ಕುಟುಂಬ ವಾಸವಿದೆ. ಸೋಮವಾರ ಬೆಳಿಗ್ಗೆ ಮನೆಗೆ ಬಂದಿದ್ದ ಆಂಧ್ರ ಪೊಲೀಸರು, ದೇವದಾಸ್ ಅವರನ್ನು ವಶಕ್ಕೆ ಪಡೆದಿದ್ದಾರೆ. ವಿಚಾರಣೆಗೆಂದು ಆಂಧ್ರಪ್ರದೇಶಕ್ಕೆ ಕರೆದೊಯ್ದಿರುವುದಾಗಿ ಮಾಹಿತಿ ಇದೆ' ಎಂದು ನಗರದ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು. 'ದೇವದಾಸ್ ಅವರು, 2015–2020ರ ಅವಧಿಯಲ್ಲಿ ಬಿಟಿಎಂ ಲೇಔಟ್ ವಾರ್ಡ್‌ನಲ್ಲಿ ಬಿಬಿಎಂಪಿ ಸದಸ್ಯರಾಗಿದ್ದರು' ಎಂದರು.

ಶಾಸಕರಿಂದ ದೂರು: 'ಆಂಧ್ರಪ್ರದೇಶದ ಮದನಪಲ್ಲಿ ವಿಧಾನಸಭಾ ಕ್ಷೇತ್ರದ ಶಾಸಕ ಮೊಹಮ್ಮದ್ ನವಾಜ್ ಪಾಷಾ ಅವರು ದೇವದಾಸ್ ವಿರುದ್ಧ ದೂರು ನೀಡಿದ್ದಾರೆ' ಎಂದು ಪೊಲೀಸ್ ಅಧಿಕಾರಿ ಹೇಳಿದರು.

'ಬೆಂಗಳೂರಿನ ಬಿಟಿಎಂ ಬಡಾವಣೆಯಲ್ಲಿ ನಿವೇಶನ ಕೊಡಿಸುವುದಾಗಿ ಹೇಳಿದ್ದ ದೇವದಾಸ್, ₹ 1 ಕೋಟಿ ವಂಚಿಸಿದ್ದರು ಎಂದು ಆರೋಪಿಸಿದ್ದಾರೆ' ಎಂದೂ ತಿಳಿಸಿದರು.

ಯೋಗಿ–ಪಿಣರಾಯಿ: ವಾಗ್ವಾದದ ಮರ್ಮವೇನು?

ಬೆಂಗಳೂರು: 'ಬಿಜೆಪಿಗೆ ಮತ ಹಾಕದಿದ್ದರೆ ಉತ್ತರ ಪ್ರದೇಶವು ಕಾಶ್ಮೀರ, ಕೇರಳ ಅಥವಾ ಪಶ್ಚಿಮ ಬಂಗಾಳ ಆಗಲು ಹೆಚ್ಚು ಸಮಯ ಬೇಕಿಲ್ಲ' ಎಂದು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಮತದಾನಕ್ಕೆ ಮುನ್ನಾದಿನ ಹೇಳಿಕೆ ನೀಡಿದ್ದರು. ಇದಕ್ಕೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದ ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್, 'ಉತ್ತರ ಪ್ರದೇಶವು ಕೇರಳವಾದರೆ ರಾಜ್ಯಕ್ಕೆ ಉತ್ತಮ ಶಿಕ್ಷಣ, ಆರೋಗ್ಯ ಸೇವೆ, ಸಾಮಾಜಿಕ ಸೌಲಭ್ಯಗಳು, ಉತ್ತಮ ಗುಣಮಟ್ಟದ ಜೀವನ ದೊರೆಯಲಿದೆ. ಧರ್ಮ ಮತ್ತು ಜಾತಿಯ ಹೆಸರಿನಲ್ಲಿ ಜನರ ಹತ್ಯೆ ಆಗುವುದಿಲ್ಲ' ಎಂದು ತಿರುಗೇಟು ನೀಡಿದ್ದರು. 'ಯೋಗಿ–ಪಿಣರಾಯಿ: ವಾಗ್ವಾದದ ಮರ್ಮವೇನು?' ಎಂಬ ಕುರಿತು ಸೋಮವಾರ 'ಪ್ರಜಾವಾಣಿ' ಆಯೋಜಿಸಿದ್ದ ಸಂವಾದದಲ್ಲಿ ತಜ್ಞರು ಹಂಚಿಕೊಂಡ ಅಭಿಪ್ರಾಯಗಳ ಸಂಕ್ಷಿಪ್ತ ರೂಪ ಇಲ್ಲಿದೆ.

ಪ್ರಜಾವಾಣಿ ಸಂವಾದ

ಬೆಂಕಿ ಹಚ್ಚುವುದಕ್ಕಿಂತ ಬೆಣ್ಣೆ ಹಚ್ಚುವುದೇ ಒಳ್ಳೆಯದು



ಇಂದಿನ ಪರಿಸ್ಥಿತಿಯನ್ನು ನೋಡಿದಾಗ, 'ಬೆಂಕಿ' ಹಚ್ಚುವವರಿಗಿಂತಲೂ 'ಬೆಣ್ಣೆ' ಹಚ್ಚುವವರೇ ಒಳ್ಳೆಯವರು. ಭಾರತದ ಒಳಗೇ ಪಾಕಿಸ್ತಾನ ನಿರ್ಮಿಸುವ ರಾಜಕೀಯ ಸಂಚು ರೂಪಿಸಲಾಗುತ್ತಿದೆ. ಹಿಂದೂ–ಮುಸ್ಲಿಮರನ್ನು ಒಡೆದು, ಪ್ರಜಾಪ್ರಭುತ್ವವನ್ನು ನಾಶ ಮಾಡಿ ಹಿಂದುತ್ವವನ್ನು ತರುವ ಪ್ರಯತ್ನ ನಡೆಯುತ್ತಿದೆ.

ಪಿಎಫ್‌ಐ, ಎಸ್‌ಡಿಪಿಐ ಬೆಂಕಿ ಹಚ್ಚುವ ಕೆಲಸ ಮಾಡುತ್ತಿವೆ ಎಂದು ದೂರುತ್ತಿದ್ದಾರೆ. ಆದರೆ, ಈ ದೇಶದ ಸೆಕ್ಯೂಲರಿಸಂ ಅನ್ನು ಕತ್ತರಿ, ಚಾಕುವಿನಿಂದ ಮೊದಲು ಕತ್ತರಿಸಿದವರೇ ಬಿಜೆಪಿಯವರು.

ಆರೋಗ್ಯ, ಸಾರ್ವಜನಿಕ ಸೌಲಭ್ಯ, ಶಿಕ್ಷಣ ಇನ್ನಿತರ ವಲಯಗಳ ಅಭಿವೃದ್ಧಿ ಸೂಚ್ಯಂಕಗಳಲ್ಲಿ ನೀತಿ ಆಯೋಗವು ಕೇರಳಕ್ಕೆ ಸತತ ನಾಲ್ಕು ವರ್ಷಗಳಿಂದ ಮೊದಲ ಸ್ಥಾನ ನೀಡುತ್ತಿದೆ. ನೀತಿ ಆಯೋಗವೇನೂ ಪಾಕಿಸ್ತಾನದ್ದಲ್ಲ; ಬಿಜೆಪಿಯ ಕೇಂದ್ರ ಸರ್ಕಾರವೇ ರಚಿಸಿದ್ದು.

ಜನರ ಜೀವನ ಕ್ರಮ, ನಾರಾಯಣ ಗುರುಗಳ ಸಾಮಾಜಿಕ ಚಿಂತನೆ, ಸಾಕ್ಷರತೆಯ ಪ್ರಮಾಣದಿಂದ ಮೊದಲನೇ ಸ್ಥಾನ ಪಡೆಯಲು ಕೇರಳಕ್ಕೆ ಸಾಧ್ಯವಾಗಿದೆ. ಆದರೆ, ಉತ್ತರ ಪ್ರದೇಶದ ಸ್ಥಿತಿ ಹೇಗಿದೆ ಎಂಬುದನ್ನು ಹೊಸದಾಗಿ ಹೇಳಬೇಕಾಗಿಲ್ಲ. ಅಭಿವೃದ್ಧಿ ಸೂಚ್ಯಂಕದಲ್ಲಿ ಮೊದಲ ಸ್ಥಾನದಲ್ಲಿರುವ ರಾಜ್ಯವನ್ನು ಹೀಗಳೆಯುವುದನ್ನು ಪ್ರಜಾಪ್ರಭುತ್ವ ಎನ್ನಲು ಸಾಧ್ಯವೇ?

– **ಕೆ.ಎಸ್.ವಿಮಲಾ**, ಸಂಚಾಲಕರು, ಜನವಾದಿ ಮಹಿಳಾ ಸಂಘಟನೆ

ಮುಸ್ಲಿಮರು ಬಹುಸಂಖ್ಯಾತರಾದರೆ ಪ್ರಜಾಪ್ರಭುತ್ವಕ್ಕೆ ಗಂಡಾಂತರ



ಹಿಂದೂಗಳು ಬಹುಸಂಖ್ಯಾತರಾಗಿರುವುದರಿಂದಲೇ ಇನ್ನೂ ಪ್ರಜಾಪ್ರಭುತ್ವ ಉಳಿದಿದೆ. ಇಸ್ಲಾಂ ಧರ್ಮೀಯರಿಗೆ ಪ್ರಜಾಪ್ರಭುತ್ವದ ಮೇಲೆ ನಂಬಿಕೆ ಇಲ್ಲ. ಪಾಕಿಸ್ತಾನ, ಅಫ್ಗಾನಿಸ್ತಾನ, ಸಿರಿಯಾದಲ್ಲಿ ಇಂದು ಏನಾಗಿದೆ? ಮುಸ್ಲಿಮರು ಬಹುಸಂಖ್ಯಾತರಾದರೆ ಪ್ರಜಾಪ್ರಭುತ್ವ ಉಳಿಯುವುದಿಲ್ಲ. ಅಂಥ ಸ್ಥಿತಿ ನಿರ್ಮಾಣ ಆಗುವುದು ಬೇಡ ಎಂದೇ ಆದಿತ್ಯನಾಥ ಅವರು ಎಚ್ಚರಿಸಿದ್ದಾರೆ. ಕಾಶ್ಮೀರ, ಕೇರಳ, ಪಶ್ಚಿಮ ಬಂಗಾಳದ ಜೊತೆಗೆ ಅಸ್ಸಾಂ ಹೆಸರನ್ನೂ ಅವರು ಉಲ್ಲೇಖಿಸಬೇಕಾಗಿತ್ತು. ಪಶ್ಚಿಮ ಬಂಗಾಳದಲ್ಲಿ ಚುನಾವಣೆ ಬಳಿಕ ಎಷ್ಟೋ ಕಡೆ ಹಿಂದೂಗಳು ಹಳ್ಳಿಗಳನ್ನೇ ಬಿಟ್ಟು ಹೋಗಬೇಕಾಯಿತು. ಬಾಂಗ್ಲಾದ ಅಕ್ರಮ ವಲಸಿಗ ಮುಸ್ಲಿಮರ ಮತಗಳಿಂದ ಟಿಎಂಸಿ ಗೆದ್ದ ಬಳಿಕ ಹಿಂದೂಗಳ ಮಾರಣಹೋಮ ನಡೆಯಿತು. ಕೇರಳದಲ್ಲೂ ರಾಜಕೀಯ ಹತ್ಯೆಗಳು ನಡೆದಿವೆ.

ಪಿಎಫ್‌ಐ, ಎಸ್‌ಡಿಪಿಐ ಮತಗಳಿಂದ ಪಿಣರಾಯಿ ಗೆದ್ದು ಬಂದಿದ್ದಾರೆ. ಕೇರಳದಲ್ಲಿ ಮುಸ್ಲಿಂ ಪರ ವಾತಾವರಣ ನಿರ್ಮಾಣಗೊಂಡಿದೆ. ಮಲಪ್ಪುರಂ, ಕಾಸರಗೋಡು ಜಿಲ್ಲೆಗಳ ಕೆಲ ಪ್ರದೇಶಗಳು ಪಾಕಿಸ್ತಾನದಂತಾಗಿವೆ. ಅಂಥ ಸ್ಥಿತಿ ಮತ್ತೆ ಬರಬಾರದು ಎಂದಾದರೆ ಮುಸ್ಲಿಂ ತುಷ್ಟೀಕರಣ ನಿಲ್ಲಬೇಕು.

ಗೋ. ಮಧುಸೂದನ್, ಬಿಜೆಪಿ ಮುಖಂಡರು

ಕೇರಳದ ನಾಗರಿಕರಿಗೆ ಮಾಡಿದ ಅವಮಾನ

ಉತ್ತರ ಪ್ರದೇಶ–ಕೇರಳದ ನಡುವಿನ ವ್ಯತ್ಯಾಸ ಎಲ್ಲರಿಗೂ ಗೊತ್ತಿದೆ. ಅಂಗೈ ಹುಣ್ಣಿಗೆ ಕೈಗನ್ನಡಿ ಬೇಕಾಗಿಲ್ಲ. ಎಲ್ಲಾ ರಾಜ್ಯಗಳೂ ಸೇರಿಯೇ ಈ ದೇಶ ಆಗಿದೆ.



ಮುಖ್ಯಮಂತ್ರಿ ಆದಿತ್ಯನಾಥ ಇನ್ನೊಂದು ರಾಜ್ಯವನ್ನು ಹಂಗಿಸಿರುವುದು ಅಲ್ಲಿನ ಮತದಾರರಿಗೆ ಮಾಡಿರುವ ಅವಮಾನ. ಕೇರಳ, ಪಶ್ಚಿಮ ಬಂಗಾಳದ ಮತದಾರರು ತಮಗೆ ಬೇಕಾದ ಸರ್ಕಾರವನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಚುನಾವಣೆಯಲ್ಲಿ ಹಿಂದೂ– ಮುಸ್ಲಿಂ ವಿಷಯವನ್ನು ತರಲೇಬೇಕು ಎಂಬ ಕಾರಣಕ್ಕೆ ಈ ರೀತಿ ಮಾತನಾಡಿರುವುದು ಸರಿಯಲ್ಲ. ಒಬ್ಬ ಮುಖ್ಯಮಂತ್ರಿ ಈ ರೀತಿ ಮಾತನಾಡುವುದರಿಂದಲೇ ಪ್ರಜಾಪ್ರಭುತ್ವಕ್ಕೆ ಅಪಾಯ.


ಕಾಸರಗೋಡು ಜಿಲ್ಲೆ ಯಾವತ್ತೂ ಪಾಕಿಸ್ತಾನ ಆಗುವುದಿಲ್ಲ. ಕಾಸರಗೋಡನ್ನು ಪಾಕಿಸ್ತಾನ ಆಗದಂತೆ ನೋಡಿಕೊಳ್ಳುವವರು ಅಲ್ಲಿನ ಮುಸ್ಲಿಮರೇ ಹೊರತು, ಹಿಂದೂಗಳಲ್ಲ ಎಂಬ ಭರವಸೆ ನನಗಿದೆ.

ಪಿಣರಾಯಿ ವಿಜಯನ್ ಕಾಲದಲ್ಲೇ ಎಲ್ಲಾ ಅಭಿವೃದ್ಧಿ ಆಗಿದೆ ಎಂದು ಯಾರೂ ಹೇಳಿಲ್ಲ. 1947ರಲ್ಲಿ ಅಭಿವೃದ್ಧಿ ಸೂಚ್ಯಂಕದಲ್ಲಿ ಕೇರಳ, ಉತ್ತರ ಪ್ರದೇಶ ಒಂದೇ ಸ್ಥಿತಿಯಲ್ಲಿತ್ತು. ಆದರೆ, ಕೇರಳದ ಸರ್ಕಾರಗಳು ನೀಡಿದ ಉತ್ತಮ ಆಡಳಿತದಿಂದ ಸುಧಾರಣೆ ಕಂಡಿದೆ. ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ರೂಪಿಸಿದ್ದ ತಂತ್ರವನ್ನೇ ಟಿಎಂಸಿ ಹೆಣೆದಿದ್ದರಿಂದಲೇ ಹಿಂಸಾಚಾರ ಉಂಟಾಯಿತು.

–**ಪ್ರೊ.ಎ. ನಾರಾಯಣ,** ಪ್ರಾಧ್ಯಾಪಕರು, ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ

ಕೇರಳ–ಯುಪಿ ಹೋಲಿಕೆಯೇ ಸರಿಯಲ್ಲ

25 ಕೋಟಿ ಜನಸಂಖ್ಯೆ ಇರುವ ಉತ್ತರ ಪ್ರದೇಶ ಹಾಗೂ 3 ಕೋಟಿ ಜನಸಂಖ್ಯೆ ಇರುವ ಕೇರಳದ ನಡುವೆ ಹೋಲಿಕೆ ಮಾಡುವುದೇ ಸರಿಯಲ್ಲ. ಕೇರಳವು ಮೊದಲಿನಿಂದಲೂ ಅಭಿವೃದ್ಧಿಶೀಲ ರಾಜ್ಯ. ಪಿಣರಾಯಿ ಬಂದಮೇಲೆ ಅಭಿವೃದ್ಧಿ ಮಾಡಿದ್ದಲ್ಲ. ಅದೇ ರೀತಿ ಉತ್ತರ ಪ್ರದೇಶವೂ ಬಹಳ ವರ್ಷಗಳಿಂದ ಹಿಂದುಳಿದ ರಾಜ್ಯ. ಆದಿತ್ಯನಾಥ ಅಧಿಕಾರಕ್ಕೆ ಬಂದ ಬಳಿಕ ಏನಾಗಿದೆ? ಅದಕ್ಕೂ ಮೊದಲು ಹೇಗಿತ್ತು? ಈಗ ಜನ ಅದಕ್ಕೆ ಹೇಗೆ ಪ್ರತಿಕ್ರಿಯಿಸಬಹುದು ಎಂಬುದು ಮುಖ್ಯವಾಗಬೇಕು.



ಸಮಾಜವಾದಿ ಪಕ್ಷವನ್ನು ಜನ ಏಕೆ ತಿರಸ್ಕರಿಸಿದರು, ಅವರ ಕಾಲದಲ್ಲಿ ದೊಂಬಿಗಳು ಎಷ್ಟು ನಡೆಯುತ್ತಿದ್ದವು ಎಂಬುದನ್ನೂ ನೋಡಬೇಕು. ಪೊಲೀಸ್ ರಾಜ್‌ನಿಂದಾಗಿ ಏನು ಬೇಕಾದರೂ ಮಾಡಲಾಗುತ್ತಿತ್ತು. ಯೋಗಿ ಕಾಲದಲ್ಲೂ ಎನ್‌ಕೌಂಟರ್‌ಗಳಾಗಿವೆ. ಆದರೆ, ಗೂಂಡಾಗಿರಿ, ಕಾನೂನು ಸುವ್ಯವಸ್ಥೆ ನಿಯಂತ್ರಣಕ್ಕೆ ಬಂದಿದೆ. ಮೂಲಸೌಲಭ್ಯ ಕಲ್ಪಿಸಿರುವುದರಲ್ಲಿ ಮೊದಲ ಸ್ಥಾನದಲ್ಲಿದೆ. 15 ಹೆದ್ದಾರಿಗಳು, 10 ವಿಮಾನ ನಿಲ್ದಾಣಗಳು ಬರುತ್ತಿವೆ. ಹಲವು ಸವಾಲುಗಳ ನಡುವೆಯೂ ಒಳ್ಳೆಯ ಆಡಳಿತ ನೀಡುತ್ತಿದ್ದಾರೆ.

ಧರ್ಮದ ಆಧಾರದಲ್ಲಿ ಸಮಾಜವನ್ನು ಒಡೆಯುವುದನ್ನೂ ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಮುಸ್ಲಿಮರಿಗೂ ಭಾರತದಲ್ಲಿ ನೆಲೆಸಲು ಹಕ್ಕಿದೆ.

– **ರಾಮಕೃಷ್ಣ ಉಪಾಧ್ಯ,** ಪತ್ರಕರ್ತರು, ರಾಜಕೀಯ ವಿಶ್ಲೇಷಕರು



ಸಿರಿಗೆರೆಯ ತರಳಬಾಳು ಬೃಹನ್ಮಠದ ಗುರುಶಾಂತೇಶ್ವರ ಭವನದ ವೇದಿಕೆಯಲ್ಲಿ ಸೋಮವಾರ ಆರಂಭವಾದ ತರಳಬಾಳು ಹುಣ್ಣಿಮೆಯ ಸಾಂಸ್ಕೃತಿಕ ಕಾರ್ಯಕ್ರಮವನ್ನು ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಉದ್ಘಾಟಿಸಿದರು. ಸಚಿವ ಕೆ.ಎಸ್. ಈಶ್ವರಪ್ಪ, ವಿಧಾನಪರಿಷತ್ ಸದಸ್ಯ ಕೆ.ಎಸ್. ನವೀನ್, ಮಾಜಿ ಸಚಿವ ಎಚ್. ಆಂಜನೇಯ, ಚಿತ್ರದುರ್ಗ ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ, ದಾವಣಗೆರೆ ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಇದ್ದರು.

'ತರಳಬಾಳು ಹುಣ್ಣಿಮೆ'ಗೆ ಚಾಲನೆ

ಪ್ರಜಾವಾಣಿ ವಾರ್ತೆ

ಸಿರಿಗೆರೆ (ಚಿತ್ರದುರ್ಗ): ತರಳಬಾಳು ಮಠದ ಬಹುನಿರೀಕ್ಷಿತ 'ತರಳಬಾಳು ಹುಣ್ಣಿಮೆ' ಉತ್ಸವ ಮಠದ ಆವರಣದಲ್ಲಿ ಸೋಮವಾರ ಆರಂಭವಾಯಿತು. ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ನೇತೃತ್ವದಲ್ಲಿ ನಡೆಯುವ ಉತ್ಸವದಲ್ಲಿ ಪಾಲ್ಗೊಳ್ಳಲು ರಾಜ್ಯದ ಹಲವೆಡೆಯಿಂದ ಭಕ್ತರು ಸಿರಿಗೆರೆಗೆ ಧಾವಿಸಿದ್ದಾರೆ.

ಗುರುಶಾಂತೇಶ್ವರ ದಾಸೋಹ ಭವನದಲ್ಲಿ ಮೊದಲ ದಿನದ ವಿಚಾರಗೋಷ್ಠಿ ಹಾಗೂ ಕನ್ನಡ ಸಾಹಿತ್ಯ ಕಾರ್ಯಕ್ರಮ ನಡೆಯಿತು. ಸಂಜೆ ಆಯೋಜಿಸಿದ್ದ ಸಾಂಸ್ಕೃತಿಕ ಸಮಾರಂಭದಲ್ಲಿ ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪ ಪಾಲ್ಗೊಂಡಿದ್ದರು.

'ನೀರಾವರಿ, ಪರಿಸರ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಮಾಡಿದ ಕಾರ್ಯ ಅನನ್ಯ. ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಯ ಹಲವು ಕೆರೆ ತುಂಬಿಸುವ ಯೋಜನೆಗಳು ಅನುಷ್ಠಾನಕ್ಕೆ ಬರುವಲ್ಲಿ ಸ್ವಾಮೀಜಿ ಅವರ ಶ್ರಮವಿದೆ. ರಾಜ್ಯದ ಎಲ್ಲ ಕೆರೆಗಳನ್ನು ಅಭಿವೃದ್ಧಿಪಡಿಸಲು ಸ್ವಾಮೀಜಿ ಸ್ಫೂರ್ತಿ ತುಂಬಿದ್ದಾರೆ. ಗ್ರಾಮೀಣಾಭಿವೃದ್ಧಿ ಇಲಾಖೆ ವ್ಯಾಪ್ತಿಯ ಎಲ್ಲ ಕೆರೆ ಮತ್ತು ಕಲ್ಯಾಣಿಗಳನ್ನು ಅಭಿವೃದ್ಧಿಪಡಿಸಲಾಗುವುದು' ಎಂದು ಈಶ್ವರಪ್ಪ ಘೋಷಣೆ ಮಾಡಿದರು.

'ಹಿಂದೂ– ಮುಸ್ಲಿಂ ಅಂತರ ಆತಂಕಕಾರಿ': 'ಹಿಜಾಬ್ ವಿಚಾರಕ್ಕೆ ಹಿಂದೂ ಮತ್ತು ಮುಸ್ಲಿಂ ಧರ್ಮೀಯರ ನಡುವೆ ಸೃಷ್ಟಿಯಾದ ಕಂದಕ ಆತಂಕಕಾರಿ ಬೆಳವಣಿಗೆ' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್.ಈಶ್ವರಪ್ಪ ಕಳವಳ ವ್ಯಕ್ತಪಡಿಸಿದರು.

ಕಾಯ್ದೆ ಹಿಂಪಡೆಯಲು ಒತ್ತಾಯಿಸಿ ರೈತರ ರ‍್ಯಾಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಸರ್ಕಾರ ಜಾರಿಗೊಳಿಸಿರುವ ಕೃಷಿ ಕಾಯ್ದೆ ತಿದ್ದುಪಡಿ ರೈತ ವಿರೋಧಿಯಾಗಿದ್ದು, ಅವುಗಳನ್ನು ಕೂಡಲೇ ಹಿಂಪಡೆಯಬೇಕು' ಎಂದು ಒತ್ತಾಯಿಸಿ ರೈತರು ನಗರದಲ್ಲಿ ಬೃಹತ್ ಪ್ರತಿಭಟನಾ ರ‍್ಯಾಲಿ ನಡೆಸಿದರು.

'ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ' ನೇತೃತ್ವದಲ್ಲಿ 'ವಿಧಾನಸೌಧ ಮುತ್ತಿಗೆ' ಹೋರಾಟ ಹಮ್ಮಿಕೊಳ್ಳಲಾಗಿತ್ತು. ನಗರದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಿಂದ ಸ್ವಾತಂತ್ರ್ಯ ಉದ್ಯಾನದವರೆಗೆ ಮೆರವಣಿಗೆ ನಡೆಸಿದ ರೈತರು, ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ವಿವಿಧ ಜಿಲ್ಲೆಗಳ ರೈತರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು. 'ಕೃಷಿ ಕಾಯ್ದೆ ಹಿಂಪಡೆಯಿರಿ' ಎಂಬ ಘೋಷಣಾ ಫಲಕಗಳನ್ನು ಪ್ರದರ್ಶಿಸಿದರು. ಸ್ವಾತಂತ್ರ್ಯ ಉದ್ಯಾನದಲ್ಲಿ ಸೇರಿದ್ದ ರೈತರು, ವಿಧಾನಸೌಧದತ್ತ ಹೋಗಲು ಯತ್ನಿಸಿದರು. ಸ್ಥಳದಲ್ಲಿದ್ದ ಪೊಲೀಸರು, ರೈತರನ್ನು ತಡೆದರು. ರಸ್ತೆಯಲ್ಲೇ ರೈತರು ಪ್ರತಿಭಟನೆ ಮುಂದುವರಿಸಿದರು.

'ರೈತ ವಿರೋಧಿ ನಿಲುವು ತಾಳಿದ್ದ ಕೇಂದ್ರ ಸರ್ಕಾರ, ಸುಗ್ರೀವಾಜ್ಞೆ ಮೂಲಕ ಕೃಷಿ ಕಾಯ್ದೆಗಳನ್ನು ಜಾರಿಗೆ ತಂದಿತ್ತು. ಇದನ್ನು ಖಂಡಿಸಿ ರೈತರು ಸುದೀರ್ಘವಾದ ಹೋರಾಟ ನಡೆಸಿದ್ದರು. ಅದಕ್ಕೆ ಮಣಿದು ಕೇಂದ್ರ ಸರ್ಕಾರ ಈಗಾಗಲೇ ಕಾಯ್ದೆಗಳನ್ನು ಹಿಂಪಡೆದಿದೆ' ಎಂದು ಪ್ರತಿಭಟನಾನಿರತರು ಹೇಳಿದರು.



ಕೃಷಿ ಕಾಯ್ದೆಗಳನ್ನು ಅಧಿವೇಶನದಲ್ಲಿ ಹಿಂಪಡೆಯುವುದಾಗಿ ಮುಖ್ಯಮಂತ್ರಿ ಹೇಳಿದ್ದರು. ಅಧಿವೇಶನದ ಪಟ್ಟಿಯಲ್ಲಿ ಈ ವಿಷಯವನ್ನೇ ಅವರು ಪ್ರಸ್ತಾಪಿಸಿಲ್ಲ

ಕೋಡಿಹಳ್ಳಿ ಚಂದ್ರಶೇಖರ್,
ರೈತ ಸಂಘದ ರಾಜ್ಯ ಘಟಕದ ಅಧ್ಯಕ್ಷ

'ರಾಜ್ಯ ಸರ್ಕಾರವೂ ಸುಗ್ರೀವಾಜ್ಞೆ ಮೂಲಕ ಕೃಷಿ ಕಾಯ್ದೆಗೆ ತಿದ್ದುಪಡಿಗಳನ್ನು ಜಾರಿಗೆ ತಂದಿದೆ. ಇವುಗಳನ್ನು ರಾಜ್ಯ ಸರ್ಕಾರ ಹಿಂಪಡೆಯಬೇಕು. ಇಲ್ಲದಿದ್ದರೆ, ಮುಂದಿನ ದಿನಗಳಲ್ಲಿ ಗಂಭೀರ ಸ್ವರೂಪದ ಹೋರಾಟ ನಡೆಸಲಾಗುವುದು' ಎಂದೂ ಎಚ್ಚರಿಸಿದರು.

ಖರೀದಿ ಕೇಂದ್ರ ಬಂದ್‌ನಿಂದ ಸಂಕಷ್ಟ: 'ರಾಗಿ, ಭತ್ತ, ತೊಗರಿ, ಗೋವಿನಜೋಳ ಖರೀದಿ ಕೇಂದ್ರಗಳನ್ನು ಏಕಾಏಕಿ ಬಂದ್ ಮಾಡಲಾಗಿದೆ. ಇದರಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ' ಎಂದು ಪ್ರತಿಭಟನಕಾರರು ದೂರಿದರು.

ಪಕ್ಷದ ನಾಯಕರಿಂದ ಅಂತರ ಕಾಯ್ದುಕೊಂಡ ಶಾಸಕರು: ಮನವೊಲಿಕೆಗೆ ದೇವೇಗೌಡರ ಯತ್ನ

ಜೆಡಿಎಸ್‌ನಲ್ಲಿ ಅಸಮಾಧಾನದ ಅಲೆ

• ಕೆ.ಎಸ್.ಸುನಿಲ್

ಹಾಸನ: ವಿಧಾನಸಭೆ ಚುನಾವಣೆಗೆ ಸಿದ್ಧತೆ ನಡೆಯುತ್ತಿರುವಾಗಲೇ ಜೆಡಿಎಸ್ ಪಾಲಿನ ಭದ್ರಕೋಟೆ ಎನಿಸಿರುವ ಹಾಸನ ಜಿಲ್ಲೆಯಲ್ಲಿ ಪಕ್ಷದೊಳಗೆ ಅಸಮಾಧಾನದ ಅಲೆ ಏಳಲು ಆರಂಭವಾಗಿದೆ.

ಪಕ್ಷದೊಳಗಿನ ಇತ್ತೀಚಿನ ಬೆಳವಣಿಗೆಗಳು, ಶಾಸಕರು, ಮುಖಂಡರ ನಡವಳಿಕೆಗಳು ಪಕ್ಷದ ವರಿಷ್ಠ ಎಚ್.ಡಿ.ದೇವೇಗೌಡ ಅವರಿಗೂ ತಲೆನೋವಾಗಿ ಪರಿಣಮಿಸಿದೆ.

ಅರಕಲಗೂಡು ಮುಖಂಡ ಹೊನ್ನವಳ್ಳಿ ಕೆ.ಸತೀಶ್ ಅವರನ್ನು ಒಂದೂವರೆ ವರ್ಷದ ಹಿಂದೆ ಜಿಲ್ಲಾ ಸಹಕಾರ ಬ್ಯಾಂಕ್ ಹಾಗೂ ಹಾಸನ ಹಾಲು ಒಕ್ಕೂಟದ ನಿರ್ದೇಶಕರಾಗಿ ನೇಮಿಸಿರುವುದು ಶಾಸಕ ಎ.ಟಿ. ರಾಮಸ್ವಾಮಿ ಅವರನ್ನು ಕೆರಳಿಸಿದೆ. ಪಕ್ಷದ ನಾಯಕರ ವಿರುದ್ಧ ಅವರು ಅಸಮಾಧಾನಗೊಳ್ಳಲು ಪ್ರಮುಖ ಕಾರಣವಾಗಿದೆ.

'ಕಳೆದ ಚುನಾವಣೆಯಲ್ಲಿ ಪಕ್ಷ ವಿರೋಧಿ ಚಟುವಟಿಕೆ ನಡೆಸಿದ್ದ ಸತೀಶ್ ಅವರನ್ನೇ ಎರಡು ಸ್ಥಾನಗಳಿಗೆ ನೇಮಿಸಲಾಗಿದೆ. ಪಕ್ಷ ವಿರೋಧಿ ಚಟುವಟಿಕೆ ನಡೆಸುವವರಿಗೆ ಬೆಂಬಲವಾಗಿ ನಿಂತರೆ ತಾಯಿಯೇ ಮಗುವಿಗೆ ವಿಷ ಉಣಿಸಿದಂತೆ. ವಿಷ ತಿಂದ ಮಗು ಬದುಕಲು ಸಾಧ್ಯವೇ? ವರಿಷ್ಠರೂ ಇದಕ್ಕೆ ಬೆಂಬಲ ನೀಡುತ್ತಿರುವುದು ನೋವಿನ ಸಂಗತಿ' ಎಂದು ರಾಮಸ್ವಾಮಿ ಬಹಿರಂಗವಾಗಿ ಹೇಳಿಕೆ ನೀಡಿದ್ದರು.

ಜಿಲ್ಲೆಯ ಮಟ್ಟಿಗೆ ಪಕ್ಷದಲ್ಲಿ ರೇವಣ್ಣ ಅವರ ಮಾತು ಅಂತಿಮ. ರಾಮಸ್ವಾಮಿ ಮನವಿಗೆ ಅವರೂ ಸ್ಪಂದಿಸಲಿಲ್ಲ. ಈ ಬೆಳವಣಿಗೆಯಿಂದ ಬೇಸತ್ತು ಹಿರಿಯ ನಾಯಕರಿಂದ ಅಂತರ ಕಾಯ್ದುಕೊಂಡಿದ್ದಾರೆ. ಪಕ್ಷ ತ್ಯಜಿಸುವ ಬಗ್ಗೆಯೂ ಆಪ್ತರ ಬಳಿ ಚರ್ಚಿಸಿದ್ದಾರೆ ಎನ್ನಲಾಗಿದೆ. ಭಾನುವಾರ ನಡೆದ ಕಾರ್ಯಕರ್ತರ ಸಭೆಗೂ ಗೈರಾಗಿದ್ದರು. ಈ ಸೂಚನೆ ಅರಿತ ಗೌಡರು, ರಾಮಸ್ವಾಮಿ ಮನವೊಲಿಕೆಗೆ ಪ್ರಯತ್ನ ಆರಂಭಿಸಿದ್ದಾರೆ.

ಇನ್ನು ಅರಸೀಕೆರೆ ಕ್ಷೇತ್ರದ ಶಾಸಕ ಕೆ.ಎಂ.ಶಿವಲಿಂಗೇಗೌಡ ಯಾವುದೇ ಪಕ್ಷದ ಸರ್ಕಾರವಿದ್ದರೂ ಮುಖ್ಯಮಂತ್ರಿ ಮತ್ತು ಸಚಿವರನ್ನು ಭೇಟಿ ಮಾಡಿ, ಕ್ಷೇತ್ರದ ಅಭಿವೃದ್ಧಿಗೆ ಬೇಕಾದ ಅನುದಾನ ತರುತ್ತಿದ್ದಾರೆ. ಅಲ್ಲದೇ, ಕ್ಷೇತ್ರದಲ್ಲಿ ಕಾರ್ಯಕ್ರಮ ಏರ್ಪಡಿಸಿ, ಬಿಜೆಪಿ, ಕಾಂಗ್ರೆಸ್ ನಾಯಕರನ್ನು ಆಹ್ವಾನಿಸಿ ಅವರನ್ನು ಹಾಡಿ ಹೊಗಳುತ್ತಿದ್ದಾರೆ. ಹೀಗಾಗಿ, ಅವರೂ ಪಕ್ಷ ತೊರೆಯಲಿದ್ದಾರೆ ಎಂಬ ಸುದ್ದಿಯೂ ಹರಿದಾಡುತ್ತಿದೆ. ಇದರಿಂದ ಕಾರ್ಯಕರ್ತರಲ್ಲೂ ಗೊಂದಲು ಮೂಡಿದೆ. ಭಾನುವಾರ ನಡೆದ ಕಾರ್ಯಕರ್ತರ ಸಭೆಗೂ ಶಿವಲಿಂಗೇಗೌಡರು ಗೈರಾಗಿದ್ದರು.

'ಬಿ.ಎಸ್.ಯಡಿಯೂರಪ್ಪ ಅರಸೀಕೆರೆಗೆ ಭೇಟಿ ನೀಡಿದ್ದ ಕಾರಣ ಶಾಸಕರು ಬಂದಿಲ್ಲ. ಅದು ಸೂಕ್ಷ್ಮ ಕ್ಷೇತ್ರ. ಅಲ್ಲಿ ಒಕ್ಕಲಿಗ ಸಮುದಾಯಕ್ಕೆ ಹೆಚ್ಚು ಶಕ್ತಿಯಿಲ್ಲ. ಲಿಂಗಾಯತರು, ಕುರುಬ ಸಮಾಜದವರು ಹೆಚ್ಚಿದ್ದಾರೆ. ಪರಿಸ್ಥಿತಿಗೆ ತಕ್ಕಂತೆ ಅವರು ನಡೆದುಕೊಳ್ಳಬೇಕಾಗುತ್ತದೆ' ಎಂದು ಗೈರು ಹಾಜರಿಯನ್ನು ದೇವೇಗೌಡರು ಸಮರ್ಥಿಸಿಕೊಂಡರು.



ಹಾಸನ ಜನರಿಗೆ ಪ್ರೀತಂ ಗೌಡರ ಯೋಚನೆ–ಯೋಜನೆ ಒಪ್ಪಿದೆಯೋ? ರೇವಣ್ಣ ಅವರ ಅಭಿವೃದ್ಧಿ ಶೈಲಿ ಇಷ್ಟವಾಗಿದೆಯೋ ಸ್ಪರ್ಧೆ ನಡೆಯಲಿ.

ಪ್ರೀತಂ ಗೌಡ,
ಹಾಸನ, ಬಿಜೆಪಿ ಶಾಸಕ



ಹಾಸನ ಕ್ಷೇತ್ರದಲ್ಲಿ ನಮ್ಮ ಕುಟುಂಬದವರು ಸ್ಪರ್ಧಿಸುವುದು ವದಂತಿ. ಅರಸೀಕೆರೆ, ಅರಕಲಗೂಡು ಕ್ಷೇತ್ರದ ಸಮಸ್ಯೆ ನನ್ನ ಗಮನಕ್ಕೆ ಬಂದಿಲ್ಲ

ಎಚ್.ಡಿ.ಕುಮಾರಸ್ವಾಮಿ,
ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ



ಪಕ್ಷದಲ್ಲಿನ ಕೆಲ ವಿದ್ಯಮಾನಗಳು ಮನಸ್ಸಿಗೆ ಬೇಸರ ತರಿಸಿದ್ದು, ನಾಯಕರ ಗಮನಕ್ಕೆ ತರಲಾಗುವುದು. ಜೆಡಿಎಸ್ ತ್ಯಜಿಸುವ ಬಗ್ಗೆ ಚಿಂತಿಸಿಲ್ಲ

ಎ.ಟಿ.ರಾಮಸ್ವಾಮಿ,
ಅರಕಲಗೂಡು ಶಾಸಕ

ಭವಾನಿ ರೇವಣ್ಣ ಸ್ಪರ್ಧೆಗೆ ಒತ್ತಡ




ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಹಾಸನ ಕ್ಷೇತ್ರದಿಂದ ದೇವೇಗೌಡರ ಸೊಸೆ ಭವಾನಿ ರೇವಣ್ಣ ಅವರನ್ನು ಕಣಕ್ಕಿಳಿಸಬೇಕೆಂದು ಕಾರ್ಯಕರ್ತರು, ನಾಯಕರ ಮೇಲೆ ಒತ್ತಡ ಹೇರುತ್ತಿದ್ದಾರೆ.

ಕ್ಷೇತ್ರವನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳಲು ಜೆಡಿಎಸ್ ಕಾರ್ಯತಂತ್ರ ರೂಪಿಸುತ್ತಿದೆ. ಅಭ್ಯರ್ಥಿ ಯಾರು ಎಂಬ ಕುತೂಹಲ ಮನೆ ಮಾಡಿದೆ.

ಹಾಸನದಲ್ಲಿ ರೇವಣ್ಣ ಸ್ಪರ್ಧಿಸಿ, ಭವಾನಿ ಅವರನ್ನು ಹೊಳೆನರಸೀಪುರ ಕ್ಷೇತ್ರದಲ್ಲಿ ಕಣಕ್ಕಿಳಿಸುವ ಬಗ್ಗೆಯೂ ಪಕ್ಷದಲ್ಲಿ ಚರ್ಚೆಗಳು ನಡೆಯುತ್ತಿವೆ.

'ಪಕ್ಷ ತೊರೆಯದಿರಿ; ಒಟ್ಟಿಗೆ ಸಾಗೋಣ'

ಪ್ರಜಾವಾಣಿ ವಾರ್ತೆ



ದೇವೇಗೌಡ

ಬೆಂಗಳೂರು: 'ಜೆಡಿಎಸ್ ತೊರೆದು ಹೋಗುವ ಯೋಚನೆಯಲ್ಲಿರುವವರಿಗೆ ಈಗಲೂ ಕಾಲ ಮಿಂಚಿಲ್ಲ. ಒಟ್ಟಿಗೆ ಕೆಲಸ ಮಾಡೋಣ ಬನ್ನಿ' ಎಂದು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ಮನವಿ ಮಾಡಿದರು.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕೇವಲ 123 ಎಂದು ಫಲಕ ಹಾಕಿಕೊಂಡರೆ ಆಗುತ್ತಾ? ಪಕ್ಷ ಸಂಘಟನೆ ಮಾಡಬೇಕು. ಜೆಡಿಎಸ್ ಬಿಟ್ಟು ಹೋಗಲು ಸಜ್ಜಾಗಿರುವವರು ಜತೆಗೆ ಬಂದರೆ ಒಟ್ಟಾಗಿ ಸಾಗುತ್ತೇವೆ' ಎಂದರು.

ಹಾಸನದಲ್ಲಿ ಪಕ್ಷದ ಕಾರ್ಯಕ್ರಮ ಆಯೋಜಿಸಿದ್ದಾಗ ಶಾಸಕರಾದ ಕೆ.ಎಂ. ಶಿವಲಿಂಗೇಗೌಡ ಮತ್ತು ಎ.ಟಿ. ರಾಮಸ್ವಾಮಿ ಗೈರಾಗಿದ್ದರು. ರಾಮಸ್ವಾಮಿ ಪಕ್ಷ ತೊರೆದು ಹೋಗಬಹುದು ಎಂದು ತಾವು ಹೇಳಿರಲಿಲ್ಲ ಎಂದು ಈ ಕುರಿತು ಸ್ಪಷ್ಟನೆ ನೀಡಿದರು.

ಸಿ.ಎಂ. ಇಬ್ರಾಹಿಂ ಪಕ್ಷಕ್ಕೆ ಬಂದ ತಕ್ಷಣ ಅವರನ್ನು ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ಮಾಡಲು ಸಾಧ್ಯವಿಲ್ಲ. ಈ ವಿಷಯವನ್ನು ಅವರ ಗಮನಕ್ಕೂ ತರಲಾಗಿದೆ. ಈಗ ಒಬ್ಬರು ಅಧ್ಯಕ್ಷರಿದ್ದಾರೆ. ಆರು ಬಾರಿ ಶಾಸಕರಾದವರನ್ನು ನಾಳೆಯೇ ಅಧಿಕಾರದಿಂದ ಇಳಿಸಲು ಆಗುತ್ತಾ? ಮುಂದೆ ಅಧ್ಯಕ್ಷರ ಆಯ್ಕೆ ಸಮಯದಲ್ಲಿ ಪರಿಗಣಿಸುವುದಾಗಿ ಇಬ್ರಾಹಿಂ ಅವರಿಗೆ ತಿಳಿಸಲಾಗಿದೆ ಎಂದರು.

'ಎಚ್.ಡಿ. ಕುಮಾರಸ್ವಾಮಿ ಚನ್ನಪಟ್ಟಣ ಕ್ಷೇತ್ರದಲ್ಲಿ ಗೆದ್ದಿದ್ದಾರೆ. ಅವರು ಚಾಮುಂಡೇಶ್ವರಿ ಕ್ಷೇತ್ರಕ್ಕೆ ಏಕೆ ಹೋಗಬೇಕು? ಕುಮಾರಸ್ವಾಮಿ ಎಲ್ಲಿ ಸ್ಪರ್ಧಿಸಬೇಕು ಎಂಬುದು ದೇವರ ಇಚ್ಛೆ. ನಿಖಿಲ್ ಕುಮಾರಸ್ವಾಮಿ ಸಿನಿಮಾ ರಂಗದಲ್ಲಿ ಸಕ್ರಿಯರಾಗಿದ್ದಾರೆ. ಅವರು ಚುನಾವಣೆಗೆ ಸ್ಪರ್ಧಿಸಬೇಕೊ? ಬೇಡವೊ? ಎಂಬುದನ್ನು ಕುಮಾರಸ್ವಾಮಿ ತೀರ್ಮಾನಿಸುತ್ತಾರೆ' ಎಂದು ದೇವೇಗೌಡ ಹೇಳಿದರು.

ಜೆಡಿಎಸ್‌ಗೆ ಮರಳುತ್ತಾರಾ ರಮೇಶ್ ಬಂಡಿಸಿದ್ದೇಗೌಡ?



ಮಂಡ್ಯ: ಜೆಡಿಎಸ್‌ನಿಂದ ಶ್ರೀರಂಗಪಟ್ಟಣ ಕ್ಷೇತ್ರದಲ್ಲಿ ಎರಡು ಬಾರಿ ಶಾಸಕರಾಗಿದ್ದು, ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ ಸೇರಿದ್ದ ರಮೇಶ್‌ಬಾಬು ಬಂಡಿಸಿದ್ದೇಗೌಡ ಮತ್ತೆ ಜೆಡಿಎಸ್‌ಗೆ ಮರಳುತ್ತಾರೆ ಎಂಬ ವಿಚಾರ ಮುನ್ನೆಲೆಗೆ ಬಂದಿದೆ.

ಶ್ರೀರಂಗಪಟ್ಟಣ ತಾಲ್ಲೂಕು ನಗುವನಹಳ್ಳಿಯಲ್ಲಿ ಭಾನುವಾರ ಸಮಾರಂಭವೊಂದರಲ್ಲಿ ರಮೇಶ್‌ಬಾಬು ಹಾಗೂ ಜೆಡಿಎಸ್ ನಾಯಕ ಎಚ್.ಡಿ.ಕುಮಾರಸ್ವಾಮಿ ಅಕ್ಕಪಕ್ಕ ಕುಳಿತು ನಗುನಗುತ್ತಲೇ ಮಾತನಾಡಿದ್ದರು. ಇದು, ಜೆಡಿಎಸ್ ಸೇರಬಹುದು ಎಂಬ ಶಂಕೆ ಮೂಡಿಸಿದೆ. ಐದು ವರ್ಷಗಳಿಂದ ಇಬ್ಬರೂ ಭೇಟಿಯಾಗಿರಲಿಲ್ಲ, ವೇದಿಕೆ ಹಂಚಿಕೊಂಡಿರಲಿಲ್ಲ. ಜೊತೆಗೆ ಕುಳಿತಿರುವ ಚಿತ್ರ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

2018ರ ವಿಧಾನಸಭಾ ಚುನಾವಣೆ ವೇಳೆ ಜೆಡಿಎಸ್‌ನಿಂದ ಬಂಡಾಯವೆದ್ದು ಕಾಂಗ್ರೆಸ್ ಸೇರಿದ್ದ 7 ಶಾಸಕರಲ್ಲಿ ರಮೇಶ್ ಕೂಡಾ ಇದ್ದರು. ಜೆಡಿಎಸ್‌ನಿಂದ ಸ್ಪರ್ಧಿಸಿದ್ದ ರವೀಂದ್ರ ಶ್ರೀಕಂಠಯ್ಯ ಎದುರು ಸೋಲು ಕಂಡಿದ್ದರು. 'ಅದು ನುಡಿನಮನ ಕಾರ್ಯಕ್ರಮ. ಬಹಳ ವರ್ಷದ ನಂತರ ಒಂದೇ ವೇದಿಕೆಯಲ್ಲಿ ಆಸೀನರಾಗಿದ್ದೆವು. ಅಲ್ಲಿ ರಾಜಕಾರಣ ಇರಲಿಲ್ಲ. ಕುಮಾರಸ್ವಾಮಿ ಜೊತೆ ಆತ್ಮೀಯವಾಗಿ ಮಾತನಾಡಿದೆ. ಅದಕ್ಕೆ ಬೇರೆ ಅರ್ಥವಿಲ್ಲ' ಎಂದು ರಮೇಶ್‌ಬಾಬು ಬಂಡಿಸಿದ್ದೇಗೌಡ ಪ್ರತಿಕ್ರಿಯಿಸಿದರು.

ಕಣವಿ ಆರೋಗ್ಯದಲ್ಲಿ ಏರುಪೇರು

ಪ್ರಜಾವಾಣಿ ವಾರ್ತೆ

ಧಾರವಾಡ: ಹಿರಿಯ ಕವಿ ಡಾ.ಚೆನ್ನವೀರ ಕಣವಿ ಅವರ ಆರೋಗ್ಯದಲ್ಲಿ ಸೋಮವಾರ ಏರುಪೇರು ಉಂಟಾಗಿದೆ ಎಂದು ಚಿಕಿತ್ಸೆ ನೀಡುತ್ತಿರುವ ಎಸ್‌ಡಿಎಂ ಆಸ್ಪತ್ರೆಯ ಬುಲೆಟಿನ್ ತಿಳಿಸಿದೆ.

ಶ್ವಾಸಕೋಶದಲ್ಲಿನ ಸೋಂಕು ಉಲ್ಬಣಗೊಂಡಿದೆ. ಕಡಿಮೆ ರಕ್ತದೊತ್ತಡ ಹಾಗೂ ಮೂತ್ರಪಿಂಡ ಸಮಸ್ಯೆಯಿಂದಲೂ ಅವರು ಬಳಲುತ್ತಿದ್ದಾರೆ. ಚಿಕಿತ್ಸೆ ಮುಂದುವರಿಸಲಾಗಿದೆ ಎಂದು ಹೇಳಲಾಗಿದೆ.

ಸ್ಪಷ್ಟೀಕರಣ ಕೋರಿದ್ದ ಅರ್ಜಿ ವಜಾ

ನವದೆಹಲಿ: 2022–23ನೇ ಶೈಕ್ಷಣಿಕ ವರ್ಷದ ವೈದ್ಯಕೀಯ ನೀಟ್ (ಪದವಿ ಮತ್ತು ಪಿಜಿ) ಪ್ರವೇಶಕ್ಕೆ ಸಂಬಂಧಿಸಿದಂತೆ ಆರ್ಥಿಕವಾಗಿ ಹಿಂದುಳಿದ ವರ್ಗದ (ಇಡಬ್ಲ್ಯುಎಸ್) ಮೀಸಲಾತಿಗೆ ವಿಧಿಸಲಾದ ಮಾನದಂಡಗಳ ಕುರಿತು ಸ್ಪಷ್ಟೀಕರಣ ಕೋರಿದ್ದ ಅರ್ಜಿಯ ವಿಚಾರಣೆಗೆ ಸುಪ್ರೀಂ ಕೋರ್ಟ್ ನಿರಾಕರಿಸಿತು.

ಮುಂದಿನ ಶೈಕ್ಷಣಿಕ ವರ್ಷಕ್ಕೆ ಇಡಬ್ಲ್ಯುಎಸ್ ಮೀಸಲಾತಿ ಕುರಿತಂತೆ ಮಾನದಂಡಗಳನ್ನು ನಿರ್ಧರಿಸುವ ಪ್ರಕ್ರಿಯೆ ಜಾರಿಯಲ್ಲಿದೆ. ಇಡಬ್ಲ್ಯುಎಸ್ ಕೋಟಾ ನ್ಯಾಯಪೀಠ ನೀಡುವ ಆದೇಶದಂತೆಯೇ ಇರಲಿದೆ ಎಂದು ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಹಾಗೂ ಸೂರ್ಯಕಾಂತ್ ಅವರಿದ್ದ ಪೀಠ ಸೋಮವಾರ ಹೇಳಿತು.

ಒಬಿಸಿ ಮೀಸಲಾತಿ ರಕ್ಷಣೆಗೆ ಆಗ್ರಹ

ಬೆಂಗಳೂರು: ಹಿಂದುಳಿದ ವರ್ಗಗಳ ಆಯೋಗ ನಡೆಸಿದ್ದ ಜಾತಿ ಗಣತಿ ವರದಿಯನ್ನು ಬಳಸಿಕೊಂಡು ಸ್ಥಳೀಯ ಸಂಸ್ಥೆಗಳಲ್ಲಿ ಹಿಂದುಳಿದ ವರ್ಗಗಳಿಗೆ ನೀಡಿರುವ ಮೀಸಲಾತಿಯನ್ನು ರಕ್ಷಿಸಬೇಕು ಎಂದು ಕರ್ನಾಟಕ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟ ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ.

'ದೇಶದಲ್ಲೇ ಮೊದಲ ಬಾರಿಗೆ ಸ್ಥಳೀಯ ಸಂಸ್ಥೆಗಳಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡಿದ ರಾಜ್ಯ ಕರ್ನಾಟಕ. ಈಗ ಸುಪ್ರೀಂಕೋರ್ಟ್ ನೀಡಿರುವ ನಿರ್ದೇಶನದಿಂದ ಹಿಂದುಳಿದ ವರ್ಗಗಳು ಹೊಂದಿರುವ ಶೇಕಡ 28ರಷ್ಟು ರಾಜಕೀಯ ಮೀಸಲಾತಿಗೆ ಕಂಟಕ ಎದುರಾಗಿದೆ. ನ್ಯಾಯಾಲಯದ ನಿರ್ದೇಶನದಂತೆ ಪರಾಮರ್ಶೆ ನಡೆಸಲು ಜಾತಿ ಗಣತಿ ವರದಿಯನ್ನು ಬಳಸಿಕೊಳ್ಳಬೇಕು. ಆ ಮೂಲಕ ಮೀಸಲಾತಿ ಸೌಲಭ್ಯವನ್ನು ರಕ್ಷಿಸಬೇಕು' ಎಂದು ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಎಣ್ಣೆಗೆರೆ ಆರ್. ವೆಂಕಟರಾಮಯ್ಯ ಹೇಳಿಕೆಯಲ್ಲಿ ಒತ್ತಾಯಿಸಿದ್ದಾರೆ.

'ಸಾಮಾಜಿಕ ನ್ಯಾಯದ ತತ್ವದ ಅಡಿಯಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡಲಾಗಿದೆ. ಅದನ್ನು ರಕ್ಷಿಸುವುದು ಸರ್ಕಾರದ ಜವಾಬ್ದಾರಿ. ಹಿಂದುಳಿದ ವರ್ಗಗಳ ಮೀಸಲಾತಿ ರಕ್ಷಣೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ತಕ್ಷಣ ಕ್ರಮ ಜರುಗಿಸಬೇಕು. ಇಲ್ಲವಾದರೆ ಸರ್ಕಾರದ ವಿರುದ್ಧ ಹೋರಾಟ ನಡೆಸಲಾಗುವುದು' ಎಂದು ತಿಳಿಸಿದ್ದಾರೆ.

ಜಂಟಿ ಅಧಿವೇಶನ ಉದ್ದೇಶಿಸಿ ಭಾಷಣದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಪ್ರಶಂಸೆ

'ಕೋವಿಡ್ ಎದುರಿಸುವಲ್ಲಿ ಸರ್ಕಾರ ಯಶಸ್ವಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್‌ನಿಂದ ಎದುರಾದ ಸವಾಲು ಮತ್ತು ಸಂಕಷ್ಟಗಳನ್ನು ಸಮರ್ಥವಾಗಿ ಎದುರಿಸಿ, ರಾಜ್ಯವನ್ನು ಅಭಿವೃದ್ಧಿಯತ್ತ ಮುನ್ನಡೆಸುವಲ್ಲಿ ರಾಜ್ಯ ಸರ್ಕಾರ ಯಶಸ್ವಿಯಾಗಿದೆ ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಶ್ಲಾಘಿಸಿದರು.

ವಿಧಾನಸಭೆಯ ಸಭಾಂಗಣದಲ್ಲಿ ಸೋಮವಾರ ನಡೆದ ವಿಧಾನಮಂಡಲದ ಜಂಟಿ ಅಧಿವೇಶನ ಉದ್ದೇಶಿಸಿ ಮಾತನಾಡಿದ ಅವರು, 'ಕೋವಿಡ್ ನಿರ್ವಹಣೆ ವಿಚಾರದಲ್ಲಿ ಕರ್ನಾಟಕ ಸರ್ಕಾರವು ಅತ್ಯಂತ ಅನುಕರಣೀಯವಾಗಿ ಕೆಲಸ ಮಾಡಿದೆ. ರಾಜ್ಯ ಸರ್ಕಾರ ಕೈಗೊಂಡ ಕ್ರಮಗಳಿಂದಾಗಿ ರಾಜ್ಯದಲ್ಲಿ ಸಾವಿನ ಸಂಖ್ಯೆಯನ್ನು ಕಡಿಮೆ ಮಾಡಲು ಸಾಧ್ಯವಾಗಿದೆ' ಎಂದರು.

ರಾಜ್ಯದಲ್ಲಿ 9.33 ಕೋಟಿ ಡೋಸ್ ಕೋವಿಡ್ ಲಸಿಕೆ ನೀಡಲಾಗಿದೆ. ಶೇಕಡ 100ರಷ್ಟು ಜನರಿಗೆ ಮೊದಲ ಡೋಸ್ ಮತ್ತು ಶೇ 85ರಷ್ಟು ಜನರಿಗೆ ಎರಡನೇ ಡೋಸ್ ನೀಡಲಾಗಿದೆ. ಆರು ಕೋಟಿ ಕೋವಿಡ್ ಪರೀಕ್ಷೆ ನಡೆಸಿದ್ದು, ಈ ವಿಚಾರದಲ್ಲಿ ಕರ್ನಾಟಕವು ದೇಶದ ಮುಂಚೂಣಿ ರಾಜ್ಯಗಳಲ್ಲಿ ಒಂದಾಗಿದೆ ಎಂದು ಹೇಳಿದರು.

55,256 ಎಚ್‌ಡಿಯು ಹಾಸಿಗೆಗಳು, 7,216 ಐಸಿಯು ಹಾಸಿಗೆಗಳು, 6,123 ಐಸಿಯು- ವೆಂಟಿಲೇಟರ್ ಹಾಸಿಗೆ ಸೇರಿದಂತೆ 1.95 ಲಕ್ಷ ಹಾಸಿಗೆಗಳನ್ನು ಕೋವಿಡ್ ಚಿಕಿತ್ಸೆಗಾಗಿ ಸಜ್ಜುಗೊಳಿಸಲಾಗಿದೆ. 1,200 ಟನ್ ಆಮ್ಲಜನಕ ಉತ್ಪಾದಿಸುವಷ್ಟು ಸಾಮರ್ಥ್ಯ ವೃದ್ಧಿಸಲಾಗಿದೆ ಎಂದರು.

ಆಯುಷ್ಮಾನ್ ಭಾರತ್ ಯೋಜನೆ ಅಡಿಯಲ್ಲಿ 8.25 ಲಕ್ಷ ಆರೋಗ್ಯ ಕಾರ್ಡ್ ವಿತರಿಸಲಾಗಿದೆ. 6.7 ಲಕ್ಷ ಫಲಾನುಭವಿಗಳ ಚಿಕಿತ್ಸೆಗಾಗಿ ₹ 875 ಕೋಟಿ ವೆಚ್ಚ ಮಾಡಲಾಗಿದೆ. 'ಆರೋಗ್ಯ ನಂದನ' ಯೋಜನೆಯಡಿ 70 ಲಕ್ಷಕ್ಕೂ ಹೆಚ್ಚು ಮಕ್ಕಳ ಆರೋಗ್ಯ ತಪಾಸಣೆ ನಡೆಸಲಾಗಿದೆ ಎಂದು ಮಾಹಿತಿ ನೀಡಿದರು.

2022-23ರಲ್ಲಿ 27.14 ಲಕ್ಷ ಮತ್ತು 2023-24ರಲ್ಲಿ 17.45 ಲಕ್ಷ ಮನೆಗಳಿಗೆ ನಲ್ಲಿ ಮೂಲಕ ಕುಡಿಯುವ ನೀರಿನ ಸಂಪರ್ಕ ಕಲ್ಪಿಸಲಾಗುವುದು. 5,965 ಗ್ರಾಮ ಪಂಚಾಯಿತಿಗಳ ಪೈಕಿ 5,571 ಗ್ರಾಮ ಪಂಚಾಯಿತಿಗಳಲ್ಲಿ ಘನ ತ್ಯಾಜ್ಯ ನಿರ್ವಹಣಾ ಘಟಕ ಸ್ಥಾಪಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ರಾಜ್ಯಪಾಲರು ಹೇಳಿದರು.

ಪ್ರವಾಹದಿಂದ ಹಾನಿಯಾದ ಪ್ರಕರಣಗಳಲ್ಲಿ 85,862 ಕುಟುಂಬಗಳಿಗೆ ₹ 85.86 ಕೋಟಿ ಪರಿಹಾರ ನೀಡಲಾಗಿದೆ. ಹಾನಿಗೀಡಾದ ಮನೆಗಳ ಪುನರ್ ನಿರ್ಮಾಣಕ್ಕೆ ₹ 400.52 ಕೋಟಿ ನೆರವು ಒದಗಿಸಲಾಗಿದೆ ಎಂದರು.

ಮುಖ್ಯಮಂತ್ರಿ ರೈತ ವಿದ್ಯಾರ್ಥಿ ನಿಧಿ ಯೋಜನೆ ಅಡಿಯಲ್ಲಿ 5.2 ಲಕ್ಷ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗಳಿಗೆ ₹ 126 ಕೋಟಿ ವರ್ಗಾವಣೆ ಮಾಡಲಾಗಿದೆ ಎಂದು ತಿಳಿಸಿದರು.

ಎಫ್‌ಡಿಐ ಹೆಚ್ಚಳ: 2021ರ ಏಪ್ರಿಲ್– ಜೂನ್ ಅವಧಿಯಲ್ಲಿ ಭಾರತಕ್ಕೆ ಹರಿದುಬಂದ ವಿದೇಶಿ ನೇರ ಹೂಡಿಕೆಯಲ್ಲಿ ಶೇಕಡ 48ರಷ್ಟು ಕರ್ನಾಟಕಕ್ಕೆ ಬಂದಿದೆ. ನೀತಿ ಆಯೋಗ ಪ್ರಕಟಿಸಿರುವ 'ಇಂಡಿಯಾ ಇನ್ನೋವೇಷನ್ ಇಂಡೆಕ್ಸ್–2020'ರಲ್ಲಿ 'ಪ್ರಮುಖ ರಾಜ್ಯಗಳು' ವಿಭಾಗದಲ್ಲಿ ಕರ್ನಾಟಕ ಅಗ್ರ ಸ್ಥಾನದಲ್ಲಿದೆ ಎಂದು ಗೆಹಲೋತ್ ಹೇಳಿದರು.


ಬೆಂಗಳೂರು ಮೆಟ್ರೊ ರೈಲು ಯೋಜನೆಯ ಹಂತ–2ರ ಅಡಿಯಲ್ಲಿ 32.54 ಕಿ.ಮೀ. ಉದ್ದದ ಮಾರ್ಗದ ನಿರ್ಮಾಣ ಕಾಮಗಾರಿಯನ್ನು 2023ರಲ್ಲಿ ಮುಕ್ತಾಯಗೊಳಿಸಲಾಗುವುದು. ಬಿಬಿಎಂಪಿ ವ್ಯಾಪ್ತಿಯಲ್ಲಿ 158.27 ಕಿ.ಮೀ. ಉದ್ದದ ರಸ್ತೆಗಳನ್ನು ಗುಂಡಿ ಮುಕ್ತಗೊಳಿಸಲಾಗಿದೆ ಎಂದರು.



ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಸೋಮವಾರ ವಿಧಾನಮಂಡಲದ ಜಂಟಿ ಅಧಿವೇಶನ ಉದ್ದೇಶಿಸಿ ಮಾತನಾಡಿದರು. ವಿಧಾನಸಭೆಯ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಮತ್ತು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

'ವಾಸ್ತವ ಚಿತ್ರಣ ನೀಡಿದ್ದಾರೆ'

ರಾಜ್ಯ ಸರ್ಕಾರ ಕಳೆದ ಒಂದು ವರ್ಷದಲ್ಲಿ ಕೋವಿಡ್ ಮತ್ತು ಪ್ರವಾಹದಂತಹ ಸಂಕಷ್ಟಗಳನ್ನು ನಿಭಾಯಿಸಿ, ಪ್ರಗತಿಯ ಪಥದಲ್ಲಿ ಸಾಗಿರುವುದನ್ನು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಸ್ಪಷ್ಟವಾಗಿ ಬಿಂಬಿಸಿದ್ದಾರೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.



ಬಸವರಾಜ ಬೊಮ್ಮಾಯಿ

ರಾಜ್ಯಪಾಲರ ಭಾಷಣದ ಬಗ್ಗೆ ಕಾಂಗ್ರೆಸ್ ಟೀಕೆಗೆ ಪ್ರತಿಕ್ರಿಯಿಸಿದ ಅವರು, ಸರ್ಕಾರ ಕೈಗೊಂಡಿರುವ ಕಾರ್ಯಕ್ರಮಗಳ ಬಗ್ಗೆ ಜನರಿಗೆ ಅರಿವಿದೆ. ನಾವು ಸಾರ್ವಜನಿಕರಿಗಾಗಿ ಕೆಲಸ ಮಾಡುತ್ತೇವೆಯೇ ಹೊರತು ವಿರೋಧ ಪಕ್ಷಗಳ ನಾಯಕರನ್ನು ಮೆಚ್ಚಿಸಲು ಅಲ್ಲ ಎಂದು ತಿರುಗೇಟು ನೀಡಿದರು.

ವಿವಿಧ ಇಲಾಖೆಗಳ ಅಡಿ ಮಾಡಿರುವ ಕಾರ್ಯಕ್ರಮಗಳ ಸ್ಪಷ್ಟ ಚಿತ್ರಣವನ್ನು ರಾಜ್ಯಪಾಲರು ಮುಂದಿಟ್ಟಿದ್ದಾರೆ. ಎಲ್ಲ ಇಲಾಖೆಗಳ ಪ್ರಗತಿಗಳನ್ನು ಈ ಭಾಷಣದಲ್ಲಿ ಅಳವಡಿಸಲು ಸಾಧ್ಯವಾಗಿಲ್ಲ. ಮುಂದೆ ಸರ್ಕಾರ ಉತ್ತರ ನೀಡುವ ಸಂದರ್ಭದಲ್ಲಿ ವಿವರಿಸಲಿದ್ದೇವೆ. ಆಗ ಸತ್ಯ ಏನೆಂಬುದು ಜನರಿಗೆ ಗೊತ್ತಾಗಲಿದೆ ಎಂದರು.

'ಡಬ್ಬಲ್ ಎಂಜಿನ್ ಸರ್ಕಾರದಿಂದ ದ್ರೋಹ'

ಡಬ್ಬಲ್ ಎಂಜಿನ್ ಸರ್ಕಾರ ನಾಡಿಗೆ ದ್ರೋಹ ಎಸಗಿದೆ. ರಾಜ್ಯಪಾಲರ ಬಾಯಿಂದ ಸುಳ್ಳು ಹೇಳಿಸಿದ ಸರ್ಕಾರ ರಾಜ್ಯಪಾಲರ ದಿಕ್ಕು ತಪ್ಪಿಸಿ ಅವರ ಮಾತಿನ ಮೂಲಕ ನಾಡಿನ ಜನ ದಿಕ್ಕು ತಪ್ಪಿಸಿದೆ. ಕನ್ನಡಿಗರನ್ನು ಸಾಲದ ಪ್ರಪಾತಕ್ಕೆ ತಳ್ಳಿದ್ದರ ಬಗ್ಗೆ ಪ್ರಸ್ತಾಪವೇ ಇಲ್ಲ. ಕೇಂದ್ರ ಸರ್ಕಾರದ ಕೆಲವು ಯೋಜನೆಗಳನ್ನು ತನ್ನ ಯೋಜನೆಗಳು ಎಂದು ಬಿಂಬಿಸಿಕೊಂಡಿದೆ ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಟೀಕಿಸಿದ್ದಾರೆ.



ಸಿದ್ದರಾಮಯ್ಯ

ಯಾವುದೇ ನಾಗರಿಕ ಸರ್ಕಾರಕ್ಕೆ ನಿರ್ದಿಷ್ಟ ಗೊತ್ತು-ಗುರಿಗಳಿರುತ್ತವೆ. ಆದರೆ, ರಾಜ್ಯಪಾಲರ ಭಾಷಣ ಕೇಳಿದ ಮೇಲೆ, ಈ ಸರ್ಕಾರಕ್ಕೆ ಯಾವುದೇ ಗೊತ್ತು ಗುರಿಗಳಿಲ್ಲ. ಸರ್ಕಾರಗಳಿಗೆ ತನ್ನದೇ ಆದ ಆದ್ಯತೆಗಳಿರುತ್ತವೆ. ಮುಖ್ಯವಾಗಿ, ಕಲ್ಯಾಣ ಕಾರ್ಯಕ್ರಮಗಳು ಮತ್ತು ಅಭಿವೃದ್ಧಿ ಕಾರ್ಯಕ್ರಮಗಳಿಗೆ ಒತ್ತು ಕೊಡಬೇಕು. ಈ ಸರ್ಕಾರ ಸಂಪೂರ್ಣವಾಗಿ ಇವೆರಡನ್ನೂ ಮರೆತಿದೆ ಎಂಬುದು ಸ್ಪಷ್ಟವಾಗುತ್ತಿದೆ. ರಾಜ್ಯದ ಜನರಿಗೆ ಕಲ್ಯಾಣವೂ ಇಲ್ಲ. ಅಭಿವೃದ್ಧಿಯ ಮಾತೂ ಇಲ್ಲ ಎಂದು ಹೇಳಿದರು.

ಸಾಮಾನ್ಯವಾಗಿ ರಾಜ್ಯಪಾಲರ ಭಾಷಣ ಒಂದು ವರ್ಷದ ಸಾಧನೆ ಮತ್ತು ಮುಂದಿನ ವರ್ಷಕ್ಕೆ ಇರಬೇಕಾದ ಮುನ್ನೋಟದ ಗುರಿಗಳನ್ನು ಒಳಗೊಂಡಿರುತ್ತದೆ. ಈ ಸರ್ಕಾರ ಕಳೆದ ಒಂದು ವರ್ಷದಿಂದ ಏನನ್ನೂ ಮಾಡಿಲ್ಲ ಎಂಬುದಕ್ಕೆ ರಾಜ್ಯಪಾಲರ ಭಾಷಣವೇ ಸಾಕ್ಷಿ ಎಂದು ಸಿದ್ದರಾಮಯ್ಯ ತಿಳಿಸಿದರು.

'ಕೋವಿಡ್‌ನಿಂದ ಕೋವಿಡ್‌ಗಾಗಿ ಭಾಷಣ'

ರಾಜ್ಯಪಾಲರ ಭಾಷಣ ಕೋವಿಡ್‌ನಿಂದ, ಕೋವಿಡ್‌ಗಾಗಿ, ಕೋವಿಡ್‌ಗೋಸ್ಕರವೇ ಮಾಡಿದ ಭಾಷಣವಾಗಿದೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ವ್ಯಂಗ್ಯವಾಡಿದ್ದಾರೆ.



ಕುಮಾರಸ್ವಾಮಿ

ರಾಜ್ಯದ ಅಭಿವೃದ್ಧಿ ಮುನ್ನೋಟದಂತೆ ಇರಬೇಕಾಗಿದ್ದ ರಾಜ್ಯಪಾಲರ ಭಾಷಣವು ನೀರಸ ಮತ್ತು ನಿರಾಶದಾಯಕವಾಗಿತ್ತು. ಸರ್ಕಾರ ಹಿಂದಿನ ಮತ್ತು ಮುಂದೆ ಮಾಡಬಹುದಾದ ಅಭಿವೃದ್ಧಿಯ ಬಗ್ಗೆ ಭಾಷಣದಲ್ಲಿ ಏನೇನೂ ಹೇಳಿಲ್ಲ. ಸ್ಪಷ್ಟತೆ, ನಿರ್ದಿಷ್ಟ ದಿಕ್ಸೂಚಿ ಇಲ್ಲದ ಭಾಷಣವಿದು. ರಾಜ್ಯಪಾಲರ ಭಾಷಣದ ಮೂಲಕವೇ ಮುಂದಿನ ಬಜೆಟ್ ಬಗ್ಗೆ ಯಾವುದೇ ನಿರೀಕ್ಷೆ ಇಟ್ಟುಕೊಳ್ಳಬೇಡಿ ಎಂದು ಸರ್ಕಾರವೇ ನೇರವಾಗಿ ಜನರಿಗೆ ಹೇಳಿದಂತಿದೆ ಎಂದು ಹೇಳಿದ್ದಾರೆ. ರಾಜ್ಯಪಾಲರ ಭಾಷಣದಲ್ಲಿ ಹಳೆಯ ಕೋವಿಡ್ ಅಂಶಗಳನ್ನಷ್ಟೇ ಓದಿಸಲಾಗಿದೆ. ಇದರಿಂದ ಯಾವುದೇ ಪ್ರಯೋಜನವಿಲ್ಲ ಎಂದು ಅವರು ತಿಳಿಸಿದರು.

ಇಬ್ರಾಹಿಂ ಸುತಾರ ನೆನಪಿನಲ್ಲಿ ಆಶ್ರಮ: ಸಚಿವ ಕಾರಜೋಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡದ ಕಬೀರ ಎಂದೇ ಖ್ಯಾತಿಯಾಗಿದ್ದ ದಿವಂಗತ ಇಬ್ರಾಹಿಂ ಸುತಾರ ಅವರ ಮನೆಯನ್ನು ಆಶ್ರಮವಾಗಿ ಪರಿವರ್ತಿಸಲು ಉದ್ದೇಶಿಸಲಾಗಿದೆ. ಈ ಬಗ್ಗೆ ಮುಖ್ಯಮಂತ್ರಿಯವರ ಜತೆ ಮಾತುಕತೆ ನಡೆಸುತ್ತೇನೆ' ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ತಿಳಿಸಿದರು.

ಇತ್ತೀಚೆಗೆ ನಿಧನರಾದವರಿಗೆ ವಿಧಾನಸಭೆಯಲ್ಲಿ ಸೋಮವಾರ ಮಂಡಿಸಲಾದ ಸಂತಾಪ ಸೂಚಿಸುವ ನಿರ್ಣಯದ ಮೇಲೆ ಮಾತನಾಡಿದ ಅವರು, 'ಇಬ್ರಾಹಿಂ ಸುತಾರ ಅವರ ಜತೆ 30 ವರ್ಷಗಳಿಂದ ಒಡನಾಟವಿದೆ. ತಮ್ಮ ಮನೆಯನ್ನು ಆಶ್ರಮವಾಗಿ ಪರಿವರ್ತಿಸುವ ಮತ್ತು ಗ್ರಂಥಾಲಯ ಸ್ಥಾಪಿಸಬೇಕು ಎಂದು ಅವರು ಹಲವು ಬಾರಿ ನನ್ನ ಬಳಿ ಪ್ರಸ್ತಾಪಿಸಿದ್ದರು. ಅವರ ಮಗನೂ ಕೆಲ ದಿನಗಳ ಹಿಂದೆ ಈ ವಿಷಯ ಪ್ರಸ್ತಾಪಿಸಿದ್ದಾರೆ' ಎಂದರು.

ಮಕ್ಕಳಲ್ಲಿ ಸಾಮರಸ್ಯ ಕಾಪಾಡುವ ನಿರ್ಣಯ ಮಂಡಿಸಲು ತಯಾರಿ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಲೆಗಳಲ್ಲಿ ಆಡೋಡಿ, ನಲಿದು ಬೆಳೆಯುವ ವಯಸ್ಸಿನಲ್ಲಿ ಪರಸ್ಪರರ ಮಧ್ಯೆ ನಂಬಿಕೆ, ಸಾಮರಸ್ಯ, ಸಹಬಾಳ್ವೆಯ ವಿಶಾಲ ಮನೋಭಾವ ಇರುವ ವ್ಯಕ್ತಿತ್ವ ರೂಪುಗೊಳ್ಳುತ್ತದೆ. ಅಂತಹ ಕೇಂದ್ರಗಳಲ್ಲಿ ಅಸಹನೆ, ಅಪನಂಬಿಕೆಯನ್ನು ಹುಟ್ಟುಹಾಕುವ ಕೆಲಸವನ್ನು ಯಾರೊಬ್ಬರೂ ಮಾಡುವುದು ಸರಿಯಲ್ಲ ಎಂಬ ನಿರ್ಣಯವನ್ನು ವಿಧಾನಮಂಡಲದ ಉಭಯ ಸದನಗಳಲ್ಲಿ ಮಂಡಿಸುವ ಸಾಧ್ಯತೆ ಇದೆ.

ಬೆಳಗಾವಿ ಅಧಿವೇಶನದ ವೇಳೆ ಮರಾಠಿ–ಕನ್ನಡ ಭಾಷಿಕರ ಮಧ್ಯೆ ವಿವಾದ ಎದ್ದು, ಕೆಲವು ಕಡೆಗಳಲ್ಲಿ ಘರ್ಷಣೆಯೂ ನಡೆದಿತ್ತು. ಬೆಳಗಾವಿ ಮಹಾರಾಷ್ಟ್ರಕ್ಕೆ ಸೇರಬೇಕು ಎಂದು ಮಹಾರಾಷ್ಟ್ರ ಏಕೀಕರಣ ಸಮಿತಿ ಪ್ರತಿಪಾದಿಸಿತ್ತು. ಈ ವೇಳೆ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೇ ಮುಂದೆ ನಿಂತು ಕನ್ನಡ ಪರ ಹಾಗೂ ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ; ಅದನ್ನು ಬಿಟ್ಟುಕೊಡುವ ಪ್ರಶ್ನೆಯೇ ಇಲ್ಲ ಎಂದು ಪ್ರತಿಪಾದಿಸುವ ನಿರ್ಣಯವನ್ನು ಮಂಡಿಸಿದ್ದರು. ಕಾಂಗ್ರೆಸ್, ಜೆಡಿಎಸ್ ಸದಸ್ಯರು ಇದನ್ನು ಒಕ್ಕೊರಲಿನಿಂದ ಬೆಂಬಲಿಸಿದ್ದರು. ಬೆಳಗಾವಿ ಸುವರ್ಣ ವಿಧಾನಸೌಧದ ಆವರಣದಲ್ಲಿ ಕಿತ್ತೂರು ರಾಣಿ ಚನ್ನಮ್ಮ ಹಾಗೂ ಸಂಗೊಳ್ಳಿ ರಾಯಣ್ಣನವರ ಪ್ರತಿಮೆ ಸ್ಥಾಪಿಸುವುದಾಗಿ ಬೊಮ್ಮಾಯಿ ಘೋಷಿಸಿದ್ದರು.

'ಹಿಜಾಬ್–ಕೇಸರಿ ಶಾಲು ವಿವಾದವು ನಾಡಿನುದ್ದಕ್ಕೂ ವ್ಯಾಪಿಸಿ, ನಾಡನ್ನು ತಲ್ಲಣಗೊಳಿಸಿದೆ. ಈ ವಿಷಯದಲ್ಲಿ ರಾಜಕೀಯ ಪಕ್ಷಗಳು ಸ್ಪಷ್ಟ ನಿಲುವು ತೆಗೆದುಕೊಂಡು ನಾಡಿನ ಸೌಹಾರ್ದ ಪರಂಪರೆ ಹಾಗೂ ತಲೆಮಾರುಗಳಿಂದ ಉಳಿದುಬಂದಿರುವ ಸಹಬಾಳ್ವೆಯನ್ನು ಕಾಪಾಡುವತ್ತ ಹೆಜ್ಜೆ ಇಡಲು ಸರ್ಕಾರ ಆಲೋಚಿಸಿದೆ. ಈ ಬಗ್ಗೆ ವಿರೋಧ ಪಕ್ಷದ ನಾಯಕರ ಜತೆಯೂ ಮೊದಲ ಹಂತದ ಚರ್ಚೆ ನಡೆದಿದೆ' ಎಂದು ಮೂಲಗಳು ಹೇಳಿವೆ.

ವ್ಯಾಪಕ ವಿರೋಧ: ಕ್ಷಮೆ ಯಾಚಿಸಿದ ಜಮೀರ್ ಅಹಮದ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹಿಜಾಬ್ ಧರಿಸದಿದ್ದರೆ ಅತ್ಯಾಚಾರಗಳು ನಡೆಯುತ್ತವೆ' ಎಂಬ ತಮ್ಮ ಹೇಳಿಕೆಗೆ ತೀವ್ರ ಆಕ್ಷೇಪ ವ್ಯಕ್ತವಾದ ಬೆನ್ನಲ್ಲೇ ಕಾಂಗ್ರೆಸ್ ಶಾಸಕ ಜಮೀರ್ ಅಹಮದ್ ಖಾನ್ ಕ್ಷಮೆ ಯಾಚಿಸಿದ್ದಾರೆ.

ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೇರಿದಂತೆ ಹಲವರು ಜಮೀರ್ ಹೇಳಿಕೆಯನ್ನು ವಿರೋಧಿಸಿದ್ದರು. ಸೋಮವಾರ ಸರಣಿ ಟ್ವೀಟ್ ಮಾಡಿರುವ ಜಮೀರ್ ಅಹಮ್ಮದ್, 'ಹೆಣ್ಣು ಮಕ್ಕಳ ಬಗೆಗಿನ ಕಾಳಜಿಯಿಂದ ನಾನು ಆ ರೀತಿ ಹೇಳಿಕೆ ನೀಡಿದ್ದೆ. ಅದರ ಹಿಂದೆ ಕೆಟ್ಟ ಉದ್ದೇಶ ಇರಲಿಲ್ಲ. ನನ್ನ ಹೇಳಿಕೆಯಿಂದ ಯಾರಿಗಾದರೂ ನೋವಾಗಿದ್ದರೆ ಕ್ಷಮೆ ಯಾಚಿಸುತ್ತೇನೆ' ಎಂದು ಹೇಳಿದ್ದಾರೆ.

ಕಪ್ಪುಪಟ್ಟಿ ಧರಿಸಿ ಕಾಂಗ್ರೆಸ್ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಸ್ಲಿಂ ವಿದ್ಯಾರ್ಥಿನಿಯರು ಹಿಜಾಬ್ ಧರಿಸಿ ತರಗತಿ ಪ್ರವೇಶಿಸದಂತೆ ನಿರ್ಬಂಧಿಸಿರುವುದು ಮತ್ತು ಕೆಂಪು ಕೋಟೆ ಮೇಲೆ ಕೇಸರಿ ಧ್ವಜ ಹಾರಿಸುವುದಾಗಿ ಸಚಿವ ಕೆ.ಎಸ್. ಈಶ್ವರಪ್ಪ ನೀಡಿರುವ ಹೇಳಿಕೆ ವಿರೋಧಿಸಿ ಕಾಂಗ್ರೆಸ್ ಸದಸ್ಯರು ತೋಳಿಗೆ ಕಪ್ಪುಪಟ್ಟಿ ಧರಿಸಿ ವಿಧಾನಮಂಡಲದ ಜಂಟಿ ಅಧಿವೇಶನದಲ್ಲಿ ಪಾಲ್ಗೊಂಡರು.

ವಿಧಾನಸಭೆಯ ಸಭಾಂಗಣದಲ್ಲಿ ಸೋಮವಾರ ನಡೆದ ಜಂಟಿ ಅಧಿವೇಶನದಲ್ಲಿ ಪಾಲ್ಗೊಂಡಿದ್ದ ಕಾಂಗ್ರೆಸ್‌ನ ಎಲ್ಲ ಸದಸ್ಯರೂ ತೋಳಿಗೆ ಕಪ್ಪು ಪಟ್ಟಿ ಧರಿಸಿದ್ದರು. ಸರ್ಕಾರದ ಧೋರಣೆಯ ವಿರುದ್ಧ ಸಾಂಕೇತಿಕವಾಗಿ ಪ್ರತಿಭಟನೆ ನಡೆಸುವುದಕ್ಕಾಗಿ ಕಪ್ಪು ಪಟ್ಟಿ ಧರಿಸಿರುವುದಾಗಿ ಕಾಂಗ್ರೆಸ್ ಸದಸ್ಯರು ತಿಳಿಸಿದರು.

ಹಿಜಾಬ್ ಧರಿಸಿದ್ದ ಫಾತಿಮಾ: ಕಲಬುರಗಿ ಉತ್ತರ ವಿಧಾನಸಭಾ ಕ್ಷೇತ್ರದ ಶಾಸಕಿ ಖನೀಜ್ ಫಾತಿಮಾ ಹಿಜಾಬ್ ಧರಿಸಿಯೇ ಕಲಾಪದಲ್ಲಿ ಪಾಲ್ಗೊಂಡಿದ್ದರು. ಶಿವಮೊಗ್ಗ ಸ್ಥಳೀಯ ಸಂಸ್ಥೆಗಳ ಕ್ಷೇತ್ರವನ್ನು ಪ್ರತಿನಿಧಿಸುವ ವಿಧಾನ ಪರಿಷತ್ ಸದಸ್ಯ ಡಿ.ಎಸ್. ಅರುಣ್ ಕೇಸರಿ ಶಾಲು ಧರಿಸಿ ಕಲಾಪದಲ್ಲಿ ಭಾಗವಹಿಸಿದರು.



ಹಿಜಾಬ್ ಧರಿಸಿ ಮುಸ್ಲಿಂ ವಿದ್ಯಾರ್ಥಿನಿಯರು ತರಗತಿ ಪ್ರವೇಶಿಸದಂತೆ ನಿರ್ಬಂಧ ವಿಧಿಸಿರುವ ಕ್ರಮವನ್ನು ವಿರೋಧಿಸಿ ವಿರೋಧ ಪಕ್ಷದ ನಾಯಕ ಬಿ.ಕೆ.ಹರಿಪ್ರಸಾದ್, ಪ್ರಕಾಶ್ ರಾಠೋಡ್ ವಿಧಾನ ಪರಿಷತ್‌ನಲ್ಲಿ ಸೋಮವಾರ ಕಪ್ಪು ಪಟ್ಟಿ ಧರಿಸಿ ಕಲಾಪದಲ್ಲಿ ಭಾಗವಹಿಸಿದ್ದರು. ಕಾಂಗ್ರೆಸ್ ಸದಸ್ಯರಾದ ಕೆ.ಗೋವಿಂದರಾಜು, ಸಿ.ಎಂ. ಲಿಂಗಪ್ಪ ಇದ್ದಾರೆ –ಪ್ರಜಾವಾಣಿ ಚಿತ್ರ

ಮೊಗಸಾಲೆ ಮಾತಿಗೆ ಕಾರಣವಾದ ಹಿಜಾಬ್–ಕೇಸರಿ ಶಾಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಮಂಡಲದ ಜಂಟಿ ಅಧಿವೇಶನದ ಮೊದಲ ದಿನವೇ (ಸೋಮವಾರ) ವಿಧಾನಸಭೆಯ ಮೊಗಸಾಲೆಯಲ್ಲಿ ಶಾಸಕರ ಮಧ್ಯೆ ಹಿಜಾಬ್– ಕೇಸರಿ ಶಾಲಿನ ವಿವಾದ ಚರ್ಚೆಗೆ ಕಾರಣವಾಗಿತ್ತು.

ಕೆಲವು ಶಾಸಕರು ಈ ವಿವಾದದ ಕಾರಣಗಳ ಬಗ್ಗೆ ತಮ್ಮದೇ ಆದ ರೀತಿಯಲ್ಲಿ ವಿಶ್ಲೇಷಣೆ ಮಾಡುವುದರ ಜತೆಗೆ ರಾಜಕೀಯ ಲಾಭ– ನಷ್ಟಗಳ ಲೆಕ್ಕಾಚಾರವನ್ನು ನಡೆಸಿದ್ದರು. ವಿಧಾನಸಭೆಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಬೇಕೆ? ಪ್ರಸ್ತಾಪಿಸಿದರೆ ಯಾವ ರೀತಿಯಲ್ಲಿ ಪ್ರಸ್ತಾಪಿಸಬೇಕು? ನೇರವಾಗಿ ಹಿಜಾಬ್ ವಿಷಯ ಪ್ರಸ್ತಾಪಿಸದೇ ಸಚಿವ ಕೆ.ಎಸ್. ಈಶ್ವರಪ್ಪ ರಾಷ್ಟ್ರಧ್ವಜ ಬಗ್ಗೆ ನೀಡಿರುವ ಹೇಳಿಕೆಯನ್ನು ಪ್ರಸ್ತಾಪಿಸುವುದು ಸೂಕ್ತ. ಇದು ದೇಶ ಘನತೆ– ಗೌರವದ ಪ್ರಶ್ನೆ ಎಂದೂ ಕಾಂಗ್ರೆಸ್‌ನ ಶಾಸಕರು ಮಾತನಾಡುತ್ತಿದ್ದರು.

ಸರ್ಕಾರದ ಕೆಟ್ಟ ನಿರ್ವಹಣೆ: ಹಿಜಾಬ್–ಕೇಸರಿ ಶಾಲು ವಿಚಾರವನ್ನು ಬಗ್ಗೆ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಕಾಂಗ್ರೆಸ್ ಶಾಸಕಾಂಗ ಪಕ್ಷದ ಉಪನಾಯಕ ಯು.ಟಿ.ಖಾದರ್, ಸರ್ಕಾರ ಈ ವಿವಾದವನ್ನು ಆರಂಭದಲ್ಲೇ ಸೌಹಾರ್ದವಾಗಿ ಬಗೆಹರಿಸಲು ಸಾಧ್ಯವಿತ್ತು. ಇದನ್ನು ಕೆಟ್ಟದಾಗಿ ನಿರ್ವಹಿಸಿತು. ಇದರಿಂದ ರಾಜ್ಯ ಮತ್ತು ದೇಶದ ಎಲ್ಲೆಡೆ ಹಬ್ಬುವಂತಾಯಿತು. ಉಡುಪಿ ಮತ್ತು ಕುಂದಾಪುರದ ಘಟನೆಗಳು ಪ್ರತ್ಯೇಕ. ಉಡುಪಿಯ ಶಾಲೆಯ ಘಟನೆಯಲ್ಲಿ ಎಸ್‌ಡಿಪಿಐ ಮತ್ತು ಸಿಎಫ್‌ಐ ಪಾತ್ರ ಇದ್ದದ್ದು ನಿಜ ಎಂದರು.

ಆದರೆ, ಕುಂದಾಪುರ ಮತ್ತು ಇತರ ಕಡೆಗಳಲ್ಲಿ ಹಿಜಾಬ್‌ಗೆ ಪ್ರತಿಯಾಗಿ ಕೇಸರಿ ಶಾಲುಗಳನ್ನು ಹಾಕಿಸಿ ಪ್ರತಿರೋಧ ವ್ಯಕ್ತಪಡಿಸಿ, ಗದ್ದಲ ಎಬ್ಬಿಸುವಲ್ಲಿ ಎಬಿವಿಪಿ ಪಾತ್ರವಿರುವುದೂ ಅಷ್ಟೇ ದಿಟ ಎಂದು ಖಾದರ್ ಹೇಳಿದರು.

ಎಡವಿ ಬಿದ್ದ ಶಾಸಕ: ವಿಧಾನಸೌಧದ ಕೆಂಗಲ್ ಗೇಟ್ ಬಳಿ ಜೆಡಿಎಸ್ ಶಾಸಕ ನಾಗನಗೌಡ ಕಂದಕೂರು ಎಡವಿ ಬಿದ್ದರು. ತಕ್ಷಣವೇ ಅವರ ಆಪ್ತ ಸಹಾಯಕ ಮೇಲೆತ್ತಿದರು.

ಹಳೇ ಸಂಪ್ರದಾಯಕ್ಕೆ ಸಾಕ್ಷಿಯಾದ ರಾಜ್ಯಪಾಲ

ವಿಧಾನಮಂಡಲದ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾತನಾಡಲು ಬಂದ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ವಿಧಾನಸೌಧದ ಮುಂಭಾಗದ ಮೆಟ್ಟಿಲುಗಳ ಮೂಲಕ ಸದನಕ್ಕೆ ಆಗಮಿಸಿದರು. ಕಳೆದ ಎರಡು ದಶಕಗಳಿಂದ ಯಾವುದೇ ರಾಜ್ಯಪಾಲರು ಈ ಸಂಪ್ರದಾಯ ಪಾಲಿಸುತ್ತಿರಲಿಲ್ಲ ಎಂದು ಸಚಿವಾಲಯದ ಮೂಲಗಳು ಹೇಳಿವೆ.

ಹಲವು ರಾಜ್ಯಪಾಲರು ವಯೋಸಹಜದ ಕಾರಣ ಮೆಟ್ಟಿ ಹತ್ತಿ ಬರುತ್ತಿರಲಿಲ್ಲ. ಲಿಫ್ಟ್ ಮೂಲಕ ಮೊದಲ ಮಹಡಿ ತಲುಪಿ ಸಭಾಂಗಣಕ್ಕೆ ಹೋಗುತ್ತಿದ್ದರು. ವಿಧಾನಸೌಧದ ಮೆಟ್ಟಿಲುಗಳ ಬಳಿ ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹಗಡೆ ಕಾಗೇರಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೂಗುಚ್ಛ ನೀಡಿ ಸ್ವಾಗತಿಸಿದರು.

'ಸಮವಸ್ತ್ರ ಬಣ್ಣದ ಹಿಜಾಬ್‌ಗೆ ಅವಕಾಶ ಕೊಡಿ'

ಒಂದನೇ ಪುಟದಿಂದ

ವಿಚಾರಣೆ ವೇಳೆ ಸುಪ್ರೀಂಕೋರ್ಟ್ ಹಿರಿಯ ವಕೀಲ ದೇವದತ್ತ ಕಾಮತ್, 'ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಪೂರಕ ವಾತಾವರಣದಲ್ಲಿ ಕಲಿಯುವಂತಾಗಬೇಕು. ಈ ನಿಟ್ಟಿನಲ್ಲಿ ಹಿಜಾಬ್ ರೀತಿಯಲ್ಲಿಯೇ ಸಮವಸ್ತ್ರದ ಬಣ್ಣದ ಅರಿವೆಯನ್ನು ತೊಟ್ಟುಕೊಂಡು ಬರಲು ನಿರ್ದೇಶನ ನೀಡಬೇಕು' ಎಂದು ನ್ಯಾಯಪೀಠಕ್ಕೆ ಅರಿಕೆ ಮಾಡಿದರು.

'ರಾಜ್ಯ ಸರ್ಕಾರ ಸಾರ್ವಜನಿಕ ಸುವ್ಯವಸ್ಥೆ, ಆರೋಗ್ಯ ಮತ್ತು ನೈತಿಕತೆಯ ಹೊರತಾಗಿ, ಧಾರ್ಮಿಕ ಆಚರಣೆಯೊಂದಿಗೆ ಸಂಬಂಧ ಹೊಂದಿರುವ ಯಾವುದೇ ಆರ್ಥಿಕ, ಹಣಕಾಸು, ರಾಜಕೀಯ ಅಥವಾ ಇತರ ಜಾತ್ಯತೀತ ಚಟುವಟಿಕೆಗಳನ್ನು ನಿರ್ಬಂಧಿಸುವ ಕಾನೂನು ರೂಪಿಸಬಹುದು. ಆದರೆ, ಕಾಲೇಜುಗಳಲ್ಲಿ ಸಮವಸ್ತ್ರ ಕಡ್ಡಾಯಕ್ಕೆ ಸಂಬಂಧಿಸಿದಂತೆ ಇದೇ 5ರಂದು ಹೊರಡಿಸಿರುವ ಆದೇಶ ಸಂಪೂರ್ಣ ಕಾನೂನುಬಾಹಿರವಾಗಿದೆ' ಎಂದರು.

'ಸಂವಿಧಾನದ 25 (2)ನೇ ವಿಧಿಯು ಧಾರ್ಮಿಕ ಆಚರಣೆ, ಆರ್ಥಿಕ, ಹಣಕಾಸು, ರಾಜಕೀಯ ಅಥವಾ ಇತರ ಜಾತ್ಯತೀತ ಚಟುವಟಿಕೆಗಳನ್ನು ನಿಯಂತ್ರಿಸಲು ಅನುಮತಿಸುತ್ತದೆ. ಆದರೆ, ಪ್ರಮುಖ ಧಾರ್ಮಿಕ ಆಚರಣೆಯನ್ನಲ್ಲ. ಮೂಲ ಧಾರ್ಮಿಕ ಆಚರಣೆಯು 25(1)ನೇ ವಿಧಿಯ ವ್ಯಾಪ್ತಿಗೆ ಸೇರುತ್ತದೆ ಮತ್ತು ಅದು ಸಾರ್ವಜನಿಕ ಸುವ್ಯವಸ್ಥೆ, ಆರೋಗ್ಯ ಮತ್ತು ನೈತಿಕತೆಗೆ ಒಳಪಟ್ಟಿರುತ್ತದೆ. ಹೀಗಾಗಿ, ಸರ್ಕಾರದ ಆದೇಶದಲ್ಲಿ ವಿವರಿಸಿರುವಂತೆ ಕಾಲೇಜು ಅಭಿವೃದ್ಧಿ ಸಮಿತಿಗೆ (ಸಿಡಿಸಿ) ಸಮವಸ್ತ್ರ ಕಡ್ಡಾಯಗೊಳಿಸುವ ಅಧಿಕಾರ ನೀಡಿರುವುದು ಕಾನೂನುಬಾಹಿರ. ಈ ಸಿಡಿಸಿಗೆ ಯಾವುದೇ ಶಾಸನಬದ್ಧ ಆಧಾರವಿಲ್ಲ. ಇಂತಹ ಸಮಿತಿ ಸಾರ್ವಜನಿಕ ಸುವ್ಯವಸ್ಥೆಯನ್ನು ನಿರ್ಬಂಧಿಸುವುದು ಸಲ್ಲ' ಎಂದು ಪ್ರತಿಪಾದಿಸಿದರು. ಕಲಾಪದ ಅವಧಿ ಮುಕ್ತಾಯವಾದ ಕಾರಣ ವಿಚಾರಣೆಯನ್ನು ಇದೇ 15ಕ್ಕೆ ಮುಂದೂಡಲಾಗಿದೆ.

ಮಾಧ್ಯಮ ನಿಯಂತ್ರಣಕ್ಕೆ ಮನವಿ

'ಇತರ ರಾಜ್ಯಗಳಲ್ಲಿ ಚುನಾವಣೆಗಳು ನಡೆಯುತ್ತಿರುವುದರಿಂದ ಈ ವಿಷಯದ ಕುರಿತು ಟಿ.ವಿ, ಪತ್ರಿಕೆ ಮತ್ತು ಸಾಮಾಜಿಕ ಮಾಧ್ಯಮಗಳ ಟೀಕೆ–ಟಿಪ್ಪಣಿಗಳನ್ನು ನಿರ್ಬಂಧಿಸಬೇಕು' ಎಂದು ಅರ್ಜಿದಾರರ ಪರ ಹಿರಿಯ ವಕೀಲ ಯೂಸುಫ್ ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯ ನ್ಯಾಯಮೂರ್ತಿಗಳು, 'ನಮಗೂ ಚುನಾವಣೆಗೂ ಸಂಬಂಧವಿಲ್ಲ. ಈ ವಿನಂತಿಯು ಚುನಾವಣಾ ಆಯೋಗದಿಂದ ಬಂದರೆ ಮಾತ್ರವೇ ನಾವು ಪರಿಗಣಿಸಬಹುದು. ಒಂದು ವೇಳೆ ಕಲಾಪದ ಲೈವ್ ಸ್ಟ್ರೀಮಿಂಗ್ ನಿಲ್ಲಿಸಬಹುದು ಎಂದು ನೀವು ಹೇಳಿದ್ದೇ ಆದರೆ ಅದನ್ನು ನಿಲ್ಲಿಸಬಹುದು. ಅದು ನಮ್ಮ ಕೈಯಲ್ಲಿದೆ. ಆದರೆ, ಮಾಧ್ಯಮವನ್ನು ತಡೆಯಲು ಸಾಧ್ಯವಿಲ್ಲ. ಆದಾಗ್ಯೂ, ನಾವು ಈಗಾಗಲೇ ಈ ಕುರಿತು ಮಾಧ್ಯಮಗಳಿಗೆ ಮನವಿ ಮಾಡಿದ್ದೇವೆ' ಎಂದರು.

ಶಾಲೆ ಶುರು: ಕೆಲವೆಡೆ ವಾಗ್ವಾದ

ಒಂದನೇ ಪುಟದಿಂದ

ಚಿಕ್ಕಮಗಳೂರು ಜಿಲ್ಲೆಯ ಆಲ್ದೂರು ಸರ್ಕಾರಿ ಪ್ರೌಢಶಾಲೆಯಲ್ಲಿ ಹಿಜಾಬ್ ತೆಗೆಯಲು ನಿರಾಕರಿಸಿ ಇಬ್ಬರು ವಿದ್ಯಾರ್ಥಿನಿಯರು ಮನೆಗೆ ವಾಪಸಾದರು. 16 ವಿದ್ಯಾರ್ಥಿಗಳು ಬಂದಿದ್ದು, 14 ವಿದ್ಯಾರ್ಥಿನಿಯರು ಹಿಜಾಬ್ ತೆಗೆದು ತರಗತಿಗೆ ಹಾಜರಾದರು.

ಉಡುಪಿಯ ಬಾಲಕಿಯರ ಪದವಿಪೂರ್ವ ಕಾಲೇಜಿನ ಪ್ರೌಢಶಾಲಾ ವಿಭಾಗದ ವಿದ್ಯಾರ್ಥಿನಿಯರು ಹಿಜಾಬ್ ತೆಗೆದಿರಿಸಿ ತರಗತಿಗೆ ಹಾಜರಾದರು. 'ಹಿಜಾಬ್ ಗೊಂದಲದಿಂದ ಪಾಠಕ್ಕೆ ಅಡ್ಡಿಯಾಗಿದೆ. ತರಗತಿ ಆರಂಭಿಸಿ' ಎಂದು ಕಾಲೇಜಿನ ವಿದ್ಯಾರ್ಥಿನಿ ಶಿಲ್ಪಾ, ಪ್ರಾಚಾರ್ಯರಿಗೆ ವಿನಂತಿಸಿದರು.

ಚಿಕ್ಕಮಗಳೂರಿನ ಉಪ್ಪಳ್ಳಿಯ ಯುನೈಟೆಡ್ ಶಾಲೆಯ ಮುಸ್ಲಿಂ ವಿದ್ಯಾರ್ಥಿನಿಯರು ಹಿಜಾಬ್ ತೆಗೆಯಲು ನಿರಾಕರಿಸಿದ್ದು, ವಾಪಸ್ ತೆರಳಿದರು. ಸೋಮವಾರ ಶಾಲೆಗೆ ರಜೆ ಘೋಷಿಸಲಾಗಿತ್ತು.

'ಶಾಲೆಯಲ್ಲಿ ಎಲ್ಲರೂ ಮುಸ್ಲಿಂ ವಿದ್ಯಾರ್ಥಿಗಳು. ಬುಧವಾರ ಪೋಷಕರ ಸಭೆ ನಡೆಸಲು ನಿರ್ಧರಿಸಿದ್ದೇವೆ. ಸಭೆಯಲ್ಲಿ ವಿಷಯವನ್ನು ಪೋಷಕರಿಗೆ ಮನದಟ್ಟು ಮಾಡುತ್ತೇವೆ' ಎಂದು ಶಾಲೆಯ ಪ್ರಾಂಶಪಾಲ ಎಂದು ಪ್ರಾಚಾರ್ಯ ಜಮೀರ್ ಅಹಮ್ಮದ್ 'ಪ್ರಜಾವಾಣಿ'ಗೆ ತಿಳಿಸಿದರು.

ಮಂಡ್ಯ, ಮೈಸೂರು, ಕೊಡಗು ಜಿಲ್ಲೆಯ ವಿವಿಧೆಡೆಯೂ ಹಿಜಾಬ್ ವಿಷಯ ವಾಗ್ವಾದಕ್ಕೆ ಕಾರಣವಾಯಿತು.

ಮೈಸೂರು ತಾಲ್ಲೂಕಿನ ಕೆ.ಆರ್. ಮಿಲ್ ಬಳಿ ಸರ್ಕಾರಿ ಪ್ರೌಢಶಾಲೆಯ 6 ಮಕ್ಕಳು, ಕೊಡಗು ಜಿಲ್ಲೆ ಸಿದ್ದಾಪುರ ಸಮೀಪದ ನೆಲ್ಯಹುದಿಕೇರಿಯ ಕರ್ನಾಟಕ ಪಬ್ಲಿಕ್ ಶಾಲೆಗೆ 31 ವಿದ್ಯಾರ್ಥಿನಿಯರಿಗೆ ಹಿಜಾಬ್ ಧರಿಸಿದ್ದಕ್ಕೆ ಶಾಲೆಗೆ ಪ್ರವೇಶ ನಿರಾಕರಿಸಿ ಮನೆಗೆ ವಾಪಸ್ ಕಳುಹಿಸಲಾಯಿತು.

ಸಿದ್ದಾಪುರದ ಇಕ್ರಾ ಪಬ್ಲಿಕ್ ಖಾಸಗಿ ಶಾಲೆಯಲ್ಲಿ ವಿದ್ಯಾರ್ಥಿನಿಯರು ಹಿಂದಿನಿಂದಲೂ ಶಿರವಸ್ತ್ರ ಧರಿಸುತ್ತಿದ್ದು, ಆಡಳಿತ ಮಂಡಳಿ ನಿರ್ಣಯ ಮಾಡಿದೆ ಎಂದು ಶಿಕ್ಷಕರು ಶಾಲೆಗೆ ಭೇಟಿ ನೀಡಿದ್ದ ತಹಶೀಲ್ದಾರ್ ಅವರಿಗೆ ಮಾಹಿತಿ ನೀಡಿದರು.

ಚಾಮರಾಜನಗರ ಜಿಲ್ಲೆಯ ಕೆಲ ಶಾಲೆಗಳಲ್ಲಿ ಕೆಲವು ವಿದ್ಯಾರ್ಥಿನಿಯರು ಹಿಜಾಬ್ ಧರಿಸಿದ್ದರೂ ಯಾರೂ ಆಕ್ಷೇಪಿಸಲಿಲ್ಲ. ಹಾಸನ ನಗರದ ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಹಿಜಾಬ್ ಧರಿಸಿದ್ದ ಮಕ್ಕಳ ಮನವೊಲಿಸಿದ ಶಿಕ್ಷಕರು ಅದನ್ನು ತೆಗೆಸಿದರು.

ಬೆಳಗಾವಿ, ಬಾಗಲಕೋಟೆ, ವಿಜಯಪುರ, ಹುಬ್ಬಳ್ಳಿ–ಧಾರವಾಡ, ಹಾವೇರಿ, ಗದಗ, ಉತ್ತರ ಕನ್ನಡ ಹಾಗೂ ವಿಜಯನಗರ ಜಿಲ್ಲೆಗಳಲ್ಲಿ ಶಾಲೆಗಳು ಸೋಮವಾರ ಶಾಂತಿಯುತವಾಗಿ ಪುನರಾರಂಭಗೊಂಡಿವೆ. ಬೆರಳೆಣಿಕೆಯಷ್ಟು ವಿದ್ಯಾರ್ಥಿನಿಯರು ಹಿಜಾಬ್ ಧರಿಸಿದ್ದರು. ಬೆಳಗಾವಿಯಲ್ಲಿ ಹಿಜಾಬ್, ಬುರ್ಖಾ ತೆಗೆಸಿ ತರಗತಿಗೆ ಪ್ರವೇಶ ನೀಡಲಾಯಿತು.

'ಬಹುತೇಕ ಕಡೆಗಳಲ್ಲಿ ಶಾಲೆಗಳಲ್ಲಿ ಹಾಜರಾತಿ ಪ್ರಮಾಣ ಸರಾಸರಿಗಿಂತ ಶೇ 25ರಷ್ಟು ಕಡಿಮೆ ಇತ್ತು' ಎಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ಮೂಲಗಳು ತಿಳಿಸಿವೆ.

ಹಿಜಾಬ್ ಧರಿಸಿದ ಶಿಕ್ಷಕಿಯರು, ವಾಗ್ವಾದ

ಕುಣಿಗಲ್: ತಾಲ್ಲೂಕಿನ ಭಕ್ತರಹಳ್ಳಿಯ ಸರ್ಕಾರಿ ಪದವಿಪೂರ್ವ ಕಾಲೇಜಿನ ಪ್ರೌಢಶಾಲಾ ವಿಭಾಗದ ಶಿಕ್ಷಕಿಯೊಬ್ಬರು ಹಿಜಾಬ್ ಧರಿಸಿ ಕರ್ತವ್ಯಕ್ಕೆ ಹಾಜರಾಗಿದ್ದು, ಗೊಂದಲಕ್ಕೆ ಕಾರಣವಾಯಿತು.

ಮುಖ್ಯಶಿಕ್ಷಕ ಮತ್ತು ಸ್ಥಳದಲ್ಲಿದ್ದ ಪೊಲೀಸರು ಹಿಜಾಬ್ ತೆಗೆಯಲು ಸೂಚಿಸಿದರು. ಶಿಕ್ಷಕಿ ಸೂಚನೆ ಧಿಕ್ಕರಿಸಿದರು. ಸ್ಥಳಕ್ಕೆ ಬಂದ ಬಿಇಒ ತಿಮ್ಮರಾಜು, ಶಿಕ್ಷಕಿಗೆ ನೋಟಿಸ್ ನೀಡಿದ್ದು, ನಂತರ ಹಿಜಾಬ್ ತೆಗೆದಿಟ್ಟು ಅವರು ಕರ್ತವ್ಯಕ್ಕೆ ತೆರಳಿದರು.ಮಂಡ್ಯ ನಗರದ ರೋಟರಿ ಶಾಲೆಯಲ್ಲಿಯೂ ಹಿಜಾಬ್, ಬುರ್ಖಾ ಧರಿಸಿ ಬಂದಿದ್ದ ಶಿಕ್ಷಕಿಯರಿಗೆ ಶಾಲೆಗೆ ಪ್ರವೇಶಿಸಲು ಅವಕಾಶ ನೀಡಲಿಲ್ಲ. ಮಂಡ್ಯದ ರೋಟರಿ ಶಾಲೆಯಲ್ಲಿ ನಾಲ್ವರು ಶಿಕ್ಷಕಿಯರು ಕೆಲಸ ಮಾಡುತ್ತಿದ್ದು ಹಿಜಾಬ್, ಬುರ್ಖಾ ತೆಗೆದು ಶಾಲೆಯ ಆವರಣ ಪ್ರವೇಶಿಸಿದರು.

'ಕೋರ್ಟ್‌ನ ಆದೇಶ ಮಕ್ಕಳಿಗೆ ಮಾತ್ರ ಎಂದು ಜಿಲ್ಲಾಧಿಕಾರಿ, ಡಿಡಿಪಿಐ ತಿಳಿಸಿದ್ದಾರೆ. ಹೀಗಾಗಿ, ಈ ಬಗ್ಗೆ ಶಿಕ್ಷಕಿಯರಿಗೆ ಒತ್ತಾಯ ಮಾಡುವುದಿಲ್ಲ' ಎಂದು ಶಾಲೆ ಆಡಳಿತ ಮಂಡಳಿ ಕಾರ್ಯದರ್ಶಿ ಕೆ.ಪ್ರಭಾಕರ್ ಸಂಜೆ ಸ್ಪಷ್ಟಪಡಿಸಿದರು.

ಹಳೆಯ ವಿಡಿಯೊ ಮೂಡಿಸಿದ ಗೊಂದಲ

ಮಂಗಳೂರಿನ ಕಾಲೇಜೊಂದರಲ್ಲಿ ಹಿಂದೂ ಹಾಗೂ ಮುಸ್ಲಿಂ ವಿದ್ಯಾರ್ಥಿಗಳ ಗುಂಪು ಘೋಷಣೆ ಕೂಗುತ್ತಿರುವ ವಿಡಿಯೊ ಜಾಲತಾಣದಲ್ಲಿ ಹರಿದಾಡಿದ್ದು, ಗೊಂದಲ ಮೂಡಿಸಿತ್ತು.

ಪೊಲೀಸ್ ಕಮಿಷನರ್ ಎನ್.ಶಶಿಕುಮಾರ್ ಅವರು, 'ಇದು, ಬೇರೆ ಯಾವುದೋ ಊರಿನ ಹಳೆಯ ವಿಡಿಯೊ. ನಗರದಲ್ಲಿ ಅಂತಹ ಯಾವುದೇ ಘಟನೆ ನಡೆದಿಲ್ಲ. ತರಗತಿಗಳು ಸುಸೂತ್ರವಾಗಿ ನಡೆದಿವೆ' ಎಂದು ಸ್ಪಷ್ಟಪಡಿಸಿದ್ದಾರೆ.

ಎಸ್ಸೆಸ್ಸೆಲ್ಸಿ ತೇರ್ಗಡೆಯಾದರಷ್ಟೇ ಕಸಾಪ ಸದಸ್ಯತ್ವ!

ಒಂದನೇ ಪುಟದಿಂದ

ರಾಜ್ಯ, ಜಿಲ್ಲಾ ಸೇರಿದಂತೆ ವಿವಿಧ ಘಟಕಗಳ ಅಧ್ಯಕ್ಷರ ಚುನಾವಣೆಗೆ ಮೊಬೈಲ್ ಆ್ಯಪ್ ಮೂಲಕ ಮತದಾನಕ್ಕೆ ಅವಕಾಶ ಕಲ್ಪಿಸುವ ಬಗ್ಗೆಯೂ ಪ್ರಸ್ತಾಪಿಸಲಾಗಿದೆ.

ಕೇಂದ್ರ ಘಟಕದ ಅಧ್ಯಕ್ಷರಿಗೆ ಅಧಿಕಾರ: ಪರಿಷತ್ತಿಗೆ ಸಿಬ್ಬಂದಿ ನೇಮಕಾತಿ ಅಧಿಕಾರವನ್ನು ಕೇಂದ್ರ ಘಟಕದ ಅಧ್ಯಕ್ಷರಿಗೆ ನೀಡುವ ಬಗ್ಗೆ ಕರಡು ಪ್ರತಿಯಲ್ಲಿ ತಿಳಿಸಲಾಗಿದೆ. ಈ ಅಧಿಕಾರ ಸದ್ಯ ಕಾರ್ಯಕಾರಿ ಸಮಿತಿಗೆ ಇದೆ. ಜಿಲ್ಲೆ, ತಾಲ್ಲೂಕು, ಹೋಬಳಿ ಕಾರ್ಯಕಾರಿ ಸಮಿತಿಯ ಪಟ್ಟಿಗೆ ಕೇಂದ್ರ ಅಧ್ಯಕ್ಷರ ಅನುಮತಿ ಪಡೆಯಬೇಕೆಂದು ತಿಳಿಸಲಾಗಿದೆ. ರಾಜ್ಯ, ಜಿಲ್ಲಾ ಸಮ್ಮೇಳನಗಳ ಅತಿಥಿಗಳ ಆಯ್ಕೆಯ ತೀರ್ಮಾನವನ್ನು ಕೇಂದ್ರ ಘಟಕದ ಅಧ್ಯಕ್ಷರಿಗೆ ನೀಡಲಾಗಿದೆ.

ಕಸಾಪ ಕೇಂದ್ರ ಘಟಕದ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲು ₹ 1 ಸಾವಿರ ಇದ್ದ ಠೇವಣಿಯನ್ನು ₹ 50 ಸಾವಿರಕ್ಕೆ ಹೆಚ್ಚಿಸುವ ಬಗ್ಗೆ ಕರಡಿನಲ್ಲಿ ತಿಳಿಸಲಾಗಿದೆ. ಜಿಲ್ಲಾ ಘಟಕದ ಅಧ್ಯಕ್ಷ ಸ್ಥಾನಕ್ಕೆ ₹ 25 ಸಾವಿರ, ತಾಲ್ಲೂಕು ಘಟಕದ ಅಧ್ಯಕ್ಷ ಸ್ಥಾನಕ್ಕೆ ₹ 10 ಸಾವಿರ ಠೇವಣಿ ಇಡಬೇಕು ಎಂದು ಹೇಳಲಾಗಿದೆ. ಒಮ್ಮೆ ಗೆದ್ದವರು ಒಂದು ಅವಧಿಗೆ ಮಾತ್ರ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಬೇಕು. ಮತ್ತೊಮ್ಮೆ ಸ್ಪರ್ಧೆ ಮಾಡುವಂತಿಲ್ಲ ಎಂದು ಶಿಫಾರಸು ಮಾಡಲಾಗಿದೆ.

ಸರ್ಕಾರಿ ಸಂಸ್ಥೆ ಪ್ರತಿನಿಧಿಗಳು ಸದಸ್ಯರು

ಈಗಿನ ಬೈ–ಲಾ ಪ್ರಕಾರ ಕಾರ್ಯಕಾರಿ ಸಮಿತಿಯಲ್ಲಿ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷರು ಹಾಗೂ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ನಿಕಟಪೂರ್ವ ಅಧ್ಯಕ್ಷರು ಇರುತ್ತಿದ್ದರು. ಆದರೆ, ತಿದ್ದುಪಡಿಯಲ್ಲಿ ಇವರಿಗೆ ಸ್ಥಾನ ನೀಡಿಲ್ಲ. ಗೌರವ ಕಾರ್ಯದರ್ಶಿ ಹುದ್ದೆಯನ್ನು ಎರಡರಿಂದ ಐದಕ್ಕೆ ಏರಿಸುವ ಹಾಗೂ ಸಂಘ–ಸಂಸ್ಥೆ ಪ್ರತಿನಿಧಿಯನ್ನೂ ಒಬ್ಬರಿಂದ ಐದು ಜನರಿಗೆ ಹೆಚ್ಚಿಸುವ ಪ್ರಸ್ತಾಪ ಮಾಡಲಾಗಿದೆ.

ಕನ್ನಡ ಸೇರಿದಂತೆ ವಿವಿಧ ವಿಶ್ವವಿದ್ಯಾಲಯಗಳ ಕುಲಪತಿಗಳು, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಮತ್ತು ಕರ್ನಾಟಕ ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು, ವಿವಿಧ ಇಲಾಖೆಗಳ ಆಯುಕ್ತರು, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕೆ ಮಹಾಸಂಸ್ಥೆ, ರಾಜ್ಯ ಸರ್ಕಾರಿ ನೌಕರರ ಸಂಘ ಹಾಗೂ ಕರ್ನಾಟಕ ವಿದ್ಯಾವರ್ಧಕ ಸಂಘಗಳ ಅಧ್ಯಕ್ಷರು ಪದನಿಮಿತ್ತ ಸದಸ್ಯರಾಗಿರುತ್ತಾರೆ ಎಂದು ಕರಡು ಪ್ರತಿಯಲ್ಲಿ ತಿಳಿಸಲಾಗಿದೆ.

ಈವರೆಗೆ ಸಂಸ್ಕೃತಿ ಇಲಾಖೆ ನಿರ್ದೇಶಕರು ಮಾತ್ರ ಸರ್ಕಾರದ ಪ್ರತಿನಿಧಿಯಾಗಿ ಇರುತ್ತಿದ್ದರು.

ನಾಡಿಗೆ ಮರಾಠ ಸಮಾಜದ ಕೊಡುಗೆ ಅಪಾರ: ಮುಖ್ಯಮಂತ್ರಿ ಬೊಮ್ಮಾಯಿ

ಗೋಸಾಯಿ ಮಠ: ಮಂಜುನಾಥ ಸ್ವಾಮೀಜಿ ಪೀಠಾರೋಹಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗವಿಪುರ ಗೋಸಾಯಿ ಮಹಾಸಂಸ್ಥಾನ ಮಠದ ನೂತನ ಪೀಠಾಧ್ಯಕ್ಷರಾಗಿ ಮಂಜುನಾಥ ಸ್ವಾಮೀಜಿ ಸೋಮವಾರ ಪೀಠಾರೋಹಣ ಮಾಡಿದರು.

ಪೀಠಾರೋಹಣದ ಅಂಗವಾಗಿ ಮಠದಲ್ಲಿ ಹೋಮ ಸೇರಿದಂತೆ ವಿವಿಧ ಧಾರ್ಮಿಕ ವಿಧಿಗಳು ನೆರವೇರಿದವು. ಬಳಿಕ ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಅವರ ಸಮ್ಮುಖದಲ್ಲಿ ಮಂಜುನಾಥ ಸ್ವಾಮೀಜಿ ಅವರಿಗೆ ಕಿರೀಟ ಧಾರಣೆ ನಡೆಯಿತು. ಇದೇ ವೇಳೆ ವಿವಿಧ ಮಠಗಳ ಸ್ವಾಮೀಜಿಗಳು ಸಾನ್ನಿಧ್ಯ ವಹಿಸಿದ್ದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, 'ಗೋಸಾಯಿ ಮಠಕ್ಕೆ ತನ್ನದೇ ಆದ ಪರಂಪರೆ ಇದೆ. ಈ ಸೌಭಾಗ್ಯ ಮರಾಠ ಸಮುದಾಯಕ್ಕೆ ಸಿಕ್ಕಿದೆ. ಮರಾಠ ಸಮಾಜವು ಇತಿಹಾಸದಲ್ಲಿ ಪ್ರಮುಖ ಪಾತ್ರ ವಹಿಸಿದೆ. ಶಿವಾಜಿ ಸ್ವಾಭಿಮಾನದ ಪ್ರತೀಕ. ಇತಿಹಾಸದ ಪುಟಗಳನ್ನು ತಿರುವಿದಾಗ ಮರಾಠ ಮಹನೀಯರ ಪಾತ್ರ ತಿಳಿಯುತ್ತದೆ' ಎಂದರು.

'ರಾಜ್ಯದಲ್ಲಿರುವ ಮರಾಠರು ಕನ್ನಡವನ್ನು ಅಚ್ಚುಕಟ್ಟಾಗಿ ಮಾತನಾಡುತ್ತಾರೆ. ಮರಾಠ ಸಮಾಜದ ಹಲವರು ಕನ್ನಡ ಪ್ರಾಧ್ಯಾಪಕರಾಗಿದ್ದಾರೆ. ನಾಡಿನ ಎಲ್ಲ ಆಗು ಹೋಗುಗಳಲ್ಲಿ ಬೆರೆತು, ತಮ್ಮದೇ ಕೊಡುಗೆ ನೀಡಿದ್ದಾರೆ. ರಾಜ್ಯದ ನೆಲ, ಜಲ ವಿಚಾರ ಬಂದಾಗ ಯಾವುದೇ ರಾಜಿ ಇಲ್ಲ. ಅದಕ್ಕೆ ಸಂಪೂರ್ಣ ಬೆಂಬಲವನ್ನು ಮರಾಠರು ಹಿಂದಿನಿಂದಲೂ ನೀಡಿದ್ದಾರೆ' ಎಂದು ತಿಳಿಸಿದರು.

'ಸಂಗೀತದ ನಂಟು ಹಾಗೂ ಮಾತೃ ಹೃದಯಿಯಾಗಿರುವ ಮಂಜುನಾಥ ಸ್ವಾಮೀಜಿ ಸಣ್ಣ ವಯಸ್ಸಿನಲ್ಲೇ ದೊಡ್ಡ ಸಾಧಕರು. ಮರಾಠ ಸಮಾಜಕ್ಕೆ ಇವರ ಅನುಭವ ಒಳ್ಳೆಯದನ್ನು ಮಾಡುತ್ತದೆ. ಅವರು ಭಗವದ್ಗೀತೆಯನ್ನು 51 ಪ್ರಕಾರಗಳಲ್ಲಿ ಹಾಡಿರುವುದು ವಿಶ್ವದಾಖಲೆ' ಎಂದು ಶ್ಲಾಘಿಸಿದರು.

'ಈ ಹಿಂದೆ ಭೂಮಿ, ಹಣ ಇದ್ದವರು ಜಗತ್ತನ್ನು ಆಳಿದರು. ಈಗ ಜ್ಞಾನ ಇದ್ದವರು ಆಳುತ್ತಿದ್ದಾರೆ. ಈ ಜ್ಞಾನದ ಶತಮಾನದತ್ತ ಮರಾಠ ಸಮುದಾಯವನ್ನು ಕೊಂಡೊಯ್ಯುವ ಅಗತ್ಯವಿದೆ. ಮರಾಠ ಸಮಾಜ ಗಟ್ಟಿಯಾದರೆ ಹಿಂದೂ ಸಮಾಜ ಗಟ್ಟಿಯಾಗುತ್ತದೆ. ಹಿಂದೂ ಸಮಾಜ ಗಟ್ಟಿಯಾದರೆ ದೇಶ ಬಲಗೊಳ್ಳುತ್ತದೆ. ಹಾಗಾಗಿ, ಒಗ್ಗಟ್ಟಿನಿಂದ ನಡೆಯಬೇಕು' ಎಂದರು.

'ಮಠದ ಅಭಿವೃದ್ಧಿ ಮತ್ತು ಆಸ್ತಿ ಸರಿಪಡಿಸುವ ಬಗ್ಗೆ ಸಚಿವರಿಗೆ ಸೂಚನೆ ನೀಡುತ್ತೇನೆ. ಸಮುದಾಯಕ್ಕೆ ಮತ್ತು ಮಠಕ್ಕೆ ಅಗತ್ಯ ಬೆಂಬಲವನ್ನು ಸರ್ಕಾರದಿಂದ ನೀಡುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ' ಎಂದು ಭರವಸೆ ನೀಡಿದರು.

ಆರ್ಟ್ ಆಫ್ ಲಿವಿಂಗ್‌ನ ಶ್ರೀ ಶ್ರೀ ರವಿಶಂಕರ್ ಗುರೂಜಿ, ಮುರುಘರಾಜೇಂದ್ರ ಸ್ವಾಮೀಜಿ, ಸಚಿವರಾದ ಆರ್.ಅಶೋಕ, ಸಿ.ಎನ್.ಅಶ್ವತ್ಥನಾರಾಯಣ, ಶಾಸಕ ಶ್ರೀಮಂತ ಪಾಟೀಲ, ಪಟ್ಟಾಭಿಷೇಕ ಮಹೋತ್ಸವ ಸಮಿತಿ ಅಧ್ಯಕ್ಷ ಪಿ.ಜಿ. ಆರ್.ಸಿಂಧ್ಯಾ ಸೇರಿದಂತೆ ಹಲವರು ಭಾಗವಹಿಸಿದ್ದರು.



ಗವಿಪುರ ಗೋಸಾಯಿ ಮಹಾಸಂಸ್ಥಾನ ಮಠ ನೂತನ ಪೀಠಾಧ್ಯಕ್ಷ ಮಂಜುನಾಥ ಸ್ವಾಮೀಜಿ ಅವರಿಗೆ ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಕಿರೀಟ ಧಾರಣೆ ಮಾಡಿದರು. ಶಿವಲಿಂಗಾನಂದ ಸ್ವಾಮೀಜಿ, ಸುಬ್ರಹ್ಮಣ್ಯ ಸ್ವಾಮೀಜಿ, ಸೌಮ್ಯನಾಥ ಸ್ವಾಮೀಜಿ, ಸೋಹಂ ಚೈತನ್ಯಪುರಿ ಸ್ವಾಮೀಜಿ ಇದ್ದಾರೆ –ಪ್ರಜಾವಾಣಿ ಚಿತ್ರ

ಪ್ರಚಾರ ಕಣ: ಟೀಕೆ, ವಾಗ್ದಾಳಿ ಸುರಿಮಳೆ

ಗೋವಾ ಮತ್ತು ಉತ್ತರಾಖಂಡದಲ್ಲಿ ಮತದಾನ ಪೂರ್ಣಗೊಂಡಿದೆ. ಆದರೆ, ಮಣಿಪುರ, ಪಂಜಾಬ್ ಮತ್ತು ಉತ್ತರ ಪ್ರದೇಶದಲ್ಲಿ ಮತದಾನ ಇನ್ನೂ ಪೂರ್ಣಗೊಂಡಿಲ್ಲ. ಪಂಜಾಬ್‌ನಲ್ಲಿ ಇದೇ 20ರಂದು ಮತದಾನ ನಡೆಯಬೇಕಿದೆ. ಉತ್ತರ ಪ್ರದೇಶದಲ್ಲಿ ಇನ್ನೂ ಐದು ಹಂತಗಳ ಮತದಾನ ಬಾಕಿ ಇದೆ. ಈ ಸಂದರ್ಭದಲ್ಲಿ, ರಾಜಕೀಯ ಪಕ್ಷಗಳ ನಾಯಕರ ಆರೋಪ ಮತ್ತು ಪ್ರತ್ಯಾರೋಪ ತೀವ್ರಗೊಂಡಿದೆ. ಚುನಾವಣಾ ಪ್ರಚಾರ ಸಭೆಗಳಲ್ಲಿ ಇತರ ಪಕ್ಷಗಳು ಮತ್ತು ಅವುಗಳ ನಾಯಕರ ವಿರುದ್ಧ ವಾಗ್ದಾಳಿಯೇ ಮುಖ್ಯವಾಗಿದೆ

‘ಕಾಂಗ್ರೆಸ್ ಜಾತಿವಾದಿ, ಬಿಜೆಪಿಯದ್ದು ಆರ್‌ಎಸ್‌ಎಸ್ ಕಾರ್ಯಸೂಚಿ’

ಒರಾಯ್ (ಉತ್ತರ ಪ್ರದೇಶ) (ಪಿಟಿಐ): 2007ರಲ್ಲಿ ಮಾಡಿದಂತೆ ರಾಜ್ಯದಲ್ಲಿ ಮತ್ತೊಮ್ಮೆ ಒಳ್ಳೆಯ ದಿನಗಳನ್ನು ತರುವುದಕ್ಕಾಗಿ ತಮ್ಮ ಪಕ್ಷವು ಪೂರ್ಣ ಶಕ್ತಿಯೊಂದಿಗೆ ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸುತ್ತಿದೆ ಎಂದು ಬಹುಜನ ಸಮಾಜ ಪಕ್ಷದ ಮುಖ್ಯಸ್ಥೆ ಮಾಯಾವತಿ ಅವರು ಹೇಳಿದ್ದಾರೆ.

ಜಲೌನ್ ಜಿಲ್ಲೆಯ ಒರಾಯ್ ಎಂಬಲ್ಲಿ ಚುನಾವಣಾ ಪ್ರಚಾರ ಸಭೆಯಲ್ಲಿ ಅವರು ಮಾತನಾಡಿದರು. ಈ ಭಾಗದಲ್ಲಿ ಇದೇ 20ರಂದು ಮೂರನೇ ಹಂತದಲ್ಲಿ ಮತದಾನ ನಡೆಯಲಿದೆ.

ಪ್ರತಿಸ್ಪರ್ಧಿ ಪಕ್ಷಗಳಾದ ಬಿಜೆಪಿ, ಎಸ್‌ಪಿ ಮತ್ತು ಕಾಂಗ್ರೆಸ್ ವಿರುದ್ಧ ಮಾಯಾವತಿ ವಾಗ್ದಾಳಿ ನಡೆಸಿದ್ದಾರೆ. ಕಾಂಗ್ರೆಸ್ ಪಕ್ಷವು ತೀವ್ರವಾಗಿ ಜಾತಿವಾದಿಯಾಗಿದೆ. ಬಿಜೆಪಿ ಬಂಡವಾಳಿಗರ ಪರವಾಗಿರುವುದರ ಜತೆಗೆ ಆರ್‌ಎಸ್‌ಎಸ್‌ನ ಸಂಕುಚಿತ ಕಾರ್ಯಸೂಚಿ ಜಾರಿಗೆ ಕೆಲಸ ಮಾಡುತ್ತಿದೆ. ಎಸ್‌ಪಿ ಆಳ್ವಿಕೆ ಇದ್ದಾಗ ಅಪರಾಧಿಗಳಿಗೆ ಮುಕ್ತ ಅವಕಾಶ ಇತ್ತು ಎಂದು ಮಾಯಾವತಿ ಆರೋಪಿಸಿದ್ದಾರೆ.

‘ಬಿಎಸ್‌ಪಿಗೆ ಮತ ಹಾಕುವ ಅಗತ್ಯ ಏನು ಎಂಬುದನ್ನು ನೀವು ಅರ್ಥ ಮಾಡಿಕೊಳ್ಳಬೇಕು. ಜನರ ಅಭಿವೃದ್ಧಿಗಾಗಿ ಬಿಎಸ್‌ಪಿ ಕೆಲಸ ಮಾಡುತ್ತದೆ. ಬಿಜೆಪಿ, ಎಸ್‌ಪಿ, ಕಾಂಗ್ರೆಸ್ ಮತ್ತು ಇತರ ಪ್ರತಿಸ್ಪರ್ಧಿ ಪಕ್ಷಗಳು ಹಾಗಲ್ಲ. ಸ್ವಾತಂತ್ರ್ಯಾನಂತರ ಕಾಂಗ್ರೆಸ್ ಪಕ್ಷವು ಕೇಂದ್ರ ಮತ್ತು ರಾಜ್ಯದಲ್ಲಿ ಹಲವು ವರ್ಷ ಆಳಿದೆ. ಆದರೆ, ಆ ಪಕ್ಷದ ಕೆಟ್ಟ ನೀತಿ ಮತ್ತು ಕೆಲಸದ ಶೈಲಿಯಿಂದಾಗಿ ಈಗ ಅಧಿಕಾರ ಕಳೆದುಕೊಂಡಿದೆ’ ಎಂದು ಹೇಳಿದರು.



ಬಿಜೆಪಿ ಆಳ್ವಿಕೆಯಲ್ಲಿ ಜನರನ್ನು ಶೋಷಿಸಲಾಗುತ್ತಿದೆ. ಜನರು ಸಾಮಾಜಿಕ ಕಿರುಕುಳಕ್ಕೆ ಒಳಗಾಗಿದ್ದಾರೆ. ಧರ್ಮದ ಹೆಸರಿನಲ್ಲಿ ಉದ್ವಿಗ್ನ ಸ್ಥಿತಿ ಮತ್ತು ದ್ವೇಷದ ವಾತಾವರಣ ಸೃಷ್ಟಿಯಾಗಿದೆ ಎಂದು ಆರೋಪಿಸಿದ್ದಾರೆ.

‘ಸಮಾಜವಾದಿ ಪಕ್ಷ ಪರಿವಾರವಾದಿ’


ಲಖನೌ: ಮುಸ್ಲಿಂ ಮಹಿಳೆಯರು ಸಂಕಷ್ಟದಲ್ಲಿದ್ದಾಗ ಬಿಜೆಪಿ ಮಾತ್ರ ಅವರಿಗೆ ನೆರವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಸೋಮವಾರ ಹೇಳಿದ್ದಾರೆ. ಈ ಮೂಲಕ ಮುಸ್ಲಿಂ ಮಹಿಳೆಯರ ಮತ ಪಡೆಯುವ ಯತ್ನ ನಡೆಸಿದ್ದಾರೆ.

ಕಾನ್ಪುರ ದೇಹಾತ್ ಜಿಲ್ಲೆಯ ಅಕ್ಬರ್‌ಪುರದಲ್ಲಿ ಅವರು ಚುನಾವಣಾ ಪ್ರಚಾರ ನಡೆಸಿದರು. ಸಮಾಜವಾದಿ ಪಕ್ಷದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

‘ಯೋಗಿ ಆದಿತ್ಯನಾಥ ಅವರು ಮತ್ತೆ ಉತ್ತರ ಪ್ರದೇಶದ ಮುಖ್ಯಮಂತ್ರಿ ಆಗಲಿದ್ದಾರೆ ಎಂಬ ಸುಳಿವನ್ನು ಮೊದಲ ಎರಡು ಹಂತಗಳ ಮತದಾನ ನೀಡಿದೆ. ಈ ಬಾರಿ ನಮಗೆ ಹೋಳಿ ಹಬ್ಬ ಬೇಗನೆ ಬರಲಿದೆ’ ಎಂದರು.

ಉತ್ತರ ಪ್ರದೇಶದಲ್ಲಿ ಎರಡನೇ ಹಂತದಲ್ಲಿ ಮತದಾನ ನಡೆದ ಸುಮಾರು 25 ಕ್ಷೇತ್ರಗಳಲ್ಲಿ ಮುಸ್ಲಿಮರ ಮತಗಳು ನಿರ್ಣಾಯಕ. ಮುಸ್ಲಿಂ ಮಹಿಳೆಯರು ‘ಮೌನವಾಗಿ’ ಬಿಜೆಪಿಗೆ ಮತ ಹಾಕಿದ್ದಾರೆ ಎಂದು ಮೋದಿ ಹೇಳಿದ್ದಾರೆ.

‘ನನ್ನ ಮುಸ್ಲಿಂ ಸೋದರಿಯರು ಮೌನವಾಗಿ ಮೋದಿಯನ್ನು ಆಶೀರ್ವದಿಸಿದ್ದಾರೆ. ಅಗತ್ಯ ಇದ್ದಾಗ ಅವರ ನೆರವಿಗೆ ಹೋದವರು ಯಾರು ಎಂಬುದು ಅವರಿಗೆ ಅರಿವಿದೆ’ ಎಂದರು. ತ್ರಿವಳಿ ತಲಾಖ್ ನಿಷೇಧ ಕಾಯ್ದೆಯನ್ನು ಪರೋಕ್ಷವಾಗಿ ಉಲ್ಲೇಖಿಸಿ ಅವರು ಹೀಗೆ ಹೇಳಿದ್ದಾರೆ. ಸಮಾಜವಾದಿ ಪಕ್ಷವನ್ನು ‘ಪರಿವಾರವಾದಿ’ ಎಂದು ಟೀಕಿಸಿದರು.




ಈ ಜನರು ಪ್ರತೀ ಚುನಾವಣೆಯಲ್ಲಿಯೂ ಬೇರೊಬ್ಬರ ಹೆಗಲ ಮೇಲೆ ಕೂತು ಗೆಲ್ಲಲು ಯತ್ನಿಸುತ್ತಾರೆ. ಚುನಾವಣೆ ಬಳಿಕ ಆ ಪಕ್ಷವನ್ನು ಬದಿಗೆ ತಳ್ಳುತ್ತಾರೆ ಎಂದು ಮೋದಿ ಹೇಳಿದರು. 2017ರ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಎಸ್‌ಪಿ, ಕಾಂಗ್ರೆಸ್ ಜತೆಗೆ ಮೈತ್ರಿ ಮಾಡಿಕೊಂಡಿತ್ತು. 2019ರ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಬಿಎಸ್‌ಪಿ ಜತೆಗೆ ಎಸ್‌ಪಿ ಮೈತ್ರಿ ಮಾಡಿಕೊಂಡಿತ್ತು.

ಚನ್ನಿಗೆ ದುಃಸ್ವಪ್ನ: ಕೇಜ್ರಿವಾಲ್

ಚಂಡೀಗಡ (ಪಿಟಿಐ): ತಾವು ಮತ್ತು ತಮ್ಮ ಪಕ್ಷದ ಪಂಜಾಬ್ ಮುಖ್ಯಮಂತ್ರಿ ಅಭ್ಯರ್ಥಿ ಭಗವಂತ ಮಾನ್ ಅವರನ್ನು ಗುರಿಯಾಗಿಸಿ ಪ್ರತಿಸ್ಪರ್ಧಿ ಪಕ್ಷಗಳು ವಾಗ್ದಾಳಿ ನಡೆಸುತ್ತಿವೆ. ಏಕೆಂದರೆ, ಪಂಜಾಬ್‌ನಲ್ಲಿ ಪ್ರಾಮಾಣಿಕ ಪಕ್ಷವು ಅಧಿಕಾರಕ್ಕೆ ಏರುವುದು ಈ ಪಕ್ಷಗಳಿಗೆ ಇಷ್ಟವಿಲ್ಲ ಎಂದು ಎಎಪಿ ಮುಖ್ಯಸ್ಥ ಅರವಿಂದ ಕೇಜ್ರಿವಾಲ್ ಹೇಳಿದ್ದಾರೆ.

ಪಂಜಾಬ್‌ನ ಶಾಲೆಗಳು ಮತ್ತು ಆಸ್ಪತ್ರೆಗಳ ಸ್ಥಿತಿಗತಿಯನ್ನು ಉತ್ತಮಪಡಿಸುವುದು, ಜನರಿಗೆ ಉದ್ಯೋಗ ಕೊಡುವುದರ ಕುರಿತು ಮಾತನಾಡಿದ್ದಷ್ಟೇ ತಮ್ಮ ಪಕ್ಷ ಮತ್ತು ಪಕ್ಷದ ನಾಯಕರು ಮಾಡಿದ ತಪ್ಪು ಎಂದು ಕೇಜ್ರಿವಾಲ್ ಹೇಳಿದ್ದಾರೆ. ಪಂಜಾಬ್ ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಅವರಿಗೆ ದುಃಸ್ವಪ್ನ ಬೀಳಲು ಆರಂಭವಾಗಿದೆ. ಅವರಿಗೆ ಈಗ ನಿದ್ದೆ ಬರುತ್ತಿಲ್ಲ ಎಂದು ವ್ಯಂಗ್ಯವಾಡಿದ್ದಾರೆ.

ರಾಜ್ಯದೊಳಕ್ಕೆ ಡ್ರಗ್ಸ್ ಹರಿದು ಬರಲು ಭ್ರಷ್ಟಾಚಾರವೇ ಕಾರಣ. ಎಎಪಿ ಅಧಿಕಾರಕ್ಕೆ ಬಂದರೆ ಇವೆಲ್ಲವೂ ನಿಂತು ಹೋಗುತ್ತದೆ ಎಂದು ಅವರು ಭರವಸೆ ಕೊಟ್ಟಿದ್ದಾರೆ.



‘ಕಳೆದ ಕೆಲವು ದಿನಗಳಿಂದ ಎಲ್ಲ ಪಕ್ಷಗಳ ಮುಖಂಡರು ನನ್ನನ್ನು ಮತ್ತು ಮಾನ್ ಅವರನ್ನು ಟೀಕಿಸುತ್ತಿದ್ದಾರೆ. ಪಂಜಾಬ್‌ಗೆ ಬಂದಿದ್ದ ಅಮಿತ್ ಶಾ (ಕೇಂದ್ರ ಗೃಹ ಸಚಿವ) ಕೂಡ ನನ್ನನ್ನು ಮತ್ತು ಎಎಪಿಯನ್ನು ಟೀಕಿಸಿದ್ದನ್ನು ನೀವು ಗಮನಿಸಿರಬಹುದು’ ಎಂದು ಅಮೃತಸರದಲ್ಲಿ ಮಾಧ್ಯಮಗೋಷ್ಠಿ ಉದ್ದೇಶಿಸಿ ಕೇಜ್ರಿವಾಲ್ ಹೇಳಿದ್ದಾರೆ.

ಚನ್ನಿ ಅವರು ತಡ ರಾತ್ರಿಯವರೆಗೂ ನನ್ನನ್ನು ಮತ್ತು ಮಾನ್ ಅವರನ್ನು ಟೀಕಿಸುತ್ತಾರೆ. ಆದರೆ, ಅವರು ಸುಖಬೀರ್ ಸಿಂಗ್ ಬಾದಲ್ (ಶಿರೋಮಣಿ ಅಕಾಲಿ ದಳ ಅಧ್ಯಕ್ಷ) ಹೆಸರೇ ಎತ್ತುವುದಿಲ್ಲ ಎಂದರು.

ಸಂವಿಧಾನ ಪ್ರಕಾರ ಆಳ್ವಿಕೆ, ಶರೀಯತ್ ಪ್ರಕಾರ ಅಲ್ಲ: ಯೋಗಿ

ಲಖನೌ: ಭಾರತದ ಆಡಳಿತವು ಸಂವಿಧಾನ ಪ್ರಕಾರ ನಡೆಯುತ್ತದೆಯೇ ಹೊರತು ಶರೀಯತ್ ಪ್ರಕಾರ ಅಲ್ಲ ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಹೇಳಿದ್ದಾರೆ. ಹಿಜಾಬ್ ಧರಿಸಿದ ಹೆಣ್ಣು ಮಗಳು ಮುಂದೊಂದು ದಿನ ಈ ದೇಶದ ಪ್ರಧಾನಿ ಆಗಲಿದ್ದಾಳೆ ಎಂದು ಎಐಎಂಐಎಂ ಮುಖ್ಯಸ್ಥ ಅಸಾದುದ್ದೀನ್ ಒವೈಸಿ ಹೇಳಿಕೆಗೆ ಆದಿತ್ಯನಾಥ ಹೀಗೆ ಪ್ರತಿಕ್ರಿಯೆ ನೀಡಿದ್ದಾರೆ ಎನ್ನಲಾಗಿದೆ. ‘ತಾಲಿಬಾನ್ ಮನಸ್ಥಿತಿಯ ಧರ್ಮಾಂಧರು ಭಾರತವನ್ನು ಗೆಲ್ಲುವ ಬಗ್ಗೆ ಯೋಚನೆ ಮಾಡುತ್ತಿದ್ದಾರೆ. ಅವರು ಇಲ್ಲಿ ಇರಲಿ, ಬಿಡಲಿ, ಈ ದೇಶವು ಸಂವಿಧಾನಕ್ಕೆ ಅನುಗುಣವಾಗಿ ನಡೆಯುತ್ತದೆಯೇ ಹೊರತು ಶರೀಯತ್‌ಗೆ ಅನುಗುಣವಾಗಿ ಅಲ್ಲ ಎಂಬುದನ್ನು ಅವರು ಅರ್ಥ ಮಾಡಿಕೊಳ್ಳಬೇಕು’ ಎಂದು ಆದಿತ್ಯನಾಥ ಹೇಳಿದ್ದಾರೆ. ಎರಡನೇ ಹಂತದಲ್ಲಿ ಮತದಾನ ನಡೆದ ಹಲವು ಕ್ಷೇತ್ರಗಳಲ್ಲಿ ಮುಸ್ಲಿಂ ಮತದಾರರು ನಿರ್ಣಾಯಕ ಆಗಿದ್ದಾರೆ. ಹಾಗಾಗಿ, ಆದಿತ್ಯನಾಥ ಅವರು ಮತದಾನದ ದಿನವೇ ನೀಡಿದ ಹೇಳಿಕೆಯು ಮಹತ್ವ ಪಡೆದಿದೆ.



ನಿರುದ್ಯೋಗ, ಕಪ್ಪುಹಣ ಕುರಿತು ಮೋದಿ ಏಕೆ ಏನೂ ಹೇಳುತ್ತಿಲ್ಲ: ರಾಹುಲ್

ಹೋಷಿಯಾರ್‌ಪುರ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಚುನಾವಣಾ ಪ್ರಚಾರ ಭಾಷಣಗಳಲ್ಲಿ ನಿರುದ್ಯೋಗ ಮತ್ತು ಕಪ್ಪು ಹಣದ ಬಗ್ಗೆ ಮಾತೇ ಆಡುವುದಿಲ್ಲ ಎಂದು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಟೀಕಿಸಿದ್ದಾರೆ.

ನೋಟು ರದ್ದತಿ ಮತ್ತು ಜಿಎಸ್‌ಟಿಯಿಂದ ಇಬ್ಬರು–ಮೂವರು ಅತಿಶ್ರೀಮಂತರಿಗೆ ಮಾತ್ರ ಅನುಕೂಲ ಆಗಿದೆ ಎಂದು ಚುನಾವಣಾ ರ್‍ಯಾಲಿ ಉದ್ದೇಶಿಸಿ ಮಾತನಾಡಿದ ರಾಹುಲ್ ಹೇಳಿದರು.

ದೇಶದ ಪ್ರತಿಯೊಂದು ರಾಜ್ಯದಲ್ಲಿಯೂ ನಿರುದ್ಯೋಗ ಹೆಚ್ಚುತ್ತಿದೆ. ನೋಟು ರದ್ದತಿಯು ಕಪ್ಪುಹಣದ ವಿರುದ್ಧದ ಹೋರಾಟದ ಭಾಗ ಎಂದು ಮೋದಿ ಹೇಳಿದ್ದರು. ಆದರೆ, ಸಣ್ಣ ವರ್ತಕರು ಮತ್ತು ರೈತರ ಜೇಬಿನಲ್ಲಿದ್ದ ಹಣವನ್ನು ನೋಟು ರದ್ದತಿ ಮಾಯ ಮಾಡಿತು. ಪ್ರತಿಯೊಬ್ಬರ ಬ್ಯಾಂಕ್ ಖಾತೆಗೆ ₹ 15 ಲಕ್ಷ ವರ್ಗಾಯಿಸುವುದಾಗಿಯೂ ಮೋದಿ ಹೇಳಿದ್ದರು. ಯುವಜನರಿಗೆ ಎರಡು ಕೋಟಿ ಉದ್ಯೋಗ ಸೃಷ್ಟಿಸುವುದಾಗಿಯೂ ಅವರು ಭರವಸೆ ಕೊಟ್ಟಿದ್ದರು. ಆದರೆ, ಮೋದಿ ಅವರು ಕಪ್ಪು ಹಣ ಮತ್ತು ನಿರುದ್ಯೋಗದ ಬಗ್ಗೆ ಈಗ ಏಕೆ ಮಾತನಾಡುತ್ತಿಲ್ಲ ಎಂದು ರಾಹುಲ್ ಪ್ರಶ್ನಿಸಿದ್ದಾರೆ. ಎಎಪಿಗೆ ಪಂಜಾಬ್ ಅರ್ಥವೇ ಆಗುವುದಿಲ್ಲ. ಈ ಪಕ್ಷವು ರಾಜ್ಯವನ್ನು ಸರಿಯಾಗಿ ನೋಡಿಕೊಳ್ಳುವುದು ಸಾಧ್ಯವಿಲ್ಲ. ಕಾಂಗ್ರೆಸ್‌ಗೆ ಮಾತ್ರ ಪಂಜಾಬ್ ಅನ್ನು ಅರ್ಥ ಮಾಡಿಕೊಳ್ಳಲು ಸಾಧ್ಯ ಎಂದರು.

‘ನಮ್ಮ ಸರ್ಕಾರವು ಒಂದಿಬ್ಬರು ಶ್ರೀಮಂತರಿಗೆ ಮಾತ್ರ ಸೇರಿದ್ದಲ್ಲ. ನಮ್ಮ ಸರ್ಕಾರವು ಒಂದಿಬ್ಬರು ಶ್ರೀಮಂತರ ಪರವಾಗಿ ಇದ್ದಿದ್ದರೆ ಕೃಷಿ ಕಾಯ್ದೆಗಳ ವಿರುದ್ಧ ನಿಲ್ಲುವುದು ಸಾಧ್ಯವಿರಲಿಲ್ಲ. ನಮ್ಮ ಸರ್ಕಾರ ರೈತರ ಪರ ಇದೆ, ಹಾಗಾಗಿ ರೈತರ ಜತೆಗೆ ನಿಂತಿದೆ’ ಎಂದರು.



ದೇಗುಲ ಭೇಟಿಗೆ ಸಿಗದ ಅವಕಾಶ: ಮೋದಿ ಬೇಸರ

ಜಲಂಧರ್ (ಪಿಟಿಐ): ಪಂಜಾಬ್‌ನ ಜಲಂಧರ್‌ನಲ್ಲಿ ಸ್ಥಳೀಯ ಅಧಿಕಾರಿಗಳು ಸೂಕ್ತ ವ್ಯವಸ್ಥೆ ಕಲ್ಪಿಸದ ಕಾರಣ, ದೇವಾಲಯಕ್ಕೆ ಭೇಟಿ ನೀಡಲು ಸಾಧ್ಯವಾಗಲಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರ ಹೇಳಿದ್ದಾರೆ.

ಇದು ಪಂಜಾಬ್ ಸರ್ಕಾರದ ಸ್ಥಿತಿಯನ್ನು ಬಿಂಬಿಸುತ್ತದೆ ಎಂದಿರುವ ಪ್ರಧಾನಿ, ಮತ್ತೊಮ್ಮೆ ಜಲಂಧರ್‌ಗೆ ತೆರಳಿ, ದೇವಿ ತಲಾಬ್ ಮಂದಿರಕ್ಕೆ ಭೇಟಿ ನೀಡುತ್ತೇನೆ ಎಂದು ಹೇಳಿದ್ದಾರೆ.

ಭದ್ರತಾ ಲೋಪದಿಂದಾಗಿ ಕಳೆದ ತಿಂಗಳು ಯಾವುದೇ ಕಾರ್ಯಕ್ರಮದಲ್ಲಿ ಭಾಗಿಯಾಗದೇ ವಾಪಸಾಗಿದ್ದ ಅವರು, ಜನವರಿ 5ರ ಬಳಿಕ ಮೊದಲ ಬಾರಿಗೆ ರಾಜ್ಯಕ್ಕೆ ಭೇಟಿ ನೀಡಿದ್ದಾರೆ.

‘ಯುವರಾಜನಿಂದ ಹೆಲಿಕಾಪ್ಟರ್‌ಗೆ ತಡೆ’: ‘2014ರ ಲೋಕಸಭಾ ಚುನಾವಣೆ ಪ್ರಚಾರಕ್ಕಾಗಿ ನಾನು ಪಠಾಣ್‌ಕೋಟ್‌ಗೆ ಹೋಗಿದ್ದೆ. ಆಗ ಕಾಂಗ್ರೆಸ್‌ನ ಯುವರಾಜ, ಅದೂ ಅವರೊಬ್ಬ ಸಂಸದರಾಗಿದ್ದರಷ್ಟೆ. ಅವರ ಓಡಾಟಕ್ಕಾಗಿ ನನ್ನ ಹೆಲಿಕಾಪ್ಟರ್‌ನ ಹಾರಾಟಕ್ಕೆ ತಡೆ ನೀಡಲಾಗಿತ್ತು’ ಎಂದು ಮೋದಿ ಆರೋಪಿಸಿದ್ದಾರೆ.

‘ಹೋಷಿಯಾರ್‌ಪುರದಲ್ಲಿ ರಾಹುಲ್ ಗಾಂಧಿ ಅವರ ರ್‍ಯಾಲಿಯಲ್ಲಿ ನಾನು ಭಾಗಿಯಾಗಬೇಕಿತ್ತು. ಅಲ್ಲಿಗೆ ವಿಮಾನದಲ್ಲಿ ಹೋಗಲು ನನಗೆ ಅನುಮತಿ ನೀಡಲಾಗಿತ್ತು. ಆದರೆ, ಕೊನೆಯ ಕ್ಷಣದಲ್ಲಿ ಪ್ರಧಾನಿ ಬರುತ್ತಾರೆ ಎಂದು ಅನುಮತಿ ನಿರಾಕರಿಸಲಾಯಿತು’ ಎಂದು ಪಂಜಾಬ್ ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಹೇಳಿದ್ದಾರೆ.

ಚುನಾವಣಾ ಕಣದಲ್ಲಿ...

- **ಸೋನಿಯಾ ಪ್ರಚಾರ ಇಲ್ಲ:** ಉತ್ತರ ಪ್ರದೇಶದಲ್ಲಿ ಮಾರ್ಚ್ 3ರಂದು ನಡೆಯಲಿರುವ ಮೂರನೇ ಹಂತದ ತಾರಾ ಪ್ರಚಾರಕರ ಪಟ್ಟಿಯಲ್ಲಿ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಹೆಸರು ಇಲ್ಲ. ಕೆಲವು ರಾಜ್ಯಗಳ ತಾರಾಪ್ರಚಾರಕರ ಪಟ್ಟಿಯಲ್ಲಿ ಸೋನಿಯಾ ಹೆಸರು ಇದೆ. ಆದರೆ, ಈ ವರೆಗೆ ಅವರು ಎಲ್ಲಿಯೂ ಪ್ರಚಾರ ಮಾಡಿಲ್ಲ. ಲೋಕಸಭೆಯಲ್ಲಿ ಅವರು ಪ್ರತಿನಿಧಿಸುವ ರಾಯಬರೇಲಿ ವ್ಯಾಪ್ತಿಯ ಕ್ಷೇತ್ರಗಳಿಗೂ ಅವರು ತಾರಾ ಪ್ರಚಾರಕಿ ಅಲ್ಲ.
- **ಟ್ಯಾಬ್ಲೆಟ್ ವಿತರಣೆ:** ಕನೌಜ್‌ನ ಪಿಎಸ್‌ಎಂ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಟ್ಯಾಬ್ಲೆಟ್ ವಿತರಿಸಲಾಗಿದೆ. ಇದು ಮಾದರಿ ನೀತಿ ಸಂಹಿತೆಯ ಉಲ್ಲಂಘನೆ ಎಂದು ಸಮಾಜವಾದಿ ಪಕ್ಷವು ಆರೋಪಿಸಿದೆ. ನೂರಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಟ್ಯಾಬ್ಲೆಟ್ ವಿತರಿಸಲಾಗಿದೆ ಎಂದು ಪಕ್ಷವು ಹೇಳಿದೆ. ಆದರೆ, ಚುನಾವಣಾ ಆಯೋಗದ ಅನುಮತಿ ಪಡೆದೇ ಟ್ಯಾಬ್ಲೆಟ್ ವಿತರಿಸಲಾಗಿದೆ ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಗಜೇಂದ್ರ ಕುಮಾರ್ ಹೇಳಿದ್ದಾರೆ.

ಗೋವಾ, ಉತ್ತರಾಖಂಡ ಶಾಂತಿಯುತ ಮತದಾನ

ನವದೆಹಲಿ (ಪಿಟಿಐ): ಗೋವಾ, ಉತ್ತರಾಖಂಡ ಮತ್ತು ಉತ್ತರ ಪ್ರದೇಶ ವಿಧಾನಸಭಾ ಕ್ಷೇತ್ರಗಳಿಗೆ ಸೋಮವಾರ ನಡೆದ ಮತದಾನ ಬಹುತೇಕ ಶಾಂತಿಯುತವಾಗಿತ್ತು. ಉತ್ತರ ಪ್ರದೇಶದ 55 ವಿಧಾನಸಭಾ ಕ್ಷೇತ್ರಗಳಿಗೆ ನಡೆದ ಎರಡನೇ ಹಂತದ ಮತದಾನದಲ್ಲಿ ಸಂಜೆ 5 ಗಂಟೆಯವರೆಗೆ ಶೇ 60ರಷ್ಟು ಮತದಾನ ಆಗಿದೆ. 70 ಸದಸ್ಯಬಲದ ಉತ್ತರಾಖಂಡದಲ್ಲಿ ಸಂಜೆ 5 ಗಂಟೆಯವರೆಗೆ ಶೇ 59ರಷ್ಟು ಜನರು ಮತ ಚಲಾಯಿಸಿದ್ದಾರೆ. ಗೋವಾದಲ್ಲಿ ಮಧ್ಯಾಹ್ನ 3 ಗಂಟೆಯವರೆಗೆ ಶೇ 60ರಷ್ಟು ಮತದಾನ ದಾಖಲಾಗಿತ್ತು. ಗೋವಾ, ಉತ್ತರಾಖಂಡದಲ್ಲಿ ಒಂದೇ ಹಂತದಲ್ಲಿ ಮತದಾನ ನಡೆಯಿತು.

ಪಶ್ಚಿಮ ಬಂಗಾಳದ ಮೇಲೆ ಮಮತಾ ಹಿಡಿತ ಇನ್ನಷ್ಟು ಬಿಗಿ

ನಗರಪಾಲಿಕೆ ಚುನಾವಣೆ: ಟಿಎಂಸಿ ಜಯಭೇರಿ

ಪ್ರಜಾವಾಣಿ ವಾರ್ತೆ

ಕೋಲ್ಕತ್ತ: ಪಶ್ಚಿಮ ಬಂಗಾಳದ ನಾಲ್ಕು ನಗರಪಾಲಿಕೆಗಳಿಗೆ ನಡೆದ ಚುನಾವಣೆಯಲ್ಲಿ ಆಡಳಿತಾರೂಢ ತೃಣಮೂಲ ಕಾಂಗ್ರೆಸ್ ಪಕ್ಷವು (ಟಿಎಂಸಿ) ಜಯಭೇರಿ ಬಾರಿಸಿದೆ. ಫೆಬ್ರುವರಿ 12ರಂದು ಮತದಾನ ನಡೆದಿದ್ದ ಬುದ್ಧನಗರ, ಚಂದ್ರನಾಗೋರ್, ಸಿಲಿಗುರಿ ಮತ್ತು ಅಸನ್‌ಸೋಲ್ ಪಾಲಿಕೆಗಳನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿದೆ.

ಈ ನಾಲ್ಕು ನಗರಪಾಲಿಕೆಗಳ ಒಟ್ಟು 226 ವಾರ್ಡ್‌ಗಳ ಪೈಕಿ ಟಿಎಂಸಿ 198 ರಲ್ಲಿ ಗೆಲುವು ದಾಖಲಿಸಿದ್ದು, ಸ್ಥಳೀಯ ಸಂಸ್ಥೆಗಳ ಮೇಲೆ ಪಕ್ಷ ಪ್ರಾಬಲ್ಯ ಸಾಧಿಸಿದೆ. ಪ್ರತಿಪಕ್ಷಗಳಾದ ಬಿಜೆಪಿ ಹಾಗೂ ಸಿಪಿಎಂ ತಲಾ 12 ಸ್ಥಾನಗಳಲ್ಲಿ ಗೆದ್ದಿವೆ.

ಬುದ್ಧನಗರ ಹಾಗೂ ಚಂದ್ರನಾಗೋರ್ ಪಾಲಿಕೆಗಳಲ್ಲಿ ಎಡಪಕ್ಷಗಳು ಎರಡನೇ ಸ್ಥಾನ ಗಳಿಸಿವೆ. ಎಡಪಕ್ಷಗಳ ಭದ್ರಕೋಟೆ ಎನಿಸಿರುವ ಸಿಲಿಗುರಿಯಲ್ಲಿ ಟಿಎಂಸಿ ಶೇ 47.24ರಷ್ಟು ಮತಗಳನ್ನು ಬುಟ್ಟಿಗೆ ಹಾಕಿಕೊಂಡಿದೆ. ಬಿಜೆಪಿ ಶೇ 23.24 ಹಾಗೂ ಎಡಪಕ್ಷಗಳು ಶೇ 18.28ರಷ್ಟು ಮತಗಳನ್ನು ಗಳಿಸಲಷ್ಟೇ ಸಾಧ್ಯವಾಗಿದೆ. ಇಲ್ಲಿ ಕಾಂಗ್ರೆಸ್ ಪಾಲು ಶೇ 5.31ರಷ್ಟು ಮಾತ್ರ.

2019ರ ಲೋಕಸಭಾ ಚುನಾವಣೆಯಲ್ಲಿ ರಾಜ್ಯದ 42 ಕ್ಷೇತ್ರಗಳ ಪೈಕಿ 18ರಲ್ಲಿ ಗೆದ್ದಿದ್ದ ಬಿಜೆಪಿ ಉತ್ತಮ ಸಾಧನೆ ಮಾಡಿತ್ತು. ಬಿಜೆಪಿಗೆ ಶೇ 41ರಷ್ಟು ಮತಗಳು ಸಿಕ್ಕಿದ್ದವು. ವಿಧಾನಸಭಾ ಚುನಾವಣೆಯಲ್ಲೂ 77 ಕ್ಷೇತ್ರಗಳನ್ನು ಗೆದ್ದುಕೊಂಡಿತ್ತು. ಶೇ 38ರಷ್ಟು ಮತಗಳು ಬಿಜೆಪಿಗೆ ಬಂದಿದ್ದವು. ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಎಡಪಕ್ಷಗಳು ಫಲಿತಾಂಶವನ್ನು ಉತ್ತಮಪಡಿಸಿಕೊಂಡಿದ್ದರೂ, ಮತ ಪ್ರಮಾಣದಲ್ಲಿ ಬಿಜೆಪಿಯ ಸನಿಹಕ್ಕೆ ಬರಲು ಸಾಧ್ಯವಾಗಿಲ್ಲ.

ತೃಣಮೂಲ ಕಾಂಗ್ರೆಸ್ ಪಕ್ಷದ ಸಂಘಟಿತ ಹೋರಾಟ ಹಾಗೂ ಸಮನ್ವಯದಿಂದ ಈ ಗೆಲುವು ಸಾಧ್ಯವಾಗಿದೆ ಎಂದು ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ. ಪುರಸಭೆ ಚುನಾವಣೆಗಳು ಮುಕ್ತ ಮತ್ತು ನ್ಯಾಯಸಮ್ಮತವಾಗಿ ನಡೆದಿಲ್ಲ ಎಂದು ಬಿಜೆಪಿ ಆರೋಪಿಸಿದೆ. ಕೆಲವು ಕಡೆಗಳಲ್ಲಿ ಮರು ಮತದಾನಕ್ಕೆ ಪಕ್ಷ ಆಗ್ರಹಿಸಿದೆ.



ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ತೃಣಮೂಲ ಕಾಂಗ್ರೆಸ್ ಜಯಭೇರಿ ಬಾರಿಸಿದ ಬಳಿಕ ಪಕ್ಷದ ಕಾರ್ಯಕರ್ತರು ಕೋಲ್ಕತ್ತದಲ್ಲಿ ಸೋಮವಾರ ಸಂಭ್ರಮಾಚರಣೆ ಮಾಡಿದರು–ಪಿಟಿಐ ಚಿತ್ರ

> ಇದು ತಾಯಿ, ತಾಯಿನಾಡು ಹಾಗೂ ಜನರಿಗೆ ಸಿಕ್ಕ ಗೆಲುವು. ತೃಣಮೂಲ ಕಾಂಗ್ರೆಸ್ ಮೇಲೆ ಜನರು ಇಟ್ಟಿರುವ ವಿಶ್ವಾಸಕ್ಕೆ ಧನ್ಯವಾದ
>
> **ಮಮತಾ ಬ್ಯಾನರ್ಜಿ,** ಟಿಎಂಸಿ ಮುಖ್ಯಸ್ಥೆ

ಕಾಂಗ್ರೆಸ್‌ಮುಕ್ತ ಒಕ್ಕೂಟಕ್ಕೆ ಮಮತಾ ಯತ್ನ

ಕೋಲ್ಕತ್ತ (ಪಿಟಿಐ): ‘ದೇಶದ ಯಾವ ಪ್ರಾದೇಶಿಕ ಪಕ್ಷದ ಜತೆಗೂ ಕಾಂಗ್ರೆಸ್‌ಗೆ ಉತ್ತಮ ಸಂಬಂಧವಿಲ್ಲ. ಹೀಗಾಗಿ ಕಾಂಗ್ರೆಸ್ ತನ್ನ ದಾರಿ ತಾನು ನೋಡಿಕೊಳ್ಳಬಹುದು. ನಾವು ನಮ್ಮ ದಾರಿ ನೋಡಿಕೊಳ್ಳುತ್ತೇವೆ’ ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮತ್ತು ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಹೇಳಿದ್ದಾರೆ. ಕಾಂಗ್ರೆಸ್ ಪಕ್ಷವನ್ನು ಹೊರಗಿಟ್ಟು ಬಿಜೆಪಿ ವಿರೋಧಿ ಮೈತ್ರಿಕೂಟ ರಚಿಸುವ ಸಂಬಂಧ ತೆಲಂಗಾಣ ಮುಖ್ಯಮಂತ್ರಿ ಕೆ.ಸಿ.ರಾವ್ ಮತ್ತು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಜತೆ ಮಮತಾ ಭಾನುವಾರವಷ್ಟೇ ಮಾತುಕತೆ ನಡೆಸಿದ್ದರು. ಅದರ ಮರುದಿನವೇ ಅವರು ಹೀಗೆ ಹೇಳಿದ್ದಾರೆ.



ಮಮತಾ ಬ್ಯಾನರ್ಜಿ

ಪಶ್ಚಿಮ ಬಂಗಾಳದ ನಾಲ್ಕು ನಗರಪಾಲಿಕೆಗಳಲ್ಲಿ ಟಿಎಂಸಿಯು ಹೆಚ್ಚಿನ ಸಂಖ್ಯೆಯಲ್ಲಿ ಆರಿಸಿ ಬಂದ ನಂತರ ನಡೆಸಿದ ಮಾಧ್ಯಮಗೋಷ್ಠಿಯಲ್ಲಿ ಮಮತಾ ಈ ಮಾತು ಹೇಳಿದ್ದಾರೆ.

‘ದೇಶದ ಒಕ್ಕೂಟ ವ್ಯವಸ್ಥೆ ಅಪಾಯದಲ್ಲಿದೆ. ಬಿಜೆಪಿ ಒಕ್ಕೂಟ ವ್ಯವಸ್ಥೆಯನ್ನು ಹತ್ತಿಕ್ಕುತ್ತಿದೆ. ಸಂವಿಧಾನಕ್ಕೆ ಧಕ್ಕೆ ತರುತ್ತಿದೆ. ನಾವೆಲ್ಲರೂ ಒಟ್ಟಾಗಿ ಇದರ ವಿರುದ್ಧ ಹೋರಾಡಬೇಕಿದೆ. ಬಿಜೆಪಿ ವಿರುದ್ಧದ ಹೋರಾಟದಲ್ಲಿ ನಮಗೆ ಜತೆಯಾಗುವಂತೆ ಕಾಂಗ್ರೆಸ್ ಮತ್ತು ಎಡಪಕ್ಷಗಳನ್ನು ಕೇಳಿಕೊಳ್ಳಲಾಗಿತ್ತು. ಅವು ತಮ್ಮನ್ನು ತಾವು ಜಾತ್ಯತೀತ ಪಕ್ಷಗಳು ಎಂದು ಕರೆದುಕೊಳ್ಳುತ್ತವೆ. ಅಂತಹವರು ತಾವೇ ಬಂದು ಈ ಹೋರಾಟಕ್ಕೆ ಜತೆಯಾಗಬೇಕಿತ್ತು. ಆದರೆ ಅವು ನಮಗೆ ಜತೆಯಾಗಲಿಲ್ಲ’ ಎಂದು ಮಮತಾ ಆರೋಪಿಸಿದ್ದಾರೆ.

2021ರ ಪಶ್ಚಿಮ ಬಂಗಾಳ ಚುನಾವಣೆಯಲ್ಲಿ ಟಿಎಂಸಿ, ಕಾಂಗ್ರೆಸ್ ಮತ್ತು ಎಡಪಕ್ಷಗಳು ಪ್ರತ್ಯೇಕವಾಗಿ ಸ್ಪರ್ಧಿಸಿದ್ದವು. ಇದನ್ನು ಉದ್ದೇಶಿಸಿ ಮಮತಾ ಈ ಮಾತು ಹೇಳಿದ್ದಾರೆ.

ಶೀಘ್ರವೇ ಸಭೆ: ಸ್ಟಾಲಿನ್

‘ಮಮತಾ ದೀದಿ ಅವರು ಕರೆ ಮಾಡಿದ್ದರು. ಬಿಜೆಪಿಯೇತರ ಪಕ್ಷಗಳು ಅಧಿಕಾರದಲ್ಲಿ ಇರುವ ರಾಜ್ಯಗಳಲ್ಲಿ ರಾಜ್ಯಪಾಲರು ಅಧಿಕಾರ ದುರುಪಯೋಗ ಮಾಡಿಕೊಳ್ಳುತ್ತಿರುವ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದರು. ವಿರೋಧ ಪಕ್ಷಗಳ ಮುಖ್ಯಮಂತ್ರಿಗಳು ಸಭೆ ನಡೆಸುವ ಬಗ್ಗೆ ಅವರು ಸಲಹೆ ನೀಡಿದ್ದಾರೆ. ರಾಜ್ಯದ ಸ್ವಾಯತ್ತೆಯನ್ನು ಎತ್ತಿಹಿಡಿಯಲು ಡಿಎಂಕೆ ಸದಾ ಬದ್ಧವಾಗಿದೆ. ದೆಹಲಿಯಲ್ಲಿ ಈ ಸಭೆ ಶೀಘ್ರವೇ ನಡೆಯಲಿದೆ’ ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಹೇಳಿದ್ದಾರೆ.

‘ಮಮತಾ ಅವರು ಕರೆ ಮಾಡಿದ್ದರು. ನೀವು ಬಂಗಾಳಕ್ಕೆ ಬನ್ನಿ ಅಥವಾ ನಾನೇ ಹೈದರಾಬಾದ್‌ಗೆ ಬರುತ್ತೇನೆ ಎಂದರು. ನಿಮಗೆ ಸದಾ ಸ್ವಾಗತ ಎಂದಿದ್ದೇನೆ. ಅವರು ಯಾವಾಗ ಬೇಕಾದರೂ ಬರಬಹುದು. ದೇಶದಲ್ಲಿ ಬಿಜೆಪಿ ಹೊರತುಪಡಿಸಿದ ಮತ್ತು ಕಾಂಗ್ರೆಸ್ ಹೊರತುಪಡಿಸಿದ ಎಷ್ಟೋ ರಾಜಕೀಯ ಪಕ್ಷಗಳಿವೆ. ಈ ಬಗ್ಗೆ ಚರ್ಚಿಸಿದ್ದೇವೆ’ ಎಂದು ತೆಲಂಗಾಣ ಮುಖ್ಯಮಂತ್ರಿ ಕೆ.ಸಿ.ರಾವ್ ಹೇಳಿದ್ದಾರೆ.

‘ಬಿಜೆಪಿ ಸೋತರೆ ಭಾರತ ಸುರಕ್ಷಿತ’

‘ಭಾರತವನ್ನು ರಕ್ಷಿಸಬೇಕು ಅಂದರೆ, 2024ರಲ್ಲಿ ಬಿಜೆಪಿಯನ್ನು ಅಧಿಕಾರದಿಂದ ಹೊರಗಟ್ಟಬೇಕು. ಆ ಕೆಲಸ ಆಗಬೇಕು ಅಂದರೆ ಈಗ ಉತ್ತರ ಪ್ರದೇಶವನ್ನು ರಕ್ಷಿಸಬೇಕು. ಉತ್ತರ ಪ್ರದೇಶದಲ್ಲಿ ಬಿಜೆಪಿಯನ್ನು ಸೋಲಿಸಿದರೆ ಮಾತ್ರ ಇದು ಸಾಧ್ಯವಾಗುತ್ತದೆ’ ಎಂದು ಮಮತಾ ಬ್ಯಾನರ್ಜಿ ಹೇಳಿದ್ದಾರೆ.

‘ಟಿಎಂಸಿ ಸ್ವತಂತ್ರವಾಗಿಯೇ ಉತ್ತರ ಪ್ರದೇಶ ಚುನಾವಣೆಯಲ್ಲಿ ಸ್ಪರ್ಧಿಸುವ ಸಾಮರ್ಥ್ಯ ಹೊಂದಿದೆ. ಆದರೆ, ದೇಶದ ಹಿತಾಸಕ್ತಿಯ ದೃಷ್ಟಿಯಿಂದ ಈ ಚುನಾವಣೆಯಲ್ಲಿ ಟಿಎಂಸಿ ಸ್ಪರ್ಧಿಸಿಲ್ಲ. ಬದಲಿಗೆ ಸಮಾಜವಾದಿ ಪಕ್ಷಕ್ಕೆ ಬೆಂಬಲ ನೀಡಿದೆ’ ಎಂದು ಅವರು ಹೇಳಿದ್ದಾರೆ.



ಜಮ್ಮು– ಕಾಶ್ಮೀರದ ಪುಲ್ವಾಮಾದಲ್ಲಿ ಮೂರು ವರ್ಷಗಳ ಹಿಂದೆ ನಡೆದ ಭಯೋತ್ಪಾದಕ ದಾಳಿಯಲ್ಲಿ ಹುತಾತ್ಮರಾದ ವೀರ ಯೋಧರಿಗೆ ಶ್ರೀನಗರದಲ್ಲಿ ಸೋಮವಾರ ನಡೆದ ಕಾರ್ಯಕ್ರಮದಲ್ಲಿ ಕೇಂದ್ರ ಮೀಸಲು ಪೊಲೀಸ್ ಪಡೆಯ ಅಧಿಕಾರಿಯೊಬ್ಬರು ಶ್ರದ್ಧಾಂಜಲಿ ಸಲ್ಲಿಸಿದರು –ಎಎಫ್‌ಪಿ ಚಿತ್ರ

ಪುಲ್ವಾಮಾ ದಾಳಿಗೆ ಮೂರು ವರ್ಷ: ಸ್ಮರಣೆ

ಜಮ್ಮು, ನವದೆಹಲಿ: 2019ರ ಫೆ.14ರಂದು ಜಮ್ಮು ಮತ್ತು ಕಾಶ್ಮೀರದ ಪುಲ್ವಾಮಾದಲ್ಲಿ ನಡೆದ ಭಯೋತ್ಪಾದಕರ ದಾಳಿ ಘಟನೆಗೆ ಮೂರು ವರ್ಷವಾಗಿದ್ದು, ಈ ಸಂದರ್ಭದಲ್ಲಿ ಹುತಾತ್ಮರಾದ ಯೋಧರನ್ನು ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ರಕ್ಷಣಾ ಸಚಿವ ರಾಜನಾಥ ಸಿಂಗ್ ಸೇರಿದಂತೆ ಹಲವು ಗಣ್ಯರು ಸ್ಮರಿಸಿದ್ದಾರೆ.

ಪಾಕಿಸ್ತಾನ ಮೂಲದ ಭಯೋತ್ಪಾದಕ ಗುಂಪು ಕೇಂದ್ರೀಯ ಮೀಸಲು ಪೊಲೀಸ್‌ನ ಬೆಂಗಾವಲು ಪಡೆಯ ಮೇಲೆ ಮಾಡಿದ್ದ ದಾಳಿಯಲ್ಲಿ 41 ಯೋಧರು ಹುತಾತ್ಮರಾಗಿದ್ದರು.

‘ಹುತಾತ್ಮ ಯೋಧರ ಶೌರ್ಯ ಮತ್ತು ಸರ್ವೋಚ್ಚ ತ್ಯಾಗವು ಪ್ರತಿ ಭಾರತೀಯನನ್ನೂ ಬಲಿಷ್ಠ ಮತ್ತು ಸಮೃದ್ಧ ದೇಶ ಕಟ್ಟುವ ನಿಟ್ಟಿನಲ್ಲಿ ಕೆಲಸ ಮಾಡಲು ಪ್ರೇರೇಪಿಸುತ್ತದೆ. ಪುಲ್ವಾಮಾದಲ್ಲಿ ಹುತಾತ್ಮರಾದ ಎಲ್ಲರಿಗೂ ನಾನು ಶ್ರದ್ಧಾಂಜಲಿ ಸಲ್ಲಿಸುತ್ತೇನೆ’ ಎಂದು ಪ್ರಧಾನಿ ತಮ್ಮ ಟ್ವೀಟ್‌ನಲ್ಲಿ ಹೇಳಿದ್ದಾರೆ.

‘2019ರಲ್ಲಿ ಪುಲ್ವಾಮಾದಲ್ಲಿ ಹುತಾತ್ಮರಾದ ಸಿಆರ್‌ಪಿಎಫ್ ಯೋಧರ ತ್ಯಾಗವನ್ನು ಈ ದೇಶ ಎಂದಿಗೂ ಮರೆಯುವುದಿಲ್ಲ. ಅವರಿಗೆ ಶ್ರದ್ಧಾಂಜಲಿ ಸಲ್ಲಿಸುತ್ತೇನೆ’ ಎಂದು ಕೇಂದ್ರ ರಕ್ಷಣಾ ಸಚಿವ ರಾಜನಾಥ ಸಿಂಗ್ ಟ್ವೀಟ್ ಮಾಡಿದ್ದಾರೆ.

‘ದಾಳಿಯಲ್ಲಿ ಅತ್ಯುನ್ನತ ತ್ಯಾಗವನ್ನು ಮಾಡುವ ಮೂಲಕ ದೇಶದ ಸಾರ್ವಭೌಮತೆಯನ್ನು ಎತ್ತಿಹಿಡಿದ ಸಿಆರ್‌ಪಿಎಫ್‌ನ ವೀರಯೋಧರಿಗೆ ಹೃತ್ಪೂರ್ವಕ ನಮನಗಳು. ನಿಮ್ಮ ತ್ಯಾಗಕ್ಕೆ ದೇಶ ಸದಾ ಋಣಿಯಾಗಿರುತ್ತದೆ. ನಿಮ್ಮ ಶೌರ್ಯವು ಭಯೋತ್ಪಾದನೆಯನ್ನು ಬೇರು ಸಮೇತ ಕಿತ್ತೆಸೆಯಲು ನಮಗೆ ಸ್ಫೂರ್ತಿ ನೀಡುತ್ತಲೇ ಇರುತ್ತದೆ’ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಟ್ವೀಟ್ ಮಾಡಿದ್ದಾರೆ.

ವರ್ಷದ ಮೊದಲ ಯತ್ನದಲ್ಲಿ ಇಸ್ರೊ ಯಶಸ್ವಿ

ಮೂರು ಉಪಗ್ರಹಗಳ ಯಶಸ್ವಿ ಉಡಾವಣೆ

ಶ್ರೀಹರಿಕೋಟಾ (ಎ.ಪಿ): ಭೂವೀಕ್ಷಣಾ ಉಪಗ್ರಹ ‘ಇಒಎಸ್ 04’ ಮತ್ತು ಎರಡು ಕಿರು ಉಪಗ್ರಹಗಳನ್ನು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯು (ಇಸ್ರೊ) ಸೋಮವಾರ ಯಶಸ್ವಿಯಾಗಿ ಕಕ್ಷೆಗೆ ಉಡಾವಣೆ ಮಾಡಿತು.

ಈ ಉಪಗ್ರಹಗಳನ್ನು ಹೊತ್ತಿದ್ದ ಪಿಎಸ್‌ಎಲ್‌ವಿ–ಸಿ52 ವಾಹಕವನ್ನು ಬೆಳಿಗ್ಗೆ 5.59 ಗಂಟೆಗೆ ಉಡಾವಣೆ ಮಾಡಲಾಗಿದ್ದು, ನಿರೀಕ್ಷೆಯಂತೆ ಇಒಎಸ್–04 ಒಳಗೊಂಡಂತೆ ಮೂರೂ ಉಪಗ್ರಹಗಳನ್ನು ನಿಗದಿತ ಭೂಕಕ್ಷೆಗೆ ಸೇರಿಸುವಲ್ಲಿ ವಾಹಕ ಯಶಸ್ವಿಯಾಯಿತು.

ವಾಹಕವು ಗಗನದತ್ತ ಚಿಮ್ಮುತ್ತಿದ್ದಂತೆಯೇ ವಿಜ್ಞಾನಿಗಳು ಹರ್ಷ ವ್ಯಕ್ತಪಡಿಸಿದರು. ವರ್ಷದ ಮೊದಲ ಉಪಗ್ರಹ ಉಡಾವಣೆ ಕಾರ್ಯವನ್ನು ಇಸ್ರೊ ‘ಅತ್ಯುತ್ತಮ ಸಾಧನೆ’ ಎಂದು ಬಣ್ಣಿಸಿದೆ. ಇನ್‌ಸ್ಪೈರ್ ಸ್ಯಾಟ್–1, ಐಎನ್‌ಎಸ್‌ಟಿ–2ಟಿಡಿ ಕಕ್ಷೆಯನ್ನು ಸೇರಿದ ಇತರ ಎರಡು ಉಪಗ್ರಹಗಳು.

‘ಎಲ್ಲವೂ ನಿಗದಿತ ಯೋಜನೆಯಂತೆಯೇ ನಡೆಯಿತು. ಉಡಾವಣೆಗೊಂಡ 17 ನಿಮಿಷ 34 ಕ್ಷಣಗಳಲ್ಲಿ ಉಪಗ್ರಹಗಳು ಭೂಮಿಯಿಂದ 529 ಕಿ.ಮೀ. ಎತ್ತರದಲ್ಲಿರುವ ಕಕ್ಷೆಗೆ ಸೇರಿದವು’ ಎಂದು ಇಸ್ರೊ ಪ್ರಕಟಿಸಿದೆ.

ಇಒಎಸ್ –04 ಉಪಗ್ರಹ ಕಕ್ಷೆಗೆ ತಲುಪುತ್ತಿದ್ದಂತೆ ಬೆಂಗಳೂರಿನ ಐಸ್ಟ್ರಾಕ್ ಕೇಂದ್ರವು ಸಂಪರ್ಕ ಪಡೆದುಕೊಂಡಿದ್ದು, ಇಲ್ಲಿಂದಲೇ ನಿರ್ವಹಣೆ ಮಾಡಲಾಗುತ್ತಿದೆ. ಬರುವ ದಿನಗಳಲ್ಲಿ ಅಂತಿಮ ಕಾರ್ಯವಿಧಾನಕ್ಕೆ ಉಪಗ್ರಹವನ್ನು ಸಜ್ಜುಗೊಳಿಸಲಿದ್ದು, ಬಳಿಕ ಅದು ಮಾಹಿತಿ ರವಾನಿಸಲಿದೆ.

‘ಉಪಗ್ರಹ ಉಡಾವಣಾ ಕಾರ್ಯ ಯಶಸ್ವಿಯಾಗಿ ಜರುಗಿತು’ ಎಂದು ಇಸ್ರೊ ಅಧ್ಯಕ್ಷ ಎಸ್.ಸೋಮನಾಥ್ ಪ್ರತಿಕ್ರಿಯಿಸಿದರು. ಇವರು ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಬಳಿಕ ಇದು ಮೊದಲನೇ ಉಪಗ್ರಹ ಉಡಾವಣಾ ಕಾರ್ಯಕ್ರಮವಾಗಿದೆ.

‘ದೇಶಕ್ಕೆ ಸೇವೆ ಸಲ್ಲಿಸುವಲ್ಲಿ ಇಒಎಸ್–04 ದೊಡ್ಡ ಆಸ್ತಿಯಾಗಲಿದೆ’ ಎಂದು ಉಡಾವಣಾ ಕಾರ್ಯಕ್ರಮದ ನಿರ್ದೇಶಕ ಎಸ್.ಆರ್.ಬಿಜು ಅವರು ಹೇಳಿದರೆ, ‘ನಿಜಕ್ಕೂ ಇದೊಂದು ಅತ್ಯದ್ಭುತ ಸಾಧನೆ’ ಎಂದು ಉಪಗ್ರಹ ನಿರ್ದೇಶಕ ಶ್ರೀಕಾಂತ್ ಪ್ರತಿಕ್ರಿಯಿಸಿದರು.

ಶ್ರೀಹರಿಕೋಟಾ ಕೇಂದ್ರದಿಂದ ನಡೆದ 80ನೇ ಉಪಗ್ರಹ ಉಡಾವಣೆ ಹಾಗೂ ಪಿಎಸ್‌ಎಲ್‌ವಿ ರಾಕೆಟ್ ಬಳಸಿದ 54ನೇ ಕಾರ್ಯಕ್ರಮವಾಗಿದೆ.

‘ಉಪಗ್ರಹಗಳು, ಅದರ ಕಾರ್ಯಶೈಲಿ’ (ಶ್ರೀಹರಿಕೋಟಾ): ಇಂದು ಉಡಾವಣೆಗೊಂಡ ಇಒಎಸ್ –24 ಉಪಗ್ರಹ 1,710 ಕೆ.ಜಿ. ತೂಕವಿದ್ದು, ಬಾಳಿಕೆ ಅವಧಿ 10 ವರ್ಷ. ಸರ್ವಋತುವಿನಲ್ಲಿ ಭೂ ಪರಿವೀಕ್ಷಣೆ ನಡೆಸುವ ಉಪಗ್ರಹವು ಉನ್ನತ ಗುಣಮಟ್ಟದ ಚಿತ್ರಗಳನ್ನು ಕೇಂದ್ರಕ್ಕೆ ರವಾನಿಸಲಿದೆ.




ಭೂವೀಕ್ಷಣಾ ಉಪಗ್ರಹ ‘ಇಒಎಸ್ 04’ ಮತ್ತು ಎರಡು ಕಿರು ಉಪಗ್ರಹಗಳನ್ನು ಇಸ್ರೊ ಸೋಮವಾರ ಯಶಸ್ವಿಯಾಗಿ ಕಕ್ಷೆಗೆ ಉಡಾವಣೆ ಮಾಡಿತು.

ತೇಜಸ್: ಉಷ್ಣ ವಿನಿಮಯ ಘಟಕ ಪೂರೈಸಿದ ಬಿಎಚ್‌ಇಎಲ್

ನವದೆಹಲಿ (ಪಿಟಿಐ): ತೇಜಸ್ ವಿಮಾನಕ್ಕಾಗಿ ಸಮಗ್ರ ಉಷ್ಣ ವಿನಿಮಯ ಘಟಕಗಳನ್ನು ಹಿಂದೂಸ್ತಾನ್ ಏರೊನಾಟಿಕ್ಸ್ ಲಿಮಿಟೆಡ್ ಸಂಸ್ಥೆಗೆ, ಕೇಂದ್ರ ಸರ್ಕಾರದ ಅಧೀನದ ಭಾರತ್ ಹೆವಿ ಎಲೆಕ್ಟ್ರಿಕಲ್ಸ್ ಲಿಮಿಟೆಡ್ (ಬಿಎಚ್‌ಇಎಲ್) ಸಂಸ್ಥೆಯು ಪೂರೈಸಲಿದೆ. ಹಗುರ ಯುದ್ಧವಿಮಾನ ‘ತೇಜಸ್ ಎಂ.ಕೆ 1ಎ’ಯ 83 ವಿಮಾನಗಳಿಗೆ ಇಂತಹ ಘಟಕಗಳನ್ನು ಬಿಎಚ್‌ಇಎಲ್ ಪೂರೈಸಲಿದೆ ಎಂದು ಸಂಸ್ಥೆಯ ಹೇಳಿಕೆಯು ತಿಳಿಸಿದೆ. ಉತ್ಪಾದನೆ, ಜೋಡಣೆ, ಪರೀಕ್ಷೆ ಮತ್ತು ಉಷ್ಣ ವಿನಿಮಯ ಘಟಕಗಳ ಪೂರೈಕೆಯನ್ನು ಸಂಸ್ಥೆ ನಿಭಾಯಿಸಲಿದೆ.

ಕ್ಷೇಮ ಕುಶಲ





ವಿಶ್ರಾಂತಿ ಎಂದರೆ ಸೋಮಾರಿತನವಲ್ಲ

ಡಾ. ಕಿರಣ್ ವಿ. ಎಸ್.

ಜಾಗತಿಕ ವಿಪತ್ತಿನ ಮೂಲಕ ಹಾದು ಹೋಗುತ್ತಿರುವ ಕಾಲಘಟ್ಟದಲ್ಲಿ ಮಾಹಿತಿಯ ಮಹಾಸ್ಫೋಟ ಮತ್ತು ಅನೂಹ್ಯದ ಆತಂಕಗಳು ಸೇರಿ ಮೈ-ಮನಸ್ಸುಗಳನ್ನು ಅನೇಕ ಸಮಸ್ಯೆಗಳಿಗೆ ಒಡ್ಡುತ್ತಿವೆ. ಇದರಿಂದ ಚೇತರಿಸಿಕೊಳ್ಳಲು ವಿಶ್ರಾಂತಿ ಅತ್ಯಗತ್ಯ. ಆದರೆ, 'ವಿಶ್ರಾಂತಿ' ಎಂದರೇನು? ಕೆಲಸ ಮಾಡದೇ ಜಡವಾಗಿ ಇರುವುದೇ? ಹೆಚ್ಚು ಕಾಲ ಮಲಗುವುದೇ? ಗಂಟೆಗಟ್ಟಲೇ, ಬುದ್ಧಿಗೆ ಹೆಚ್ಚು ಕೆಲಸ ಕೊಡದೆ ಏನನ್ನೋ ನೋಡುತ್ತಾ ಕಾಲ ಹಾಕುವುದೇ? ವಿಶ್ರಾಂತಿಯನ್ನು ಅರ್ಥಪೂರ್ಣವಾಗಿ ಸಾಧಿಸುವುದು ಹೇಗೆ?

'ವಿಶ್ರಾಂತಿ' ಎನ್ನುವುದು 'ಕೆಲಸ' ಎಂಬುದರ ವಿರುದ್ಧಪದ ಎಂಬ ಭಾವನೆ ನಮ್ಮಲ್ಲಿದೆ. ಕೆಲವೊಮ್ಮೆ ವಿಶ್ರಾಂತಿ ಎನ್ನುವ ಪದ ನಿದ್ರೆಗೆ ಸಮಾನಾರ್ಥವಾಗಿ ಬಳಕೆಯಾಗುತ್ತದೆ. ವೈಜ್ಞಾನಿಕವಾಗಿ ವಿಶ್ರಾಂತಿಯನ್ನು ಮೂರು ಆಯಾಮಗಳಿಂದ ಗ್ರಹಿಸಬಹುದು. ಭೌತಿಕ ವಿಶ್ರಾಂತಿಯೆಂದರೆ ಶರೀರದ ಚಲನೆಯನ್ನು ಸಾಧ್ಯವಾದಷ್ಟೂ ಕಡಿತಗೊಳಿಸುವುದು. ದೇಹದಲ್ಲಿ ಶಕ್ತಿಯ ಪ್ರಮಾಣ ಕಡಿಮೆಯಾದಾಗ ಭೌತಿಕ ವಿಶ್ರಾಂತಿಯಿಂದ ಶರೀರಕ್ಕೆ ಚೈತನ್ಯದ ಮರುಪೂರಣವಾಗುತ್ತದೆ. ಮಾನಸಿಕ/ಭಾವನಾತ್ಮಕ ವಿಶ್ರಾಂತಿಯೆಂದರೆ ಚಿಂತೆ, ಆತಂಕ, ಸಮಸ್ಯೆಗಳ ಸಿಕ್ಕಿನಲ್ಲಿ ಸಿಲುಕಿದ ಬುದ್ಧಿ-ಮನಸ್ಸುಗಳ ಚೇತರಿಕೆಗಾಗಿ ನೀಡುವ ಸಮಯಾವಕಾಶ. ಭೌತಿಕ ವಿಶ್ರಾಂತಿಗಿಂತ ಇದು ಸ್ವಲ್ಪ ಕಠಿಣ. ಆಧ್ಯಾತ್ಮಿಕ ವಿಶ್ರಾಂತಿಯೆಂದರೆ ಜಂಜಾಟದಲ್ಲಿ ನಿರತವಾಗಿರುವ ಅತೃಪ್ತ ಮೆದುಳಿಗೆ ಶಾಂತಿ-ನೆಮ್ಮದಿಗಳ ಹಾದಿ ತೋರುವ ಪ್ರಯತ್ನ. ಈ ಮೂರೂ ಆಯಾಮಗಳು ವಿಶ್ರಾಂತಿಯ ಅಂಗಗಳು ಎಂದು ತಜ್ಞರ ಅಭಿಪ್ರಾಯ.

> 'ವಿಶ್ರಾಂತಿ' ಎನ್ನುವುದು 'ಕೆಲಸ' ಎಂಬುದರ ವಿರುದ್ಧಪದ ಎಂಬ ಭಾವನೆ ನಮ್ಮದು. ಕೆಲವೊಮ್ಮೆ ವಿಶ್ರಾಂತಿ ಎನ್ನುವ ಪದ ನಿದ್ರೆಗೆ ಸಮಾನಾರ್ಥವಾಗಿ ಬಳಕೆಯಾಗುತ್ತದೆ.


ಪ್ರಾಯೋಗಿಕವಾಗಿ ವಿಶ್ರಾಂತಿಯನ್ನು ಸಾಧಿಸಲು ಮನಸ್ಸು-ಬುದ್ಧಿಗಳ ಸಹಕಾರ ಅಗತ್ಯ. ಒಂದೇ ಸಮನೆ ಕೆಲಸ ಮಾಡುವುದರಿಂದ ಸುಸ್ತಿನ ಭಾವ ಆವರಿಸುತ್ತದೆ. ಮಾಡುವ ಕೆಲಸದಿಂದ ಆಗಾಗ ಬಿಡುವು ಪಡೆದು, ಕೆಲವು ನಿಮಿಷಗಳ ಕಾಲ ಮನಸ್ಸನ್ನು ಬೇರೆಡೆಗೆ ಹರಿಸಬೇಕು. ಒಂದು ಕೆಲಸದಿಂದ ಮತ್ತೊಂದು ಕೆಲಸಕ್ಕೆ ಜಿಗಿದರೆ ವಿಶ್ರಾಂತಿ ಸಿಗುವುದಿಲ್ಲ. ದೇಹಕ್ಕೆ ಉಲ್ಲಾಸ ನೀಡುವಂತಹ, ಬುದ್ಧಿಗೆ ಕಸರತ್ತು ನೀಡದಂತಹ ಕ್ರಿಯೆಗೆ ಒಡ್ಡಿಕೊಳ್ಳಬೇಕು. ಕೆಲಸದ ತಾಣದಿಂದ ಕೆಲವು ನಿಮಿಷಗಳ ಕಾಲ ಹೊರಬಂದು ಸಣ್ಣದೊಂದು ನಡಿಗೆ ಮಾಡುವುದು; ಕಿಟಕಿಯ ಬಳಿ ಬಂದು ಕೆಲಬಾರಿ ದೀರ್ಘಶ್ವಾಸ ತೆಗೆದುಕೊಳ್ಳುವುದು; ಇರುವೆಡೆಯಲ್ಲೇ ಕಣ್ಣು ಮುಚ್ಚಿ, ಮನಸ್ಸನ್ನು ಶ್ವಾಸದ ಮೇಲೆ ಕೇಂದ್ರೀಕರಿಸಿ ಉಸಿರಾಡುವುದು – ಇಂತಹ ಸರಳ ವಿಧಾನಗಳಿಂದ ದೇಹ-ಮನಸ್ಸುಗಳೆರಡೂ ವಿಶ್ರಾಂತಿ ಪಡೆಯುತ್ತವೆ.

ಪ್ರತಿದಿನವೂ ನಿರ್ದಿಷ್ಟ ಸಮಯದಲ್ಲಿ ಮಾಡುವ ವ್ಯಾಯಾಮ, ಯೋಗ ಮತ್ತು ಪ್ರಾಣಾಯಾಮಗಳು ದೀರ್ಘಕಾಲಿಕ ಅವಧಿಯಲ್ಲಿ ಮಾನಸಿಕ ವಿಶ್ರಾಂತಿಗೆ ರಹದಾರಿ. ವ್ಯಾಯಾಮದ ಮೂಲಕ ದೇಹದ ಸಹಜ ಬಿಗುವನ್ನು ಸಡಿಲಗೊಳಿಸುವುದರಿಂದ ಶಕ್ತಿಯ ಬಳಕೆ ಕಡಿಮೆಯಾಗುತ್ತದೆ ಎಂದು ಅಧ್ಯಯನಗಳು ತಿಳಿಸಿವೆ. ಇದು ವಿಶ್ರಾಂತಿಗೆ ಸಮನಾದದ್ದು. ಕಾಯಿಲೆಯ ವೇಳೆಯಲ್ಲಿ ದೈಹಿಕ ವ್ಯಾಯಾಮ ಸಾಧ್ಯವಾಗದಿದ್ದರೂ, ಪ್ರಾಣಾಯಾಮವನ್ನು ಮಾಡಬಹುದು. ಇದರಿಂದ ಶರೀರಕ್ಕೆ ಅಗತ್ಯವಾದ ಆಕ್ಸಿಜನ್ ಸರಬರಾಜಾಗಿ, ದೇಹದ ಚೇತರಿಕೆಗೆ ಅನುಕೂಲವಾಗುತ್ತದೆ. ಮನಸ್ಸಿಗೆ ಆಹ್ಲಾದವನ್ನು ನೀಡುವ ಸಣ್ಣ-ಪುಟ್ಟ ಕೆಲಸಗಳೂ ವಿಶ್ರಾಂತಿಯ ಪರಿಭಾಷೆಯಲ್ಲಿಯೇ ಬರುತ್ತವೆ. ಹೂತೋಟದಲ್ಲಿನ ನಿಧಾನನಡಿಗೆ, ಸಾಕುಪ್ರಾಣಿಗಳ ಸ್ಪರ್ಶ, ಅಗರಬತ್ತಿಯ ಸುವಾಸನೆ, ಸೂರ್ಯಾಸ್ತದ ದೃಶ್ಯ, ಹಿತವಾದ ಸಂಗೀತ, ಸೊಗಸಾದ ಪುಸ್ತಕದ ಓದು, ಒಳ್ಳೆಯ ಸ್ನಾನ – ಇವೆಲ್ಲವೂ ಮನಸ್ಸಿಗೆ ಚೇತೋಹಾರಿ.

ಚಿಂತನೆಯ ಅಸ್ಪಷ್ಟತೆ ನಮ್ಮ ದೇಹ-ಮನಸ್ಸುಗಳನ್ನು ದಣಿಸುತ್ತದೆ. ಸಮಸ್ಯೆಗಳನ್ನು ಮನಸ್ಸಿನಲ್ಲೇ ಲೆಕ್ಕಾಚಾರ ಮಾಡುತ್ತಾ, ಇಲ್ಲಸಲ್ಲದ ಪರಿಣಾಮಗಳ ಬಗ್ಗೆ ಆತಂಕಗೊಳ್ಳುತ್ತಾ, ಸಂಜೆಯ ವೇಳೆಗೆ ದಣಿವನ್ನು ಅನುಭವಿಸುವ, ರಾತ್ರಿ ಸರಿಯಾಗಿ ನಿದ್ರೆ ಬಾರದ ಸ್ಥಿತಿಗೆ ತಲುಪುವ ಅನುಭವಗಳು ಬಹುತೇಕ ಎಲ್ಲರದ್ದೂ ಆಗಿರುತ್ತವೆ. ಸಮಸ್ಯೆಗಳನ್ನು ಒಂದೆಡೆ ಬರೆಯುವುದು ಚಿಂತನೆಗಳ ಸ್ಪಷ್ಟತೆಗೆ ಕಾರಣವಾಗುತ್ತದೆ. ಇದರಿಂದ ಮನಸ್ಸು ವಿಶ್ರಾಂತಸ್ಥಿತಿಗೆ ಬರುತ್ತದೆ.

ಸಂಘಜೀವಿಯಾದ ಮನುಷ್ಯನಿಗೆ ತನ್ನ ಆಲೋಚನೆಗಳ ಹಂಚಿಕೆ, ಚರ್ಚೆಗಳಿಗೆ ಸಮಾಜದ ಇತರರ ಸಂಪರ್ಕ ಅಗತ್ಯ. ಆದರೆ, ಕೆಲವು ಕಾರಣಗಳಿಂದ ಭೌತಿಕ ಸಾಂಗತ್ಯ ಸಾಧ್ಯವಾಗುವುದಿಲ್ಲ. ಈ ಕೊರತೆಯ ನಿವಾರಣೆಗೆ ಸಾಮಾಜಿಕ ಜಾಲತಾಣಗಳ ಮೊರೆ ಹೋಗುವುದು ಸಾಮಾನ್ಯವಾಗಿದೆ. ಒಂದು ಹಂತದಲ್ಲಿ ಇದು ಗೀಳಿನ ಮಟ್ಟವನ್ನು ತಲುಪಿ, ಮನ್ನಣೆಯ ದಾಹ ಆವರಿಸುತ್ತದೆ. ತನ್ನನ್ನು ವಿರೋಧಿಸಿದವರ ಜೊತೆ ಅಪ್ರಾಯೋಗಿಕ ವಾದಗಳು ಏರ್ಪಡುತ್ತವೆ. ಇದು ಮನಸ್ಸಿನ ನೆಮ್ಮದಿಯನ್ನು ಹಾಳು ಮಾಡುತ್ತದೆ. ಇಂತಹ ಜಾಲತಾಣಗಳಿಂದ ಸ್ವಲ್ಪಕಾಲ ದೂರವಿರುವುದು, ಪ್ರತಿದಿನವೂ ಜಾಲತಾಣಗಳಿಗೆ ನೀಡುವ ಸಮಯವನ್ನು ಮಿತಗೊಳಿಸುವುದು ಕೂಡ ವಿಶ್ರಾಂತಿಯ ಮಾರ್ಗ. ನಿಸರ್ಗದ ಸಂಪರ್ಕವನ್ನು ಅಧಿಕಗೊಳಿಸುವುದು, ಮಾಡುವ ಕೆಲಸಗಳನ್ನು ಉದ್ವೇಗವಿಲ್ಲದೆ ಮಾಡುವುದು, ಸಾಕಷ್ಟು ನಿದ್ರಿಸುವುದು, ಕಾಫಿಯಂತಹ ಉತ್ತೇಜಕ ಪೇಯಗಳನ್ನು ಕಡಿಮೆ ಸೇವಿಸುವುದು, ಆರೋಗ್ಯಕರ ದಿನಚರಿಗೆ ಬದ್ಧರಾಗುವುದು, ಸ್ನೇಹಿತರ ಜೊತೆಗಿನ ಒಡನಾಟ, ಕುಟುಂಬದ ಜೊತೆಗೆ ಕಾಲ ಕಳೆಯುವುದು – ಇವೆಲ್ಲವೂ ವಿಶ್ರಾಂತಿಯ ಮಾದರಿಗಳೇ.

ವಿಶ್ರಾಂತಿಯೆಂಬುದು ಸೋಮಾರಿತನವಲ್ಲ. ಅದು ಶರೀರ-ಮನಸ್ಸುಗಳನ್ನು ಪುನಶ್ಚೇತನಗೊಳಿಸುವ ದಾರಿ. 'ವಿಶ್ರಾಂತಿ ತೆಗೆದುಕೊಳ್ಳಿ' ಎಂಬ ಸಲಹೆಯನ್ನು 'ನಿಮ್ಮ ಮನಸ್ಸಿಗೆ ಒಪ್ಪುವ ಹಾದಿಯನ್ನು ಅನುಸರಿಸಿ, ಪ್ರಫುಲ್ಲಿತರಾಗಿ' ಎಂದು ಅರ್ಥೈಸಬಹುದು.



ಬೇಸಿಗೆಯ ಬೇಗೆ ನೀಗುವ ಬಗೆ

ಡಾ. ವಿಜಯಲಕ್ಷ್ಮಿ ಪಿ.

ಕಾಲಕಾಲಕ್ಕೆ ಪ್ರಕೃತಿಯಲ್ಲಿ ನಡೆಯುವ ಬದಲಾವಣೆಯಂತೆಯೇ, ಕಾಲ ಬದಲಾದಂತೆ ಅದಕ್ಕನುಗುಣವಾಗಿ ದೇಹದಲ್ಲಿಯೂ ಬದಲಾವಣೆ ಉಂಟಾಗುತ್ತದೆ. ಇದು ದೇಹವು ವಾತಾವರಣಕ್ಕೆ ಒಗ್ಗಿಕೊಳ್ಳುವ ವಿಧಾನ. ಒಗ್ಗಿಕೊಳ್ಳುವುದರಲ್ಲಿ ದೇಹವು ಎಡವಿದರೆ, ರೋಗಗಳು ಬರುತ್ತವೆ. ಈ ರೋಗ ಬಾರದಂತೆ ತಡೆಗಟ್ಟಲು ನಾವು ನಮ್ಮ ಜೀವನಶೈಲಿಯಲ್ಲಿ ಕೆಲವು ಬದಲಾವಣೆಗಳನ್ನು ಮಾಡಿಕೊಳ್ಳಬೇಕಾಗುತ್ತದೆ.

ಚಳಿಗಾಲದಲ್ಲಿ ತಂಪಾದ ವಾತಾವರಣದಿಂದಾಗಿ ಹೆಪ್ಪುಗಟ್ಟಿದ ಮಂಜುಗಡ್ಡೆಯು ಬೇಸಗೆಯಲ್ಲಿ ಕರಗಿ ಹರಿಯುವಂತೆ ನಮ್ಮ ದೇಹದಲ್ಲಿಯೂ ಚಳಿಗಾಲದ ತಂಪಿನಿಂದ ಗಟ್ಟಿಯಾಗಿ ಒಣಗಿದಂತಾದ ಕಫವು ಬೇಸಗೆಯಲ್ಲಿ ಸ್ರಾವವಾಗುತ್ತದೆ. ಹಾಗಾಗಿ ಚಳಿಗಾಲದಲ್ಲಿ ಸಂಧಿನೋವು, ಚರ್ಮ ಒಡೆಯುವುದು, ತುರಿಕೆಗಳು ಹೆಚ್ಚಾಗಿದ್ದರೆ ಬೇಸಿಗೆ ಪ್ರಾರಂಭವಾಗುತ್ತಿದ್ದಂತೆ ಅಲರ್ಜಿಯಿಂದ ಉತ್ಪನ್ನವಾಗುವ ಚರ್ಮರೋಗ, ಸೀನು, ಕೆಮ್ಮು-ದಮ್ಮುಗಳು ಹೆಚ್ಚಾಗುತ್ತವೆ. ಇದನ್ನು ತಡೆಗಟ್ಟಲು ಬೇಸಿಗೆ ಪ್ರಾರಂಭಕ್ಕೆ ಮೊದಲೇ ಎಚ್ಚರಿಕೆಯನ್ನು ವಹಿಸಿ, ಬೇಸಿಗೆಯ ವಾತಾವರಣಕ್ಕೆ ಹೊಂದಿಕೊಳ್ಳುವಂತೆ ದೇಹದ ಕಾರ್ಯಕ್ಷಮತೆಯನ್ನು ಹೆಚ್ಚಿಸಿಕೊಳ್ಳಬೇಕು. ಅದಕ್ಕಾಗಿ ನಮ್ಮ ಆಹಾರ-ವಿಹಾರಗಳಲ್ಲಿ ಕೆಲವೊಂದು ಬದಲಾವಣೆ ಮಾಡಿಕೊಳ್ಳುವುದು ಅವಶ್ಯಕ. ಈ ಬದಲಾವಣೆಗಳು ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಆಯಾಯ ಪ್ರದೇಶಗಳ ವಾತಾವರಣಕ್ಕೆ ಅನುಗುಣವಾಗಿ ಕೆಲವೊಂದು ಆಚರಣೆಗಳನ್ನು ಸಂಪ್ರದಾಯದ ಹೆಸರಿನಲ್ಲಿ ರೂಢಿಸಿಕೊಂಡಿದ್ದಾರೆ. ಬೇಸಿಗೆಯ ಪ್ರಾರಂಭಕ್ಕೂ ಮುನ್ನವೇ ಬರುವ 'ಶಿವರಾತ್ರಿ' ದ್ರವಧಾತುಗಳನ್ನು ಒಣಗಿಸಲೋ ಎಂಬಂತೆ ಉಪವಾಸ ಮತ್ತು ಜಾಗರಣೆಗಳ ಹಬ್ಬವಾಗಿದೆ.

ಬೇಸಿಗೆಯಲ್ಲಿ ಉತ್ಪನ್ನವಾಗುವ ಸೀನು, ನೆಗಡಿಗಳನ್ನು ತಡೆಯಲು ಸುಲಭೋಪಾಯ ಎಂದರೆ ಆರೋಗ್ಯಕರವಾದ ಅಲ್ಪಾಹಾರದ ಸೇವನೆ ಮತ್ತು ಹದವಾದ ನಿದ್ರೆ. ಅತಿನಿದ್ರೆ ಅಥವಾ ಹಗಲುನಿದ್ರೆ ಅನಾರೋಗ್ಯಕರ. ಅತಿ ಆಹಾರ, ದೇಹಕ್ಕೆ ಒಗ್ಗದ ಆಹಾರ, ಅತಿ ತಂಪಾದ ಆಹಾರ, ಕಫವನ್ನು ಕರಗಿಸುವ ಆಹಾರಗಳನ್ನು ಸೇವಿಸದಿರುವುದು ಈ ಕಾಲದಲ್ಲಿ ಜೀರ್ಣಶಕ್ತಿಯನ್ನು ಕಾಪಾಡುತ್ತದೆ. ಹಿತವಾಗಿ, ಮಿತವಾಗಿ, ಅತಿಯಾದ ದಂಡನೆ ಇಲ್ಲದ ವ್ಯಾಯಾಮ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಿ, ಆರೋಗ್ಯವನ್ನು ಕಾಪಾಡಿಕೊಳ್ಳುವಲ್ಲಿ ಮೊದಲನೆಯ ಹೆಜ್ಜೆಯಾಗಿದೆ. ನಂತರ ಬರುವುದೇ 'ಯುಗಾದಿ'. ಬೇವು-ಬೆಲ್ಲಗಳ ಜೊತೆಗೆ ಬೇಳೆಯ ಒಬ್ಬಟ್ಟನ್ನೂ ಸವಿಯುವ ಕಾಲ. ಜೀವನದ ಕಷ್ಟ-ಸುಖಗಳನ್ನು ಸಮತೋಲನದಲ್ಲಿ ನೋಡಬೇಕು ಎಂದು ಕಲಿಸುವುದರ ಜೊತೆಗೆ ಆಹಾರದಲ್ಲಿಯು ಕಹಿ-ಸಿಹಿಗಳು ಮಿಳಿತವಾಗಿರಬೇಕು ಎಂದೂ ಸೂಚಿಸುತ್ತದೆ. ಬಿಸಿಲಿಗೆ ಸಿಹಿ ಹಿತಕರವಾದರೆ, ಕಫಕ್ಕೆ ಕಹಿ ಹಿತ. ಆದ್ದರಿಂದ ಬೇಸಿಗೆಯ ಆರಂಭದಲ್ಲಿ ನಮ್ಮ ಆಹಾರದಲ್ಲಿ ಗೋರಿಕಾಯಿ, ಹಾಗಲಕಾಯಿ, ಮೆಂತ್ಯ – ಇವುಗಳ ಉಪಯೋಗ ಹಾನಿಕಾರಕವಲ್ಲ. ಆದರೆ ಬೇಸಿಗೆಯ ಬಿಸಿಲು ಹೆಚ್ಚಾದಂತೆ ಕಹಿಯ ಸೇವನೆಯನ್ನು ತ್ಯಜಿಸಬೇಕು. ಬೇಸಿಗೆಯ ಆರಂಭದಿಂದ ಅಂತ್ಯದವರೆಗೂ ಸೋರೆಕಾಯಿ, ಬೂದುಕುಂಬಳ, ಗೆಣಸು, ಸುವರ್ಣಗಡ್ಡೆ, ಶಾಮೆಗಡ್ಡೆ, ಹಂದಿಗಡ್ಡೆ – ಹೀಗೆ ದೇಹಕ್ಕೆ ಬಲಕೊಡುವಂತಹ ತರಕಾರಿಗಳ ಉಪಯೋಗ ಆರೋಗ್ಯಕರ.



ಮುಂದೆ ರಾಮನವಮಿ ಬಂತೆಂದರೆ ಕೋಸಂಬರಿ-ಪಾನಕದ್ದೇ ಸಂಭ್ರಮ. ಕಡೆದ ಮಜ್ಜಿಗೆ, ಹಣ್ಣಿನ ರಸ, ಕಬ್ಬಿನ ಹಾಲು, ಪಾನಕಗಳ ಸೇವನೆಯೂ ಬೇಸಿಗೆಯಲ್ಲಿ ಹಿತಕರವೇ. ಆದರೆ ಅದು ಅತಿ ತಂಪಾಗಿರಬಾರದು. ಹಾಲು ಮತ್ತು ಹಣ್ಣನ್ನು ಒಟ್ಟಿಗೆ ಬೆರೆಸಿ ತಯಾರಿಸಿದ ಪಾನಕಗಳ ಸೇವನೆ ಒಳ್ಳೆಯದಲ್ಲ. ಯಾವುದೇ ರೀತಿಯಲ್ಲಿಯೂ ಹಾಲಿನೊಡನೆ ಉಪ್ಪು ಮತ್ತು ಹುಳಿ ಪದಾರ್ಥಗಳನ್ನು ಬೆರೆಸಿ ಸೇವಿಸುವುದು ಅನಾರೋಗ್ಯಕರ. ಬೇಸಿಗೆಯಲ್ಲಿ ರಾಗಿಯ ಅಂಬಲಿ, ಹೆಸರುಕಾಳಿನ ಪಾನಕ ಇವುಗಳು ದೇಹಕ್ಕೆ ತಂಪು ಹಾಗೂ ಆರೋಗ್ಯಕರ. ದಾಳಿಂಬೆ, ಬೇಲದ ಹಣ್ಣು, ಅಂಜೂರ, ಹಸಿ ಮತ್ತು ಒಣಗಿದ ದ್ರಾಕ್ಷಿ, ಖರ್ಜೂರ – ಇವುಗಳ ರಸವನ್ನು, ಭತ್ತದ ಅರಳು, ಹುರಿದ ತಾವರೆಬೀಜ (ಮಕಾನ), ಜೋಳದ ಅರಳು ಅಥವಾ ಅರಳಿನ ಹಿಟ್ಟು, ರಾಗಿಯ ಅರಳಿಟ್ಟು ಇವುಗಳನ್ನು ಯಾವುದಾದರು ಒಂದರೊಡನೆ ಬೆರೆಸಿ, ನೀರು ಸೇರಿಸಿ ರುಬ್ಬಿ ಅಥವಾ ಮಜ್ಜಿಗೆಯಂತೆ ಕಡೆದು, ಸಕ್ಕರೆ ಅಥವಾ ಬೆಲ್ಲ ಮತ್ತು ಏಲಕ್ಕಿ ಬೆರೆಸಿ ಪಾನಕದಂತೆ ಕುಡಿದರೆ ಬೇಸಿಗೆಯಲ್ಲಿ ಬರಬಹುದಾದ ಅನೇಕ ರೋಗಗಳನ್ನು ತಡೆಯಬಹುದು.

ಬೇಸಿಗೆಯ ಪ್ರಾರಂಭದ ಕಾಲ, ದೇಹವನ್ನು ಶುದ್ಧಿಗೊಳಿಸಿಕೊಳ್ಳುವುದಕ್ಕೆ ಸಕಾಲ. ತಜ್ಞವೈದ್ಯರ ಸಲಹೆ ಪಡೆದು ಅವರ ಸುಪರ್ದಿಯಲ್ಲಿ ವಮನಕರ್ಮವನ್ನೋ ಅಥವಾ ವಮನಧೌತಿಯನ್ನೋ ಮಾಡಿಸಿಕೊಳ್ಳುವುದು ಒಳ್ಳೆಯದು. ಇದು ಬೇಸಿಗೆಯಲ್ಲಿ ಬರುವ/ಹೆಚ್ಚಾಗುವ, ಚರ್ಮರೋಗಗಳು, ಕೆಮ್ಮು, ಕಫ, ಅಸ್ತಮಾ ಮುಂತಾದ ರೋಗಗಳನ್ನು ತಡೆಗಟ್ಟುತ್ತದೆ.

ಒಟ್ಟಾರೆ ಹಿತವಾದ, ಮಿತವಾದ, ಋತುವಿಗೆ ಅನುಗುಣವಾದ ದಿನಚರ್ಯೆಯನ್ನು ಅನುಸರಿಸಿ ಆರೋಗ್ಯವಂತರಾಗೋಣ.

ಸ್ಪಂದನೆ

ಬಸವಣ್ಣನವರ ವಚನ

'ಬದುಕಿನ ತುಡಿತದಲ್ಲಿ ರಾಗ ಭಾವ' ('ಕ್ಷೇಮ ಕುಶಲ', ಫೆ. 8) – ದೀಪಾ ಫಡ್ಕೆ ಅವರ ಈ ಲೇಖನದಲ್ಲಿ 'ನೀನೊಲಿದರೆ ಕೊರಡು ಕೊನರುವುದಯ್ಯ' ಎಂಬ ವಚನವನ್ನು 'ಅಕ್ಕ ಹಾಡಿದಂತೆ' ಎಂದಿದ್ದಾರೆ. ಆದರೆ ಅದು ಅಕ್ಕನ ವಚನವಲ್ಲ, ಬಸವಣ್ಣನವರ ವಚನ.

– ಗುಬ್ಬಿ ರೇವಣಾರಾಧ್ಯ, ಬೆಂಗಳೂರು

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಅಧ್ಯಾಯ 6: ವಿದ್ಯುಚ್ಛಕ್ತಿ

ಭೌತಶಾಸ್ತ್ರ

ಪ್ರಮುಖಾಂಶಗಳು:

- ವಿದ್ಯುತ್ ಪ್ರವಾಹದ ನಿರಂತರ ಮತ್ತು ಆವೃತ ಮಾರ್ಗವನ್ನು ವಿದ್ಯುತ್ ಮಂಡಲ ಎಂದು ಕರೆಯಲಾಗುತ್ತದೆ.
- ವಿದ್ಯುತ್ ಮಂಡಲದಲ್ಲಿ ಆಮ್ಮೀಟರ್ ಅನ್ನು ಸರಣಿ ಕ್ರಮದಲ್ಲಿ, ವೋಲ್ಟ್‌ಮೀಟರ್ ಅನ್ನು ಸಮಾಂತರವಾಗಿ ಜೋಡಿಸಲಾಗುತ್ತದೆ.
- ವಾಹಕದ ರೋಧವನ್ನು ದ್ವಿಗುಣಗೊಳಿಸಿದರೆ ವಿದ್ಯುತ್ ಪ್ರವಾಹದ ದರವು ಅರ್ಧದಷ್ಟಾಗುತ್ತದೆ.
- **ಸಾಧನಗಳು**
  - -ವಿದ್ಯುತ್ ಪ್ರವಾಹ -ಅಮ್ಮೀಟರ್
  - -ವಿಭವಾಂತರ -ವೋಲ್ಟ್‌ಮೀಟರ್
  - -ಬದಲಾಗುವ ರೋಧ -ರಿಯೋಸ್ಟಾಟ್

ಎಸ್.ಐ. ಏಕಮಾನಗಳು

-ವಿದ್ಯುತ್ ಪ್ರವಾಹ -ಆಂಪೀರ್(A)
-ವಿಭವಾಂತರ -ವೋಲ್ಟ್(V)
-ವಿದ್ಯುತ್‌ರೋಧ -ಓಮ್(Ω)
-ರೋಧಶೀಲತೆ -ಓಮ್ ಮೀಟರ್(Ω m)
-ವಿದ್ಯುತ್ ಸಾಮರ್ಥ್ಯ -ವ್ಯಾಟ್(W)
-ವಿದ್ಯುತ್ ಆವೇಶ -ಕೂಲಾಂಬ್(C)

ಸೂತ್ರಗಳು

a) $Q=It$ b) $V=IR$
c) $V=\frac{W}{Q}$ d) $R= P\frac{1}{A}$
e) $Rs=R_1+R_2+R_3$ f) $V=V_1+V_2+V_3$
g) $\frac{1}{Rp}=\frac{1}{R1}+\frac{1}{R2}+\frac{1}{R3}$ h) $H = I^2Rt$

ಮಾದರಿ ಪ್ರಶ್ನೆ-ಉತ್ತರಗಳು.

1.ವ್ಯಾಖ್ಯಾನಿಸಿ.

ಎ) ವಿದ್ಯುತ್ ಪ್ರವಾಹ:- ವಿದ್ಯುದಾವೇಶಗಳ ಹರಿಯುವಿಕೆ.

ಬಿ) ವಿಭವಾಂತರ:- ವಿದ್ಯುತ್ ವಾಹಕದ ಯಾವುದೇ ಎರಡು ಅನುಕ್ರಮ ಬಿಂದುಗಳ ನಡುವೆ ವಿದ್ಯುದಾವೇಶಗಳನ್ನು ಒಂದು ಬಿಂದುವಿನಿಂದ ಇನ್ನೊಂದು ಬಿಂದುವಿಗೆ ತರುವಲ್ಲಿ ನಡೆಯುವ ಕೆಲಸ.

ಸಿ)ವಿದ್ಯುತ್ ರೋಧ:- ವಾಹಕದಲ್ಲಿ ವಿದ್ಯುತ್ ಆವೇಶಗಳ ಹರಿವಿಗೆ ಅಡ್ಡಿಯುಂಟು ಮಾಡುವ ಗುಣ.

ಡಿ)ವಿದ್ಯುತ್ ಸಾಮರ್ಥ್ಯ:- ವಿದ್ಯುತ್ ಮಂಡಲದಲ್ಲಿ ಬಳಕೆಯಾಗುವ ಶಕ್ತಿಯ ದರ.

2. ಓಮ್‌ನ ನಿಯಮವನ್ನು ನಿರೂಪಿಸಿ. ಅದರ ಗಣಿತ ರೂಪವನ್ನು ಬರೆಯಿರಿ.

-ಸ್ಥಿರವಾದ ತಾಪಮಾನದಲ್ಲಿ ವಿದ್ಯುತ್ ಮಂಡಲದಲ್ಲಿನ ಲೋಹದ ತಂತಿಯ ನಡುವಿನ ವಿಭವಾಂತರ(V)ವು ಅದರ ಮೂಲಕ ಹರಿಯುವ ವಿದ್ಯುತ್ ಪ್ರವಾಹ(I)ಕ್ಕೆ ನೇರ ಅನುಪಾತದಲ್ಲಿರುತ್ತದೆ.

$$V \alpha R$$
$$V=IR$$

3. ಒಂದು ವಾಹಕದ ರೋಧವು ಅವಲಂಬಿಸಿರುವ ಅಂಶಗಳು ಯಾವುವು?

- ವಾಹಕದ ಉದ್ದ
- ವಾಹಕದ ಅಡ್ಡಕೊಯ್ತ (ದಪ್ಪ)
- ವಸ್ತುವಿನ(ವಾಹಕದ) ಪ್ರಾಕೃತಿಕ ಗುಣ

4. ವಿದ್ಯುತ್ ಪ್ರವಾಹದ ಉಷ್ಣೋತ್ಪಾದನಾ ಪರಿಣಾಮ ಎಂದರೇನು? ಈ ತತ್ವದ ಮೇಲೆ ಕಾರ್ಯನಿರ್ವಹಿಸುವ ಸಾಧನಗಳನ್ನು ಹೆಸರಿಸಿ.

- ಒಂದು ವಾಹಕದಲ್ಲಿ ವಿದ್ಯುತ್ ಹರಿದಾಗ, ಸ್ವಲ್ಪ ಪ್ರಮಾಣದ ಶಕ್ತಿಯು ಉಷ್ಣಶಕ್ತಿಯಾಗಿ ಪರಿವರ್ತನೆಯಾಗುತ್ತದೆ.

ಈ ಪರಿಣಾಮದ ಮೇಲೆ ಕಾರ್ಯನಿರ್ವಹಿಸುವ ಸಾಧನಗಳು -ವಿದ್ಯುತ್ ಬಲ್ಬ್, ಫ್ಯೂಜ್, ವಿದ್ಯುತ್ ಹೀಟರ್ ಇತ್ಯಾದಿ.

5. ವಿದ್ಯುತ್ ಫ್ಯೂಜ್ ಎಂದರೇನು? ಇದರಲ್ಲಿ ಬಳಸಿರುವ ವಸ್ತು ಯಾವುದು?

- ವಿದ್ಯುತ್ ಮಂಡಲವನ್ನು ಸಂರಕ್ಷಿಸುವ ಸರಳ ಸಾಧನವೇ ವಿದ್ಯುತ್ ಫ್ಯೂಜ್.

ಇದರಲ್ಲಿ ತವರ ಮತ್ತು ಸೀಸದ ಮಿಶ್ರಲೋಹದ ತಂತಿಯನ್ನು ಬಳಸುತ್ತಾರೆ.

6. ಜೌಲನ ಉಷ್ಣೋತ್ಪಾದನ ನಿಯಮವನ್ನು ವಿವರಿಸಿ.

- ಈ ನಿಯಮದ ಪ್ರಕಾರ ರೋಧಕದಲ್ಲಿ ಉತ್ಪತ್ತಿಯಾದ ಉಷ್ಣವು
- ಕೊಟ್ಟಿರುವ ರೋಧದಲ್ಲಿ ಪ್ರವಹಿಸುತ್ತಿರುವ ವಿದ್ಯುತ್ ಪ್ರವಾಹದ ವರ್ಗಕ್ಕೆ (I^2) ನೇರಾನುಪಾತದಲ್ಲಿರುತ್ತದೆ.
- ಕೊಟ್ಟಿರುವ ವಿದ್ಯುತ್ ಪ್ರವಾಹಕ್ಕೆ ರೋಧವು(R) ನೇರ ಅನುಪಾತದಲ್ಲಿರುತ್ತದೆ.
- ರೋಧಕಗಳ ಮೂಲಕ ಹರಿಯುವ ವಿದ್ಯುತ್ ಪ್ರವಾಹದ ಕಾಲಕ್ಕೆ(t) ನೇರ ಅನುಪಾತದಲ್ಲಿರುತ್ತದೆ.

7. ಕಾರಣ ಕೊಡಿ.

ಎ) ಒಂದು ವಿದ್ಯುತ್ ಮಂಡಲದಲ್ಲಿ ಒಂದು ವಿದ್ಯುತ್ ಬಲ್ಬ್ ಮತ್ತು ಒಂದು ವಿದ್ಯುತ್ ಹೀಟರ್ ಎರಡನ್ನೂ ಸರಣಿ ಕ್ರಮದಲ್ಲಿ ಜೋಡಿಸುವುದು ಅಪ್ರಾಯೋಗಿಕವಾಗಿದೆ.

- ಏಕೆಂದರೆ, ಸರಣಿ ಜೋಡಣೆಯಲ್ಲಿ ಎಲ್ಲಾ ಸಾಧನಗಳಿಗೂ ಏಕ ಮೌಲ್ಯದ ವಿದ್ಯುತ್ ಪ್ರವಾಹ ಹರಿಯುತ್ತದೆ. ವಿದ್ಯುತ್ ಬಲ್ಬ್ ಮತ್ತು ವಿದ್ಯುತ್ ಹೀಟರ್ ಸರಿಯಾಗಿ ಕಾರ್ಯನಿರ್ವಹಿಸಲು ವ್ಯಾಪಕವಾಗಿ ವಿಭಿನ್ನ ಮೌಲ್ಯಗಳ ವಿದ್ಯುತ್ ಪ್ರವಾಹದ ಅಗತ್ಯವಿದೆ.

ಬಿ) ವಿದ್ಯುತ್ ಫ್ಯೂಜ್‌ನಲ್ಲಿ ತವರ ಮತ್ತು ಸೀಸದ ಮಿಶ್ರಲೋಹದ ತಂತಿಯನ್ನು ಬಳಸುತ್ತಾರೆ.

-ಏಕೆಂದರೆ ಫ್ಯೂಜ್ ತಂತಿಯ ರೋಧ ಹೆಚ್ಚು ಮತ್ತು ಕರಗುವ ಬಿಂದು ಕಡಿಮೆ.

8. ಸಮಸ್ಯೆಗಳನ್ನು ಬಿಡಿಸಿ.

ಎ) 2 Ω, 4 Ω, 6 Ω ರೋಧಕಗಳನ್ನು
i)ಸರಣಿಯಲ್ಲಿ ಜೋಡಿಸಿದಾಗ
ii)ಸಮಾಂತರವಾಗಿ ಜೋಡಿಸಿದಾಗ ಉಂಟಾಗುವ ಒಟ್ಟು ರೋಧ ಎಷ್ಟು?

i)ಸರಣಿ ಜೋಡಣೆ

$Rs = R_1 + R_2 + R_3 = 2 + 4 + 6 = 12\,\Omega$

ii)ಸಮಾಂತರ ಜೋಡಣೆ

$$\frac{1}{Rp}=\frac{1}{R1}+\frac{1}{R2}+\frac{1}{R3}$$
$$=\frac{1}{2}+\frac{1}{4}+\frac{1}{6}$$
$$=\frac{6+3+2}{12} = \frac{11}{12} = 0.916\,\Omega$$

2)8Ω ರೋಧವನ್ನು ಹೊಂದಿರುವ ಇಲೆಕ್ಟ್ರಿಕ್ ಹೀಟರ್ ವಿದ್ಯುತ್‌ಮೈನ್‌ನಿಂದ 2 ಘಂಟೆಗಳವರೆಗೆ 15A ವಿದ್ಯುತ್ ಪ್ರವಾಹವನ್ನು ಪಡೆಯುತ್ತದೆ. ಇಲೆಕ್ಟ್ರಿಕ್ ಹೀಟರ್‌ನಲ್ಲಿ ಉತ್ಪತ್ತಿಯಾದ ಉಷ್ಣದ ದರವನ್ನು ಕಂಡುಹಿಡಿಯಿರಿ.

$R=8\Omega$, $I=15A$

$t=2$ ಘಂಟೆ $=2X60X60$ ಸೆಕೆಂಡ್

$H = I^2Rt$

$= (15)^2 X 8X2X60X60$

$=12960000$ J $=12960$ KJ

ಪರೀಕ್ಷೆಗೆ ನೀಡಬಹುದಾದ ಸಂಭವನೀಯ ಚಿತ್ರಗಳು:

ಎ)ವಿದ್ಯುನ್ಮಂಡಲದ ರೇಖಾಚಿತ್ರ (ಚಿತ್ರ-12.1)


ಬಿ)ವಿದ್ಯುತ್ ಮಂಡಲದಲ್ಲಿ ಸಾಮಾನ್ಯವಾಗಿ ಉಪಯೋಗಿಸುವ ಸಾಂಪ್ರದಾಯಿಕ ಚಿಹ್ನೆಗಳು(ಕೋಷ್ಟಕ 12.1)

ಸಿ)ಓಮ್‌ನ ನಿಯಮವನ್ನು ಅಭ್ಯಸಿಸಲು ವಿದ್ಯುತ್ ಮಂಡಲದ ಚಿತ್ರ (ಚಿತ್ರ-12.2)

ಡಿ)ಸರಣಿ ಕ್ರಮದಲ್ಲಿರುವ ರೋಧಕಗಳು(ಚಿತ್ರ-12.6)

ಇ)ಸಮಾಂತರ ಜೋಡಣೆಯಲ್ಲಿರುವ ರೋಧಕಗಳು(12.7)

ಎಸ್ಸೆಸ್ಸೆಲ್ಸಿ



ಬಾಲರಾಜು.ಎ ಎಂ.ಎಸ್ಸಿ., ಎಂ.ಇಡಿ.
ವಿಜ್ಞಾನ ಶಿಕ್ಷಕರು, ಚಿಕ್ಕಬಳ್ಳಾಪುರ

ಮಾದರಿ ಪ್ರಶ್ನೋತ್ತರ

ದ್ರಾವಣ ಮತ್ತು ದ್ರಾವ್ಯ ಕಣ

ರಸಾಯನ ಶಾಸ್ತ್ರ

1) ಯಾವುದನ್ನು ಸಮಾಂಗೀಯ ಮಿಶ್ರಣ ಎನ್ನುವರು?

ಉತ್ತರ:- ಸಮಾಂಗೀಯ ಮಿಶ್ರಣಗಳೆಂದರೆ ಮಿಶ್ರಣದುದ್ದಕ್ಕೂ ಇದರ ಸಂಯೋಜನೆ ಮತ್ತು ಗುಣಲಕ್ಷಣಗಳು ಏಕರೂಪವಾಗಿರುವ ಮಿಶ್ರಣವಾಗಿದೆ. ಇಲ್ಲಿ ದ್ರಾವಣಗಳು ಎರಡು ಅಥವಾ ಎರಡಕ್ಕಿಂತ ಹೆಚ್ಚು ಘಟಕಗಳ ಸಮನಾಗಿ ಮಿಶ್ರಣಗಳಾಗಿರುತ್ತವೆ (Homogeneous mixtures),

2) ಪರಿಮಾಣಾತ್ಮಕವಾಗಿ, ದ್ರಾವಣದ ಸಾರತೆಯನ್ನು ವಿವರಿಸಲು ಇರುವ ಮಾರ್ಗಗಳನ್ನು ತಿಳಿಸಿ

ಉತ್ತರ:- ಪರಿಮಾಣಾತ್ಮಕವಾಗಿ, ದ್ರಾವಣದ ಸಾರತೆಯನ್ನು ವಿವರಿಸಲು ಇರುವ ಮಾರ್ಗಗಳು:

i) **ಶೇಕಡವಾರು ದ್ರವ್ಯರಾಶಿ (W/W) :** (Mass Percentage w/w) ಒಂದು ದ್ರಾವಣದ, ಘಟಕವೊಂದರ ಶೇಕಡವಾರು ದ್ರವ್ಯರಾಶಿಯನ್ನು ಹೊಂದಿರುತ್ತದೆ. ಅದನ್ನು ಹೀಗೆ ವ್ಯಾಖ್ಯಾನಿಸಬಹುದು.

$$= \frac{\text{ದ್ರಾವಣದಲ್ಲಿರುವ ಘಟಕದ ದ್ರವ್ಯರಾಶಿ}}{\text{ದ್ರಾವಣದ ಒಟ್ಟು ದ್ರವ್ಯರಾಶಿ}} \times 100$$

(ii) **ಶೇಕಡವಾರು ಗಾತ್ರ :** (Volume Percentage V/V) ಒಂದು ದ್ರಾವಣದ ಶೇಕಡವಾರು ಗಾತ್ರವನ್ನು ಹೀಗೆ ವ್ಯಾಖ್ಯಾನಿಸಬಹುದು.

$$\text{ಒಂದು ಘಟಕದ ಶೇಕಡವಾರು ಗಾತ್ರ} = \frac{\text{ಘಟಕದ ಗಾತ್ರ}}{\text{ದ್ರಾವಣದ ಒಟ್ಟು ಗಾತ್ರ}} \times 100$$

(iii) **ಶೇಕಡವಾರು ಗಾತ್ರಾನುಸಾರ ರಾಶಿ :** (Mass by volume percentage, w/V)

ಶೇಕಡವಾರು ಗಾತ್ರಾನುಸಾರ ರಾಶಿ, ಇದು ವೈದ್ಯಕೀಯ ಮತ್ತು ಔಷಧ ವಿಜ್ಞಾನದಲ್ಲಿ (Pharmacy). ಸಾಮಾನ್ಯವಾಗಿ ಉಪಯೋಗಿಸುವ ಮತ್ತೊಂದು ಮೂಲಮಾನವಾಗಿದೆ. ಇದು, 100mL. ದ್ರಾವಣದಲ್ಲಿ ವಿಲೀನಗೊಂಡಿರುವ ದ್ರವ್ಯದ ರಾಶಿಯಾಗಿದೆ.

(iv) **ಪ್ರತಿ ಮಿಲಿಯನ್ನಿನ ಭಾಗಗಳು :** (Parts per million) ದ್ರಾವ್ಯವೊಂದು ಅತ್ಯಲ್ಪ ಪ್ರಮಾಣದಲ್ಲಿದ್ದಾಗ, ಸಾರತೆಯನ್ನು ಪ್ರತಿ ಮಿಲಿಯನ್ನಿನ ಭಾಗಗಳಲ್ಲಿ (PPM) ವ್ಯಕ್ತಪಡಿಸಲಾಗುವುದು. ಇದನ್ನು ಹೀಗೆ ವ್ಯಾಖ್ಯಾನಿಸಬಹುದು.

$$\text{ಪ್ರತಿ ಮಿಲಿಯನ್ನಿನ ಭಾಗಗಳು} = \frac{\text{ಘಟಕ ಒಂದರ ಭಾಗಗಳ ಸಂಖ್ಯೆ}}{\text{ದ್ರಾವಣದಲ್ಲಿರುವ ಎಲ್ಲಾ ಘಟಕಗಳ ಒಟ್ಟು ಸಂಖ್ಯೆ}} \times 10^6$$

(v) **ಮೋಲ್ ಭಿನ್ನಾಂಶ :** (Mole fraction) ಮೋಲ್‌ನ ಭಿನ್ನಾಂಶಕ್ಕೆ ಸಾಮಾನ್ಯವಾಗಿ ಉಪಯೋಗಿಸಿರುವ ಸಂಕೇತ x ಮತ್ತು ಇದರ ಬಲಭಾಗದಲ್ಲಿ ಉಪಯೋಗಿಸಿರುವ ಅಡಿಬರಹವು (Subscript) ಘಟಕವನ್ನು ಸೂಚಿಸುತ್ತದೆ. ಇದನ್ನು ಹೀಗೆ ವ್ಯಾಖ್ಯಾನಿಸಲಾಗಿದೆ:

$$\text{ಒಂದು ಘಟಕದ ಮೋಲ್ ಭಿನ್ನಾಂಶ} = \frac{\text{ಘಟಕದ ಮೋಲ್‌ಗಳ ಸಂಖ್ಯೆ}}{\text{ಎಲ್ಲಾ ಘಟಕಗಳ ಒಟ್ಟು ಮೋಲ್‌ಗಳ ಸಂಖ್ಯೆ}}$$

(vi) **ಮೊಲ್ಯಾರಿಟಿ (Molarity) :** ಮೊಲ್ಯರಿಟಿ (M)ನ್ನು ಒಂದು ಲೀಟರ್ (ಅಥವಾ ಒಂದು ಘನ ಡೆಸಿಮೀಟರ್) ದ್ರಾವಣದಲ್ಲಿ ವಿಲೀನವಾಗಿರುವ ದ್ರಾವ್ಯದ ಮೋಲ್‌ಗಳ ಸಂಖ್ಯೆ ಎಂದು ವ್ಯಾಖ್ಯಾನಿಸಲಾಗುವುದು.

$$\text{ಮೊಲ್ಯಾರಿಟಿ} = \frac{\text{ದ್ರಾವ್ಯದ ಮೋಲ್‌ಗಳು}}{\text{ಲೀಟರ್‌ನಲ್ಲಿ ದ್ರಾವಣದ ಗಾತ್ರ}}$$

(vii) **ಮೊಲ್ಯಾಲಿಟಿ :** ಮೊಲ್ಯಾಲಿಟಿ (m) ನ್ನು ಒಂದು ಕಿಲೋಗ್ರಾಮ್ (kg) ದ್ರಾವಕದಲ್ಲಿರುವ ದ್ರಾವ್ಯದ ಮೋಲ್‌ಗಳ ಸಂಖ್ಯೆ ಎಂದು ವ್ಯಾಖ್ಯಾನಿಸಬಹುದು ಮತ್ತು ಇದನ್ನು ಹೀಗೆ ವ್ಯಕ್ತಪಡಿಸಬಹುದು.

$$\text{ಮೊಲ್ಯಾಲಿಟಿ (m)} = \frac{\text{ದ್ರಾವ್ಯದ ಮೋಲ್‌ಗಳು}}{\text{ಕಿಲೋಗ್ರಾಂನಲ್ಲಿ ದ್ರಾವಕದ ರಾಶಿ}}$$

3) ವಿಲೀನತೆ ಯಾವುದರ ಮೇಲೆ ಅವಲಂಬಿಸಿರುತ್ತದೆ?

ಉತ್ತರ:-ಒಂದು ನಿಗದಿತ ತಾಪಮಾನದಲ್ಲಿ, ನಿರ್ದಿಷ್ಟ ಪ್ರಮಾಣದ ದ್ರಾವಕದಲ್ಲಿ, ಕರಗಿಸಬಹುದಾದ ವಸ್ತುವಿನ ಗರಿಷ್ಠ ಪ್ರಮಾಣವು, ಅದರ ವಿಲೀನತೆಯಾಗಿರುತ್ತದೆ. ಇದು ದ್ರಾವ್ಯ ಮತ್ತು ದ್ರಾವಕದ ಸ್ವಭಾವದ ಮೇಲೆ, ಅಲ್ಲದೆ ತಾಪಮಾನ ಮತ್ತು ಒತ್ತಡಗಳ ಮೇಲೆ ಅವಲಂಬಿಸಿರುತ್ತದೆ.

ಪಿಯುಸಿ

4) ಈ ಪ್ರಶ್ನೆಗಳಿಗೆ ಉತ್ತರಿಸಿ

ಎ) ಯಾವ ಪ್ರಕ್ರಿಯೆಯನ್ನು ವಿಲೀನಿಕರಣ (Dissolution) ಎನ್ನುವರು?

ಬಿ) ಯಾವುದಕ್ಕೆ ಹರಳುಗಟ್ಟುವಿಕೆ (ಸ್ಫಟೀಕೀಕರಣ : Crystallisation) ಎಂದು ಕರೆಯಲಾಗಿದೆ?

ಸಿ) ಯಾವಾಗ ಒಂದು ಚರಸಮಸ್ಥಿತಿಯ (Dynamic Equilibrium) ಹಂತವನ್ನು ತಲುಪುವುದು?

ಉತ್ತರ: (ಎ)ಘನ ದ್ರಾವ್ಯವೊಂದನ್ನು, ದ್ರಾವಕಕ್ಕೆ ಸೇರಿಸಿದಾಗ, ಸ್ವಲ್ಪ ದ್ರಾವ್ಯವು ವಿಲೀನಗೊಳ್ಳುತ್ತದೆ ಮತ್ತು ದ್ರಾವಣದಲ್ಲಿ ಇದರ ಸಾರತೆಯು ದ್ರಾವಣದಲ್ಲಿ ಹೆಚ್ಚುತ್ತದೆ. ಈ ಪ್ರಕ್ರಿಯೆಯನ್ನು ವಿಲೀನಿಕರಣ (Dissolution) ಎನ್ನುವರು.

(ಬಿ) ದ್ರಾವಣದಲ್ಲಿರುವ ಕೆಲವು ದ್ರಾವ್ಯದ ಕಣಗಳು, ಘನ ದ್ರಾವ್ಯದ ಕಣಗಳೊಂದಿಗೆ ಸಂಘಟಿಸಿ (Collide) ದ್ರಾವಣದಿಂದ ಪ್ರತ್ಯೇಕಗೊಳ್ಳುತ್ತವೆ. ಈ ಪ್ರಕ್ರಿಯೆಯನ್ನು ಹರಳುಗಟ್ಟುವಿಕೆ (ಸ್ಫಟೀಕೀಕರಣ : Crystallisation) ಎಂದು ಕರೆಯಲಾಗಿದೆ.

(ಸಿ) ವಿಲೀನಿಕರಣ ಮತ್ತು ಹರಳುಗಟ್ಟುವಿಕೆ ಎರಡೂ ಪ್ರಕ್ರಿಯೆಗಳು ಸಮಾನದರದಲ್ಲಿ ಜರಗುವ ಒಂದು ಹಂತವು ಉಂಟಾಗುವುದು. ಈ ಪರಿಸ್ಥಿತಿಯಲ್ಲಿ ದ್ರಾವಕರೂಪಕ್ಕೆ ಪ್ರವೇಶಿಸುವ ದ್ರಾವ್ಯದ ಕಣಗಳ ಸಂಖ್ಯೆಯು, ದ್ರಾವಣದಿಂದ ಪ್ರತ್ಯೇಕಗೊಳ್ಳುವ ದ್ರಾವ್ಯದ ಕಣಗಳ ಸಂಖ್ಯೆಗೆ ಸಮನಾಗಿರುವುದು. ಮತ್ತು ಒಂದು ಚರಸಮಸ್ಥಿತಿಯ (Dynamic Equilibrium) ಹಂತವನ್ನು ತಲುಪುವುದು.

5) ಸಂತೃಪ್ತ ದ್ರಾವಣ ಮತ್ತು ಅಸಂತೃಪ್ತ ದ್ರಾವಣದ ಬಗ್ಗೆ ಬರೆಯಿರಿ

ಉತ್ತರ:- ಚರಸಮಸ್ಥಿತಿಯ (Dynamic Equilibrium) ಹಂತದಲ್ಲಿ ಕೊಟ್ಟಿರುವ ನಿರ್ದಿಷ್ಟ ಒತ್ತಡ ಮತ್ತು ತಾಪಮಾನಗಳ ಪರಿಸ್ಥಿತಿಯಲ್ಲಿ ದ್ರಾವ್ಯದ ಸಾರತೆಯು, ದ್ರಾವಣದಲ್ಲಿ ಸ್ಥಿರವಾಗಿ ಉಳಿಯುವುದು. ಅನಿಲಗಳನ್ನು ದ್ರವ ದ್ರಾವಕಗಳಲ್ಲಿ ವಿಲೀನಗೊಳಿಸಿದಾಗ ಇದೇ ತರಹದ ಪ್ರಕ್ರಿಯೆಗಳು ಅನುಸರಿಸಲ್ಪಡುತ್ತದೆ. ಅದೇ ತಾಪಮಾನ ಮತ್ತು ಒತ್ತಡಗಳಲ್ಲಿ, ಮತ್ತಷ್ಟು ಹೆಚ್ಚಿನ ದ್ರಾವ್ಯವನ್ನು ವಿಲೀನಗೊಳಿಸಲು ಆಗದ, ಅಂತಹ ದ್ರಾವಣವನ್ನು ಸಂತೃಪ್ತ ದ್ರಾವಣ (Saturated Solution) ಎನ್ನುವರು. ಇದೇ ತಾಪಮಾನದಲ್ಲಿ ಇನ್ನೂ ಹೆಚ್ಚಿನ ದ್ರಾವ್ಯವನ್ನು ದ್ರಾವಣದಲ್ಲಿ ವಿಲೀನಗೊಳಿಸಬಹುದಾದರೆ, ಅದನ್ನು ಅಸಂತೃಪ್ತ ದ್ರಾವಣ (UnsaturatedSolution) ಎನ್ನುವರು

(ಮುಂದುವರಿಯುವುದು......)

ಸಹಕಾರ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ ಬೆಂಗಳೂರು



ಸುಭಾಷಿತ

ನೀವು ಸರಿಯಾದ ಮಾರ್ಗದಲ್ಲೇ ಇದ್ದರೂ ಅಲ್ಲಿ ಸುಮ್ಮನೇ ಕುಳಿತುಕೊಳ್ಳುವಿರಾದರೆ, ಬೇರೆಯವರು ಡಿಕ್ಕಿ ಹೊಡೆದು ನಿಮ್ಮನ್ನು ಬೀಳಿಸಿ ಮುಂದೆ ಸಾಗುತ್ತಾರೆ.

–ವಿಲ್ ರೋಜರ್ಸ್

ಎತ್ತಿನಹೊಳೆ ಯೋಜನೆ: ಅನುದಾನ ಬಿಡುಗಡೆಗೆ ವಿಳಂಬ ಸಲ್ಲದು

ನೀರಿನ ಕೊರತೆಯ ಸಮಸ್ಯೆ ಅತಿಯಾಗಿರುವ ರಾಜ್ಯದ ಪೂರ್ವ ಭಾಗದ ಏಳು ಜಿಲ್ಲೆಗಳಿಗೆ ಕುಡಿಯುವ ನೀರು ಪೂರೈಸುವುದಕ್ಕಾಗಿಯೇ ಎತ್ತಿನಹೊಳೆ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ. ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ರಾಮನಗರ, ತುಮಕೂರು, ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಯ ಕೆಲವು ಭಾಗಗಳಿಗೆ ಈ ಯೋಜನೆಯಿಂದ ನೀರು ಪೂರೈಸುವ ಗುರಿ ಇದೆ. ಪಶ್ಚಿಮಘಟ್ಟ ಶ್ರೇಣಿಯಿಂದ ಪಶ್ಚಿಮಾಭಿಮುಖವಾಗಿ ಹರಿದು ಸಮುದ್ರ ಸೇರುವ ನೀರನ್ನು ತಿರುಗಿಸಿ ಪೂರ್ವದ ಜಿಲ್ಲೆಗಳತ್ತ ಹರಿಸಿ, ಕುಡಿಯುವ ನೀರು ಪೂರೈಕೆಗೆ ಬಳಸುವುದು ಈ ಯೋಜನೆಯ ಉದ್ದೇಶ. ಯೋಜನಾ ಪ್ರದೇಶದ ಜಿಲ್ಲೆಗಳ ಕುಡಿಯುವ ನೀರಿನ ಅಗತ್ಯ ಮತ್ತು ಕೆರೆಗಳನ್ನು ತುಂಬಿಸುವುದಕ್ಕಾಗಿ 24.01 ಟಿಎಂಸಿ ಅಡಿಗಳಷ್ಟು ನೀರನ್ನು ಬಳಸಿಕೊಳ್ಳುವ ಪ್ರಸ್ತಾವವಿದೆ. ನೀರಿನ ಲಭ್ಯತೆಯ ಕುರಿತು ಪರ-ವಿರೋಧದ ಚರ್ಚೆಯ ನಡುವೆಯೇ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿತ್ತು. 29 ತಾಲ್ಲೂಕುಗಳ ವ್ಯಾಪ್ತಿಯ 38 ಪಟ್ಟಣ ಪ್ರದೇಶ ಮತ್ತು 6,657 ಗ್ರಾಮಗಳ 75.59 ಲಕ್ಷ ಜನರಿಗೆ ಈ ಯೋಜನೆಯಿಂದ ಅನುಕೂಲವಾಗಲಿದೆ ಎಂದು ಅಂದಾಜಿಸಲಾಗಿದೆ. 2012ರಲ್ಲಿ ₹ 8,323.50 ಕೋಟಿ ವೆಚ್ಚದ ಯೋಜನೆಗೆ ಅನುಮೋದನೆ ನೀಡಲಾಗಿತ್ತು. 2014ರಲ್ಲಿ ಯೋಜನೆಯ ಅಂದಾಜು ವೆಚ್ಚವನ್ನು ₹ 12,912.36 ಕೋಟಿಗೆ ಹೆಚ್ಚಿಸಲಾಯಿತು. 2014ರಲ್ಲೇ ಯೋಜನೆಯ ಕಾಮಗಾರಿಗೆ ಚಾಲನೆ ನೀಡಲಾಯಿತು. ಆದರೆ, ನಿಧಾನಗತಿಯಲ್ಲಿ ಕೆಲಸ ನಡೆಯುತ್ತಿರುವುದರಿಂದ ಯೋಜನಾ ವೆಚ್ಚದಲ್ಲಿ ಹೆಚ್ಚಳ ಆಗುತ್ತಲೇ ಇದೆ. ಎತ್ತಿನಹೊಳೆ ಯೋಜನೆಯ ಪರಿಷ್ಕೃತ ಅಂದಾಜನ್ನು ಅನುಮೋದಿಸಿ, ₹ 25,125 ಕೋಟಿ ವೆಚ್ಚದಲ್ಲಿ ಕಾಮಗಾರಿ ಪೂರ್ಣಗೊಳಿಸಲು ಅನುಮತಿ ನೀಡಬೇಕೆಂದು ಕೋರಿ ವಿಶ್ವೇಶ್ವರಯ್ಯ ಜಲ ನಿಗಮ ಸಲ್ಲಿಸಿರುವ ಪ್ರಸ್ತಾವ ಸರ್ಕಾರದ ಮುಂದಿದೆ. 2014ರಲ್ಲಿ ಅನುಮೋದಿಸಲಾದ ಪರಿಷ್ಕೃತ ಅಂದಾಜು ವರದಿಯಂತೆಯೇ ಈಗ ಕಾಮಗಾರಿ ನಡೆಯುತ್ತಿದೆ. ಎರಡು ಪ್ಯಾಕೇಜ್‌ಗಳಲ್ಲಿ 43 ಸ್ಥಳಗಳಲ್ಲಿ ಕಾಮಗಾರಿ ಕೈಗೆತ್ತಿಕೊಂಡಿದ್ದು, 42 ಸ್ಥಳಗಳಲ್ಲಿ ಕೆಲಸ ಪ್ರಗತಿಯಲ್ಲಿದೆ. 2020ರ ಮಾರ್ಚ್ ನಂತರ ಎತ್ತಿನಹೊಳೆ ಕಾಮಗಾರಿಗಳಿಗೆ ಸಮರ್ಪಕವಾಗಿ ಅನುದಾನ ಬಿಡುಗಡೆಯಾಗಿಲ್ಲ. ಗುತ್ತಿಗೆದಾರರಿಗೆ ಪಾವತಿಸಬೇಕಿರುವ ಬಾಕಿ ಬಿಲ್ ಮೊತ್ತ ₹ 3,600 ಕೋಟಿ ದಾಟಿದೆ. ಸರ್ಕಾರ ಒಂಬತ್ತು ತಿಂಗಳಿನಿಂದಲೂ ಈ ಯೋಜನೆಗೆ ಕಿಂಚಿತ್ತೂ ಅನುದಾನ ಬಿಡುಗಡೆ ಮಾಡದೇ ಇರುವುದರಿಂದ ಗುತ್ತಿಗೆದಾರರಿಗೆ ಬಿಲ್ ಪಾವತಿಸಲು ವಿಶ್ವೇಶ್ವರಯ್ಯ ಜಲ ನಿಗಮಕ್ಕೆ ಸಾಧ್ಯವಾಗಿಲ್ಲ. ಆರ್ಥಿಕ ಹೊರೆ ಹೆಚ್ಚಿದ ಕಾರಣದಿಂದ ಗುತ್ತಿಗೆದಾರರು ಬಹುತೇಕ ಸ್ಥಳಗಳಲ್ಲಿ ಕಾಮಗಾರಿ ನಿಲ್ಲಿಸಿದ್ದಾರೆ. ಹಣ ಬಿಡುಗಡೆಯ ವಿಷಯದಲ್ಲಿ ಸರ್ಕಾರ ತೋರುತ್ತಿರುವ ಅನಾದರದಿಂದಾಗಿಯೇ ಈ ಸ್ಥಿತಿ ನಿರ್ಮಾಣವಾಗಿದೆ. ಇದರಿಂದಾಗಿ ಎತ್ತಿನಹೊಳೆ ಯೋಜನೆ ಕಾಮಗಾರಿಗಳು ಸಕಾಲದಲ್ಲಿ ಮುಗಿಯುವ ಸಾಧ್ಯತೆ ಇಲ್ಲ ಎಂಬ ಅನುಮಾನಕ್ಕೆ ಎಡೆಮಾಡಿದೆ. ಎತ್ತಿನಹೊಳೆ ಯೋಜನೆಯ ಎಲ್ಲ ಕಾಮಗಾರಿಗಳನ್ನು 2022ರ ಸೆಪ್ಟೆಂಬರ್ ಅಂತ್ಯದೊಳಗೆ ಪೂರ್ಣಗೊಳಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ವಿಶ್ವೇಶ್ವರಯ್ಯ ಜಲ ನಿಗಮದ ಅಧಿಕಾರಿಗಳಿಗೆ ಇತ್ತೀಚೆಗೆ ಗಡುವು ನೀಡಿದ್ದರು. ಆದರೆ, ಈ ಯೋಜನೆಗೆ ಒಂಬತ್ತು ತಿಂಗಳಿನಿಂದ ಬಿಡಿಗಾಸೂ ಬಿಡುಗಡೆ ಆಗಿಲ್ಲ ಎಂಬುದು ಹಣಕಾಸು ಖಾತೆಯನ್ನೂ ಹೊಂದಿರುವ ಅವರಿಗೆ ತಿಳಿದಿರಲಿಲ್ಲವೇ ಎಂಬ ಪ್ರಶ್ನೆ ಸಹಜವಾಗಿಯೇ ಏಳುತ್ತದೆ.



ಎತ್ತಿನಹೊಳೆ ಯೋಜನೆಗೆ ಸಕಾಲದಲ್ಲಿ ಅನುದಾನ ಒದಗಿಸಿ, ಕಾಲಮಿತಿಯಲ್ಲಿ ಯೋಜನೆ ಪೂರ್ಣಗೊಳಿಸುವ ಬದ್ಧತೆಯನ್ನು ಸರ್ಕಾರ ಪ್ರದರ್ಶಿಸಬೇಕು

ಎತ್ತಿನಹೊಳೆ ಯೋಜನೆಯ ಕಾಮಗಾರಿ ಆರಂಭವಾಗಿ ಈಗಾಗಲೇ ಏಳು ವರ್ಷಗಳಾಗುತ್ತಿವೆ. ಈ ಅವಧಿಯಲ್ಲಿ ಯೋಜನಾ ವೆಚ್ಚ ಮೂರು ಪಟ್ಟಿನಷ್ಟು ಹೆಚ್ಚಾಗಿದೆ. ಸಕಾಲಕ್ಕೆ ಯೋಜನಾ ವರದಿ ಅನುಮೋದಿಸದೇ ಇರುವುದು ಮತ್ತು ಕಾಮಗಾರಿಗಳನ್ನು ವೇಗವಾಗಿ ನಡೆಸದೇ ಇರುವುದು ಇದಕ್ಕೆ ಕಾರಣ. ಈಗ ಪ್ರಗತಿಯಲ್ಲಿರುವ ಕಾಮಗಾರಿಗಳಿಗೆ ಬಿಲ್ ಸಲ್ಲಿಸಿ ಆರೇಳು ತಿಂಗಳು ಕಳೆದರೂ ಅನು ಮೋದಿಸಿ, ಅನುದಾನ ಬಿಡುಗಡೆಯಲ್ಲಿ ವಿಳಂಬ ಮಾಡಿರುವುದು ಯೋಜನಾ ವೆಚ್ಚ ಮತ್ತಷ್ಟು ಹೆಚ್ಚಳವಾಗಲು ಕಾರಣವಾಗುವ ಅಪಾಯವಿದೆ. ರಾಜ್ಯದ ಹಲವು ನೀರಾವರಿ ಯೋಜನೆಗಳು ವಿಳಂಬ ಧೋರಣೆಯಿಂದಾಗಿಯೇ ಕುಂಟುತ್ತಾ ಸಾಗಿವೆ. ಆರಂಭದ ಅಂದಾಜು ವೆಚ್ಚದ ಹತ್ತಾರು ಪಟ್ಟು ಹೆಚ್ಚು ಮೊತ್ತವನ್ನು ವೆಚ್ಚ ಮಾಡಬೇಕಾದ ಸ್ಥಿತಿ ಎದುರಾಗಿದ್ದು, ನೀರಾವರಿ ಯೋಜನೆಗಳ ಭಾರವನ್ನು ತಡೆದುಕೊಳ್ಳಲು ಸಾಧ್ಯವಿಲ್ಲದ ಸ್ಥಿತಿಯಲ್ಲಿ ರಾಜ್ಯ ಸರ್ಕಾರ ಇದೆ. ಈಗ ಅವುಗಳ ಪಟ್ಟಿಗೆ ಎತ್ತಿನಹೊಳೆ ಯೋಜನೆಯೂ ಸೇರಿಕೊಳ್ಳಲು ಸರ್ಕಾರವೇ ಅವಕಾಶ ಕಲ್ಪಿಸುತ್ತಿರುವುದು ಸಮಂಜಸವಲ್ಲ. ಎತ್ತಿನಹೊಳೆ ಯೋಜನಾ ವ್ಯಾಪ್ತಿಯಲ್ಲಿರುವ ಬಹುತೇಕ ಜಿಲ್ಲೆಗಳಲ್ಲಿ ಅಂತರ್ಜಲ ಮಟ್ಟ ಕುಸಿತವಾಗಿದ್ದು, ಫ್ಲೋರೈಡ್‌ಯುಕ್ತ ನೀರನ್ನೇ ಕುಡಿಯಬೇಕಾದ ದುಃಸ್ಥಿತಿ ಇದೆ. ಈ ಸಮಸ್ಯೆಗೆ ಪರಿಹಾರ ಒದಗಿಸುವುದಕ್ಕೆ ರೂಪಿಸಿರುವ ಯೋಜನೆಯನ್ನು ತ್ವರಿತವಾಗಿ ಪೂರ್ಣಗೊಳಿಸಿ, ಬಯಲುಸೀಮೆಯ ಜಿಲ್ಲೆಗಳ ಜನರಿಗೆ ಉತ್ತಮ ಗುಣಮಟ್ಟದ ಕುಡಿಯುವ ನೀರನ್ನು ಪೂರೈಸಬೇಕಾದ ಗುರುತರವಾದ ಜವಾಬ್ದಾರಿ ಸರ್ಕಾರದ ಮೇಲಿದೆ. ಈ ಯೋಜನೆಯನ್ನು ಪೂರ್ಣಗೊಳಿಸುವುದರಲ್ಲಿನ ವಿಳಂಬವು ಬಯಲುಸೀಮೆಯ ಜಿಲ್ಲೆಗಳ ಜನರು ಗುಣಮಟ್ಟದ ಕುಡಿಯುವ ನೀರನ್ನು ಬಳಸುವ ಅವಕಾಶದಿಂದ ವಂಚಿತರಾಗಲು ಕಾರಣವಾಗುತ್ತದೆ. ಈ ವಿಚಾರದಲ್ಲಿ ನಿರ್ಲಕ್ಷ್ಯ ಮತ್ತು ಅನಾದರ ಸಲ್ಲದು. ವಿಳಂಬ ಧೋರಣೆಯು ಭವಿಷ್ಯದ ದಿನಗಳಲ್ಲಿ ಬೊಕ್ಕಸದ ಮೇಲೆ ಬೃಹತ್ ಹೊರೆ ಬೀಳಲು ಕಾರಣವಾಗುತ್ತದೆ ಎಂಬ ಎಚ್ಚರಿಕೆಯಿಂದ ಸರ್ಕಾರ ಕೆಲಸ ಮಾಡಬೇಕು. ಕೆಲಸ ಪೂರೈಸಿದ ಗುತ್ತಿಗೆದಾರರಿಗೆ ತಿಂಗಳುಗಟ್ಟಲೆ ಬಿಲ್ ಪಾವತಿಸದೆ ಸತಾಯಿಸುವ ಧೋರಣೆಗೆ ವಿದಾಯ ಹೇಳಬೇಕು. ಎತ್ತಿನಹೊಳೆ ಯೋಜನೆಗೆ ಸಕಾಲದಲ್ಲಿ ಅನುದಾನ ಒದಗಿಸಿ, ಕಾಲಮಿತಿಯಲ್ಲಿ ಯೋಜನೆ ಪೂರ್ಣಗೊಳಿಸುವ ಬದ್ಧತೆಯನ್ನು ಸರ್ಕಾರ ಪ್ರದರ್ಶಿಸಬೇಕು. ಈಗ ಬಾಕಿ ಇರುವ ₹ 3,600 ಕೋಟಿ ಮೊತ್ತದ ಬಿಲ್‌ಗಳ ಪಾವತಿಗೆ ತ್ವರಿತವಾಗಿ ಅನುದಾನ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಬೇಕು. ಬಿಲ್ ಪಾವತಿಸುವುದರ ಜತೆಗೆ ತ್ವರಿತವಾಗಿ ಎಲ್ಲ ಸ್ಥಳಗಳಲ್ಲೂ ಕೆಲಸ ಪುನಃ ಆರಂಭಿಸಲು ಕ್ರಮ ಕೈಗೊಳ್ಳಬೇಕಾದ ಜವಾಬ್ದಾರಿಯೂ ಸರ್ಕಾರದ ಮೇಲಿದೆ.

ದಿನದ ಟ್ವೀಟ್

ನ್ಯಾಯ ಸಿಗಲಿ



ಪುಲ್ವಾಮಾದಲ್ಲಿ ಹುತಾತ್ಮರಾದ ನಮ್ಮ ಸಿಆರ್‌ಪಿಎಫ್ ಯೋಧರಿಗೆ ನ್ಯಾಯ ಸಿಗುವುದು ಯಾವಾಗ? ತನಿಖೆಯ ಗತಿ ಏನಾಗಿದೆ? ಆರ್‌ಡಿಎಕ್ಸ್ ತಂದಿದ್ದವರು ಯಾರು? ಉಗ್ರರಿಗೆ ನೆರವಾದವರು ಯಾರು? ಎಂದಿಗೂ ಕ್ಷಮಿಸುವುದಿಲ್ಲ, ಎಂದಿಗೂ ಮರೆಯುವುದಿಲ್ಲ. ಫೆಬ್ರುವರಿ 14, ಭಾರತಕ್ಕೆ ಕರಾಳ ದಿನ!

ನೀಲೇಶ್ ಯಾದವ್, ನಾಗರಿಕ

ಕಿಡಿನುಡಿ



ಗೋವಾ ಚುನಾವಣೆ ಸಂದರ್ಭದಲ್ಲಿ ಎಎಪಿ ಮತ್ತು ಕಾಂಗ್ರೆಸ್ ಬೆಂಬಲಿಗರಿಬ್ಬರೂ ಎದುರಾಳಿ ಪಕ್ಷವನ್ನು ಗುರಿಯಾಗಿಸಿ ನಕಲಿ ವಾಟ್ಸ್‌ಆ್ಯಪ್ ಚಾಟ್‌ಗಳನ್ನು ಬಳಸಿದ್ದಾರೆ. 'ನಕಲಿ' ವಿಡಿಯೊವನ್ನು ಎಎಪಿ ಸೃಷ್ಟಿಸಿದೆ ಎಂದು ಕಾಂಗ್ರೆಸ್ ಬೆಂಬಲಿಗರು ಆರೋಪಿಸಿದ್ದರೆ, ಕಾಂಗ್ರೆಸ್ ಪಕ್ಷವು ನಾಯಕರ ಖರೀದಿ ನಡೆಸಿರುವುದಾಗಿ ಎಎಪಿ ಬೆಂಬಲಿಗರು ದೂರಿದ್ದಾರೆ. #AltNewsFactCheck

ಮೊಹಮ್ಮದ್ ಜುಬೇರ್, ಸಹ ಸಂಸ್ಥಾಪಕ, ಆಲ್ಟ್‌ನ್ಯೂಸ್ ಫ್ಯಾಕ್ಟ್‌ಚೆಕ್ ಸಂಸ್ಥೆ

25 ವರ್ಷಗಳ ಹಿಂದೆ

ಶನಿವಾರ, 15-2-1997

- **'ಲೋಕಶಕ್ತಿ' ಸ್ಥಾಪನಾ ಸಮಾವೇಶಕ್ಕೆ ಸಿದ್ಧತೆ**

ಬೆಂಗಳೂರು, ಫೆ. 14– ಭಾನುವಾರ ಉದಯವಾಗಲಿರುವ ರಾಮಕೃಷ್ಣ ಹೆಗಡೆ ಅವರ ನೇತೃತ್ವದ ಹೊಸ ಪಕ್ಷ 'ಲೋಕಶಕ್ತಿ'ಯ ಸಂಸ್ಥಾಪನಾ ಸಮಾವೇಶಕ್ಕಾಗಿ ಅರಮನೆ ಆವರಣದಲ್ಲಿ ಭರದಿಂದ ಸಿದ್ಧತೆಗಳು ನಡೆಯುತ್ತಿವೆ.

ಮೈದಾನದ ಮಧ್ಯಭಾಗದಲ್ಲಿ 'ಸುಭಾಷ್‌ಚಂದ್ರ ಮಂಟಪ' ಎಂಬ ಬೃಹತ್ ಸಭಾಂಗಣದ ನಿರ್ಮಾಣ ಕಾರ್ಯ ತೀವ್ರ-ಗತಿಯಲ್ಲಿ ಸಾಗುತ್ತಿದೆ. ವೇದಿಕೆಯ ಒಂದೆಡೆ ಗಾಂಧೀಜಿ ಅವರ ದಂಡಿಯಾತ್ರೆಯ ದೃಶ್ಯ ಮತ್ತೊಂದೆಡೆ ಜಯಪ್ರಕಾಶ್ ನಾರಾಯಣ ಅವರ ಸಂಪೂರ್ಣ ಕ್ರಾಂತಿಯ ದೃಶ್ಯ ಇರಲಿದೆ.

- **ಸಾಂಸ್ಕೃತಿಕ ಅವನತಿ ತಡೆಗೆ ನೀತಿ ರೂಪಿಸಲು ಸರ್ಕಾರ ಸಿದ್ಧ**

ಬೆಂಗಳೂರು, ಫೆ. 14– ದೂರದರ್ಶನದ ಹಲವಾರು ಚಾನೆಲ್‌ಗಳು ಪ್ರದರ್ಶಿಸುವ ಅಶ್ಲೀಲ ಚಿತ್ರಗಳ ಪರಿಣಾಮವಾಗಿ ಆಗುತ್ತಿರುವ ಸಾಂಸ್ಕೃತಿಕ ಅವನತಿ ತಡೆಗೆ ನೀತಿ ನಿಯಮಾವಳಿ ರೂಪಿಸಲು, ಉಭಯ ಸದನಗಳಲ್ಲಿ ನಿರ್ಣಯ ತೆಗೆದುಕೊಂಡು ಕೇಂದ್ರ ಸರ್ಕಾರಕ್ಕೆ ಕಳುಹಿಸಲು ಸರ್ಕಾರ ಸಿದ್ಧ ಎಂದು ಸಭಾನಾಯಕ ಎಂ.ಸಿ.ನಾಣಯ್ಯ ಇಂದು ವಿಧಾನ ಪರಿಷತ್ತಿನಲ್ಲಿ ಭರವಸೆ ನೀಡಿದರು.

50 ವರ್ಷಗಳ ಹಿಂದೆ

ಮಂಗಳವಾರ, 15-2-1972

- **'ರಾಜ್ಯಗಳಲ್ಲಿ 'ಜೀ ಹುಜೂರ್' ಸರ್ಕಾರ ಇರಬೇಕೆಂಬ ವಾದ ಜನತಂತ್ರದ ಕೊಲೆ'**

ಬೆಂಗಳೂರು, ಫೆ. 14– ಸುಭದ್ರ ಸರ್ಕಾರದ ಹೆಸರಲ್ಲಿ ಕೇಂದ್ರದ ತಾಳಕ್ಕೆ ಕುಣಿಯುವ 'ಜೀ ಹುಜೂರ್' ರಾಜ್ಯ ಸರ್ಕಾರಗಳಿರಬೇಕೆಂಬ ವಾದ 'ಜನತಂತ್ರದ ಕೊಲೆ' ಎಂದು ಸಂಸ್ಥಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ವೀರೇಂದ್ರ ಪಾಟೀಲರು ಇಂದು ಇಲ್ಲಿ ನುಡಿದರು.

ಶೇಷಾದ್ರಿಪುರದಲ್ಲಿ ಪಕ್ಷದ ಚುನಾವಣಾ ಪ್ರಚಾರ ಉದ್ಘಾಟಿಸಿದ ಅವರು, ಸುಭದ್ರ ಸರ್ಕಾರವನ್ನು ಉರುಳಿಸುವ ಪ್ರವೃತ್ತಿಯನ್ನು ಮೈಸೂರಿನಿಂದಲೇ ಅನುಸರಿಸಿದ ಆಡಳಿತ ಕಾಂಗ್ರೆಸ್ ಈಗ ಆ ಮಾತನ್ನಾಡುವುದು ಸರಿಯಲ್ಲವೆಂದು ಹೇಳಿ, 'ನಾವೇನು ಪ್ರತಿಗಾಮಿಗಳಾಗಿದ್ದೇವೇನು?' ರಾಜ್ಯದ ಕಲ್ಯಾಣಕ್ಕೆ ದುಡಿಯುತ್ತಿರಲಿಲ್ಲವೇನು' ಎಂದು ಪ್ರಶ್ನಿಸಿದರು.

ಐಪಿಎಲ್ ಬಲವರ್ಧನೆಗೂ ಬೇಕು ದೇಶಿ ಕ್ರಿಕೆಟ್; ಸಮರ್ಥರಿಗೆ ತಪ್ಪದ ಸ್ಥಾನ

ದೇಶಿ ಪ್ರತಿಭೆಗಳಿಗೆ 'ಮೆಗಾ' ಅವಕಾಶ



ವಿಶ್ಲೇಷಣೆ

ಗಿರೀಶ ದೊಡ್ಡಮನಿ

ಭಾರತ ಕ್ರಿಕೆಟ್ ತಂಡದ 'ಕ್ಯಾಪ್' ಧರಿಸುವ ಅವಕಾಶದ ನಿರೀಕ್ಷೆಯಲ್ಲಿರುವ ಯುವ ಆಟಗಾರರ ದೊಡ್ಡ ದಂಡು ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಮೆಗಾ ಹರಾಜಿನಲ್ಲಿ ಕೋಟಿ ಕೋಟಿ ಹಣ ಬಾಚಿಕೊಂಡಿತು.

19 ವರ್ಷದ ರಾಜ್ ಬಾವಾ, ಯಶ್ ಧುಳ್, ಕರ್ನಾಟಕದ 27 ವರ್ಷದ ಅಭಿನವ್ ಮನೋಹರ್ ಸದಾರಂಗನಿ ಹೀಗೆ ಪಟ್ಟಿ ಬೆಳೆಯುತ್ತದೆ. ಭಾರತದ ಕ್ರಿಕೆಟ್ ಅಭಿಮಾನಿಗಳಿಗೆ ಈ ಹುಡುಗರ ಮುಖಗಳು ಅಷ್ಟೇನೂ ಚಿರಪರಿಚಿತವಲ್ಲ. ಆದರೆ, ಐಪಿಎಲ್ ಫ್ರ್ಯಾಂಚೈಸಿಗಳ ಮಾಲೀಕರು ಮತ್ತು ಪರಿಣತರ ಕಣ್ಣಿಗೆ ಇವರು ಬಿದ್ದಿದ್ದು ಹೇಗೆ?

ಭಾರತದ ಕ್ರಿಕೆಟ್‌ನ ಜೀವನಾಡಿ ದೇಶಿ ಟೂರ್ನಿಗಳು ಇದಕ್ಕೆ ಕಾರಣ ಎಂದರೆ ಅತಿಶಯೋಕ್ತಿಯೇನಲ್ಲ. ಒಂದು ನದಿ ಭರಪೂರ ಹರಿಯಲು ಜಲಾನಯನ ಪ್ರದೇಶ ಇರುವಂತೆ ದೇಶದ ಕ್ರಿಕೆಟ್ ಶ್ರೀಮಂತಗೊಳಿಸಲು ದೇಶಿ ಕ್ರಿಕೆಟ್ ಎಂಬ ಅಚ್ಚುಕಟ್ಟು ಇದೆ. ಈ ಬಾರಿಯ ಲಿಲಾವು ಪ್ರಕ್ರಿಯೆಯಲ್ಲಿ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಗೂ ಇದು ಮನದಟ್ಟಾಗಿರಬಹುದು. ಇತ್ತೀಚೆಗೆ ರಣಜಿ ಟೂರ್ನಿ ಆಯೋಜಿಸಲು ಮೀನಮೇಷ ಎಣಿಸಿದ್ದ (ಕೋವಿಡ್ ಕಾರಣಕ್ಕಾಗಿ) ಬಿಸಿಸಿಐ ಟೀಕೆಗೂ ಒಳಗಾಗಿತ್ತು. ನಂತರ ಪರಿಷ್ಕೃತ ವೇಳಾಪಟ್ಟಿ ರಚಿಸಿ ಇದೇ 17ರಿಂದ ಟೂರ್ನಿಯನ್ನು ಆರಂಭಿಸುತ್ತಿದೆ. ಕೆಲವು ವರ್ಷಗಳಿಂದ ರಾಷ್ಟ್ರೀಯ ತಂಡಗಳ ಆಯ್ಕೆಗೆ ಐಪಿಎಲ್‌ನಲ್ಲಿ ಮಿಂಚಿದವರಿಗೆ ಮಣೆ ಹಾಕುವ ರೂಢಿ ಆಯ್ಕೆ ವ್ಯವಸ್ಥೆಯಲ್ಲಿ ನುಸುಳಿದೆ. ಆದರೆ ಆ ಹಾದಿಯಲ್ಲಿ ಬಂದು ರಾಷ್ಟ್ರೀಯ ತಂಡದಲ್ಲಿ ಸಫಲರಾದವರ ಸಂಖ್ಯೆ ಕಡಿಮೆ.

ಆದರೆ, ರಣಜಿ ಟ್ರೋಫಿ, ವಿಜಯ್ ಹಜಾರೆ ಮತ್ತು ಸೈಯದ್ ಮುಷ್ತಾಕ್ ಅಲಿ ಟಿ20 ಟೂರ್ನಿಯಲ್ಲಿ ಗಟ್ಟಿ ಗುರುತು ಮೂಡಿಸಿದವರು ಐಪಿಎಲ್‌ಗೂ ಸೈ, ಅಂತರರಾಷ್ಟ್ರೀಯ ಕ್ರಿಕೆಟ್‌ಗೂ ಸೈ ಎಂದು ತೊಡೆ ತಟ್ಟಿರುವ ಉದಾಹರಣೆಗಳು ಹಲವಾರು ಇವೆ. ಈ ಬಾರಿ ಅತಿ ಹೆಚ್ಚು ಮೌಲ್ಯ ಪಡೆದ ಇಶಾನ್ ಕಿಶನ್, ಶ್ರೇಯಸ್ ಅಯ್ಯರ್, ಎರಡು ಕೋಟಿ ರೂಪಾಯಿ ಗಿಟ್ಟಿಸಿದ ಹತ್ತೊಂಬತ್ತು ವರ್ಷದ ರಾಜ್ ಅಂಗದ್ ಬಾವಾ, ₹ 50 ಲಕ್ಷ ಬಾಚಿಕೊಂಡ ಯಶ್ ಧುಳ್, ರಾಹುಲ್ ಚಾಹರ್, ಜೈದೇವ್ ಉನದ್ಕತ್, ₹2.60 ಕೋಟಿ ಗಳಿಸಿದ ಕನ್ನಡಿಗ ಅಭಿನವ್ ಮನೋಹರ್ ಮತ್ತು ₹ 10 ಕೋಟಿ ಗಳಿಸಿದ ವೇಗಿ ಪ್ರಸಿದ್ಧಕೃಷ್ಣ ಹೀಗೆ ದೊಡ್ಡ ಪಟ್ಟಿ ಬೆಳೆಯುತ್ತದೆ. ಕ್ರಿಕೆಟ್ ಕಲಿಕೆಯಲ್ಲಿ ಮಕ್ಕಳು ಕೌಶಲ, ತಂತ್ರಗಾರಿಕೆ, ನಾಯಕತ್ವ ಗುಣಗಳನ್ನು ಕಲಿಯುವುದೇ ವಯೋಮಿತಿಯ ದೇಶಿ ಟೂರ್ನಿಗಳಲ್ಲಿ. ಕೆ.ಎಲ್. ರಾಹುಲ್, ಮಯಂಕ್ ಅಗರವಾಲ್, ಮನೀಷ್ ಪಾಂಡೆ, ರಾಬಿನ್ ಉತ್ತಪ್ಪ ಅವರು ಇಷ್ಟು ವರ್ಷ ಕಣದಲ್ಲಿ ಬೆಳಗುತ್ತಿರುವುದು ಇದೇ ಕಾರಣಕ್ಕೆ ಅಲ್ಲವೇ?

ಅಷ್ಟಕ್ಕೂ ಫ್ರ್ಯಾಂಚೈಸಿಗಳು ಇಂತಹದೊಂದು ಯೋಚನೆ ಮಾಡಲು ಪ್ರತೀ ಐಪಿಎಲ್ ತಂಡಗಳಿಗೆ ಮೆಂಟರ್ ಮತ್ತು ತರಬೇತುದಾರರಾಗಿರುವ ದಿಗ್ಗಜ ಕ್ರಿಕೆಟಿಗರು ಕಾರಣ ಎಂಬುದರಲ್ಲಿ ಅನುಮಾನವಿಲ್ಲ. ಪ್ರವೀಣ ಆಮ್ರೆ, ಅನಿಲ್ ಕುಂಬ್ಳೆ, ಜಹೀರ್ ಖಾನ್ ಮತ್ತು ಶ್ರೀಲಂಕಾದ ಕುಮಾರ ಸಂಗಕ್ಕಾರ ಅವರಂತಹ ದಿಗ್ಗಜರು ತಂಡಗಳಲ್ಲಿರುವುದು ಐಪಿಎಲ್ 'ಶ್ರೀಮಂತಿಕೆ' ಹೆಚ್ಚಿಸಿದೆ.

ಈ ಬಾರಿ ಹರಾಜಿನಲ್ಲಿ ಪಾಲ್ಗೊಂಡ ಹತ್ತು ತಂಡಗಳೂ ಕೆಲವು ವಿಭಿನ್ನ ತಂತ್ರಗಳನ್ನು ಅನುಸರಿಸಿದ್ದು ಗಮನ ಸೆಳೆಯಿತು. ಹಣ ವಿನಿಯೋಗಿಸುವಾಗ ಅವಸರ ಪಡದೇ, ವಿದೇಶಿ ವ್ಯಾಮೋಹಕ್ಕೂ ಒಳಗಾಗದೇ ಅತೀವ ಎಚ್ಚರಿಕೆಯಿಂದ ಆಯ್ಕೆ ಮಾಡಿಕೊಂಡವು. ತಮ್ಮ ತಂಡದ ಹಳೆಯ ಆಟಗಾರರನ್ನೇ ಮರಳಿ ಹೆಚ್ಚು ಹಣ ಕೊಟ್ಟು ಕೊಳ್ಳಲು ಹಿಂಜರಿಯಲಿಲ್ಲ. ಆದ್ದರಿಂದಲೇ ಇಶಾನ್ ಕಿಶನ್, ಹರ್ಷಲ್ ಪಟೇಲ್, ದೀಪಕ್ ಚಾಹರ್ ಅವರಂತಹ ಪ್ರತಿಭಾವಂತರು 'ತವರು' ತಂಡಕ್ಕೇ ಮರಳಿದರು. ಅದೂ ಎರಡೂವರೆ–ಮೂರು ಪಟ್ಟು ಹಣದ ಥೈಲಿಯೊಂದಿಗೆ!

ಮೂರು ವರ್ಷಗಳ ಹಿಂದಷ್ಟೇ ಇದೇ ಮುಂಬೈ ತಂಡವು ₹ 6.20 ಕೋಟಿ ಕೊಟ್ಟು ಇಶಾನ್ ಅವರನ್ನು ಸೆಳೆದಿತ್ತು. ಇದೀಗ ₹15.25 ಕೋಟಿ ಕೊಟ್ಟು ಮತ್ತೆ ಕೊಂಡುಕೊಂಡಿದೆ. ಸಿಎಸ್‌ಕೆಯ ಚಾಹರ್ ₹14 ಕೋಟಿ ಮತ್ತು ಆರ್‌ಸಿಬಿಯ ಹರ್ಷಲ್ ₹ 8 ಕೋಟಿ ಗಳಿಸಿದರು. ಆದರೆ, ತಮ್ಮ ಬೌಲಿಂಗ್ ವಿಭಾಗವನ್ನು ಬಲಿಷ್ಠಗೊಳಿಸುವ ದಿಸೆಯಲ್ಲಿ ಮುಂಬೈ ತೆಗೆದುಕೊಂಡ ನಿರ್ಧಾರ ಅಚ್ಚರಿ ಮೂಡಿಸಿತು. ಹಲವು ತಿಂಗಳುಗಳಿಂದ ಗಾಯಗೊಂಡು ಕ್ರಿಕೆಟ್‌ನಿಂದ ದೂರವೇ ಇರುವ ಇಂಗ್ಲೆಂಡ್ ವೇಗಿ ಜೋಫ್ರಾ ಆರ್ಚರ್ ಅವರನ್ನು ಭಾರಿ ಮೊತ್ತಕ್ಕೆ ಖರೀದಿಸಿತು. ರಾಯಲ್ ಚಾಲೆಂಜರ್ಸ್ ಬೆಂಗಳೂರು ಕೂಡ ಇದಕ್ಕೆ ಹೊರತಲ್ಲ. ಶ್ರೀಲಂಕಾದ ವಣಿಂದು ಹಸರಂಗಾ ಅವರ ಮೇಲೆ ದೊಡ್ಡ ಮೊತ್ತ ವಿನಿಯೋಗಿಸಿತು. ಅಲ್ಲದೇ ಅನುಭವಿ ದಿನೇಶ್ ಕಾರ್ತಿಕ್ ಮತ್ತು ಫಫ್ ಡುಪ್ಲೆಸಿ ಅವರನ್ನೂ ಸೇರ್ಪಡೆ ಮಾಡಿಕೊಂಡಿದೆ. ಉಳಿದಂತೆ ಯುವ ಕ್ರಿಕೆಟಿಗರಿಗೆ ಆದ್ಯತೆ ನೀಡಿದೆ. ಅದರಲ್ಲಿ ಕನ್ನಡಿಗ ಅನೀಶ್ವರ್ ಗೌತಮ್ ಇದ್ದಾರೆ.

ಫಾರ್ಮ್‌ನಲ್ಲಿ ಇಲ್ಲದ, ವಯಸ್ಸು ಮೀರಿರುವ ಮತ್ತು ಕಳಂಕಿತ ಆಟಗಾರರತ್ತ ಫ್ರ್ಯಾಂಚೈಸಿಗಳು ಕಣ್ಣು ಹಾಯಿಸಲಿಲ್ಲ. ಕೋಟ್ಯಂತರ ಹಣವನ್ನು ವಿನಿಯೋಗಿಸಿಕೊಳ್ಳುವ ಆಟಗಾರರು ಬ್ರ್ಯಾಂಡ್ ಮೌಲ್ಯ ಹೆಚ್ಚಿಸುವ ರಾಯಭಾರಿಗಳಾಗಲೇಬೇಕು ಎಂಬ ಉತ್ಕಟತೆ ಮಾಲೀಕರ ಯೋಜನೆಗಳಲ್ಲಿ ಢಾಳಾಗಿ ಕಂಡಿತು. ಅದಕ್ಕಾಗಿಯೇ ಸ್ಪಾಟ್ ಫಿಕ್ಸಿಂಗ್ ಹಗರಣದಲ್ಲಿ ಸಿಲುಕಿದ್ದ ಎಸ್. ಶ್ರೀಶಾಂತ್, ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಹೇಳಿರುವ ಸುರೇಶ್ ರೈನಾ ಅವರು ಬಿಕರಿಯಾಗದೇ ಉಳಿದರು. ದಿಗ್ಗಜ ಸಚಿನ್ ತೆಂಡೂಲ್ಕರ್ ಪುತ್ರ ಅರ್ಜುನ್ ತೆಂಡೂಲ್ಕರ್ ಅವರನ್ನು ಮುಂಬೈ ಇಂಡಿಯನ್ಸ್ ತಂಡವೇ ಮತ್ತೊಮ್ಮೆ ₹ 30 ಲಕ್ಷಕ್ಕೆ ಖರೀದಿಸಿತು. ಅಪ್ಪನ ತಾರಾ ವರ್ಚಸ್ಸು, ತಂಡದ ನಂಟಿಗಿಂತಲೂ ಪ್ರತಿಭೆ ಮತ್ತು ಸಾಮರ್ಥ್ಯವೇ ಮುಖ್ಯ ಎಂಬುದಕ್ಕೆ ಅರ್ಜುನ್ ಉದಾಹರಣೆಯಾಗುತ್ತಾರೆ.

ದೇಶಿ ಕ್ರಿಕೆಟ್‌ನಲ್ಲಿ ಕಳೆದೆರಡು ವರ್ಷಗಳಲ್ಲಿ ಹೆಚ್ಚಿನ ಸಾಧನೆಯನ್ನೇನೂ ಮಾಡದ ಕರ್ನಾಟಕದ ಕರುಣ್ ನಾಯರ್ ಕೊನೆಗೂ ಅವಕಾಶ ಗಿಟ್ಟಿಸಿದ್ದಾರೆ. ₹ 1.40 ಕೋಟಿ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ಟೆಸ್ಟ್ ಕ್ರಿಕೆಟ್‌ನಲ್ಲಿ ತ್ರಿಶತಕ ಬಾರಿಸಿದ ನಂತರ ರಾಷ್ಟ್ರೀಯ ತಂಡದಲ್ಲಿ ಸ್ಥಾನ ಉಳಿಸಿಕೊಳ್ಳುವಲ್ಲಿ ಅವರು ಯಶಸ್ವಿಯಾಗಿಲ್ಲ. ರಾಜ್ಯ ತಂಡದಲ್ಲಿಯೂ ಅವರ ಸಾಧನೆ ಅಷ್ಟಕ್ಕಷ್ಟೇ. ತಂಡದ ಇನ್ನೊಬ್ಬ ಪ್ರತಿಭಾವಂತ ಆಲ್‌ರೌಂಡರ್ ಕೆ. ಗೌತಮ್ ₹ 90 ಲಕ್ಷಕ್ಕೆ ಬಿಕರಿಯಾದರು. ಆದರೆ, ಕಳೆದ ಬಾರಿ ಅವರನ್ನು ಚೆನ್ನೈ ತಂಡವು ₹9.25 ಕೋಟಿ ಕೊಟ್ಟು ಖರೀದಿಸಿತ್ತು. ಒಂದೇ ವರ್ಷದಲ್ಲಿ ಅವರ ಮೌಲ್ಯ ಇಷ್ಟೊಂದು ಕುಸಿದಿದ್ದು ಹೇಗೆ? ಅದರ ಮಾನದಂಡವೇನು ಎಂಬುದು ಸ್ಪಷ್ಟವಾಗಿಲ್ಲ. ಆದರೆ ಕಳೆದ ಸೈಯದ್ ಮುಷ್ತಾಕ್ ಅಲಿ ಟೂರ್ನಿಯಲ್ಲಿ ನಾಲ್ಕು ಪಂದ್ಯಗಳನ್ನು ಆಡಿ ದೊಡ್ಡ ಸಿಕ್ಸರ್, ಬೌಂಡರಿ ಸಿಡಿಸಿದ್ದ ಅಭಿನವ್ ₹ 2.60 ಕೋಟಿ ಗಿಟ್ಟಿಸಿದರು. ಇದು ಕೂಡ ದೇಶಿ ಕ್ರಿಕೆಟ್‌ಗೆ ಸಂದ ಶ್ರೇಯ.

ಇದೇ ನೆಪದಲ್ಲಿ ಐಪಿಎಲ್‌ನಲ್ಲಿ ದೇಶಿ ಕ್ರಿಕೆಟ್‌ಗೆ ಸಿಗುತ್ತಿರುವ ಮನ್ನಣೆಯು ಭವಿಷ್ಯದಲ್ಲಿ ದುಪ್ಪಟ್ಟಾಗುವ ಸಣ್ಣ ಆಸೆ ಚಿಗುರಿದೆ. ಇದು ಇಂದಿನ ಅಗತ್ಯವೂ ಆಗಿದೆ. ಏಕೆಂದರೆ, ಇಂಗ್ಲೆಂಡ್ ತಂಡವು ಸಾಲು ಸಾಲು ಸೋಲು ಅನುಭವಿಸುತ್ತಿರುವುದರ ಹಿಂದೆ ಅಲ್ಲಿಯ ಕೌಂಟಿ ಕ್ರಿಕೆಟ್ ದುರ್ಬಲಗೊಂಡಿರುವುದೇ ಕಾರಣ ಎಂದು ಆ ದೇಶದ ದಿಗ್ಗಜ ಆಟಗಾರರೇ ಹೇಳಿದ್ದಾರೆ. ಅದರಿಂದಲೂ ಬಿಸಿಸಿಐ ಪಾಠ ಕಲಿಯಬೇಕು. ಐಪಿಎಲ್ ಹಣದ ಹೊಳೆಯೊಂದಿಗೆ ಕ್ರಿಕೆಟ್ ಅಂಗಳದ ನೈಜ ಕಳೆಯನ್ನು ಹೆಚ್ಚಿಸಬೇಕಲ್ಲವೇ?



ಚುರುಮುರಿ



ಶಾಸಕರ ಡೇಟ್ಬೆಟ್

• ಲಿಂಗರಾಜು ಡಿ.ಎಸ್.

ಎಂಎಲ್‌ಎ ಸಯಾಬ್ರು ವತ್ತಾರೆಗೇ ಸಿಟಿ ರೌಂಡ್ಸ್ ಹೋಗಿದ್ರು. ಎರಡು ದಿನದಿಂದ ನಲ್ಲೀಲಿ ನೀರು ಬಂದಿಲ್ಲ ಅಂತ ಜನ ರಾಂಗಾಗಿ ಘೇರಾವ್ ಮಾಡಿದಾಗ ಫೋನ್ ತಗಂಡೋರೆ, ಜಲಮಂಡಲಿ ಎಂಜಿನೀರಿಗೆ ತಾರಾಮಾರಾ ಬೋದು, 'ಇನ್ನು ಹತ್ತು ನಿಮಿಸದಲ್ಲಿ ನೀರು ಬರದಿದ್ರೆ ಸಸ್ಪೆಂಡಾಯ್ತಿಯ!' ಅಂತ ಧಮಕಿ ಹಾಕಿದ್ರು. ಐದೇ ನಿಮಿಸದಲ್ಲಿ ನೀರು ಬಂದಾಗ ಜನ ಸಯಾಬ್ರಿಗೆ ಜೈ ಅಂದು ನಲ್ಲಿತಕ್ಕೆ ಓಡೋದ್ರು!

ಅಲ್ಲಿಂದ ಸರ್ಕಾರಿ ಆಸ್ಪತ್ರೆ ತಾವ್ಕೋದಾಗ ಜನರ ಗುಂಪು ಸೇರಿತ್ತು. ಸಯಾಬ್ರುನ್ನ ನೋಡಿದ ಜನ 'ಯಾವಾಗ್ಲೂ ಡಾಕ್ಟ್ರು ಇಲ್ಲ ಅಂತ್ಲೇ ಹೇಳತರೆ' ಅಂದಾಗ ಸಯಾಬ್ರು ಡಾಕ್ಟ್ರಿಗೆ ಫೋನ್ ಮಾಡಿ, 'ಲೇಯ್ ಡಾಕ್ಟ್ರೆ, ಇನ್ನೈದು ನಿಮಿಸದೇಲಿ ಆಸ್ಪತ್ರೇಲಿರಬೇಕು. ಇಲ್ಲಾಂದ್ರೆ ನೀರು-ನೆಳ್ಳು ಇಲ್ಲದ ಜಾಗ ತೋರಿಸ್ತೀನಿ' ಅಂತ ಗುಟುರು ಹಾಕಿದರು.

ಡಾಕ್ಟ್ರು ಐದು ನಿಮಿಸದೇಲಿ ಬಂದು 'ವ್ಯಾಕ್ಸೀನು, ಕೊರೊನಾ ಮಾತ್ರೆ ಸಪ್ಲೇ ಇಲ್ಲ ಸಾ' ಅಂತ ಅಲವತ್ತುಗಂಡರು. ಸಯಾಬ್ರು ಯಾರಿಗೋ ಫೋನ್ ಮಾಡಿ, 10 ನಿಮಿಸದೇಲಿ ಲಸಿಕೆ, ಮಾತ್ರೆ ತರಿಸಿ ಜನಕ್ಕೆ ಕೊಡಿಸಿದ್ರು. ಜನೆಲ್ಲಾ ಖುಷಿಯಾಗಿ ಜೈಕಾರ ಕೂಗಿದರು.

ಮಧ್ಯಾಹ್ನ ಕೆಡಿಪಿ ಮೀಟಿಂಗಲ್ಲಿ ಸಯಾಬ್ರು ಎಲ್ಲಾ ಅಧಿಕಾರಿಗಳಿಗೆ ಚೆನ್ನಾಗಿ ಕ್ಲಾಸು ತಗಂಡು 'ಜನದ ದುಡ್ಡು ವಿಸ ಇದ್ದಂಗೆ. ಜಾಸ್ತಿ ತಿಂದ್ರೆ ಸತ್ತೋಯ್ತಿಯ' ಅಂದುದ್ದ ನೋಡಿದ ಪೇಪರ್ನೋರು 'ಸಯಾಬ್ರು ಘಾಟಿ ಮನುಷ್ಯ!' ಅಂದು ನಾಳಿನ ಬ್ರೇಕಿಂಗ್ ನ್ಯೂಸ್ ಬರಕತಿದ್ರು.

ರೆಸಾರ್ಟಿಗೆ ಎಂಎಲ್‌ಎ ಸಯಾಬ್ರು ಬಂದಾಗ ರಾತ್ರಿಯಾಗಿತ್ತು. ಎಲ್ಲಾ ಡಿಪಾರ್ಟ್‌ಮೆಂಟ್ ಅಧಿಕಾರಿಗಳೂ ಇದ್ರು. ಸಯಾಬ್ರು 'ನಾನು ಬೈದೆ ಅಂತ ಯಾರೂ ಬೇಜಾರು ಮಾಡಿಕ್ಯಬೇಡಿ ಕಣ್ರೋ! ಜನದ ಮುಂದೆ ಸ್ಕೋಪು ತಗಳಕೆ ಬೈದಂಗೆ ಮಾಡ್ತೀನಿ. ಒಂದೊಂದು ಏರಿಯಾದಲ್ಲಿ ಹಿಂಗೇ ಪ್ರಾಬ್ಲಂ ಕ್ರಿಯೇಟ್ ಮಾಡಿ ನನಗೆ ಮೊದಲೇ ಹೇಳ್ರಿ' ಅಂತ ಆರ್ಡ್ರು ಕೊಟ್ಟು ಮನೆಗೆ ಹೊಂಟ್ರು.

ಸಂಗತ

ಎಲ್ಲೆ ಮೀರುವ 'ನಾಗರಿಕ'ರು

ಬೇರೆಯವರ ಬದುಕಿನ ಸ್ವಾತಂತ್ರ್ಯಕ್ಕೆ ಧಕ್ಕೆಯಾಗದಂತೆ ಬದುಕುವ ಅತ್ಯಂತ ಮಹತ್ವದ ಸಾಮಾಜಿಕ ಜವಾಬ್ದಾರಿಯನ್ನು ನಾವೆಲ್ಲ ರೂಢಿಸಿಕೊಳ್ಳಬೇಕಿದೆ

• ರಾಜಕುಮಾರ ಕುಲಕರ್ಣಿ

ನಮ್ಮ ಪಕ್ಕದ ಮನೆಯಲ್ಲಿ ಮಗುವಿನ ಹುಟ್ಟುಹಬ್ಬವನ್ನು ಇತ್ತೀಚೆಗೆ ಅತ್ಯಂತ ಸಡಗರದಿಂದ ಆಚರಿಸಿದರು. ಮನೆಯ ಮಾಳಿಗೆಯನ್ನು ವಿದ್ಯುತ್ ದೀಪಗಳಿಂದ ಅಲಂಕರಿಸಿ ಸುಂದರ ವೇದಿಕೆಯನ್ನು ಸಜ್ಜುಗೊಳಿಸಿದ್ದರು. ಸಂಜೆ ಏಳು ಗಂಟೆಗೆ ಆರಂಭಗೊಂಡ ಆಚರಣೆ ಬೆಳಗಿನ ಎರಡು ಗಂಟೆಯವರೆಗೆ ಹಾಡು, ಕುಣಿತದಂಥ ಮನರಂಜನೆಗಳಿಂದ ಅವ್ಯಾಹತವಾಗಿ ಸಾಗಿತು. ಧ್ವನಿವರ್ಧಕ ಮತ್ತು ಸೇರಿದ್ದವರ ಜೋರಾದ ಸದ್ದುಗದ್ದಲಕ್ಕೆ ಅಕ್ಕಪಕ್ಕದ ಮನೆಯವರು ಅಷ್ಟೂ ಹೊತ್ತು ನಿದ್ದೆ ಇಲ್ಲದೆ ಜಾಗರಣೆ ಮಾಡಬೇಕಾಯಿತು.

ಪಕ್ಕದ ಕೆಲವು ಮನೆಗಳಲ್ಲಿ ಮಕ್ಕಳು ಪರೀಕ್ಷೆಗಾಗಿ ಓದಿಕೊಳ್ಳುತ್ತಿದ್ದರು, ಜ್ವರದಿಂದ ಬಳಲುತ್ತಿದ್ದ ಅಜ್ಜ ಆಸ್ಪತ್ರೆಯಿಂದ ಮರಳಿಬಂದು ವಿಶ್ರಾಂತಿ ಪಡೆಯುತ್ತಿದ್ದರು. ದಿನವಿಡೀ ದುಡಿದು ಹೈರಾಣಾದವರು ಹಾಸಿಗೆಗೆ ಮೈಚಾಚಿ ಮಲಗುವ ಸಿದ್ಧತೆಯಲ್ಲಿದ್ದರು. ಸಂಭ್ರಮಾಚರಣೆಯಲ್ಲಿ ಮೈಮರೆತಿದ್ದವರಿಗೆ ಈ ಯಾವ ಸಂಗತಿಗಳೂ ನೆನಪಿಗೆ ಬರಲಿಲ್ಲ. ವೈಯಕ್ತಿಕ ಖುಷಿಯ ಆದ್ಯತೆಯೊಂದೇ ಮುನ್ನೆಲೆಗೆ ಬಂದು, ಬೇರೆಯವರಿಗಾಗುತ್ತಿದ್ದ ಹಿಂಸೆಯ ಅರಿವು ಹಿನ್ನೆಲೆಗೆ ಸರಿದಿತ್ತು.

ನಿವೃತ್ತಿಯ ಅಂಚಿಗೆ ತಲುಪಿರುವ ನಮ್ಮ ಓಣಿಯಲ್ಲಿನ ಹಿರಿಯರೊಬ್ಬರು ಪ್ರತಿನಿತ್ಯ ತಮ್ಮ ಕಚೇರಿಯಿಂದ ಸಾಯಂಕಾಲ ಮನೆಗೆ ನಡೆದುಕೊಂಡು ಬರುವುದನ್ನು ರೂಢಿಸಿಕೊಂಡಿದ್ದಾರೆ. ಸಮೀಪದ ಕೆಲಸ ಕಾರ್ಯಗಳಿಗೂ ಅವರು ಕಾಲ್ನಡಿಗೆಯನ್ನೇ ಅಭ್ಯಾಸ ಮಾಡಿಕೊಂಡಿದ್ದಾರೆ. ಕಚೇರಿಯಿಂದ ಹಿಂದಿರುಗುವ ವೇಳೆ ಓಣಿಯಲ್ಲಿ ಯಾರಾದರೂ ಎದುರಾದರೆ 'ಇವತ್ತು ಜೀವಂತವಾಗಿ ಮನೆಗೆ ಬಂದೆ ನೋಡಿ' ಎನ್ನುತ್ತಾ ಮುಗುಳ್ನಗುತ್ತಾರೆ. ಆ ಹಿರಿಯರು ಹೀಗೆ ಹೇಳುವುದಕ್ಕೂ ಕಾರಣವಿದೆ. ವಾಹನ ಸವಾರರು ಅದರಲ್ಲೂ ವಿಶೇಷವಾಗಿ ಯುವಕರು ರಸ್ತೆಯ ಮೇಲೆ ವಾಹನ ಓಡಿಸುವುದನ್ನು ನೋಡಿಯೇ ಆನಂದಿಸಬೇಕು. ದ್ವಿಚಕ್ರ ವಾಹನದ ಮೇಲೆ ಸಂಚರಿಸುವ ಯುವಕರಂತೂ ಇನ್ನೇನು ಪಾತಾಳವನ್ನೇ ಸ್ಪರ್ಶಿಸುತ್ತಿರುವರೇನೋ ಎನ್ನುವಂತೆ ವಾಹನವನ್ನು ಡೊಂಕಾಗಿಸಿ ಓಡಿಸುವುದು ಸಾಮಾನ್ಯ ದೃಶ್ಯವಾಗಿರುತ್ತದೆ. ಇಂಥ ಸಂದರ್ಭದಲ್ಲೆಲ್ಲ ಆ ಯುವಕರು ಅವರ ಜೊತೆಗೆ ತಮ್ಮನ್ನೂ ಅಪಘಾತಕ್ಕೆ ಒಳಗಾಗಿಸುವರೇನೋ ಎನ್ನುವಷ್ಟು ಭಯ ಪಾದಚಾರಿಗಳನ್ನು ಕಾಡುತ್ತದೆ.

ಈ ನಡುವೆ ಮದ್ಯ ಸೇವಿಸಿ ಇಲ್ಲವೇ ಮೊಬೈಲ್‌ನಲ್ಲಿ ಮಾತನಾಡುತ್ತ ಸಂಚರಿಸುವ ವಾಹನ ಸವಾರರ ಸಂಖ್ಯೆಯೇನೂ ಕಡಿಮೆ ಇರುವುದಿಲ್ಲ. ಸಾರ್ವಜನಿಕ ರಸ್ತೆಯನ್ನೇ ಸರ್ಕಸ್ಸಿನ ಡೇರೆಯಾಗಿಸಿಕೊಂಡು, ಎರಡೂ ಕೈಗಳನ್ನು ಹಿಂದೆ ಕಟ್ಟಿಕೊಂಡು ವಾಹನ ಓಡಿಸುವ ಸಾಹಸಿಗರನ್ನು ಕಡೆಗಣಿಸುವಂತಿಲ್ಲ. ತಮ್ಮ ಎಂಟ್ಹತ್ತು ವರ್ಷದ ಪುಟಾಣಿಯ ಕೈಗೆ ವಾಹನದ ಲಗಾಮು ಕೊಟ್ಟು, ಹಿಂದೆ ಕುಳಿತು ಅತ್ಯಂತ ಉಮೇದಿಯಿಂದ ನಿರ್ದೇಶಿಸುವ ಪಾಲಕರೂ ಆಗಾಗ ಗೋಚರಿಸುತ್ತಾರೆ.

ನನ್ನ ಇನ್ನೊಬ್ಬ ಮಿತ್ರನಿಗಾದ ಅನುಭವ ತುಂಬ ವಿಭಿನ್ನವಾದದ್ದು. ನೀಟಾಗಿ ಡ್ರೆಸ್ ಮಾಡಿಕೊಂಡು ದ್ವಿಚಕ್ರ ವಾಹನದಲ್ಲಿ ಪ್ರತಿದಿನದಂತೆ ಕಚೇರಿಗೆ ಹೊರಟವನಿಗೆ ದಾರಿ ಮಧ್ಯದಲ್ಲಿ ತಲೆ ಮೇಲೆ ನೀರಿನ ಸಿಂಚನವಾದ ಅನುಭವವಾಯಿತು. ಮೋಡವಿಲ್ಲದ ಶುಭ್ರವಾದ ಆಕಾಶ, ಕಣ್ಣು ಕೋರೈಸುವ ಬಿಸಿಲಿದ್ದ ವಾತಾವರಣದಲ್ಲಿ ಇದೆಂಥ ಮಳೆ ಎಂದು ತಲೆ ಎತ್ತಿ ಪಕ್ಕಕ್ಕೆ ನೋಡಿದವನಿಗೆ ಸರ್ಕಾರಿ ಬಸ್ಸಿನ ಕಿಟಕಿಯೊಳಗಿಂದ ಹೊರಗೆ ಚಾಚಿದ ಮುಖ ಗೋಚರಿಸಿತು. ಆ ಮುಖದ ಬಾಯಿಯೊಳಗಿಂದ ಪಿಚಕಾರಿಯಂತೆ ಸಿಡಿದುಬಂದ ರಸೋತ್ಪತ್ತಿ ಮತ್ತೊಮ್ಮೆ ಅವನ ಶಿರದ ಮೇಲೆ ಶಿರಸ್ಥಾಯಿಯಾಯಿತು. ಅರ್ಧದಾರಿವರೆಗೂ ಬಂದಿದ್ದ ನನ್ನ ಸ್ನೇಹಿತನ ಪರಿಸ್ಥಿತಿ ವರ್ಣಿಸಲಸದಳವಾಗಿತ್ತು. ಅಂಥ ಸ್ಥಿತಿಯಲ್ಲೇ ಕಚೇರಿಗೆ ಹೋಗುವಂತಿಲ್ಲ, ಮನೆಗೆ ಹಿಂತಿರುಗಿ ಬಟ್ಟೆ ಬದಲಿಸಿಕೊಂಡು ಬರಲು ಸಮಯದ ಕೊರತೆ. ಜೊತೆಗೆ ತನ್ನದಲ್ಲದ ತಪ್ಪಿಗೆ ಎದುರಿಸಬೇಕಾದ ಅಪಮಾನದ ಭಾವದಿಂದ ಭೂಮಿಯೊಳಕ್ಕೆ ಹೂತುಹೋದ ಅನುಭವ ಅವನದಾಗಿತ್ತು.



ಖಾಸಗಿ ಸಮಾರಂಭಕ್ಕಾಗಿ ಮನೆಯ ಎದುರಿನ ರಸ್ತೆಯನ್ನು ಅತಿಕ್ರಮಿಸಿಕೊಳ್ಳುವುದು, ಅಮಾವಾಸ್ಯೆ-ಹಬ್ಬಗಳಂದು ವಾಹನಗಳನ್ನು ತೊಳೆಯಲು ಸಾವಿರಾರು ಲೀಟರ್ ನೀರು ವ್ಯರ್ಥ ಮಾಡುವುದು, ವಿದ್ಯುತ್ ಯಂತ್ರದಿಂದ ಸಾರ್ವಜನಿಕ ನಲ್ಲಿಯಿಂದ ಒಂದು ತೊಟ್ಟೂ ಬಿಡದಂತೆ ನೀರನ್ನು ಹೀರಿ ಉಳಿದ ಮನೆಗಳಲ್ಲಿ ನೀರಿನ ಕೊರತೆ ಹುಟ್ಟಿಸುವುದು... ಹೀಗೆ ಅದೆಷ್ಟೋ ಸಮಾಜವಿರೋಧಿ ಕೆಲಸಗಳಲ್ಲಿ ಮನುಷ್ಯರು ತೊಡಗಿಸಿಕೊಳ್ಳುತ್ತಿರುವುದು ಸಾಮಾನ್ಯವಾಗಿದೆ. ತನ್ನ ಇಂಥ ಅನಾಗರಿಕ ವರ್ತನೆಯಿಂದ ಬೇರೆಯವರಿಗೆ ತೊಂದರೆಯಾಗುತ್ತಿದೆ ಎನ್ನುವ ಕಿಂಚಿತ್ ಪ್ರಜ್ಞೆಯೂ ಇಲ್ಲದಂತೆ ಮನುಷ್ಯ ಅಸಂವೇದಿಯಾಗುತ್ತಿದ್ದಾನೆ.

ಭೈರಪ್ಪನವರ 'ತಂತು' ಕಾದಂಬರಿಯಲ್ಲಿ ಹೀಗೊಂದು ಮಾತಿದೆ: 'ಜನರು ಮೂಲತಃ ಒಳ್ಳೆಯವರು, ಕೆಟ್ಟೋರು ಅನ್ನೂ ವಿಂಗಡಣೆ ಸರಿಯಲ್ಲ. ಅವರು ಗೊಬ್ಬರದ ಥರ ಇದ್ದಾರೆ. ಗೊಬ್ಬರ ಒಯ್ದು ತೆಂಗಿನ ಮರಕ್ಕೆ ಹಾಕಿದರೆ ಅದೂ ಫಲ ಕೊಡುತ್ತೆ, ಪಾಪಾಸು ಕಳ್ಳಿಗೆ ಹಾಕಿದರೆ ಅದೂ ಹೊರವಾಗಿ ಬೆಳೆಯುತ್ತೆ. ಗೊಬ್ಬರದ ಹಂಗಿರೊ ಅವರನ್ನು ನಿಜವಾದ ಜನರ ಹಂಗೆ ಮನುಷ್ಯರ ಹಂಗೆ ಮಾಡ್ತೂದೇ ಮೂಲ ಪ್ರಶ್ನೆ'.

ಮನುಷ್ಯನ ಆಲೋಚನಾ ಮಟ್ಟದಲ್ಲಿ, ಅವನ ವರ್ತನೆಯಲ್ಲಿ, ಬದುಕಿನ ರೀತಿಯಲ್ಲಿ, ಸಮಾಜವನ್ನು ನೋಡುವ ಕ್ರಮದಲ್ಲಿ ಬಹಳಷ್ಟು ಸುಧಾರಣೆಯಾಗಬೇಕಿದೆ. ವೈಯಕ್ತಿಕ ಆದ್ಯತೆಗಳಿಂದ ಸಮಾಜದ ಸ್ವಾಸ್ಥ್ಯ ಕೆಡದಂತೆ ಮತ್ತು ಬೇರೆಯವರ ಬದುಕಿನ ಸ್ವಾತಂತ್ರ್ಯಕ್ಕೆ ಧಕ್ಕೆಯಾಗದಂತೆ ಬದುಕುವ ಅತ್ಯಂತ ಮಹತ್ವದ ಸಾಮಾಜಿಕ ಜವಾಬ್ದಾರಿಯನ್ನು ನಾವೆಲ್ಲ ರೂಢಿಸಿಕೊಳ್ಳಬೇಕಿದೆ.

ವಾಚಕರ ವಾಣಿ

ಧರ್ಮ–ರಾಜಕಾರಣದ ಹಸ್ತಕ್ಷೇಪ ಸಲ್ಲದು

ಕೊರೊನಾ ಕಾರಣದಿಂದ ಶಾಲಾ-ಕಾಲೇಜುಗಳಿಗೆ ಸತತವಾಗಿ ರಜೆ ಘೋಷಿಸಲಾಗಿತ್ತು. ಎಷ್ಟೋ ವಿದ್ಯಾರ್ಥಿಗಳು ಆನ್‌ಲೈನ್ ಶಿಕ್ಷಣ ಪಡೆದುಕೊಂಡರು. ಹಾಗೇ ಎಷ್ಟೋ ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತರಾದರು. ಅದರಲ್ಲೂ ಪದವಿ ವಿದ್ಯಾರ್ಥಿಗಳ ಶೈಕ್ಷಣಿಕ ವರ್ಷದಲ್ಲಿ ಏರುಪೇರುಗಳಾಗಿ, ಉನ್ನತ ಶಿಕ್ಷಣಕ್ಕೆ ಹೋಗುವ ವಿದ್ಯಾರ್ಥಿಗಳು ತೊಂದರೆ ಅನುಭವಿಸಬೇಕಾಯಿತು.

ಈಗ ಪದವಿ ವಿದ್ಯಾರ್ಥಿಗಳ ಪರೀಕ್ಷೆ ಪ್ರಾರಂಭವಾಗುವ ಹಂತದಲ್ಲಿದೆ. ಬಹಳಷ್ಟು ಕಾಲೇಜುಗಳಲ್ಲಿ ಪದವಿ ಪಠ್ಯಕ್ರಮ ಪೂರ್ಣಗೊಂಡಿಲ್ಲ. ಇಂತಹ ಸಂದರ್ಭದಲ್ಲಿ ಹಿಜಾಬ್– ಕೇಸರಿ ಶಾಲು ವಿವಾದದ ಹಿನ್ನೆಲೆಯಲ್ಲಿ ಕಾಲೇಜುಗಳಿಗೆ ರಜೆ ಘೋಷಿಸುವಂತಹ ಸ್ಥಿತಿ ಎದುರಾಗಿದ್ದು ವಿಷಾದಕರ. ವಿದ್ಯಾರ್ಥಿಗಳಲ್ಲಿ ಸೌಹಾರ್ದದ ಬಗ್ಗೆ ಮನವರಿಕೆ ಮಾಡಬೇಕಾಗಿದೆ. ಶೈಕ್ಷಣಿಕ ವ್ಯವಸ್ಥೆಯಲ್ಲಿ ಧರ್ಮ ಮತ್ತು ರಾಜಕಾರಣದ ಹಸ್ತಕ್ಷೇಪ ಸಲ್ಲ.

ಅಣ್ಣಾರಾಯ ಜಿ.ಪಿ., ಕಲಬುರಗಿ

ಸಾಲದ ಸುಳಿಯಿಂದ ಪಾರು ಮಾಡಿ

ಉತ್ತಮ ಸಾರಿಗೆ ವ್ಯವಸ್ಥೆಯಲ್ಲಿ ಕೆಎಸ್‌ಆರ್‌ಟಿಸಿ ದೇಶದಲ್ಲೇ ನಂಬರ್ ಒನ್ ಸಂಸ್ಥೆಯೆಂಬ ಹೆಗ್ಗಳಿಕೆಗೆ ಪಾತ್ರವಾಗಿತ್ತು. ಈಗ ರಾಜ್ಯದ ನಾಲ್ಕು ನಿಗಮಗಳಾದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ (ಕೆಎಸ್‌ಆರ್‌ಟಿಸಿ), ಬೆಂಗಳೂರು ಮಹಾನಗರ ಸಾರಿಗೆ ನಿಗಮ (ಬಿಎಂಟಿಸಿ), ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮ (ಎನ್‌ಡಬ್ಲ್ಯುಕೆಆರ್‌ಟಿಸಿ), ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮ (ಎನ್‌ಇಕೆಆರ್‌ಟಿಸಿ) ಸಾಲದ ಸುಳಿಯಲ್ಲಿ ಸಿಲುಕಿ ಒದ್ದಾಡುತ್ತಿವೆ. ಬಿಡಿಭಾಗಗಳು, ಬ್ಯಾಟರಿ, ಡೀಸೆಲ್ ಖರೀದಿ, ಬಸ್‌ಗಳ ನಿರ್ವಹಣೆ, ಡಿಪೊಗಳ ಖರ್ಚು ವೆಚ್ಚ, ನೌಕರರ ಸಂಬಳಕ್ಕೂ ಹಣವಿಲ್ಲದೆ ನಿಗಮಗಳು ಪರದಾಡುತ್ತಿವೆ. ಸಾರಿಗೆ ನಿಗಮಗಳಿಗೆ ಸರ್ಕಾರ ಹಣದ ಸಹಾಯ ಮಾಡದೆ ಕೈಚೆಲ್ಲಿದೆ. ಇದರಿಂದ ನಿಗಮಗಳು ಸಾಲಕ್ಕಾಗಿ ಬ್ಯಾಂಕ್ ಬಾಗಿಲು ಬಡಿಯುತ್ತಿವೆ.

ಸಾರಿಗೆ ನಿಗಮಗಳು ಈ ಸ್ಥಿತಿಗೆ ಬರಲು ಕಾರಣ ಏನು? ಆಡಳಿತ ವೈಫಲ್ಯವೇ? ಸೋರಿಕೆಯೇ? ನಿಯಂತ್ರಣಕ್ಕೆ ಬಾರದ ಅಕ್ರಮಗಳೇ? ಆಡಳಿತ ಮಂಡಳಿಯ ನಿರ್ಲಕ್ಷ್ಯವೇ? ಸರ್ಕಾರ ಕೂಡಲೇ ತನಿಖೆ ನಡೆಸಿ ಸತ್ಯ ಹೊರತೆಗೆಯಲಿ. ಇವುಗಳಲ್ಲಿ ಏನೇ ಕಾರಣ ಇದ್ದರೂ ಅದನ್ನು ಸರಿ ಮಾಡಿಕೊಂಡು ಸಾರಿಗೆ ನಿಗಮಗಳ ಆರ್ಥಿಕ ಸಂಕಷ್ಟ ತಪ್ಪಿಸಲು ಮುಂದಾಗಲಿ.

ನಬಿಸಾಬ ಆರ್.ಬಿ. ದೋಟಿಹಾಳ, ಕುಷ್ಟಗಿ

ಭಾರತದ ದನಿಯ ಹಿಂದೆ ಹಲವರ ಯೋಗದಾನ

'ಜಾಗತಿಕ ರಾಜಕಾರಣ: ಭಾರತದ ಗಟ್ಟಿಧ್ವನಿ' ಎಂಬ ಎ.ಸೂರ್ಯಪ್ರಕಾಶ್ ಅವರ ಲೇಖನ (ಪ್ರ.ವಾ., ಫೆ. 14) ಅರ್ಥಪೂರ್ಣವಾಗಿದ್ದು, ರಾಜತಾಂತ್ರಿಕ ನಿಲುವು ತಾಳುವಲ್ಲಿ ಮತ್ತು ವ್ಯಕ್ತಪಡಿಸುವಲ್ಲಿ ದೇಶವು ಅಳವಡಿಸಿ ಕೊಳ್ಳುತ್ತಿರುವ ಅಪೂರ್ವ ಧೈರ್ಯವನ್ನು ವಸ್ತುನಿಷ್ಠ ವಾಗಿ ಕಟ್ಟಿಕೊಟ್ಟಿದೆ. ಸ್ವಾತಂತ್ರ್ಯದ ನಂತರ ಭಾರತದ ರಾಜತಾಂತ್ರಿಕ ನೀತಿಯು ಒಂದು ಬಗೆಯಲ್ಲಿ ಶರಣಾ ಗತ ಮತ್ತು ತಪ್ಪಿತಸ್ಥ ಮನೋಭಾವದಿಂದ ಕೂಡಿತ್ತು. ದೈನ್ಯತೆಯನ್ನು ಪ್ರಕಟಪಡಿಸುವುದರಲ್ಲೇ ತೃಪ್ತಿಪಟ್ಟುಕೊಳ್ಳುತ್ತಿತ್ತು ಎನ್ನುವುದು ಸುಳ್ಳಲ್ಲ. ಮಧ್ಯೆ ಕೆಲವು ವರ್ಷಗಳ ಕಾಲ ಇಂದಿರಾ ಗಾಂಧಿ ಅವರು ಬಾಂಗ್ಲಾ ಯುದ್ಧದ ಸಮಯದಲ್ಲಿ ಧೈರ್ಯದ ಹೆಜ್ಜೆ ಇಟ್ಟಿದ್ದನ್ನು ಬಿಟ್ಟರೆ, 1990ರವರೆಗೂ ನಾವು ಅಂತರರಾಷ್ಟ್ರೀಯ ಸಮುದಾಯ ಮತ್ತು ಸಂಸ್ಥೆಗಳು ಹೇಳಿದ್ದನ್ನೆಲ್ಲ ವಿಧೇಯತೆಯಿಂದ ಪಾಲಿಸುತ್ತಿದ್ದೆವಷ್ಟೆ.

ಆದರೆ, 1991ರಲ್ಲಿ ಪಿ.ವಿ.ನರಸಿಂಹ ರಾವ್ ಅವರು ಪ್ರಧಾನಿಯಾದ ಬಳಿಕ ನಮ್ಮ ವಿದೇಶಾಂಗ, ರಕ್ಷಣೆ ಮತ್ತು ಕೈಗಾರಿಕಾ ನೀತಿಗಳನ್ನು ಆಮೂಲಾಗ್ರವಾಗಿ ಪರಿವರ್ತಿಸಿದರು. ಇದರ ಜತೆಗೆ ದೇಶವನ್ನು ಉದಾರೀಕರಣಕ್ಕೆ ಮುಕ್ತಗೊಳಿಸಿ, ಜಾಗತಿಕವಾಗಿ ಭಾರತವನ್ನು ಮುನ್ನೆಲೆಗೆ ತಂದರು. ನಮಗೆ ಇಷ್ಟವಿರಲಿ, ಬಿಡಲಿ- ಇದೊಂದು ಚಾರಿತ್ರಿಕ ಸಾಧನೆಯೇ ಸರಿ. ಇಲ್ಲದಿದ್ದರೆ, ಆಗ್ನೇಯ ಏಷ್ಯಾ ರಾಷ್ಟ್ರಗಳು, ಇಸ್ರೇಲ್, ಐರೋಪ್ಯ ರಾಷ್ಟ್ರಗಳು ಮತ್ತು ಅಮೆರಿಕದೊಂದಿಗೆ ಭಾರತವು ರಾಜತಾಂತ್ರಿಕ ಸಂಬಂಧವನ್ನು ಗಟ್ಟಿಗೊಳಿಸಿಕೊಳ್ಳಲು ಸಾಧ್ಯವಿರುತ್ತಿರಲಿಲ್ಲ. ಸೋವಿಯತ್ ಒಕ್ಕೂಟ ಛಿದ್ರ ಛಿದ್ರವಾದ ಆ ಕಾಲಕ್ಕೆ ಇಂತಹ ಪಲ್ಲಟವು ದೇಶದ ಹಿತದೃಷ್ಟಿಯಿಂದ ಅಗತ್ಯವಾಗಿತ್ತು.

ಇದಾದ ಮೇಲೆ, ವಾಜಪೇಯಿ ಅವರು ಅಣ್ವಸ್ತ್ರ ಪರೀಕ್ಷೆ ನಡೆಸಿದರು. ಹೀಗೆ ಕಳೆದ ಮೂವತ್ತು ವರ್ಷಗಳಲ್ಲಿ ಹಲವರ ಯೋಗದಾನದಿಂದಾಗಿ ಭಾರತದ ದನಿ ಇಂದು ಜಾಗತಿಕ ಮಟ್ಟದಲ್ಲಿ ಕೇಳುವಂತಾಗಿದೆ. ಜತೆಗೆ, ಇದನ್ನು ಮಾಡುವುದು ನರೇಂದ್ರ ಮೋದಿಯವರಿಗೆ ತುಸು ಮಟ್ಟಿಗೆ ಸುಲಭವಾಗಿದೆ. ಇಲ್ಲದೇ ಹೋಗಿದ್ದರೆ, ಧ್ರುವೀಕೃತ ಅಂತರರಾಷ್ಟ್ರೀಯ ಸಮುದಾಯವು ಭಾರತವನ್ನು ಹುರಿದು ಮುಕ್ಕುತ್ತಿತ್ತಷ್ಟೆ. ನಾವು ರಾಜತಾಂತ್ರಿಕವಾಗಿ ಪ್ರಬಲರಾಗಲು ಕಳೆದ ಮೂವತ್ತು ವರ್ಷಗಳಲ್ಲಿ ಸಾಧಿಸಿರುವ ಆರ್ಥಿಕ ಬೆಳವಣಿಗೆ ಕೂಡ ಇಂಬು ನೀಡಿದೆ. ಜಾಗತಿಕ ರಾಜಕಾರಣದ ಗಾಳಿಯನ್ನು ಗಮನಿಸಿ ಅದಕ್ಕೆ ತಕ್ಕ ಕಾರ್ಯತಂತ್ರ ರೂಪಿಸುವುದರಲ್ಲಿ ದೇಶದ ಹಿತ ಅಡಗಿದೆಯೇ ವಿನಾ ಅವಾಸ್ತವಿಕ ವಾಗಿ ಯೋಚಿಸುವುದರಲ್ಲಲ್ಲ. ಏಕೆಂದರೆ, ತೀರಾ ರಕ್ಷಣಾತ್ಮಕವಾದ ಹೆಜ್ಜೆಗಳು ಯಾವತ್ತಿಗೂ ಸೋಲಿನ ಕಡೆಗೆ ನಮ್ಮನ್ನು ಕೊಂಡೊಯ್ಯುತ್ತವೆ.

ಬಿ.ಎಸ್.ಜಯಪ್ರಕಾಶ ನಾರಾಯಣ, ಬೆಂಗಳೂರು

ಕಾಂಚಾಣದ ಕಾಲು ಹಿಡಿದು...

ಆರತಕ್ಷತೆಯಲ್ಲಿ ಕುಸಿದುಬಿದ್ದು
ವಧುವಿನ ಸಾವಾಯಿತಂತೆ (ಪ್ರ.ವಾ., ಫೆ. 13).
ದಾರ್ಶನಿಕ ದೃಷ್ಟಿಯಿಂದಲೇ ಇದನು
ದಾಸರು 'ನೀರಮೇಲಣ ಗುಳ್ಳೆ' ಎಂದಿದ್ದರು...
ಮಂಕುತಿಮ್ಮ ಮತ್ತೂ ಸ್ಪಷ್ಟವಾಗಿ
'ಮದುವೆಗೋ ಮಸಣಕೋ'
ಎಂದಿದ್ದನು...
ಕಲಿಯುಗದ ಮಹಿಮೆಯೋ ಏನೋ
ಯಾವುದಕೂ ಜಗ್ಗದ ನಾವು
ಸಾವಿಲ್ಲವೆನ್ನುವಂತೆ ಸವಾರಿ
ನಡೆಸುತ್ತಲೇ ಇದ್ದೇವೆ
ದಾಸ, ದಾರ್ಶನಿಕರ ಮಾತಿನಿಂದ
ಕಾಸುಟ್ಟುವುದೇ ಎಂದು ಜರಿದು
ಕಾಂಚಾಣದ ಕಾಲು ಹಿಡಿದು
ಕಾದಾಡುತ್ತಿದ್ದೇವೆ...

ಜೆ.ಬಿ.ಮಂಜುನಾಥ, ಪಾಂಡವಪುರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.



ಪಂಜಾಬ್ ಕಣದಲ್ಲಿ ಕ್ರೀಡಾಕಲಿಗಳು



• ನಾಗೇಶ್ ಶೆಣೈ ಪಿ.

ಚಲನಚಿತ್ರ, ಟಿ.ವಿ. ಧಾರಾವಾಹಿ ತಾರೆಯರು, ಖ್ಯಾತನಾಮ ಕ್ರೀಡಾಪಟುಗಳು ಚುನಾವಣಾ ಕಣಕ್ಕಿಳಿಯುವುದು ಇತ್ತೀಚಿನ ಬೆಳವಣಿಗೆಯೇನಲ್ಲ. ಆದರೆ ಎರಡು ದಶಕಗಳಲ್ಲಿ ರಾಜಕೀಯಕ್ಕೆ ಬಂದು ಚುನಾವಣಾ ಕಣಕ್ಕಿಳಿಯುತ್ತಿರುವ ಕ್ರೀಡಾ ತಾರೆಗಳ ಸಂಖ್ಯೆ ಗಮನಾರ್ಹವಾಗಿ ಏರುತ್ತಿದೆ. ಕ್ರಿಕೆಟಿಗರಾದ ಚೇತನ್ ಚೌಹಾಣ್ (ಉತ್ತರ ಪ್ರದೇಶದ ಅಮ್ರೋಹಾ), ಮೊಹಮದ್ ಅಜರುದ್ದೀನ್ (ಉತ್ತರ ಪ್ರದೇಶದ ಮೊರಾದಾಬಾದ್), ಕೀರ್ತಿ ಆಜಾದ್ (ಬಿಹಾರದ ದರ್ಭಾಂಗ) ನವಜೋತ್ ಸಿಂಗ್ ಸಿಧು (ಅಮೃತಸರ), ಗೌತಮ್ ಗಂಭೀರ್ (ಪೂರ್ವ ದೆಹಲಿ) ಯಶಸ್ಸನ್ನೂ ಗಳಿಸಿದ್ದಾರೆ. ಚೌಹಾಣ್ ಮೂರು ಬಾರಿ ಮತ್ತು ಅಜರ್ ಒಂದು ಬಾರಿ (ಅಜ್ಮೀರ್‌ನಲ್ಲಿ) ಸೋಲನ್ನೂ ಕಂಡಿದ್ದರು. 2004ರ ಅಥೆನ್ಸ್ ಒಲಿಂಪಿಕ್ಸ್‌ನಲ್ಲಿ ಬೆಳ್ಳಿಯ ಪದಕ ಗೆದ್ದ ಶೂಟರ್ ರಾಜ್ಯವರ್ಧನ್ ರಾಥೋಡ್ ಜೈಪುರ ಗ್ರಾಮೀಣ ಕ್ಷೇತ್ರದಿಂದ ಎರಡು ಬಾರಿ ಗೆದ್ದು ಸಚಿವರೂ ಆಗಿದ್ದರು. ಅಂತರರಾಷ್ಟ್ರೀಯ ಮಟ್ಟದ ಅಥ್ಲೀಟ್, ಮಧ್ಯಮ ದೂರದ ಓಟಗಾರ್ತಿ ಜ್ಯೋತಿರ್ಮಯಿ ಸಿಕ್ದರ್ ಅವರು ಪಶ್ಚಿಮ ಬಂಗಾಳದ ಕೃಷ್ಣಾನಗರ್ ಕ್ಷೇತ್ರದಿಂದ ಒಂದು ಅವಧಿಗೆ (2004-09) ಸಿಪಿಎಂನಿಂದ ಆಯ್ಕೆಯಾಗಿದ್ದರು. ಇವೆಲ್ಲಾ ಕೆಲವು ಉದಾಹರಣೆಗಳು ಮಾತ್ರ.

ಇದು ಲೋಕಸಭೆಯ ವಿಷಯವಾಯಿತು. ವಿಧಾನಸಭಾ ಚುನಾವಣೆಗಳಲ್ಲೂ ಕ್ರೀಡಾಪಟುಗಳು ಸ್ಪರ್ಧಿಸಿದ್ದಾರೆ. ಈಗ ಬಂಗಾಳದ ಕ್ರೀಡಾ ಖಾತೆ ಸಹಾಯಕ ಸಚಿವರಾಗಿರುವ ಟಿಎಂಸಿಯ ಮನೋಜ್ ತಿವಾರಿ ಭಾರತ ಕ್ರಿಕೆಟ್ ತಂಡದಲ್ಲಿ ಬ್ಯಾಟ್ಸ್‌ಮನ್ ಆಗಿದ್ದರು. ಅವರಿಗಿಂತ ಮೊದಲು ಲಕ್ಷ್ಮಿ ರತನ್ ಶುಕ್ಲಾ ಈ ಖಾತೆ ನಿರ್ವಹಿಸಿದ್ದರು. ಅವರು ಭಾರತ ತಂಡದಲ್ಲಿ ಮಧ್ಯಮ ವೇಗದ ಬೌಲರ್ ಆಗಿದ್ದವರು. ಎರಡು ಬಾರಿ ಸಂಸತ್ ಸದಸ್ಯರಾಗಿ, ನಂತರ ಸೋಲನುಭವಿಸಿದ್ದ ಚೇತನ್ ಚೌಹಾಣ್ ಉತ್ತರ ಪ್ರದೇಶ ರಾಜಕೀಯಕ್ಕೆ ಮರಳಿದ ನಂತರ ಅಲ್ಲಿ ಗೆದ್ದು ಸಚಿವರಾಗಿದ್ದರು. ಸಚಿವರಾಗಿದ್ದಾಗಲೇ 2020ರ ಆಗಸ್ಟ್‌ನಲ್ಲಿ ಅಸುನೀಗಿದ್ದರು.

ಘಟಾನುಘಟಿಗಳ ಸ್ಪರ್ಧೆ


ಈಗ ಪಂಜಾಬ್ ವಿಧಾನಸಭಾ ಚುನಾವಣಾ ಕಣ ಘಟಾನುಘಟಿ ಕ್ರೀಡಾಪಟುಗಳ ಸ್ಪರ್ಧೆಯಿಂದ ಗಮನ ಸೆಳೆಯುತ್ತಿದೆ. ಮೂವರು ಅರ್ಜುನ ಪ್ರಶಸ್ತಿ ಪುರಸ್ಕೃತರು, ಇಬ್ಬರು ಪದ್ಮಶ್ರೀ ಪುರಸ್ಕೃತರು, ಪಂಜಾಬ್ ಸರ್ಕಾರದ ರಣಜಿತ್ ಸಿಂಗ್ ಕ್ರೀಡಾ ಪ್ರಶಸ್ತಿ ಪಡೆದ ಐವರು ಕ್ರೀಡಾಪಟುಗಳು ವಿವಿಧ ಪಕ್ಷಗಳಿಂದ ಉಮೇದುವಾರರಾಗಿದ್ದಾರೆ. ವಿಶ್ವಕಪ್ ಕಬಡ್ಡಿ ಆಡಿದ ಇಬ್ಬರು ಆಟಗಾರರೂ ಇದ್ದಾರೆ. ಫೆಬ್ರುವರಿ 20ರಂದು ಇವರೆಲ್ಲರ ಹಣೆಬರಹ ನಿರ್ಧಾರವಾಗಲಿದ್ದು, ಮಾರ್ಚ್ 10ರಂದು ಫಲಿತಾಂಶಕ್ಕೆ ಕಾಯಬೇಕಿದೆ.

ನವಜೋತ್ ಸಿಂಗ್ ಸಿಧು

ಪಂಜಾಬ್ ರಾಜ್ಯ ಕಾಂಗ್ರೆಸ್ ಅಧ್ಯಕ್ಷರೂ ಆಗಿರುವ ಮಾಜಿ ಟೆಸ್ಟ್ ಆಟಗಾರ ನವಜೋತ್ ಸಿಂಗ್ ಸಿಧು ಅವರು ಪ್ರತಿಷ್ಠಿತ ಅಮೃತಸರ ಪೂರ್ವ ಕ್ಷೇತ್ರದಿಂದ ಕಣಕ್ಕೆ ಇಳಿದಿದ್ದಾರೆ. ಅಕಾಲಿ ದಳ ಮುಖ್ಯಸ್ಥ ಸುಖಬೀರ್ ಸಿಂಗ್ ಬಾದಲ್ ಅವರು ತಮ್ಮ ಭಾವ ಬಿಕ್ರಂ ಸಿಂಗ್ ಮಜೀಥಿಯಾ ಅವರನ್ನು ಈ ಕ್ಷೇತ್ರದಿಂದ ಕಣಕ್ಕಿಳಿಸಿದ್ದರಿಂದ ಇಲ್ಲಿ ತುರುಸಿನ ಸ್ಪರ್ಧೆಯ ನಿರೀಕ್ಷೆಯಿದೆ. ಬಿಜೆಪಿ ಇಲ್ಲಿಂದ ಮಾಜಿ ಐಎಎಸ್ ಅಧಿಕಾರಿ ಜಗ್‌ಮೋಹನ್ ಸಿಂಗ್ ರಾಜು ಅವರಿಗೆ ಟಿಕೆಟ್ ನೀಡಿದೆ.

ಭಾರತ ತಂಡದ ಪರ 51 ಟೆಸ್ಟ್‌ಗಳನ್ನು ಆಡಿರುವ ಸಿಧು ಪ್ರಸ್ತುತ ಸ್ಪರ್ಧಾ ಕಣದಲ್ಲಿರುವ ಕ್ರೀಡಾಪಟುಗಳಲ್ಲಿ ಅನುಭವಿ. ಕ್ರಿಕೆಟ್ ಬದುಕಿನ ನಂತರ ವೀಕ್ಷಕ ವಿವರಣೆಗಾರರಾಗಿ ಮೈಕ್ ಹಿಡಿದಿದ್ದ ಸಿಧು, ರಿಯಾಲಿಟಿ ಶೋಗಳಲ್ಲಿ ತೀರ್ಪುಗಾರನ ಸ್ಥಾನದಲ್ಲಿಯೂ ಕಾಣಿಸಿಕೊಂಡಿದ್ದರು. 2004ರಲ್ಲಿ ಬಿಜೆಪಿ ಮೂಲಕ ರಾಜಕೀಯ ಪ್ರವೇಶಿಸಿದ ಸಿಧು ಅವರು ಎರಡು ಬಾರಿ ಅಮೃತಸರ ಕ್ಷೇತ್ರದಿಂದ ಲೋಕಸಭೆಗೆ ಆಯ್ಕೆಯಾಗಿದ್ದರು. ಕ್ರೀಡಾಂಗಣದಂತೆ ರಾಜಕೀಯದಲ್ಲಿ ತಮ್ಮ ಮಾತುಗಳಿಂದ ವಿವಾದ ಸೃಷ್ಟಿಸಿಕೊಂಡವರು. ಒಮ್ಮೆ ರಾಜ್ಯಸಭೆಗೂ ಆಯ್ಕೆಯಾದ ಸಿಧು, ನಂತರ ರಾಜ್ಯಸಭೆಗೆ ರಾಜೀನಾಮೆ ನೀಡಿ ಬಿಜೆಪಿ ತ್ಯಜಿಸಿ ಕಾಂಗ್ರೆಸ್ ಪಕ್ಷ ಸೇರಿಕೊಂಡರು. 2017ರಲ್ಲಿ ಅವರು ಮೊದಲ ಬಾರಿ ಪಂಜಾಬ್ ವಿಧಾನಸಭೆಗೆ ಆಯ್ಕೆಯಾಗಿದ್ದರು. ತಮಗೆ ನೀಡಿದ ಸಚಿವ ಖಾತೆ ಬಗ್ಗೆ ಅಸಮಾಧಾನ ಹೊಂದಿದ್ದು, ಹಿಂದಿನ ಮುಖ್ಯಮಂತ್ರಿ ಕ್ಯಾಪ್ಟನ್ ಅಮರೀಂದರ್ ಸಿಂಗ್ ಜೊತೆ ಭಿನ್ನಾಭಿಪ್ರಾಯ ಹೊಂದಿದ್ದರು. ಮುಖ್ಯಮಂತ್ರಿ ಹುದ್ದೆಯ ಆಕಾಂಕ್ಷಿಯೂ ಆಗಿದ್ದರು.

ಹಿಂದೆ ಸರಿದ ಅಜಿತ್ ಪಾಲ್ ಸಿಂಗ್



ಅಜಿತ್ ಪಾಲ್ ಸಿಂಗ್

ಪರ್ಗತ್ ಸಿಂಗ್ ಅವರು 1996ರ ಒಲಿಂಪಿಕ್ಸ್‌ನಲ್ಲಿ ಭಾರತ ತಂಡದ ಧ್ವಜಧಾರಿಯಾಗಿದ್ದರೆ, 20 ವರ್ಷ ಹಿಂದೆ ಮಾಂಟ್ರಿಯಲ್ ಒಲಿಂಪಿಕ್ಸ್‌ನಲ್ಲಿ ತಂಡದ ಧ್ವಜಧಾರಿಯಾಗಿದ್ದ ಇನ್ನೊಬ್ಬ ಹಾಕಿ ತಾರೆ ಅಜಿತ್ ಪಾಲ್ ಸಿಂಗ್ ಅವರಿಗೆ ಟಿಕೆಟ್ ನೀಡುವುದಾಗಿ ಪಂಜಾಬ್ ಲೋಕ ಕಾಂಗ್ರೆಸ್ ಭರವಸೆ ಕೊಟ್ಟಿತ್ತು. ಆದರೆ, ಅವರು ಪಂಜಾಬ್‌ನ ಮತದಾರ ಅಲ್ಲ. ಹಾಗಾಗಿ, ಅವರಿಗೆ ಸ್ಪರ್ಧಿಸುವ ಹಕ್ಕು ಇಲ್ಲ. ಈ ಕಾರಣದಿಂದ ಅವರು ಸ್ಪರ್ಧಿಸುವುದು ಸಾಧ್ಯವಾಗಲಿಲ್ಲ. ಒಟ್ಟು ಮೂರು ಒಲಿಂಪಿಕ್ಸ್‌ಗಳಲ್ಲಿ ಆಡಿರುವ ಅವರು 1975ರಲ್ಲಿ ಭಾರತ ಏಕೈಕ ಬಾರಿ ವಿಶ್ವಕಪ್ ಹಾಕಿ ಪ್ರಶಸ್ತಿ ಮುಡಿಗೇರಿಸಿಕೊಂಡಾಗ ತಂಡದ ನಾಯಕರಾಗಿದ್ದರು.

ಅಜಿತ್ ಪಾಲ್ ಸಿಂಗ್ ನಕೋದರ್ ಕ್ಷೇತ್ರದಿಂದ ಸ್ಪರ್ಧಿಸಲು ಬಯಸಿದ್ದರು. ಎರಡು ಒಲಿಂಪಿಕ್ಸ್‌ಗಳಲ್ಲಿ ಆಡಿರುವ ಅಜಿತ್ ಪಾಲ್ ಸಿಂಗ್ 1972ರ ಅರ್ಜುನ ಪ್ರಶಸ್ತಿ ಪುರಸ್ಕೃತರು. ಪಂಜಾಬ್ ಪೊಲೀಸ್ ಇಲಾಖೆಯಲ್ಲಿ ಐಜಿ ಆಗಿ ನಿವೃತ್ತರಾಗಿದ್ದಾರೆ.

ಸಜ್ಜನ್ ಸಿಂಗ್ ಚೀಮಾ



ಸಜ್ಜನ್ ಸಿಂಗ್ ಚೀಮಾ

ಭಾರತ ಬ್ಯಾಸ್ಕೆಟ್‌ಬಾಲ್ ತಂಡದ ನಾಯಕರಾಗಿದ್ದ ಸಜ್ಜನ್ ಸಿಂಗ್ ಚೀಮಾ ಅವರೂ ಕಣದಲ್ಲಿರುವ ಅರ್ಜುನ ಪ್ರಶಸ್ತಿ ಪುರಸ್ಕೃತ ಕ್ರೀಡಾಪಟುಗಳಲ್ಲಿ ಒಬ್ಬರು.

ದೆಹಲಿ ಏಷ್ಯನ್ ಗೇಮ್ಸ್‌ನಲ್ಲಿ (1982) ಆಡಿದ್ದ ಸಜ್ಜನ್ ಚೀಮಾ, ಮೂರು ಬಾರಿ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲೂ ತಂಡವನ್ನು ಪ್ರತಿನಿಧಿಸಿದ್ದ ಅನುಭವಿ. ಈಗ ಸುಲ್ತಾನ್‌ಪುರ ಲೋಧಿ ಕ್ಷೇತ್ರದಿಂದ ಆಮ್ ಆದ್ಮಿ ಪಕ್ಷದ ಟಿಕೆಟ್ ಪಡೆದು ಅದೃಷ್ಟ ಪರೀಕ್ಷಿಸುತ್ತಿದ್ದಾರೆ. ಐದು ವರ್ಷಗಳ ಹಿಂದೆ ಇದೇ ಪಕ್ಷದ ಮೂಲಕ ರಾಜಕೀಯ ಪ್ರವೇಶಿಸುವ ಮೊದಲು ಪಂಜಾಬ್ ಪೊಲೀಸ್ ಇಲಾಖೆಯಲ್ಲಿ ಎಸ್‌ಪಿ ಆಗಿದ್ದರು.

ಕಬಡ್ಡಿ ಆಟಗಾರರು

ವಿಶ್ವಕಪ್ ಮತ್ತು ಏಷ್ಯನ್ ಕಬಡ್ಡಿ ಚಾಂಪಿಯನ್‌ಷಿಪ್‌ನಲ್ಲಿ ಆಡಿರುವ ಗುರುಲಾಲ್ ಗನ್ನೋರ್ ಅವರು ಗನ್ನೋರ್ ವಿಧಾನಸಭಾ ಕ್ಷೇತ್ರದಿಂದ ಕಣಕ್ಕಿಳಿದಿದ್ದಾರೆ. ಪಂಜಾಬ್ ಪೊಲೀಸ್ ಇಲಾಖೆಯಲ್ಲಿ ಎಎಸ್‌ಐ ಆಗಿದ್ದ ಅವರು ಹುದ್ದೆಗೆ ರಾಜೀನಾಮೆ ನೀಡಿ, 2021ರ ಜೂನ್‌ನಲ್ಲಿ ಆಮ್ ಆದ್ಮಿ ಪಕ್ಷಕ್ಕೆ ಸೇರ್ಪಡೆಗೊಂಡಿದ್ದಾರೆ. ಗನ್ನೋರ್ ಕ್ಷೇತ್ರ ವ್ಯಾಪ್ತಿಯ ಅಜರಾವರ್ ಗ್ರಾಮದಲ್ಲಿ ಕ್ರೀಡಾಂಗಣ ನಿರ್ಮಾಣ ಮಾಡಿದ್ದಾರೆ. 'ನನ್ನ ಕ್ಷೇತ್ರ ಕ್ರೀಡಾ ಮೂಲಸೌಕರ್ಯಗಳಲ್ಲಿ ಹಿಂದುಳಿದಿದೆ. ಇದರ ನಿರ್ಮಾಣ ನನ್ನ ಆದ್ಯತೆ' ಎಂದಿದ್ದಾರೆ ಗುರ್ಲಾಲ್.

ಇನ್ನೊಬ್ಬ ಅಂತರರಾಷ್ಟ್ರೀಯ ಕಬಡ್ಡಿ ಆಟಗಾರ ಗುಲ್ಜಾರ್ ಮೂನಕ್ ಅವರು ಸಂಗ್ರೂರ್‌ನ ದಿರ್ಬಾ ಕ್ಷೇತ್ರದಿಂದ (ಮೀಸಲು) ಅಕಾಲಿದಳ ಅಭ್ಯರ್ಥಿಯಾಗಿದ್ದಾರೆ. ಮೂನಕ್ ಕೂಡ ಕೆಲಕಾಲ ಭಾರತ ತಂಡದ ನಾಯಕರೂ ಆಗಿದ್ದರು.

ಪಟಿಯಾಲ ಗ್ರಾಮೀಣ ಕ್ಷೇತ್ರದಿಂದ ಕಾಂಗ್ರೆಸ್ ಟಿಕೆಟ್ ಪಡೆದಿರುವ ಮೋಹಿತ್ ಮಹೀಂದ್ರ ಅರು ಪಂಜಾಬ್ ಕಿರಿಯರ ತಂಡವನ್ನು ವಿವಿಧ ವಯೋವರ್ಗಗಳಲ್ಲಿ (15, 19 ವರ್ಷದೊಳಗಿನವರ ವಿಭಾಗ) ಮುನ್ನಡೆಸಿದ್ದರು. ಅವರು ಪಂಜಾಬ್‌ನ ಸಚಿವ ಬ್ರಹ್ಮ ಮಹೀಂದ್ರ ಅವರ ಮಗ. ಮೊಣಕಾಲಿನ ಗಾಯದ ಸಮಸ್ಯೆಯಿಂದಾಗಿ ಅವರ ಕ್ರೀಡಾ ಜೀವನ ಬಲುಬೇಗ ಮೊಟಕುಗೊಂಡಿತು. ಅವರ ತಂದೆ ಬ್ರಹ್ಮ ಅವರು ಆರು ಬಾರಿ ಈ ಕ್ಷೇತ್ರದಿಂದ ಆಯ್ಕೆಯಾಗಿದ್ದರು.

ಕಳೆದ ಬಾರಿ ತರಣ್ ತಾರಣ್ ಕ್ಷೇತ್ರದಿಂದ ಸ್ಪರ್ಧಿಸಿದ್ದ ಮಾಜಿ ಒಲಿಂಪಿಯನ್, ಕುಸ್ತಿಪಟು ಕರ್ತಾರ್ ಸಿಂಗ್ ಅವರಿಗೆ ಆಮ್ ಆದ್ಮಿ ಪಕ್ಷ ಕಳೆದ ಬಾರಿ ಟಿಕೆಟ್ ನೀಡಿತ್ತು. 1978 ಮತ್ತು 1986ರ ಏಷ್ಯನ್ ಗೇಮ್ಸ್ ಚಿನ್ನದ ಪದಕ ವಿಜೇತರಾಗಿರುವ ಕರ್ತಾರ್ ಅವರಿಗೆ ಈ ಬಾರಿ ಟಿಕೆಟ್ ಕೈತಪ್ಪಿದೆ.

ಸ್ಪರ್ಧೆಗಿಳಿದ ಮೊದಲ ಕ್ರೀಡಾಪಟು ಪಟೌಡಿ

ಸ್ವತಂತ್ರ ಭಾರತದಲ್ಲಿ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದ ಮೊದಲ ಪ್ರಮುಖ ಕ್ರೀಡಾಪಟು, ಭಾರತ ಕ್ರಿಕೆಟ್ ತಂಡದ ನಾಯಕರಾಗಿದ್ದ ಮನ್ಸೂರ್ ಅಲಿ ಖಾನ್ ಪಟೌಡಿ. ಆದರೆ ಟೈಗರ್ ಪಟೌಡಿ ಅವರಿಗೆ ಕ್ರೀಡಾಂಗಣದ ಯಶಸ್ಸು ರಾಜಕೀಯದಲ್ಲಿ ದಕ್ಕಲಿಲ್ಲ. ಎರಡು ಬಾರಿ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದ್ದರು. 1971ರಲ್ಲಿ ಮೊದಲ ಬಾರಿ ಹರಿಯಾಣ ವಿಶಾಲ್ ಪಾರ್ಟಿ ಅಭ್ಯರ್ಥಿಯಾಗಿ ಗುಡಗಾಂವ್ ಕ್ಷೇತ್ರದಿಂದ ಕಣಕ್ಕೆ ಇಳಿದಿದ್ದರು. 20 ವರ್ಷಗಳ ನಂತರ, 1991ರಲ್ಲಿ ಭೋಪಾಲ್ ಕ್ಷೇತ್ರದಿಂದ ಟಿಕೆಟ್ ಪಡೆದಿದ್ದರು. ರಾಜೀವ್ ಗಾಂಧಿ ಮತ್ತು ವಿಶ್ವಕಪ್ ವಿಜೇತ ತಂಡದ ನಾಯಕರಾಗಿದ್ದ ಕಪಿಲ್ ದೇವ್ ಅವರ ಪರ ಪ್ರಚಾರ ನಡೆಸಿದ್ದರು.

ಪರ್ಗತ್ ಸಿಂಗ್– ಸುರಿಂದರ್ ಸಿಂಗ್ ಸೋಧಿ

ಜಲಂಧರ್ ಕಂಟೋನ್ಮೆಂಟ್ ಕ್ಷೇತ್ರ ಇಬ್ಬರು ಹಾಕಿ ದಿಗ್ಗಜರ ಹಣಾಹಣಿಯಿಂದ ಗಮನ ಸೆಳೆಯುತ್ತಿದೆ. ಮೂರು ಒಲಿಂಪಿಕ್ಸ್‌ಗಳಲ್ಲಿ ಆಡಿರುವ ರಕ್ಷಣೆ ಆಟಗಾರ ಪರಗತ್ ಸಿಂಗ್ ಕಾಂಗ್ರೆಸ್‌ನಿಂದ ಎರಡನೇ ಬಾರಿಗೆ ಸ್ಪರ್ಧಿಸುತ್ತಿದ್ದಾರೆ. 2012ರಲ್ಲಿ ಮೊದಲ ಬಾರಿ ಅವರು ಶಿರೋಮಣಿ ಅಕಾಲಿ ದಳದಿಂದ ಶಾಸಕರಾಗಿದ್ದರು. ಎರಡನೇ ಬಾರಿ, ಕಾಂಗ್ರೆಸ್‌ನಿಂದ ಆಯ್ಕೆಯಾದ ಮೇಲೆ ಕ್ರೀಡೆ, ಶಿಕ್ಷಣ ಸಚಿವರಾದರು. ಇದು ಅವರಿಗೆ ಮೂರನೇ ಚುನಾವಣೆ.

ಈ ಬಾರಿ ಅವರಿಗೆ ಇನ್ನೊಬ್ಬ ಮಾಜಿ ಅಂತರರಾಷ್ಟ್ರೀಯ ಹಾಕಿ ಆಟಗಾರ, ಆಮ್ ಆದ್ಮಿ ಪಕ್ಷದ ಸುರಿಂದರ್ ಸಿಂಗ್ ಸೋಧಿ ಎದುರಾಳಿಯಾಗಿದ್ದಾರೆ. 1980ರ ಮಾಸ್ಕೊ ಒಲಿಂಪಿಕ್ಸ್‌ನಲ್ಲಿ ಆಡಿದ್ದ ಸೋಧಿ ಭಾರತ ತಂಡದ ಚಿನ್ನ ಗೆಲ್ಲುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಸೋಧಿ ಆ ಒಲಿಂಪಿಕ್ಸ್‌ನಲ್ಲಿ 15 ಗೋಲುಗಳನ್ನು ಗಳಿಸಿದ್ದರು. ಪರ್ಗತ್ ತಮ್ಮ ಆಟದ ಉತ್ತುಂಗದ ದಿನಗಳಲ್ಲಿ ವಿಶ್ವದ ಶ್ರೇಷ್ಠ ಡಿಫೆನ್ಸ್ (ಫುಲ್‌ಬ್ಯಾಕ್) ಆಟಗಾರರಲ್ಲಿ ಒಬ್ಬರೆನಿಸಿಕೊಂಡವರು. ಅವರಿಗಿಂತ ಹಿರಿಯರಾದ ಸೋಧಿ ಅವರು ಮುಂಚೂಣಿ ಸ್ಥಾನದಲ್ಲಿ (ಸೆಂಟರ್ ಫಾರ್ವರ್ಡ್) ಸೈ ಎನಿಸಿಕೊಂಡವರು. ಪರ್ಗತ್ ಸಿಂಗ್ ಅವರ ಮಾವ ದರ್ಬಾರ ಸಿಂಗ್ ಅವರು ಪಂಜಾಬ್‌ನಲ್ಲಿ ಭಯೋತ್ಪಾದನೆ ತಾಂಡವವಾಡುತ್ತಿದ್ದ ದಿನಗಳಲ್ಲಿ (1980-93) ಮುಖ್ಯಮಂತ್ರಿಯಾಗಿದ್ದರು. ಹೀಗಾಗಿ ಅವರದು ರಾಜಕೀಯ ಕುಟುಂಬ.



ಸೋಧಿ 2016ರಲ್ಲಿ ಆಮ್ ಆದ್ಮಿ ಪಕ್ಷ ಸೇರಿಕೊಂಡರೂ, ಕೆಲವೇ ತಿಂಗಳ ಬಳಿಕ ಕಾಂಗ್ರೆಸ್‌ಗೆ ಪಕ್ಷಾಂತರ ಮಾಡಿದ್ದರು. ವರ್ಷದ ಹಿಂದೆ ಮತ್ತೆ ಆಮ್ ಆದ್ಮಿ ಪಕ್ಷಕ್ಕೆ ಮರುಸೇರ್ಪಡೆಗೊಂಡಿದ್ದಾರೆ.

ಇದೇ ಕ್ಷೇತ್ರದಿಂದ ಸಂಯುಕ್ತ ಸಮಾಜ್ ಮೋರ್ಚಾದಿಂದ (ಎಸ್‌ಎಸ್‌ಎಂ) ಸ್ಪರ್ಧಿಸುತ್ತಿರುವ ಜಸ್ವಿಂದರ್ ಸಿಂಗ್ ಕೂಡ ವಿಶ್ವವಿದ್ಯಾಲಯ ಮಟ್ಟದವರೆಗೆ ಹಾಕಿ ಆಡಿದ್ದಾರೆ. ಈ ಮೂರೂ ಮಂದಿ ಜಲಂಧರ್‌ನ ಲಾಯಲಪುರದ ಖಾಲ್ಸಾ ಕಾಲೇಜಿನ ಹಳೆಯ ವಿದ್ಯಾರ್ಥಿಗಳು.



ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 45

ಪಾರ್ಥಿವ ಪ್ರತಿಮೆಯ ಪೂಜಾಕ್ರಮ

ಪಾರ್ಥಿವ ಪ್ರತಿಮೆಯ ವಿವರವನ್ನು ಈಗ ಸೂತಮುನಿಯು ತಿಳಿಸುತ್ತಾನೆ. ಮಣ್ಣು ಮುಂತಾದ ವಸ್ತುಗಳಿಂದ ನಿರ್ಮಿತವಾದ ಪಾರ್ಥಿವ ವಿಗ್ರಹವನ್ನು ಪೂಜಿಸುವುದರಿಂದ ಸಕಲ ಇಷ್ಟಾರ್ಥಗಳು ಲಭಿಸಿ, ತಕ್ಷಣ ದುಃಖ ನಾಶವಾಗುತ್ತದೆ. ಅಪಮೃತ್ಯು ಕಾಲಮೃತ್ಯುಗಳೂ ನಾಶವಾಗುತ್ತವೆ. ಪತ್ನಿ, ಪುತ್ರ, ಧನ, ಧಾನ್ಯಗಳನ್ನು ಶೀಘ್ರ ಅಭಿವೃದ್ಧಿಗೊಳಿಸುತ್ತದೆ. ಅನ್ನಾದಿ ಆಹಾರವಸ್ತುಗಳು, ವಸ್ತ್ರ ಮುಂತಾದ ಭೋಗವಸ್ತುಗಳೂ ಸಿದ್ಧಿಸುವುದು ಅಂತ ವಿವರಿಸುತ್ತಾನೆ.

ವಿಗ್ರಹಪೂಜೆಯಲ್ಲಿ ಸ್ತ್ರೀ-ಪುರುಷರಿಬ್ಬರಿಗೂ ಅಧಿಕಾರವಿದೆ. ವಿಗ್ರಹಕ್ಕಾಗಿ ನದಿ, ಸರೋವರ, ಕಲ್ಯಾಣಿನೀರಿನ ಮಧ್ಯದಲ್ಲಿರುವ ತಿಳಿಮಣ್ಣನ್ನು ಚೆನ್ನಾಗಿ ಶೋಧಿಸಿ ಹದಮಾಡಿ ಗಂಧದ ಪುಡಿಯಿಂದ ಸುವಾಸನೆಗೊಳಿಸಿ, ಹಾಲನ್ನು ಸೇರಿಸಿ ಕೈಯಿಂದಲೇ ವಿಗ್ರಹವನ್ನು ಮಾಡಬೇಕು. ವಿಗ್ರಹಕ್ಕೆ ಪ್ರತಿಯೊಂದು ಅಂಗಗಳನ್ನೂ ಮಾಡಿ ಆಯಾಯ ಆಯುಧಗಳೊಡನೆ ಪದ್ಮಾಸನದಲ್ಲಿ ಕುಳಿತಿರುವಂತೆ ನಿರ್ಮಿಸಿ, ಅದನ್ನು ಶ್ರದ್ಧೆಯಿಂದ ಪೂಜಿಸಬೇಕು. ವಿನಾಯಕ, ಸೂರ್ಯ, ವಿಷ್ಣು, ಜಗನ್ಮಾತೆಯಾದ ಪಾರ್ವತಿ, ಶಿವನ ವಿಗ್ರಹ ಮತ್ತು ಶಿವಲಿಂಗವನ್ನೂ ನಿರ್ಮಿಸಿ, ಹದಿನಾರು ಉಪಚಾರಗಳಿಂದ ಸದಾ ಪೂಜಿಸಬೇಕು.

ಹೂವಿನಿಂದ ಪ್ರೋಕ್ಷಣವನ್ನು ಮಾಡಿದ ನಂತರ, ಮಂತ್ರಪೂರ್ವಕವಾಗಿ ವಿಗ್ರಹಕ್ಕೆ ಅಭಿಷೇಕವನ್ನು ಮಾಡಬೇಕು. ಶಾಲ್ಯನ್ನದಿಂದ ನೈವೇದ್ಯ ಮಾಡಬೇಕು. ಮನೆಯಲ್ಲಿ ದೇವರ ಮುಂದೆ ಒಂದು ಕುಡವದಷ್ಟು ನೈವೇದ್ಯ, ದೇವಾಲಯದಲ್ಲಿ ಒಂದು ಪ್ರಸ್ಥ ನೈವೇದ್ಯ ಮಾಡಬೇಕು. ದೇವನಿರ್ಮಿತವಾದ ವಿಗ್ರಹಕ್ಕೆ ಮೂರು ಪ್ರಸ್ಥದಷ್ಟು ನಿವೇದನ ಮಾಡಬೇಕು. ಉದ್ಭವಿಸಿದ ಸ್ಥಳದಲ್ಲಿ ಐದು ಪ್ರಸ್ಥ ನೈವೇದ್ಯವನ್ನು ಮಾಡಬೇಕು. ಹೀಗೆ ಮಾಡಿದರೆ ಪೂರ್ಣಫಲವು ಲಭಿಸುವುದು.

ಹನ್ನೆರಡು ಅಂಗುಲ ಅಗಲವಾಗಿಯೂ, ಹದಿನೈದು ಅಂಗುಲ ಎತ್ತರವಾಗಿಯೂ ಒಂದಂಗುಲ ದಪ್ಪವಾಗಿಯೂ ಇರುವಂತಹ ಲೋಹ ಮತ್ತು ಮರಗಳಿಂದ ಮಾಡಿದ ಪಾತ್ರಕ್ಕೆ 'ಶಿವ' ಎಂದು ಹೆಸರು. ಆ ಶಿವದ ಎಂಟನೆಯ ಒಂದು ಭಾಗಕ್ಕೆ 'ಪ್ರಸ್ಥ' ಎಂದು ಹೆಸರು. ಆ ಪ್ರಸ್ಥದ ನಾಲ್ಕನೆಯ ಒಂದು ಭಾಗಕ್ಕೆ 'ಕುಡವ' ಎಂದು ಹೆಸರು. ಮನುಷ್ಯನಿರ್ಮಿತ ದೇವವಿಗ್ರಹಕ್ಕೆ ಹತ್ತು ಪ್ರಸ್ಥ, ಋಷಿನಿರ್ಮಿತ ದೇವವಿಗ್ರಹಕ್ಕೆ ನೂರು ಪ್ರಸ್ಥ, ಉದ್ಭವವಿಗ್ರಹಕ್ಕೆ ಸಹಸ್ರ ಪ್ರಸ್ಥದ ಪ್ರಮಾಣಗಳಷ್ಟು ನಿವೇದಿಸಿ ಅರ್ಚಿಸಬೇಕು. ಇದಕ್ಕೆ ಮಹಾಪೂಜೆ ಎಂದು ಹೆಸರು.

ಅಭಿಷೇಕದಿಂದ ಆತ್ಮಶುದ್ಧಿಯೂ, ಗಂಧವನ್ನರ್ಪಿಸಿದರೆ ಪುಣ್ಯವೂ, ನೈವೇದ್ಯದಿಂದ ಆಯುಷ್ಯ ಮತ್ತು ತೃಪ್ತಿಯೂ, ಧೂಪದಿಂದ ಧನವೂ, ದೀಪದಿಂದ ಜ್ಞಾನವೂ, ತಾಂಬೂಲದಿಂದ ಭೋಗವೂ ಲಭಿಸುವುದು. ಆದುದರಿಂದ ಸ್ನಾನ ಮೊದಲಾದ ಆರು ಉಪಚಾರಗಳನ್ನು ಮಾಡಬೇಕು. ನಮಸ್ಕಾರ ಮತ್ತು ಜಪಗಳು ಸಕಲ ಇಷ್ಟಾರ್ಥಗಳನ್ನು ಕೊಡುವುದು. ಭೋಗ ಮತ್ತು ಮುಕ್ತಿಗಳನ್ನ ಅಪೇಕ್ಷಿಸುವವರು, ಪೂಜೆಯ ಕೊನೆಯಲ್ಲಿ ಜಪಗಳನ್ನು ಮಾಡಬೇಕು. ಮೊದಲು ಮನಸ್ಸಿನಲ್ಲಿ ದೇವತೆಗಳನ್ನು ಪೂಜಿಸಿ, ಆಯಾಯ ಕರ್ಮಗಳನ್ನು ಮಾಡಬೇಕು. ದೇವತೆಗಳ ಪೂಜೆಯಿಂದ ಆ ದೇವತೆಲೋಕಗಳಲ್ಲಿ ಬೇಕಾದಂತಹ ಭೋಗ್ಯವಸ್ತುಗಳೂ ಲಭಿಸುವುದು.

ವಿಘ್ನೇಶ್ವರನ ಪೂಜೆಯಿಂದ ಭೂಲೋಕದಲ್ಲಿ ಸಕಲ ಇಷ್ಟಾರ್ಥಗಳು ಲಭಿಸುವುದು. ಶ್ರಾವಣ, ಭಾದ್ರಪದ, ಧನುರ್ಮಾಸ, ಶುಕ್ರವಾರ, ಶುಕ್ಲಚತುರ್ಥೀ ಮತ್ತು ಶತಭಿಷನಕ್ಷತ್ರಗಳಲ್ಲಿ ಗಣೇಶನನ್ನು ವಿಧಿವತ್ತಾಗಿ ಪೂಜಿಸಬೇಕು. ಅಗ್ನಿ ಮತ್ತಿತರ ದೇವತೆಗಳನ್ನು ಶ್ರದ್ಧೆಯಿಂದ ಪೂಜಿಸಿದರೆ ಪುತ್ರ ಸಮೃದ್ಧಿ, ಇಷ್ಟಸಿದ್ಧಿ, ಸಕಲಪಾಪ ನಿವಾರಣೆಯಾಗುವುದು. ಶಿವನೇ ಮೊದಲಾದ ದೇವತೆಗಳ ವಾರಗಳಲ್ಲಿ ಆಯಾಯ ದೇವತೆಗಳನ್ನು ಪೂಜಿಸುವುದರಿಂದ ಆತ್ಮಶುದ್ಧಿಯಾಗುವುದು. ಆ ವಾರಗಳು ತಿಥಿ, ನಕ್ಷತ್ರ ಮತ್ತು ಯೋಗಗಳಿಗೆ ಆಧಾರವಾಗಿರುತ್ತದೆ. ಸಕಲ ಇಷ್ಟಾರ್ಥ ಮಾಡುವ ಮತ್ತು ವೃದ್ಧಿಕ್ಷಯಗಳಿಲ್ಲದುದರಿಂದ ಆ ವಾರಗಳು ಪೂರ್ಣ ಬ್ರಹ್ಮಸ್ವರೂಪವಾಗಿರುತ್ತೆ. ಸೂರ್ಯೋದಯದಿಂದ ಮುಂದಿನ ದಿನದ ಸೂರ್ಯೋದಯದ ಮಧ್ಯಕಾಲಕ್ಕೆ ವಾರವೆಂದು ಹೆಸರು. ರಾತ್ರಿ ವ್ಯಾಪಿಯಾದ ತಿಥಿಯ ಪೂರ್ವಭಾಗವು ಪಿತೃ(ಕರ್ಮ)ಗಳಿಗೆ ಪ್ರಶಸ್ತವಾದುದು. ಹಗಲು ವ್ಯಾಪಿಯಾದ ತಿಥಿಯ ಕೊನೆಯ ಭಾಗವು ದೇವ(ಧರ್ಮ)ರಿಗೆ ಪ್ರಶಸ್ತವಾದುದು. ಮಧ್ಯಾಹ್ನದಲ್ಲಿ ಮಾಡುವಂತಹ ದೇವಕಾರ್ಯಕ್ಕೆ ಉದಯಕಾಲವನ್ನು ವ್ಯಾಪಿಸಿರುವ ತಿಥಿಯು ಗ್ರಾಹ್ಯವಾದುದು. ತಿಥಿಯಂತೆ ಶುಭವಾದ ನಕ್ಷತ್ರ ಮುಂತಾದವುಗಳೂ ದೇವಕಾರ್ಯಕ್ಕೆ ಗ್ರಾಹ್ಯಗಳು. ವಾರ ಮುಂತಾದವುಗಳನ್ನು ಚೆನ್ನಾಗಿ ಪರೀಕ್ಷಿಸಿ, ಪೂಜೆ-ಜಪಾದಿಗಳನ್ನೂ ಮಾಡಬೇಕು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಮಂಡ್ಯದ ಪಿಇಎಸ್ ಕಾಲೇಜಿನಲ್ಲಿ ಯುವಕರು ಕೇಸರಿ ಶಾಲು ತೊಟ್ಟು, ಜೈ ಶ್ರೀರಾಂ ಎಂದು ಘೋಷಣೆ ಕೂಗುತ್ತಿದ್ದಾಗ, 'ಅಲ್ಲಾಹು ಅಕ್ಬರ್' ಎಂದು ಘೋಷಣೆ ಕೂಗಿದ್ದ ಬುರ್ಖಾಧಾರಿ ವಿದ್ಯಾರ್ಥಿನಿ ಬೀಬಿ ಮುಸ್ಕಾನ್ ಖಾನ್ ಅವರದ್ದೆಂದು ಹೇಳಲಾಗುತ್ತಿರುವ ವಿಡಿಯೊ ಒಂದು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. 'ಮುಸ್ಲಿಮರ ಪರವಾಗಿ ಘೋಷಣೆ ಕೂಗಿದ ಮುಸ್ಕಾನ್ ಅವರ ಚಿತ್ರವನ್ನು ದುಬೈನ ಬುರ್ಜ್ ಖಲೀಫಾದ ಮೇಲೆ ಪ್ರದರ್ಶಿಸಲಾಗಿದೆ. ಆ ಯುವತಿ ಘೋಷಣೆ ಕೂಗಿದ್ದರ ಹಿಂದೆ ಯಾರದೆಲ್ಲಾ ಕೈವಾಡ ಇದೆ, ಸಂಚು ಇದೆ ಎಂಬುದಕ್ಕೆ ಈ ವಿಡಿಯೊ ಸಾಕ್ಷಿ' ಎಂದು ಆರೋಪಿಸಲಾಗಿದೆ.

ಇದು ಸುಳ್ಳು ಸುದ್ದಿ ಎಂದು ಆಲ್ಟ್‌ನ್ಯೂಸ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. 'ವೈರಲ್ ಆಗಿರುವ ವಿಡಿಯೊವನ್ನು ತಿರುಚಿ, ಸೃಷ್ಟಿಸಲಾಗಿದೆ. ಫೆ.4ರಂದು ಚೀನಾ ಹೊಸವರ್ಷಕ್ಕೆ ಶುಭಾಶಯ ಕೋರಿ ಬುರ್ಜ್ ಖಲೀಫಾ ಕಟ್ಟಡ ಮಂಡಳಿಯು ಟ್ವೀಟ್ ಮಾಡಿತ್ತು. ಅದೇ ವಿಡಿಯೊಗೆ ಮುಸ್ಕಾನ್ ಅವರ ಚಿತ್ರ ಮತ್ತು ಹೆಸರನ್ನು ಸೇರಿಸಿ, ಈ ವಿಡಿಯೊ ಸೃಷ್ಟಿಸಲಾಗಿದೆ. ಈ ಮೂಲಕ ಸುಳ್ಳು ಮಾಹಿತಿ ಹಂಚಿಕೊಳ್ಳಲಾಗಿದೆ. ಮುಸ್ಕಾನ್ ಅವರ ಘೋಷಣೆ ಹಿಂದೆ ವಿದೇಶಿ ಶಕ್ತಿಗಳ ಕೈವಾಡವಿದೆ ಎಂದು ಸುಳ್ಳು ಅಭಿಪ್ರಾಯ ಮೂಡಿಸಲು ಯತ್ನಿಸಲಾಗಿದೆ' ಎಂದು ಆಲ್ಟ್ ನ್ಯೂಸ್ ವಿವರಿಸಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಅಹಂಪ್ರಜ್ಞೆಯ ಕರಗುವಿಕೆ

ಅಹಂಪ್ರಜ್ಞೆಯ ಕರಗುವಿಕೆ
ಬಿಳಲಲ್ಲ, ಬೇರಲ್ಲ, ಮುಂಡಕಾಂಡಗಳಲ್ಲ |
ತಳಿರಲ್ಲ, ಮಲರಲ್ಲ, ಕಾಯಿಹಣ್ಣಲ್ಲ ||
ಎಲೆನೀನು; ವಿಶ್ವವೃಕ್ಷದೊಳ್ ಎಲೆಯೊಳೊಂದು ನೀಂ |
ತಿಳಿದದನು ನೆರವಾಗು – ಮಂಕುತಿಮ್ಮ || 563 ||

ಪದ-ಅರ್ಥ: ಬಿಳಲಲ್ಲ = ಬಿಳಲು + ಅಲ್ಲ, ತಳಿರಲ್ಲ = ತಳಿರು(ಚಿಗುರು) + ಅಲ್ಲ, ಮಲರಲ್ಲ = ಮಲರು(ಹೂವು) + ಅಲ್ಲ, ಎಲೆಯೊಳೊಂದು = ಎಲೆಯೊಳು + ಒಂದು ತಿಳಿದದನು = ತಿಳಿದು + ಅದನು.

ವಾಚ್ಯಾರ್ಥ: ಬಿಳಲು ಅಲ್ಲ, ಬೇರಲ್ಲ, ಮುಖ್ಯ ಕಾಂಡ, ಮುಂಡವೂ ಅಲ್ಲ, ಚಿಗುರಲ್ಲ, ಹೂವಲ್ಲ, ಕಾಯಿ ಹಣ್ಣೂ ಅಲ್ಲ. ನೀನು ಕೇವಲ ಒಂದು ಎಲೆ. ವಿಶ್ವವೃಕ್ಷದೊಳಗಿರುವ ಅನೇಕ ಎಲೆಗಳಲ್ಲಿ ಒಂದು ಎಲೆ ನೀನು. ಅದನ್ನು ತಿಳಿದು ನೆರವಾಗು.

ವಿವರಣೆ: ಇದು ಕಗ್ಗದ ವಿಶೇಷತೆ. ಹಿಂದಿನ ಕಗ್ಗದಲ್ಲಿ ಮನುಷ್ಯನ ಆತ್ಮವಿಶ್ವಾಸವನ್ನು ಹೆಚ್ಚು ಮಾಡುತ್ತದೆ. ನೀನು ಸಣ್ಣವನು ಎಂದುಕೊಳ್ಳಬೇಡ. ಇಡೀ ವಿಶ್ವವೃಕ್ಷದೊಳಗೆ ನಿನಗೊಂದು ಸ್ಥಾನವಿದೆ. ವೃಕ್ಷ ನಿನ್ನದೆ ಎಂದು ಆತ್ಮವಿಶ್ವಾಸವನ್ನು ತುಂಬುತ್ತದೆ. ಆದರೆ ಮನುಷ್ಯನಿಗೊಂದು ಅಹಂಪ್ರಜ್ಞೆ ಇದೆ. ಯಾವಾಗ 'ನಾನು' ಎಂಬುವುದು ದೊಡ್ಡದಾಯಿತೋ ಆಗ ಆತ ನಿಧಾನವಾಗಿ ಎಲ್ಲರಿಗೂ ಪರಕೀಯನಾಗುವುದರ ಜೊತೆಗೆ ತನಗೂ ಪರಕೀಯನಾಗುತ್ತಾನೆ. ತಾನೊಬ್ಬನೇ ಶ್ರೇಷ್ಠ ಎನ್ನುವ ಭಾವನೆ ಒಂಟಿತನವನ್ನುಂಟು ಮಾಡುತ್ತದೆ. ಮರದಿಂದ ಬೇರೆಯಾದ ಕೊಂಬೆ ಕ್ರಮೇಣ ಒಣಗಿ ಹೋಗುವಂತೆ ಅಹಂಕಾರದಿಂದ ಕೂಡಿದ ಮನುಷ್ಯ, ಸಮಾಜದಿಂದ ಬೇರೆಯಾಗಿ ದುರಹಂಕಾರಿಯಾಗುತ್ತಾನೆ. ಈ ಕಗ್ಗ ದುರಂಹಕಾರಕ್ಕೆ ಎಚ್ಚರಿಕೆಯನ್ನು ನೀಡುತ್ತದೆ.

ಇದೊಂದು ಮಹಾನ್ ವಿಶ್ವವೃಕ್ಷ. ಅದು ಕೊನೆ ಮೊದಲಿಲ್ಲದ ಬೃಹತ್‌ವೃಕ್ಷ. ಈ ವೃಕ್ಷದ ಬೇರು ನೀನಲ್ಲ, ಬಿಳಲಲ್ಲ, ಮುಂಡ, ಕಾಂಡವೂ ಅಲ್ಲ, ಅದರ ಚಿಗುರಲ್ಲ, ಹೂವು, ಕಾಯಿ, ಹಣ್ಣು ಯಾವುದೂ ನೀನಲ್ಲ. ಈ ವೃಕ್ಷಕ್ಕೆ ಕೋಟ್ಯಾಂತರ ಎಲೆಗಳಿವೆ. ಅಷ್ಟೊಂದು ಎಲೆಗಳಲ್ಲಿ ನೀನು ಕೇವಲ ಒಂದು ಎಲೆ ಮಾತ್ರ. ಅದನ್ನು ತಿಳಿದು, ಅಹಂಕಾರವನ್ನು ಕರಗಿಸಿಕೊಂಡು ವಿಶ್ವವೃಕ್ಷದ ಕಾರ್ಯದಲ್ಲಿ ಸಹಕಾರಿಯಾಗು. ನೀನೊಬ್ಬನಿಲ್ಲದಿದ್ದರೆ ವೃಕ್ಷಕ್ಕೆ ಯಾವ ತೊಂದರೆಯೂ ಇಲ್ಲ. ಬಹುಶ: ನೀನು ಉದುರಿ ಹೋದರೆ ಮರಕ್ಕೆ ಗೊತ್ತು ಕೂಡ ಆಗಲಿಕ್ಕಿಲ್ಲ. ಆದ್ದರಿಂದ ವಿನಯದಿಂದ ವಿಶ್ವಜೀವನದಲ್ಲಿ ಮಿಳಿತನಾಗು ಎನ್ನುತ್ತದೆ ಕಗ್ಗ. ಈ ಸಂದೇಶ ನಮಗೆಲ್ಲ ಪ್ರಯೋಜನಕಾರಿಯಾದದ್ದು. ಇಡೀ ಪ್ರಪಂಚದ ವ್ಯವಸ್ಥೆಯಲ್ಲಿ ನಾನೊಂದು ಅತ್ಯಂತ ಚಿಕ್ಕ ಅಂಶ. ಈ ಸ್ವಸ್ಥಾನ ಪರಿಜ್ಞಾನದಿಂದ ವ್ಯವಹರಿಸಿದರೆ ಬದುಕು ಬಂಗಾರವಾಗುತ್ತದೆ. ಆದರೆ 'ನಾನು' ಎಂಬುದು ದೊಡ್ಡದಾದರೆ ಪೆಟ್ಟು ಬೀಳುತ್ತದೆ.

ನಹುಷ ಅಸಾಮಾನ್ಯ ಚಕ್ರವರ್ತಿ, ಪರಾಕ್ರಮಶಾಲಿ. ಇಂದ್ರ ಕೂಡ ಅವನ ಸಹಾಯವನ್ನು ಅಪೇಕ್ಷಿಸಿದ. ಒಂದು ಬಾರಿ ಇಂದ್ರಸ್ಥಾನ ಖಾಲಿಯಾದಾಗ ಅದನ್ನು ತುಂಬಲು ನಹುಷ ಮಾತ್ರ ಶಕ್ತ ಎಂದು ದೇವಗುರು ಬೃಹಸ್ಪತಿ ಹೇಳಿದಾಗ ಎಲ್ಲರೂ ಒಪ್ಪಿ ಅವನನ್ನು ಇಂದ್ರಸ್ಥಾನದಲ್ಲಿ ಕೂಡ್ರಿಸಿದರು. ಮಾನವ, ಇಂದ್ರನಾಗುವುದು ಸಾಮಾನ್ಯವೇ? ಇದು ನಹುಷನಿಗೆ ಅಹಂಕಾರವನ್ನು ತಂದಿತು. ಅದು ಅವನನ್ನು ಎಲ್ಲರಿಂದ ಬೇರ್ಪಡಿಸಿತು. ಅಹಂಕಾರದ ಪರಮಾವಧಿಯಾಗಿ ಆತ ಇಂದ್ರನ ಪತ್ನಿಯಾದ ಶಚಿದೇವಿಯನ್ನೇ ಬಯಸಿದ. ನಂತರ ಋಷಿಗಳ ಶಾಪಕ್ಕೆ ಗುರಿಯಾಗಿ ಹೆಬ್ಬಾವಾಗಿ ಭೂಲೋಕದಲ್ಲಿ ಬಿದ್ದು ಶತಮಾನಗಳವರೆಗೆ ಪರಿತಪಿಸಿದ. ಕಗ್ಗ ಆತ್ಮವಿಶ್ವಾಸ ಮತ್ತು ಅಹಂಕಾರದ ವ್ಯತ್ಯಾಸವನ್ನು ಸೂಕ್ಷ್ಮವಾಗಿ ತಿಳಿಸುತ್ತದೆ. ಆತ್ಮವಿಶ್ವಾಸ ನಮ್ಮ ಅಂತರ್ಯದ ದರ್ಶನ. ಆದರೆ ಅಹಂಕಾರ ನಾನು ಮಾತ್ರ ಮಾಡಬಲ್ಲೆ ಎನ್ನುತ್ತದೆ. ಅಹಂಕಾರರಹಿತನಾಗಿ ಕೆಲಸ ಮಾಡಿದರೆ ವಿಶ್ವಪ್ರಜ್ಞೆಯಲ್ಲಿ ಮನುಷ್ಯ ಒಂದಾಗುತ್ತಾನೆ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಮಂಗಳವಾರ ಫೆಬ್ರುವರಿ 15, 2022

ಶ್ರೀ ಪ್ಲವನಾಮ ಸಂವತ್ಸರ ಉತ್ತರಾಯಣ – ಶಿಶಿರ ಋತು ಕುಂಭ ಮಾಸದ 03 ನೇ ದಿನ
ತಿಥಿ: (ಮಾಘ ಶುಕ್ಲ) ಚತುರ್ದಶಿ ಗಂ. 21-43 ನಕ್ಷತ್ರ: ಪುಷ್ಯ ಗಂ. 13-49 ಯೋಗ: ಸೌಭಾಗ್ಯ ಗಂ. 21-17, ಕರಣ: ಗರಜೆ ಗಂ. 09-10. ರಾಹುಕಾಲ: ಮಧ್ಯಾಹ್ನ 03:00 – 04:30 ಸೂರ್ಯೋದಯ : 06-57 ಸೂರ್ಯಾಸ್ತ : 06-32
ಮುಸ್ಲಿಂ ದಿನಾಂಕ : 13 ರಜಬ್ ದಿನ ವಿಶೇಷ : ಹಜರತ್ ಅಲಿಯವರ ಜನ್ಮದಿನ (ಮುಸ್ಲಿಂ) ಅದೃಷ್ಟ ಸಂಖ್ಯೆ: 4, 7

ಮೇಷ: ಕುಟುಂಬದಲ್ಲಿದ್ದ ಭಿನ್ನಾಭಿಪ್ರಾಯವನ್ನು ಹೋಗಲಾಡಿಸಿ ಸಂಘಟಿಸಲು, ಮನೆಯವರಲ್ಲಿ ಚರ್ಚೆ ಮಾಡಲು ಸುದಿನ. ನಿರೀಕ್ಷೆಗೆ ತಕ್ಕ ಪ್ರತಿಕ್ರಿಯೆಯಿಂದ ಮಾನಸಿಕ ನೆಮ್ಮದಿ ಹೆಚ್ಚುವುದು. ಕೆಲಸದಲ್ಲಿ ಕಷ್ಟಗಳು ಎದುರಾಗಬಹುದು.

ವೃಷಭ: ನ್ಯಾಯಾಲಯದ ಕಾರ್ಯಭಾಗದಲ್ಲಿ ಮುನ್ನಡೆ. ವೃತ್ತಿಪರವಾಗಿ ಬಹಳ ದಿನಗಳ ನಿರೀಕ್ಷಿತ ಬೆಳವಣಿಗೆ ಸಂಭವಿಸಬಹುದು. ದೂರದ ಸಂಚಾರ ತೋರಿಬಂದರೂ, ಅದನ್ನು ಮುಂದೂಡುವುದು ಅನಿವಾರ್ಯವಾಗುತ್ತದೆ.

ಮಿಥುನ: ಸರ್ಕಾರಿ ಕೆಲಸದಲ್ಲಿ ಆಯಾಸವಿಲ್ಲದೆ ಶುಭವಾಗುವುದು. ಅಧಿಕ ರೀತಿಯ ಖರ್ಚು-ವೆಚ್ಚಗಳು ಬಂದರೂ ಉಳಿತಾಯಕ್ಕೆ ಕೊರತೆ ಕಾಣುವುದಿಲ್ಲ. ನಿಮ್ಮ ಜೀವನದ ಶೈಲಿಯಲ್ಲಿ ಬದಲಾವಣೆಯ ಗಾಳಿ ಬೀಸಲು ಆರಂಭಿಸುತ್ತದೆ.

ಕರ್ಕಾಟಕ: ನೀವು ತೆಗೆದುಕೊಂಡಿರುವ ನಿರ್ಧಾರ ಸರಿಯಾದುದೆಂದು ಈ ದಿನ ನಿಮಗೆ ಮನವರಿಕೆಯಾಗುವುದು. ಹವಾ ಬದಲಾವಣೆಗಾಗಿ ಕಿರು ಪ್ರವಾಸದ ಸಾಧ್ಯತೆಗಳಿವೆ. ದೈವಕಾರ್ಯ ಮನೆಯಲ್ಲಿ ಜರುಗಲಿದೆ.

ಸಿಂಹ: ಈ ದಿನ ನಿಮ್ಮ ವೃತ್ತಿ ಜೀವನದಲ್ಲಿ ಸಹೋದ್ಯೋಗಿಗಳ ಮಾತಿನಂತೆ ನಡೆದುಕೊಳ್ಳುವುದು ಉತ್ತಮ. ಅಚ್ಚರಿಯ ಸುದ್ದಿಯೊಂದನ್ನು ಕೇಳಲಿರುವಿರಿ. ಮನೆಯವರಿಗೆ ನಿಮ್ಮ ನಿರ್ಧಾರವನ್ನು ಸ್ಪಷ್ಟ ಮಾತುಗಳಲ್ಲಿ ತಿಳಿಯಪಡಿಸಿ.

ಕನ್ಯಾ: ನಿಮ್ಮ ಪ್ರತಿಭೆ ಬೆಳಕಿಗೆ ಬರಲಿದೆ. ಹಿರಿಯರು ನಿಮ್ಮ ಸಮಸ್ಯೆಗಳಿಗೆ ಪರಿಹಾರಗಳನ್ನು ತಿಳಿಸಿ ಕೊಡುವರು. ಜೀವನದಲ್ಲಿನ ಸಮಸ್ಯೆಗಳು ಮತ್ತು ದುಃಖಗಳೆಲ್ಲಾ ದೂರಾಗುವುವು. ವಾಣಿಜ್ಯ ವ್ಯವಹಾರಗಳು ಹೆಚ್ಚಿನ ಲಾಭ ತರಲಿದೆ.

ತುಲಾ: ಸದ್ಯದ ಪರಿಸ್ಥಿತಿಯಲ್ಲಿ ಹಣಕಾಸಿನ ಸ್ಥಿತಿಗತಿಗಳನ್ನು ನೋಡಿಕೊಂಡು ನಿವೇಶನವನ್ನು ಖರೀದಿಸುವ ತೀರ್ಮಾನ ತೆಗೆದುಕೊಳ್ಳುವುದು ಸೂಕ್ತ. ಪಾಲುದಾರಿಕೆಗೆ ಒಪ್ಪುವ ಮುನ್ನ ಮತ್ತೊಬ್ಬರಿಂದ ಅಭಿಪ್ರಾಯ ಪಡೆದುಕೊಳ್ಳಿರಿ.

ವೃಶ್ಚಿಕ: ಗಣ್ಯವ್ಯಕ್ತಿಯ ಭೇಟಿಯಿಂದ ಅನುಕೂಲ ಉಂಟಾಗುವುದು. ಪ್ರಸ್ತುತ ರಾಜಕೀಯ ವಿದ್ಯಮಾನಗಳಿಂದ ಲಾಭವಾಗಲಿದೆ ಆದರೆ ಹಿತಶತ್ರುಗಳ ಬಗ್ಗೆ ಎಚ್ಚರ ವಹಿಸಿ. ಶಿಕ್ಷಕ ವೃತ್ತಿಯವರಿಗೆ ತರಬೇತಿಯ ಅಗತ್ಯ ಕಾಣುವುದು.

ಧನು: ವೃತ್ತಿರಂಗದಲ್ಲಿ ಅನಾವಶ್ಯಕವಾಗಿ ಇತರರ ಕೋಪಕ್ಕೆ ಗುರಿಯಾಗುವುದನ್ನು ನಿಮ್ಮ ಸ್ನೇಹಿತರು ಅಥವಾ ಸಹೋದ್ಯೋಗಿಗಳು ತಪ್ಪಿಸುವರು. ಮನೆಯಲ್ಲಿ ಯಾರ ನೆರವೂ ಇಲ್ಲದೆ ಎಲ್ಲಾ ಕಾರ್ಯಗಳನ್ನು ಸ್ವಯಂ ನೀವೇ ನಿರ್ವಹಿಸುವಿರಿ.

ಮಕರ: ನಿಮ್ಮ ಸಲಹೆ ಸೂಚನೆಯಂತೆಯೇ ನಡೆದುಕೊಳ್ಳಲು ಕೆಲಸಗಾರರಿಗೆ ತಿಳಿಸಿ. ವ್ಯವಹಾರ ಒಪ್ಪಂದಗಳಿಂದ ಲಾಭ. ಸ್ನೇಹಿತರಿಗೆ ಸಹಾಯ ಮಾಡುವ ಬಗ್ಗೆ ನಿರ್ಧರಿಸಿ. ಮನೆ ಮತ್ತು ಕುಟುಂಬದ ಚಿಂತೆ ಅಷ್ಟಾಗಿ ಕಾಡುವುದಿಲ್ಲ.

ಕುಂಭ: ನಿಮ್ಮ ವೃತ್ತಿ ಪ್ರವೃತ್ತಿಗಳಲ್ಲಿ ಸಮತೋಲನ ಕಾಯ್ದುಕೊಳ್ಳಿರಿ. ಕೆಲಸ-ಕಾರ್ಯಗಳಲ್ಲಿ ಅತಿ ಹೆಚ್ಚಿನ ಉತ್ಸಾಹ ಕಾಣುವಿರಿ. ಅನ್ಯರ ಒತ್ತಡಗಳಿಗೆ ಸಿಲುಕಿಕೊಳ್ಳುವುದನ್ನು ತಪ್ಪಿಸಿಕೊಳ್ಳಬೇಕು. ಗುಣಾತ್ಮಕ ಕಾರ್ಯಗಳಿಗೆ ಮಹತ್ವ ನೀಡಿ.


ಮೀನ: ವಾಣಿಜ್ಯೋದ್ಯಮ ಮಂದಿಗೆ ಇಂದು ಹೆಚ್ಚಿನ ಬಂಡವಾಳ ತೊಡಗಿಸಲು ಉತ್ತಮ ದಿನ. ನಿಮ್ಮ ಯೋಜನೆಗಳನ್ನು ಕಾರ್ಯಗತಗೊಳಿಸಲು ಸಿಬ್ಬಂದಿ ವರ್ಗ ಸಹಕರಿಸಲಿದ್ದಾರೆ. ಸಾಮರ್ಥ್ಯಕ್ಕೆ ಅನುಗುಣವಾದ ಕೆಲಸಗಳು ದೊರೆಯಲಿದೆ.

ಪದಬಂಧ 4870

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಹೋಲಿಕೆಗೆ ಮೀರಿದುದು (4)
3.ಈತ ಕೊಳ್ಳೆ ಹೊಡೆಯುವವನು (4)
4.ಹೀಗೆ ಜಬರಿಸು! (3)
5.ಶ್ರೀಗಂಧವನ್ನು ಹೀಗೂ ಹೇಳುವರು (4)
7.ಆನೆಯಂತೆ ಮುಖವುಳ್ಳವನು (4)
9.ಕಾಡಿನಲ್ಲಿ ವಾಸ ಮಾಡುವಿಕೆ (4)
11.ಆ ಭರಣಿಯಲ್ಲಿರುವ ಒಡವೆ! (4)
12.ತಿರುವುಮುರುವಾಗಿರುವ ಮಡಿಕೆ (3)
14.ಒಂದು ಜಾತಿಯ ಕ್ರೂರ ಹದ್ದು (4)
15.ಭೋಜನ ಸಮಾರಂಭಕ್ಕೆ ಬೇಕಾದ ಸಾಮಾನು (4)

ಮೇಲಿಂದ ಕೆಳಕ್ಕೆ
1.ಕಡಿಮೆ ಬೆಲೆಯನ್ನು ಹೀಗೆನ್ನಿ (2)
2.ಕೊಬ್ಬಿದ ಆನೆ (4)
3.ಒಂದು ಬಗೆಯ ಚರ್ಮವಾದ್ಯ (4)
6.ಬೆಳ್ಳುಳ್ಳಿಯಿದು (3)
8.ಮೂಗಿನಲ್ಲಿ ಧರಿಸುವ ಆಭರಣ (3)
10.ಹದ್ದು ಕೊನೆಯಲ್ಲಿದ್ದಾಗ ಎಲ್ಲೆ ಕಾಣುವುದೇ? (4)
11.ತೊಂದರೆಯ ಕಾಲ (4)
13.ಆಮೇಲೆ ಕಾಣಿಸಿದ ಕೂರ್ಮ! (2)



4869ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಧನಸಹಾಯ 3.ಸಮಾಸ
5.ನಿರಪರಾಧಿ 7.ವರಾಹ
8.ಹೊಸಜೀವನ 10.ಅಗುಳು
11.ವನಪಾಲಕ 14.ಶಕುನಿ
15.ಸಮರಸಿಂಹ

ಮೇಲಿಂದ ಕೆಳಕ್ಕೆ:
1.ಧಮನಿ 2.ಸಲ್ಲಾಪ
4.ಸಪ್ತಾಹ 6.ರಾಕ್ಷಸ
7.ವಪನ 8.ಹೊಕ್ಕುಳು
9.ವದನ 10.ಅಕ್ಷಾಂಶ
12.ಪಾಮರ 13.ಕಲಹ

ಸುಡೊಕು 5256

	1				5	4		9
4		7	6				5	
	6				8	1		
	2				7			6
5		1		6			2	
			5				1	7
	3	9				6		
6			8		4		3	
		4		3		2		5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5255 ಸುಡೊಕು

3	4	9	1	5	8	2	7	6
2	5	6	4	9	7	8	1	3
1	7	8	3	6	2	4	5	9
5	3	7	2	4	6	9	8	1
8	9	1	7	3	5	6	2	4
4	6	2	8	1	9	7	3	5
6	8	4	5	2	3	1	9	7
7	1	3	9	8	4	5	6	2
9	2	5	6	7	1	3	4	8

ನಟಿ ಭಾರ್ಗವಿ ನಾರಾಯಣ್ ಇನ್ನಿಲ್ಲ



ಬೆಂಗಳೂರು: ಚಲನಚಿತ್ರ, ಕಿರುತೆರೆ ಹಾಗೂ ರಂಗಭೂಮಿ ನಟಿ ಭಾರ್ಗವಿ ನಾರಾಯಣ್ (84) ಅವರು ಸೋಮವಾರ ಜಯನಗರದ ತಮ್ಮ ನಿವಾಸದಲ್ಲಿ ನಿಧನರಾದರು.

ಅವರಿಗೆ ನಟರಾದ ಪ್ರಕಾಶ್ ಬೆಳವಾಡಿ, ಸುಧಾ ಬೆಳವಾಡಿ ಸೇರಿ ಇಬ್ಬರು ಪುತ್ರರು ಹಾಗೂ ಇಬ್ಬರು ಪುತ್ರಿಯರು ಇದ್ದಾರೆ.

ಸಿನಿಮಾ, ಕಿರುತೆರೆ ಹಾಗೂ ರಂಗಭೂಮಿಯಲ್ಲಿ ಭಾರ್ಗವಿ ಅವರು ತಮ್ಮ ಸಹಜ ಅಭಿನಯದಿಂದ ಗುರುತಿಸಿಕೊಂಡವರು.

600ಕ್ಕೂ ಹೆಚ್ಚು ನಾಟಕಗಳು, ಎರಡು ಕನಸು, ಹಂತಕರ ಸಂಚು, ಪಲ್ಲವಿ ಅನುಪಲ್ಲವಿ, ಬಾ ನಲ್ಲೆ ಮಧುಚಂದ್ರಕೆ, ವಂಶವೃಕ್ಷ, ಪ್ರೊಫೆಸರ್ ಹುಚ್ಚೂರಾಯ... ಸೇರಿದಂತೆ ಹಲವಾರು ಕನ್ನಡ ಸಿನಿಮಾಗಳಲ್ಲಿ ಅಭಿನಯಿಸಿದ್ದಾರೆ. ಅತ್ಯುತ್ತಮ ಪೋಷಕ ನಟಿ- ರಾಜ್ಯ ಚಲನಚಿತ್ರ ಪ್ರಶಸ್ತಿ (1975), ರಾಜ್ಯ ನಾಟಕ ಅಕಾಡೆಮಿ ಪ್ರಶಸ್ತಿ(1998), ರಾಜ್ಯೋತ್ಸವ ಪ್ರಶಸ್ತಿ (2019) ಸಹಿತ ಹಲವು ಗೌರವ, ಪುರಸ್ಕಾರಗಳು ಅವರಿಗೆ ಸಂದಿವೆ.


ರಂಗಭೂಮಿಯಲ್ಲಿ 'ಮೇಕಪ್ ನಾಣಿ' ಎಂದೇ ಹೆಸರಾಗಿದ್ದ ಬೆಳವಾಡಿ ನಂಜುಂಡಯ್ಯ ನಾರಾಯಣ ಅವರು ಭಾರ್ಗವಿ ಅವರ ಪತಿ.

ಭಾರ್ಗವಿ ಅವರು ಇಂಗ್ಲಿಷ್ ಎಂ.ಎ ಪದವೀಧರರು. 'ನಾ ಕಂಡ ನಮ್ಮವರು' ಅವರ ಕೃತಿ. 'ನಾನು, ಭಾರ್ಗವಿ' ಅವರ ಆತ್ಮಚರಿತ್ರೆ ಕೃತಿ. ಅವರು ನಗರದ ಕಾರ್ಮಿಕ ವಿಮಾ ನಿಗಮದಲ್ಲಿ ವ್ಯವಸ್ಥಾಪಕರಾಗಿ ದುಡಿದಿದ್ದರು. ನಾಟಕ ಅಕಾಡೆಮಿ ಸದಸ್ಯರೂ ಆಗಿದ್ದರು.

'ಸುಮಾರು ಎರಡು ವರ್ಷಗಳಿಂದ ವಯೋಸಹಜ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದರು. ಸೊಂಟದ ಮೂಳೆ ಮುರಿತಕ್ಕೊಳಗಾಗಿದ್ದರು. ಸಂಜೆ ವೇಳೆ ಕುಸಿದುಬಿದ್ದ ಅವರು ಬಳಲಿದಂತೆ ಕಂಡುಬಂದರು. ನಮ್ಮ ಜೊತೆ ಕೆಲ ಮಾತುಗಳನ್ನಾಡಿ 7.30ರ ವೇಳೆಗೆ ಕೊನೆಯುಸಿರೆಳೆದರು' ಎಂದು ಅವರ ಪುತ್ರ ಪ್ರಕಾಶ್ ಬೆಳವಾಡಿ ತಿಳಿಸಿದರು.

'ಭಾರ್ಗವಿ ಅವರ ದೇಹವನ್ನು ಸೇಂಟ್ ಜಾನ್ಸ್ ಆಸ್ಪತ್ರೆಗೆ ದಾನ ಮಾಡಲಾಗುವುದು. ಈ ಸಂಬಂಧ ಭಾರ್ಗವಿ ಅವರು ಬಹಳ ಹಿಂದೆಯೇ ಸಮ್ಮತಿ ನೀಡಿದ್ದಾರೆ. ಅಂಗಾಂಗ ದಾನ, ದೇಹದಾನ ಸಂಬಂಧಿಸಿದ ಪ್ರಕ್ರಿಯೆಗಳು ನಡೆಯಬೇಕಿದೆ. ಅವರ ಕಣ್ಣುಗಳನ್ನು ನೇತ್ರಧಾಮ ಸಂಸ್ಥೆಗೆ ದಾನ ಮಾಡಲಾಗಿದೆ. ಹಿರಿಯ ಪುತ್ರಿ ಸುಜಾತಾ ಅವರು ಮುಂಬೈಯಿಂದ ಬಂದ ತಕ್ಷಣ ವಿಳಂಬ ಮಾಡದೇ ದೇಹವನ್ನು ಆಸ್ಪತ್ರೆಗೆ ಹಸ್ತಾಂತರಿಸಲಾಗುವುದು' ಎಂದರು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,374
ಇಂದಿನ ಅಂತ್ಯ	16,842
▼	531
ದಿನದ ಗರಿಷ್ಠ	107099

ವಿನಿಮಯ ದರ

$ ಡಾಲರ್	75.6
£ ಪೌಂಡ್	102.16
€ ಯುರೊ	85.54
¥ ಯೆನ್ (100ಕ್ಕೆ)	65.41

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹435
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹435

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1360 (1330)
ಸೋಯಾ (ರಿಫೈನ್ಡ್)	₹1325(1312)
ಸೂರ್ಯಕಾಂತಿ (ರಿಫೈನ್ಡ್)	₹1320 (1315)
ಪಾಮೋಲಿನ್	₹1275 (1272)

ಕೊಬ್ಬರಿ ಧಾರಣೆ

ಕೆ.ಆರ್.ಪೇಟೆ (ಇತರೆ)	₹9000-9000
ಪುತ್ತೂರು (ಇತರೆ)	₹4000-10500
ತುರುವೇಕೆರೆ	₹17700-17800

ಎಬಿಜಿ ಶಿಪ್‌ಯಾರ್ಡ್ ಪ್ರಕರಣ: ಯುಪಿಎ ಮೇಲೆ ಆರೋಪ

ದೂರು ವಿಳಂಬಕ್ಕೆ ನಿರ್ಮಲಾ ಸಮರ್ಥನೆ

ನವದೆಹಲಿ (ಪಿಟಿಐ): ಎಬಿಜಿ ಶಿಪ್‌ಯಾರ್ಡ್ ಕಂಪನಿಯಿಂದ ಎಸ್‌ಬಿಐ ಹಾಗೂ ಇತರ ಬ್ಯಾಂಕ್‌ಗಳಿಗೆ ಆಗಿದೆ ಎನ್ನಲಾದ ₹ 22 ಸಾವಿರ ಕೋಟಿ ವಂಚನೆ ಪ್ರಕರಣದಲ್ಲಿ ಮೊದಲ ದೂರು ದಾಖಲಿಸಲು ಐದು ವರ್ಷ ತೆಗೆದುಕೊಂಡಿದ್ದನ್ನು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸಮರ್ಥಿಸಿಕೊಂಡಿದ್ದಾರೆ. ವಂಚನೆಯನ್ನು ಪತ್ತೆ ಮಾಡಲು ಮಾಮೂಲಿಗಿಂತಲೂ ಕಡಿಮೆ ಸಮಯ ತೆಗೆದುಕೊಳ್ಳಲಾಗಿದೆ ಎಂದು ಅವರು ಹೇಳಿದ್ದಾರೆ.

ಎಬಿಜಿ ಶಿಪ್‌ಯಾರ್ಡ್ ಕಂಪನಿಗೆ ನೀಡಿದ್ದ ಸಾಲವು ಅನುತ್ಪಾದಕ (ಎನ್‌ಪಿಎ) ಆಗಿದ್ದು ಹಿಂದಿನ ಯುಪಿಎ ಸರ್ಕಾರದ ಅವಧಿಯಲ್ಲಿ ಎಂದು ನಿರ್ಮಲಾ ಆರೋಪಿಸಿದ್ದಾರೆ. ನರೇಂದ್ರ ಮೋದಿ ನೇತೃತ್ವದ ಸರ್ಕಾರದ ಅತ್ಯುನ್ನತ ಸ್ಥಾನಗಳಲ್ಲಿ ಇರುವವರು, 'ದೇಶದಲ್ಲಿ ನಡೆದಿರುವ ಅತಿದೊಡ್ಡ ಬ್ಯಾಂಕಿಂಗ್ ವಂಚನೆ ಪ್ರಕರಣದಲ್ಲಿ ಭಾಗಿಯಾಗಿದ್ದಾರೆ' ಎಂದು ಕಾಂಗ್ರೆಸ್ ಆರೋಪ ಮಾಡಿದೆ.

ಇಂತಹ ಪ್ರಕರಣಗಳನ್ನು ಪತ್ತೆ ಮಾಡಲು ಬ್ಯಾಂಕ್‌ಗಳು ಸಾಮಾನ್ಯವಾಗಿ 52ರಿಂದ 56 ತಿಂಗಳುಗಳನ್ನು ತೆಗೆದುಕೊಳ್ಳುವುದಿದೆ ಎಂದು ಸಚಿವರು ಸೋಮವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಬ್ಯಾಂಕ್‌ಗಳ ಒಕ್ಕೂಟಕ್ಕೆ ವಂಚನೆ ಎಸಗಿದ ಆರೋಪದ ಅಡಿಯಲ್ಲಿ ಎಬಿಜಿ ಶಿಪ್‌ಯಾರ್ಡ್ ಲಿಮಿಟೆಡ್, ಅದರ ಮಾಜಿ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ರಿಷಿ ಕಮಲೇಶ್ ಅಗರ್ವಾಲ್ ವಿರುದ್ಧ ಕೇಂದ್ರೀಯ ತನಿಖಾ ದಳವು (ಸಿಬಿಐ) ಈಚೆಗೆ ಪ್ರಕರಣ ದಾಖಲಿಸಿಕೊಂಡಿದೆ. ಎಬಿಜಿ ಶಿಪ್‌ಯಾರ್ಡ್ ಕಡೆಯಿಂದ ಆಗಿರುವ ವಂಚನೆಯ ಮೊತ್ತವು ನೀರವ್ ಮೋದಿ ಮತ್ತು ಅವನ ಮಾವ ಮೆಹುಲ್ ಚೋಕ್ಸಿ ಎಸಗಿದ ವಂಚನೆಯ ಮೊತ್ತಕ್ಕಿಂತ ದೊಡ್ಡದು. ಇವರಿಬ್ಬರು ಜೊತೆಯಾಗಿ ಪಂಜಾಬ್ ನ್ಯಾಷನಲ್ ಬ್ಯಾಂಕ್‌ಗೆ ಅಂದಾಜು ₹ 14 ಸಾವಿರ ಕೋಟಿ ವಂಚಿಸಿದ ಆರೋಪ ಎದುರಿಸುತ್ತಿದ್ದಾರೆ.



ನಿರ್ಮಲಾ

ಎನ್‌ಡಿಎ ಸರ್ಕಾರದ ಅವಧಿಯಲ್ಲಿ ದೇಶದ ಬ್ಯಾಂಕ್‌ಗಳ ಹಣಕಾಸಿನ ಸ್ಥಿತಿ ಸುಧಾರಿಸಿದೆ. ಬ್ಯಾಂಕ್‌ಗಳು ಬಂಡವಾಳ ಮಾರುಕಟ್ಟೆಯಿಂದ ಹಣ ಸಂಗ್ರಹಿಸುವ ಸ್ಥಿತಿಯಲ್ಲಿ ಇವೆ ಎಂದು ನಿರ್ಮಲಾ ಹೇಳಿದರು.

ಇದೇ ಸುದ್ದಿಗೋಷ್ಠಿಯಲ್ಲಿ ಹಾಜರಿದ್ದ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಗವರ್ನರ್ ಶಕ್ತಿಕಾಂತ ದಾಸ್, 'ಹಣದುಬ್ಬರ ಪ್ರಮಾಣವನ್ನು ಅಂದಾಜು ಮಾಡಲು ಆರ್‌ಬಿಐ ನಿಖರ ಮಾರ್ಗ ಅನುಸರಿಸುತ್ತದೆ' ಎಂದು ಹೇಳಿದರು. 2021ರ ಅಕ್ಟೋಬರ್‌ನಿಂದ ಹಣದುಬ್ಬರ ಪ್ರಮಾಣವು ಇಳಿಕೆಯ ಹಾದಿಯಲ್ಲಿ ಇದೆ ಎಂದು ಅವರು ಹೇಳಿದರು.

'ಕಂಪನಿಗೆ 2013ಕ್ಕೂ ಮೊದಲು ಸಾಲ ನೀಡಲಾಗಿತ್ತು. 2013ರಲ್ಲಿ ಈ ಸಾಲವು ಎನ್‌ಪಿಎ ಆಯಿತು. ಜನ ತಾವೇ ತೋಡಿದ ಹೊಂಡದಲ್ಲಿ ಬೀಳುತ್ತಿದ್ದಾರೆ' ಎಂದು ನಿರ್ಮಲಾ ಹೇಳಿದರು. ಕ್ರಿಪ್ಟೊಕರೆನ್ಸಿಗಳ ವಿಚಾರವಾಗಿ ರಿಸರ್ವ್ ಬ್ಯಾಂಕ್ ಜೊತೆ ಮಾತುಕತೆ ನಡೆಯುತ್ತಿದ್ದು, ಶೀಘ್ರದಲ್ಲಿಯೇ ತೀರ್ಮಾನವೊಂದನ್ನು ಕೈಗೊಳ್ಳಲಾಗುತ್ತದೆ ಎಂದೂ ನಿರ್ಮಲಾ ತಿಳಿಸಿದರು.

ಫಾಕ್ಸ್‌ಕಾನ್ ಜೊತೆ ವೇದಾಂತ ಒಪ್ಪಂದ

ನವದೆಹಲಿ (ಪಿಟಿಐ): ದೇಶದಲ್ಲಿ ಸೆಮಿಕಂಡಕ್ಟರ್ ಉತ್ಪಾದನೆಗೆ ಫಾಕ್ಸ್‌ಕಾನ್ ಜೊತೆ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದು ವೇದಾಂತ ಕಂಪನಿ ಸೋಮವಾರ ತಿಳಿಸಿದೆ.

ದೇಶದಲ್ಲಿ ಎಲೆಕ್ಟ್ರಾನಿಕ್ ಚಿಪ್ ತಯಾರಿಕೆಗೆ ಕೇಂದ್ರ ಸರ್ಕಾರವು ಕಾರ್ಯಕ್ರಮವೊಂದನ್ನು ಪ್ರಕಟಿಸಿದ ನಂತರದಲ್ಲಿ ಸೆಮಿಕಂಡಕ್ಟರ್ ತಯಾರಿಕಾ ವಲಯದಲ್ಲಿ ಹೂಡಿಕೆ ಮಾಡುವುದಾಗಿ ಹೇಳಿರುವ ಮೊದಲ ಕಂಪನಿ ವೇದಾಂತ.

ವೇದಾಂತ ಮತ್ತು ಫಾಕ್ಸ್‌ಕಾನ್ ನಡುವಿನ ಒಪ್ಪಂದದ ಅನ್ವಯ, ಜಂಟಿ ಸಹಭಾಗಿತ್ವದ ಕಂಪನಿಯಲ್ಲಿ ವೇದಾಂತ ಕಂಪನಿಯು ಬಹುಪಾಲು ಷೇರು ಹೊಂದಿರಲಿದೆ ಎಂದು ಪ್ರಕಟಣೆ ತಿಳಿಸಿದೆ.

ಷೇರುಪೇಟೆ: ಸೆನ್ಸೆಕ್ಸ್ 1,747 ಅಂಶ ಕುಸಿತ

ಒಂದನೇ ಪುಟದಿಂದ

'ಜಾಗತಿಕ ವಿದ್ಯಮಾನಗಳು ದೇಶದ ಷೇರುಪೇಟೆಗಳ ಮೇಲೆ ಪರಿಣಾಮ ಉಂಟುಮಾಡುತ್ತಿವೆ. ರಷ್ಯಾ ಹಾಗೂ ಉಕ್ರೇನ್ ನಡುವಿನ ಬಿಕ್ಕಟ್ಟು ಉಲ್ಬಣವಾಗುತ್ತಿರುವುದು ಮತ್ತು ಕಚ್ಚಾ ತೈಲದ ಬೆಲೆಯಲ್ಲಿ ನಿರಂತರವಾಗಿ ಏರಿಕೆ ಆಗುತ್ತಿರುವುದು ಮಾರುಕಟ್ಟೆಯ ಓಟಕ್ಕೆ ತಡೆ ಒಡ್ಡುತ್ತಿದೆ. ಮಾರುಕಟ್ಟೆಯಲ್ಲಿ ಈಗ ಕರಡಿಯ ಹಿಡಿತ ಬಲವಾಗಿರುವಂತೆ ಕಾಣುತ್ತಿದೆ. ಷೇರುಪೇಟೆ ಸೂಚ್ಯಂಕಗಳು ಇನ್ನಷ್ಟು ಕೆಳಕ್ಕೆ ಹೋಗುವ ಸಾಧ್ಯತೆ ಇದೆ' ಎಂದು ರೆಲಿಗೇರ್ ಬ್ರೋಕಿಂಗ್‌ನ ಸಂಶೋಧನಾ ವಿಭಾಗದ ಮುಖ್ಯಸ್ಥ ಅಜಿತ್ ಮಿಶ್ರಾ ಹೇಳಿದ್ದಾರೆ.

ರಿಯಾಲ್ಟಿ, ಲೋಹ ಮತ್ತು ಬ್ಯಾಂಕಿಂಗ್ ಸೂಚ್ಯಂಕಗಳು ಶೇಕಡ 5ಕ್ಕಿಂತ ಹೆಚ್ಚು ಕುಸಿತ ಕಂಡಿವೆ. ಸ್ಮಾಲ್ ಕ್ಯಾಪ್, ಮಿಡ್ ಕ್ಯಾಪ್ ಮತ್ತು ಲಾರ್ಜ್ ಕ್ಯಾಪ್ ಸೂಚ್ಯಂಕಗಳು ಗರಿಷ್ಠ ಶೇ 4.15ರವರೆಗೆ ಇಳಿಕೆ ಕಂಡಿವೆ. ರಷ್ಯಾ ಸೇನೆಯು ಉಕ್ರೇನ್ ಮೇಲೆ ಶೀಘ್ರದಲ್ಲಿಯೇ ದಾಳಿ ನಡೆಸಬಹುದು ಎಂಬ ಕಳವಳದ ಕಾರಣದಿಂದಾಗಿ ಏಷ್ಯಾದ ಇತರೆಡೆಗಳಲ್ಲಿಯೂ ಷೇರುಪೇಟೆ ಸೂಚ್ಯಂಕಗಳು ಇಳಿಕೆ ಕಂಡಿವೆ.

ಬ್ರೆಂಟ್ ಕಚ್ಚಾ ತೈಲದ ಬೆಲೆಯು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಶೇ 1ರಷ್ಟು ಹೆಚ್ಚಾಗಿ ಪ್ರತಿ ಬ್ಯಾರೆಲ್‌ಗೆ 95.44 ಅಮೆರಿಕನ್ ಡಾಲರ್ ತಲುಪಿದೆ. ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು 75.60ಕ್ಕೆ ಕುಸಿದಿದೆ.

ವಾಲ್ಮೀಕಿ ಶ್ರೀಗಳ ಧರಣಿ ಸತ್ಯಾಗ್ರಹ ಐದನೇ ದಿನಕ್ಕೆ

'ಪಕ್ಷಾತೀತ ಹೋರಾಟಕ್ಕೆ ಸಿದ್ಧ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾವು ಅಧಿಕಾರದಲ್ಲಿದ್ದಾಗ ಮೀಸಲಾತಿ ನೀಡಿ, ಇಲ್ಲವೇ ರಾಜೀನಾಮೆ ಕೊಡಿ ಎಂದು ಕೂಗಿದವರು ಈಗ ಎಲ್ಲಿದ್ದಾರೆ? ಈಗ ಏಕೆ ಮಾತನಾಡುತ್ತಿಲ್ಲ?' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ಪ್ರಶ್ನಿಸಿದರು.

ಪರಿಶಿಷ್ಟ ಪಂಗಡದ ಮೀಸಲಾತಿಯನ್ನು ಶೇ 7.5ಕ್ಕೆ ಹೆಚ್ಚಿಸುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಸ್ವಾಮೀಜಿ ಇಲ್ಲಿನ ಫ್ರೀಡಂ ಪಾರ್ಕ್‌ನಲ್ಲಿ ನಡೆಸುತ್ತಿರುವ ಧರಣಿಗೆ ಬೆಂಬಲ ಸೂಚಿಸಿ ಅವರು ಸೋಮವಾರ ಮಾತನಾಡಿದರು.

'ಸಮುದಾಯದ ವಿಚಾರದಲ್ಲಿ ರಾಜಕೀಯ ಮಾಡಬಾರದು. ಮೀಸಲಾತಿಯ ಬೇಡಿಕೆ ಈಡೇರುವವರೆಗೆ ಪಕ್ಷಾತೀತ ಹೋರಾಟಕ್ಕೆ ಸಿದ್ಧ. ಈ ಬಗ್ಗೆ ಶ್ರೀಗಳು ಕೈಗೊಳ್ಳುವ ನಿರ್ಧಾರಕ್ಕೂ ಬದ್ಧ' ಎಂದು ಹೇಳಿದರು.

'ಶ್ರೀಗಳು ಕೈಗೊಂಡಿರುವ ಧರಣಿ ಸತ್ಯಾಗ್ರಹ ನ್ಯಾಯಯುತವಾಗಿದೆ. ಸಮುದಾಯದ ಬೇಡಿಕೆ ಈಡೇರಿಸಬೇಕು ಎನ್ನುವ ಉದ್ದೇಶದಿಂದ ಸಮ್ಮಿಶ್ರ ಸರ್ಕಾರ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ಆಯೋಗ ರಚಿಸಿತ್ತು. ನಾಗಮೋಹನ್ ದಾಸ್ ಅವರು ಸಮಗ್ರವಾಗಿ ಅಧ್ಯಯನ ನಡೆಸಿ ಸರ್ಕಾರಕ್ಕೆ ಈಗಾಗಲೇ ವರದಿ ಸಲ್ಲಿಸಿದ್ದಾರೆ. ಆದರೂ, ಸರ್ಕಾರ ಮೀಸಲಾತಿ ಹೆಚ್ಚಿಸಲು ವಿಳಂಬ ಮಾಡುತ್ತಿದೆ. ವಿಳಂಬದ ಬಗ್ಗೆ ಹಲವು ಬಾರಿ ಪ್ರಶ್ನೆ ಮಾಡಿದ್ದೇವೆ' ಎಂದು ವಿವರಿಸಿದರು.

'ಬೇಡಿಕೆ ಈಡೇರಬೇಕಾದರೆ ಸರ್ಕಾರ, ಮುಖ್ಯಮಂತ್ರಿ ಹಾಗೂ ಸಮುದಾಯದ ಸಚಿವರು ಜವಾಬ್ದಾರಿ ತೆಗೆದುಕೊಳ್ಳಬೇಕು' ಎಂದು ಒತ್ತಾಯಿಸಿದರು.

ಧರಣಿ ಸ್ಥಳಕ್ಕೆ ಭೇಟಿ ನೀಡಿದ ಸಚಿವ ಬಿ. ಶ್ರೀರಾಮುಲು ಅವರು ಶ್ರೀಗಳ ಜೊತೆ ಹಲವು ವಿಷಯಗಳ ಕುರಿತು ಚರ್ಚಿಸಿದರು.

'ಮೀಸಲಾತಿ ಕುರಿತು ಮುಖ್ಯಮಂತ್ರಿ ಅವರ ಜತೆ ಚರ್ಚಿಸಲಾಗುವುದು' ಎಂದು ತಿಳಿಸಿ ಅಲ್ಲಿಂದ ಹೊರಟರು.

ಶಾಸಕರಾದ ಟಿ.ರಘುಮೂರ್ತಿ, ಈ. ತುಕಾರಾಂ, ಬಿ. ನಾಗೇಂದ್ರ, ಬಸವನಗೌಡ ತುರವೀಹಾಳ ಅವರು ಧರಣಿಗೆ ಬೆಂಬಲ ಸೂಚಿಸಿ, ಶ್ರೀಗಳು ಕೈಗೊಳ್ಳುವ ನಿರ್ಧಾರಕ್ಕೆ ಬದ್ಧ ಎಂದು ತಿಳಿಸಿದರು.



Per word	Ordinary	Bold	Ordinary Semi Display	Bold Semi Display
	60	85	70	115

CD Per Sqcm	Single Col	Double Col	Multi Col
	430	450	475

SPECIAL OFFER					
PAY	2	And	GET	1	Free
PAY	3	And	GET	2	Free
PAY	5	And	GET	5	Free

ಚಿನ್ನದ ಬೆಲೆ ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನದ ಬೆಲೆಯು ಸೋಮವಾರ 10 ಗ್ರಾಂಗೆ ₹ 478ರಷ್ಟು ಹೆಚ್ಚಳ ಕಂಡು, ₹ 49,519ಕ್ಕೆ ತಲುಪಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ಬೆಲೆಯು ಹೆಚ್ಚಳ ಕಂಡಿರುವುದು ಹಾಗೂ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಇಳಿಕೆ ಆಗಿರುವುದು ಇದಕ್ಕೆ ಕಾರಣ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ಹೇಳಿದೆ.

ಮುಂಬೈ ಧಾರಣೆ

ಶೇಂಗಾ

14-2-2022

ಜಾವಾ 70/80(ಹೊಸ)	10150-10200
ಜಾವಾ 80/90(ಹೊಸ)	9750-9800
ದಪ್ಪ ಮಧ್ಯಪ್ರದೇಶ(ಹೊಸ)	9150-9200
ದಪ್ಪ ಗುಜರಾತ್(ಹೊಸ)	8400-8450

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1370 (1340)
ಒಂದು ವಾರದ ಡೆಲಿವರಿ	1365 (1335)
ಸೋಯಾ ಕಚ್ಚಾ	1285 (1262)
ಪಾಮ್ ವಾರದ ಡೆಲಿವರಿ	1273 (1270)
ಸೂರ್ಯಕಾಂತಿ ಎಣ್ಣೆ ಕಚ್ಚಾ	1240 (1240)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
49,600 (49,725)
ಬೆಳ್ಳಿ ಕೆ.ಜಿ 64,000 (63,750)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಜಿಯೊದಿಂದ ಉಪಗ್ರಹ ಆಧಾರಿತ ಇಂಟರ್ನೆಟ್ ಸಂಪರ್ಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಯೊ ಪ್ಲಾಟ್‌ಫಾರ್ಮ್ಸ್ ಲಿಮಿಟೆಡ್ ಮತ್ತು ಲಕ್ಸಂಬರ್ಗ್ ಮೂಲದ ಎಸ್‌ಇಎಸ್ ಕಂಪನಿ ಜಂಟಿ ಪಾಲುದಾರಿಕೆಯಲ್ಲಿ ಉಪಗ್ರಹ ತಂತ್ರಜ್ಞಾನವನ್ನು ಬಳಸಿಕೊಂಡು, ಕೈಗೆಟಕುವ ದರದಲ್ಲಿ ಬ್ರಾಡ್‌ಬ್ಯಾಂಡ್ ಸೇವೆಗಳನ್ನು ಒದಗಿಸುವ 'ಜಿಯೊ ಸ್ಪೇಸ್ ಟೆಕ್ನಾಲಜಿ ಲಿಮಿಟೆಡ್' ಕಂಪನಿಯನ್ನು ಆರಂಭಿಸಿವೆ.

ಈ ಕಂಪನಿಯಲ್ಲಿ ಜಿಯೊ ಶೇ 51ರಷ್ಟು ಷೇರುಗಳನ್ನು, ಎಸ್‌ಇಎಸ್ ಶೇ 49ರಷ್ಟು ಷೇರುಗಳನ್ನು ಹೊಂದಿರಲಿದೆ. ಗರಿಷ್ಠ 100 ಜಿಬಿಪಿಎಸ್ ವೇಗದ ಇಂಟರ್ನೆಟ್ ಸಂಪರ್ಕವನ್ನು ಒದಗಿಸುವ ಸಾಮರ್ಥ್ಯ ಇದಕ್ಕೆ ಇರಲಿದೆ ಎಂದು ಪ್ರಕಟಣೆ ತಿಳಿಸಿದೆ.

'ಉಪಗ್ರಹ ಆಧಾರಿತ ಸಂವಹನ ಸೇವೆಗಳಿಂದಾಗಿ ಜಿಯೊಗೆ ದೇಶದ ಸಣ್ಣ ಹಳ್ಳಿಗಳಿಗೂ ಬ್ರಾಡ್‌ಬ್ಯಾಂಡ್ ಸೇವೆ ಒದಗಿಸಲು ಸಾಧ್ಯವಾಗುತ್ತದೆ' ಎಂದು ಜಿಯೊ ನಿರ್ದೇಶಕ ಆಕಾಶ್ ಅಂಬಾನಿ ಹೇಳಿದ್ದಾರೆ.

ಗಡಿ ಒಪ್ಪಂದ: ಜೈಶಂಕರ್ ಆರೋಪಕ್ಕೆ ಚೀನಾ ಪ್ರತಿಕ್ರಿಯೆ

ಬೀಜಿಂಗ್ (ಪಿಟಿಐ): ವಾಸ್ತವ ನಿಯಂತ್ರಣ ರೇಖೆಯಲ್ಲಿ (ಎಲ್‌ಎಸಿ) ಶಾಂತಿ ಮತ್ತು ನೆಮ್ಮದಿ ನೆಲೆಸಲು ಚೀನಾ ಮತ್ತು ಭಾರತ ಗಡಿ ಒಪ್ಪಂದ ಅನುಸರಣೆಗೆ ಬದ್ಧರಾಗಿರಬೇಕು ಎಂದು ಚೀನಾದ ವಿದೇಶಾಂಗ ಸಚಿವರು ಸೋಮವಾರ ಹೇಳಿದ್ದಾರೆ.

ಎಲ್‌ಎಸಿ ಗಡಿಯಲ್ಲಿ ಪ್ರಸ್ತುತ ಉದ್ವಿಗ್ನ ಪರಿಸ್ಥಿತಿ ಉಂಟಾಗಲು ಉಭಯ ದೇಶಗಳ ಲಿಖಿತ ಗಡಿ ಒಪ್ಪಂದಗಳಿಗೆ ಚೀನಾ ಅಗೌರವ ತೋರುತ್ತಿರುವುದು ಕಾರಣ ಎಂದು ಭಾರತದ ವಿದೇಶಾಂಗ ಸಚಿವ ಎಸ್.ಜೈಶಂಕರ್ ಆರೋಪ ಮಾಡಿದ ನಂತರ ಚೀನಾ ಈ ಪ್ರತಿಕ್ರಿಯೆ ನೀಡಿದೆ.

'ಗಡಿ ಪ್ರದೇಶದಲ್ಲಿ ಶಾಂತಿ ಮತ್ತು ನೆಮ್ಮದಿ ಉಂಟಾಗುವಂತೆ ಮಾಡಲು ಎರಡೂ ದೇಶಗಳು ತಾವು ಸಹಿ ಮಾಡಿರುವ ಗಡಿ ಒಪ್ಪಂದದ ಅನುಸರಣೆಗೆ ಬದ್ಧರಾಗಿರಬೇಕು ಎಂದು ಚೀನಾ ಬಯಸುತ್ತದೆ' ಎಂದು ವಿದೇಶಾಂಗ ಸಚಿವ ವಾಂಗ್ ವೆನ್‌ಬಿನ್ ಅವರು ಜೈಶಂಕರ್ ಹೇಳಿಕೆಗೆ ಪ್ರತಿಕ್ರಿಯಿಸಿದರು.

ಏರ್ ಇಂಡಿಯಾ ಸಿಇಒ ಆಗಿ ಆಯ್ಚಿ

ಮುಂಬೈ (ಪಿಟಿಐ): ಏರ್ ಇಂಡಿಯಾ ಕಂಪನಿಗೆ ಟರ್ಕಿಷ್ ಏರ್‌ಲೈನ್ಸ್‌ನ ಮಾಜಿ ಅಧ್ಯಕ್ಷ ಇಲ್ಕರ್ ಆಯ್ಚಿ ಅವರನ್ನು ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಯನ್ನಾಗಿ ನೇಮಕ ಮಾಡಲಾಗಿದೆ ಎಂದು ಟಾಟಾ ಸನ್ಸ್ ಸೋಮವಾರ ತಿಳಿಸಿದೆ.

ಆಯ್ಚಿ ಅವರನ್ನು ನೇಮಕ ಮಾಡುವ ಕುರಿತು ಚರ್ಚಿಸಲು ಏರ್ ಇಂಡಿಯಾ ಆಡಳಿತ ಮಂಡಳಿಯು ಸೋಮವಾರ ಸಭೆ ಸೇರಿತ್ತು. ಚರ್ಚೆಯ ನಂತರ ಅವರ ನೇಮಕಕ್ಕೆ ಅನುಮೋದನೆ ನೀಡಿತು ಎಂದು ಟಾಟಾ ಸನ್ಸ್ ಪ್ರಕಟಣೆ ತಿಳಿಸಿದೆ. ಆಯ್ಚಿ ಅವರು ಏಪ್ರಿಲ್ 1ಕ್ಕೂ ಮೊದಲೇ ಜವಾಬ್ದಾರಿ ವಹಿಸಿಕೊಳ್ಳಲಿದ್ದಾರೆ.

'ಮಾದರಿ ಒಪ್ಪಂದ ಅಳವಡಿಸಿಕೆ ಪರಿಶೀಲಿಸಿ'

ನವದೆಹಲಿ: ಕಟ್ಟಡ ನಿರ್ಮಾಪಕರು (ಬಿಲ್ಡರ್) ಮತ್ತು ಖರೀದಿದಾರರ ನಡುವೆ ತಾನು ಶಿಫಾರಸು ಮಾಡಿರುವ ಮಾದರಿ ಒಪ್ಪಂದಕ್ಕೆ ಸಂಬಂಧಿಸಿದಂತೆ ರಾಜ್ಯಗಳು ನಿಯಮಗಳನ್ನು ಅಳವಡಿಸಿಕೊಂಡಿವೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವಂತೆ ಸುಪ್ರೀಂ ಕೋರ್ಟ್ ಕೇಂದ್ರ ಸರ್ಕಾರಕ್ಕೆ ಸೋಮವಾರ ಸೂಚಿಸಿದೆ. ಈ ಸಂಬಂಧ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರೂಪಿಸಿರುವ ನಿಯಮಗಳಲ್ಲಿ ಏನಾದರೂ ವ್ಯತ್ಯಾಸ ಇದೆಯೇ ಎಂಬುದನ್ನು ಪರಿಶೀಲಿಸುವಂತೆ ನಿರ್ದೇಶಿಸಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ
ಕೂಳೆ 430- 450
ನಡುಗೋಲು 500-550
ರಾಶಿ 600-650
ರಾಶಿ ಉತ್ತಮ 650-700
ಜರಡಿ 750 - 800
ಹೆರಕಿದ್ದು 1,100-1,150
ಹಸಿರು ಸಾಧಾರಣ 600-700
ಹಸಿರು ಉತ್ತಮ 900-950
ಹಸಿರು ಅತಿ ಉತ್ತಮ 1,200-1,250
ಕಾಳು ಮೆಣಸು - 530
ಅಡಿಕೆ
ಬಂಟ್ವಾಳ
ಕೋಕ 12500-25000
ಹೊಸತು 27500-45000
ಹಳತು 46000-53000
ಚನ್ನಗಿರಿ
ರಾಶಿ 43829-46500
ಕುಮಟಾ
ಚಿಪ್ಪು 23509-27089
ಕೋಕ 18019-26189
ಫ್ಯಾಕ್ಟರಿ 13509-19100
ಹಳೆಚಾಲಿ 34509-39399
ಹೊಸಚಾಲಿ 47019-49099
ಮಂಗಳೂರು
ಕೋಕ 25500-45870
ಪುತ್ತೂರು
ಕೋಕ 11000-26000
ಹೊಸತು 27500-45000
ಸಾಗರ
ಬಿಳಿಗೋಟು 19699-28009
ಚಾಲಿ 30029-37699
ಕೋಕ 13099-31200
ಕೆಂಪುಗೋಟು 12599-38219
ರಾಶಿ 34499-46999
ಸಿಪ್ಪೆಗೋಟು 6590-18129
ಶಿವಮೊಗ್ಗ
ಬೆಟ್ಟೆ 46019-51050
ಗೊರಬಲು 16900-34399
ರಾಶಿ 43009-45798
ಸರಕು 51069-75700
ಸಿದ್ದಾಪುರ
ಬಿಳಿಗೋಟು 20690-29312
ಚಾಲಿ 39699-46899
ಕೋಕ 20299-29191
ಹೊಸಚಾಲಿ 32589-42099
ಕೆಂಪುಗೋಟು 30399-33689
ರಾಶಿ 43399-46989
ತಟ್ಟಿಬೆಟ್ಟೆ 39099-45619
ಶಿರಸಿ
ಬೆಟ್ಟೆ 30109-44381
ಬಿಳಿಗೋಟು 22191-32809
ಚಾಲಿ 33502-39801
ರಾಶಿ 36499-47698
ಸುಳ್ಯ
ಹೊಸತು 27500-45000
ಹಳತು 46000-53000
ತುಮಕೂರು
ರಾಶಿ 45100-46400
ಯಲ್ಲಾಪುರ
ಆಪಿ 52469-54255
ಬಿಳಿಗೋಟು 24299-32670
ಕೋಕ 18899-26899
ಹಳೆಚಾಲಿ 46666-46749
ಹೊಸಚಾಲಿ 32290-39160
ಕೆಂಪುಗೋಟು 27306-34809
ರಾಶಿ 45600-50999
ತಟ್ಟಿಬೆಟ್ಟೆ 37699-44899

ರೇಷ್ಮೆಗೂಡು ಮಾರುಕಟ್ಟೆ
ರಾಮನಗರ
ಮಿಶ್ರ ತಳಿ: 375-718
ದ್ವಿತಳಿ; 355-970

ಕಾಫಿ

(50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16050	16100	16150	255.20 ಸೆಂಟ್ಸ್
ಎಸಿ	7810	7400	7700	
ಆರ್‌ಪಿ	7650	7400	7850	
ಆರ್‌ಸಿ	4110	3900	4025	2279ಡಾಲರ್ಸ್

ಸಂಕ್ಷಿಪ್ತ ಸುದ್ದಿ

ರಷ್ಯಾ ಮೇಲೆ ದಿಗ್ಬಂಧನ: ಜಿ7 ರಾಷ್ಟ್ರಗಳ ಎಚ್ಚರಿಕೆ

ಬರ್ಲಿನ್ (ಎಎಫ್‌ಪಿ): ಉಕ್ರೇನ್ ಮೇಲೆ ಸೇನಾ ದಾಳಿ ನಡೆಸಲು ಮುಂದಾದರೆ ರಷ್ಯಾ ವಿರುದ್ಧ ದಿಗ್ಬಂಧನ ವಿಧಿಸಲು ವಿವಿಧ ರಾಷ್ಟ್ರಗಳು ಸಜ್ಜಾಗಿವೆ. ಹಾಗೇನಾದರೂ ಆದರೆ ಅದು ರಷ್ಯಾದ ಆರ್ಥಿಕತೆ ಮೇಲೆ ತಕ್ಷಣವೇ ಭಾರಿ ಪರಿಣಾಮ ಬೀರಲಿದೆ ಎಂದು ಜಿ7 ರಾಷ್ಟ್ರಗಳು ಮಾಸ್ಕೊಗೆ ಸೋಮವಾರ ಎಚ್ಚರಿಕೆ ನೀಡಿವೆ.

'ಉದ್ರಿಕ್ತ ಪರಿಸ್ಥಿತಿಯನ್ನು ನಿವಾರಿಸಲು ಬೆಂಬಲ ನೀಡಬೇಕು ಎಂಬುದು ನಮ್ಮ ಈಗಿನ ಆದ್ಯತೆ' ಎಂದು ಜಿ7 ಸದಸ್ಯತ್ವ ಹೊಂದಿದ ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಆರ್ಥಿಕ ಸಚಿವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಆದರೆ ರಷ್ಯಾ ಉಕ್ರೇನ್ ಮೇಲೆ ದಾಳಿ ನಡೆಸಿದರೆ ಇತರ ರಾಷ್ಟ್ರಗಳು ಒಗ್ಗೂಡಿ ಆರ್ಥಿಕ ದಿಗ್ಬಂಧನ ವಿಧಿಸಲು ತಯಾರಿ ನಡೆಸಿವೆ. ಇದು ರಷ್ಯಾದ ಆರ್ಥಿಕತೆಗೆ ಹೊಡೆತ ನೀಡಲಿದೆ ಎಂದು ಎಚ್ಚರಿಸಿದ್ದಾರೆ.

ಪ್ರತಿಭಟನೆ ಅಂತ್ಯ: ಅಮೆರಿಕ– ಕೆನಡಾ ಸಂಪರ್ಕ ಸೇತುವೆ ಸಂಚಾರಕ್ಕೆ ಮತ್ತೆ ಮುಕ್ತ

ವಿಂಡ್ಸರ್(ಒಂಟಾರಿಯೊ) (ಎಪಿ): ಅಮೆರಿಕ– ಕೆನಡಾ ಸಂಪರ್ಕಿಸುವ ಸೇತುವೆಯು ಭಾನುವಾರ ತಡರಾತ್ರಿ ಸಂಚಾರಕ್ಕೆ ಮತ್ತೆ ಮುಕ್ತವಾಗಿದೆ. ಕೋವಿಡ್ ನಿರ್ಬಂಧಗಳನ್ನು ವಿರೋಧಿಸಿ ಪ್ರತಿಭಟನೆ ನಡೆಯುತ್ತಿದ್ದ ಕಾರಣ ಈ ಸೇತುವೆಯಲ್ಲಿ ಒಂದು ವಾರದಿಂದ ಸಂಚಾರ ಸಾಧ್ಯವಾಗಿರಲಿಲ್ಲ.

'ಕೆನಡಾ– ಅಮೆರಿಕ ನಡುವೆ ಸರಕು ಸಾಗಣೆಯ ಮುಕ್ತ ಸಂಚಾರಕ್ಕೆ ಈಗ ಅಂಬಾಸಡರ್ ಬ್ರಿಜ್ ಪೂರ್ಣ ಮುಕ್ತವಾಗಿದೆ' ಎಂದು ಡೆಟ್ರಾಯಿಟ್ ಇಂಟರ್‌ನ್ಯಾಷನಲ್ ಬ್ರಿಜ್ ಕಂಪನಿಯ ವಕ್ತಾರೆ ಎಸ್ತರ್ ಹೇಳಿದ್ದಾರೆ. ಅಮೆರಿಕದ ಡೆಟ್ರಾಯಿಟ್ ಮತ್ತು ಕೆನಡಾ ವಿಂಡ್ಸರ್ ನಗರಗಳ ನಡುವೆ ಈ ಸೇತುವೆ ಸಂಪರ್ಕ ಕಲ್ಪಿಸುತ್ತದೆ.

ಉಭಯ ರಾಷ್ಟ್ರಗಳ ಶೇಕಡಾ 25ರಷ್ಟು ವಾಣಿಜ್ಯ ವ್ಯವಹಾರಗಳಿಗೆ ಈ ಸೇತುವೆ ಅವಕಾಶ ಮಾಡಿಕೊಡುತ್ತದೆ. ಕೆನಡಾ ಕಡೆ ಸೇತುವೆ ಬಳಿ ನಡೆಯುತ್ತಿದ್ದ ಪ್ರತಿಭಟನೆ ನಡೆಯುತ್ತಿದ್ದ ಕಾರಣ ಇಲ್ಲಿ ಸಂಚಾರಕ್ಕೆ ಅಡ್ಡಿ ಉಂಟಾಗಿತ್ತು. ಭಾನುವಾರ ತಡರಾತ್ರಿ ಪ್ರತಿಭಟನೆ ಅಂತ್ಯಗೊಂಡಿದೆ.

ಬೆಂಗಳೂರು ಓಪನ್ ಎರಡನೇ ಲೆಗ್ ಎಟಿಪಿ ಚಾಲೆಂಜರ್ ಟೂರ್ನಿ; ಪ್ರಜ್ಞೇಶ್‌ಗೆ ನಿರಾಸೆ

ಅರ್ಜುನ್ ಖಾಡೆ ಶುಭಾರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದ ಪ್ರಮುಖ ಭರವಸೆಯಾಗಿದ್ದ ಪ್ರಜ್ಞೇಶ್ ಗುಣೇಶ್ವರನ್ ಅವರು ಬೆಂಗಳೂರು ಓಪನ್ ಎರಡನೇ ಲೆಗ್‌ನ ಎಟಿಪಿ ಚಾಲೆಂಜರ್ ಟೆನಿಸ್ ಟೂರ್ನಿಯ ಮೊದಲ ಸುತ್ತಿನಲ್ಲೇ ನಿರಾಸೆ ಅನುಭವಿಸಿದರು. ಅರ್ಜುನ್ ಖಾಡೆ ಎರಡನೇ ಸುತ್ತಿಗೆ ಮುನ್ನಡೆದರು.

ಕರ್ನಾಟಕ ಲಾನ್ ಟೆನಿಸ್ ಸಂಸ್ಥೆ (ಕೆಎಸ್‌ಎಲ್‌ಟಿಎ) ಅಂಗಣದಲ್ಲಿ ಮಂಗಳವಾರ ಆರಂಭವಾದ ಟೂರ್ನಿಯ ಸಿಂಗಲ್ಸ್ ವಿಭಾಗದಲ್ಲಿ ಪ್ರಜ್ಞೇಶ್ 4–6, 2–6ರಿಂದ ಅಗ್ರಶ್ರೇಯಾಂಕದ ಆಟಗಾರ ಅಲೆಕ್ಸಾಂಡರ್ ವುಕಿಚ್ ಎದುರು ಮುಗ್ಗರಿಸಿದರು.

ಪಂದ್ಯದ ಮೊದಲ ಸೆಟ್ ಮೂರನೇ ಗೇಮ್‌ನಲ್ಲಿ ಬ್ರೇಕ್ ಪಾಯಿಂಟ್ ಗಳಿಸಿದ ವುಕಿಚ್ ಅದೇ ಲಯದೊಂದಿಗೆ ಮುನ್ನಡೆದು ಸೆಟ್ ವಶಪಡಿಸಿಕೊಂಡರು. ಎರಡನೇ ಸೆಟ್‌ನ ಆರಂಭದಲ್ಲಿ ಮತ್ತಷ್ಟು ಪರಿಣಾಮಕಾರಿ ಎನಿಸಿದ ಆಸ್ಟ್ರೇಲಿಯಾ ಆಟಗಾರ ಆರಂಭದಲ್ಲಿ 2–0 ಗೇಮ್ ಮುನ್ನಡೆ ಗಳಿಸಿದರು. ಪ್ರಜ್ಞೇಶ್‌ಗೆ ಚೇತರಿಸಿಕೊಳ್ಳುವ ಹೆಚ್ಚಿನ ಅವಕಾಶವನ್ನು ವುಕಿಚ್ ನೀಡಲಿಲ್ಲ. ಲೈನ್ ವಿನ್ನರ್ ಮೂಲಕ ಸೆಟ್ ಗೆದ್ದುಕೊಂಡು ಪಂದ್ಯದ ಜಯದ ಸಂಭ್ರಮ ಆಚರಿಸಿದರು.

ವೈಲ್ಡ್‌ಕಾರ್ಡ್ ಪ್ರವೇಶ ಪಡೆದಿರುವ ಭಾರತದ ಅರ್ಜುನ್ 6-2, 6-2ರಿಂದ ಭಾರತದವರೇ ಆದ ಆದಿಲ್ ಕಲ್ಯಾಣಪುರ ಅವರನ್ನು ಸೋಲಿಸಿ ಶುಭಾರಂಭ ಮಾಡಿದರು.

ಮೊದಲ ಸುತ್ತಿನ ಮತ್ತೊಂದು ಪಂದ್ಯದಲ್ಲಿ ಬಲ್ಗೇರಿಯಾದ ದಿಮಿತಾರ್ ಕುಜಮನೊವ್ ಎರಡನೇ ಶ್ರೇಯಾಂಕದ ಆಟಗಾರ ಫ್ರಾನ್ಸ್‌ನ ಹ್ಯೂಗೊ ಗ್ರೇನಿಯರ್ ಅವರಿಗೆ ಆಘಾತ ನೀಡಿದರು. ಅವರಿಗೆ 6-4, 6-3ರಿಂದ ಜಯ ಒಲಿಯಿತು.

ಪ್ರಜ್ಞೇಶ್ ಅವರ ಸೋಲಿನೊಂದಿಗೆ ಭಾರತದ ಒಟ್ಟು ಐದು ಮಂದಿ ಈಗ ಸ್ಪರ್ಧೆಯಲ್ಲಿ ಉಳಿದಂತಾಗಿದೆ.

ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ಫಲಿತಾಂಶಗಳು: ಅರ್ಜುನ್ ಖಾಡೆಗೆ 6-2, 6-2ರಿಂದ ಆದಿಲ್ ಕಲ್ಯಾಣಪುರ ಎದುರು ಜಯ, ಅಲೆಕ್ಸಾಂಡರ್ ವುಕಿಚ್‌ಗೆ 6-4, 6-2ರಿಂದ ಪ್ರಜ್ಞೇಶ್ ಗುಣೇಶ್ವರನ್ ವಿರುದ್ಧ ಗೆಲುವು, ದಿಮಿತಾರ್ ಕುಜಮನೊವ್ ಅವರಿಗೆ 6-4, 6-3ರಿಂದ ಹ್ಯೂಗೊ ಗ್ರೇನಿಯರ್ ಎದುರು ಗೆಲುವು, ಮಾರ್ಕ್ ಪೊಲ್ಮನ್ಸ್ (ಆಸ್ಟ್ರೇಲಿಯಾ) ಅವರಿಗೆ 6-3, 7-6 (7)ರಿಂದ ಇವ್‌ಜೆನಿ ಡಾನ್‌ಸ್ಕಿ (ರಷ್ಯಾ) ವಿರುದ್ಧ ಜಯ, ಮ್ಯಾಕ್ಸ್ ಪರ್ಸೆಲ್ (ಆಸ್ಟ್ರೇಲಿಯಾ) ಅವರಿಗೆ 5-7, 6-3, 6-0ರಿಂದ ಜೇಸನ್ ಕುಬ್ಲೆರ್ (ಆಸ್ಟ್ರೇಲಿಯಾ) ಎದುರು ಗೆಲುವು, ಕಿಮರ್ ಕಾಪರ್ಜನ್ಸ್ (ಬೆಲ್ಜಿಯಂ) ಅವರಿಗೆ ಕೆನಡಾದ ಸ್ಟೀವನ್ ಡಿಯಜ್ ವಿರುದ್ಧ ಜಯ.

ಅಂತಿಮ ಅರ್ಹತಾ ಸುತ್ತಿನ ಫಲಿತಾಂಶಗಳು: ಭಾರತದ ಮುಕುಂದ್ ಶಶಿಕುಮಾರ್ ಅವರಿಗೆ 7-5, 1-6, 6-3ರಿಂದ ಮನೀಷ್ ಸುರೇಶ್ ಕುಮಾರ್ ಎದುರು ಜಯ, ನಿತಿನ್ ಕುಮಾರ್ ಸಿನ್ಹಾ ಅವರಿಗೆ 6-4, 6-7 (5), 6-1ರಿಂದ ರಿಯೊ ನೊಗುಚಿ (ಜಪಾನ್) ವಿರುದ್ಧ ಜಯ, ಆ್ಯಂಡ್ರ್ಯೂ ಹ್ಯಾರಿಸ್ (ಆಸ್ಟ್ರೇಲಿಯಾ) ಅವರಿಗೆ 6-4, 7-5ರಿಂದ ದಿಗ್ವಿಜಯ್ ಪ್ರತಾಪ್‌ಸಿಂಗ್ ವಿರುದ್ಧ ಜಯ, ಡಾಮಿನಿಕ್ ಪಾಲನ್ (ಜೆಕ್ ಗಣರಾಜ್ಯ) ಅವರಿಗೆ 6-0, 6-1ರಿಂದ ಬೊಗ್ಡೊನ್ ಬೊಬ್‌ರವ್ (ರಷ್ಯಾ) ಎದುರು ಗೆಲುವು, ಮಾರ್ಕೊಸ್ ಕಲೊವೆಲೊನಿಸ್ (ಗ್ರೀಸ್) ಅವರಿಗೆ 6-4, 4-6ರಿಂದ ಭಾರತದ ಶ್ರೀರಾಮ್ ಬಾಲಾಜಿ ಎದುರು ಜಯ, ಅಂಟೋನಿಯಾ ಬೆಲ್ಲಿಯರ್ (ಸ್ವಿಟ್ಜರ್ಲೆಂಡ್) ಅವರಿಗೆ 6-1, 6-4ರಿಂದ ವ್ಲಾಡಿಸ್ಲಾವ್ (ಉಕ್ರೇನ್) ಎದುರು ಗೆಲುವು.



ಭಾರತದ ಅರ್ಜುನ್ ಖಾಡೆ ಆಟದ ವೈಖರಿ –ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ.



ಮುಕುಂದ್ ಶಶಿಕುಮಾರ್ ಆಟದ ವೈಖರಿ –ಪ್ರಜಾವಾಣಿ ಚಿತ್ರ

ಎಫ್‌ಐಎಚ್ ಪ್ರೊ ಲೀಗ್: ದಕ್ಷಿಣ ಆಫ್ರಿಕಾ ಮಣಿಸಿದ ಭಾರತ

ಹರ್ಮನ್‌ಪ್ರೀತ್ ನಾಲ್ಕು ಗೋಲು

ಪೊಚೆಫ್‌ಸ್ಟ್ರೂಮ್, ದಕ್ಷಿಣ ಆಫ್ರಿಕಾ (ಪಿಟಿಐ): ಡ್ರ್ಯಾಗ್‌ಫ್ಲಿಕರ್ ಹರ್ಮನ್‌ಪ್ರೀತ್ ಗಳಿಸಿದ ನಾಲ್ಕು ಗೋಲುಗಳ ಬಲದಿಂದ ಭಾರತ ಹಾಕಿ ತಂಡವು ದಕ್ಷಿಣ ಆಫ್ರಿಕಾ ತಂಡವನ್ನು ಸುಲಭವಾಗಿ ಬಗ್ಗುಬಡಿಯಿತು.

ಭಾನುವಾರ ನಡೆದ ಎಫ್‌ಐಎಚ್ ಪ್ರೊ ಲೀಗ್ ಟೂರ್ನಿಯ ಪಂದ್ಯದಲ್ಲಿ 10–2ರಿಂದ ಆತಿಥೇಯ ತಂಡವನ್ನು ಸೋಲಿಸಿತು.

ಪಂದ್ಯದ ಮೊದಲ ಕ್ವಾರ್ಟರ್‌ನಲ್ಲಿ ಉಭಯ ತಂಡಗಳ ಮಧ್ಯೆ ಜಿದ್ದಾಜಿದ್ದಿ ಪೈಪೋಟಿ ನಡೆದು 1–1ರಿಂದ ಸಮಬಲವಾಗಿತ್ತು. ಆದರೆ ಉಳಿದ ಮೂರೂ ಕ್ವಾರ್ಟರ್‌ಗಳಲ್ಲಿ ಭಾರತ ಒಂಬತ್ತು ಗೋಲುಗಳನ್ನು ದಾಖಲಿಸಿ ಸಂಪೂರ್ಣ ಪಾರಮ್ಯ ಮೆರೆಯಿತು. ಟೂರ್ನಿಯಲ್ಲಿ ಮೂರನೇ ಗೆಲುವು ದಾಖಲಿಸಿತು.

ಹರ್ಮನ್‌ಪ್ರೀತ್ 36, 52 ಮತ್ತು 60ನೇ ನಿಮಿಷದಲ್ಲಿ ಎರಡು ಗೋಲುಗಳನ್ನು ಹೊಡೆದರು. ಶೀಲಾನಂದ ಲಾಕ್ರಾ (27 ಮತ್ತು 48ನೇ ನಿಮಿಷ), ಸುರೇಂದರ್ ಕುಮಾರ್ (15ನೇ ನಿ.), ಮನದೀಪ್ ಸಿಂಗ್ (28ನೇ ನಿ.), ಸುಮಿತ್ (45ನೇ ನಿ.) ಮತ್ತು ಶಂಷೇರ್ ಸಿಂಗ್ (56ನೇ ನಿ.) ತಂಡದ ಪರ ಮಿಂಚಿದರು.

ದಕ್ಷಿಣ ಆಫ್ರಿಕಾ ತಂಡದ ಡೇನಿಯಲ್ ಬೆಲ್ (12ನೇ ನಿಮಿಷ) ಮತ್ತು ಕ್ಯಾನರ್ ಬೀಚಾಂಪ್ (53ನೇ ನಿ.) ಯಶಸ್ಸು ಸಾಧಿಸಿದರು.ನಾಲ್ಕನೇ ಕ್ವಾರ್ಟರ್‌ನಲ್ಲಿ ಮನ್‌ಪ್ರೀತ್ ಪಡೆ ನಾಲ್ಕು ಗೋಲು ಹೊಡೆಯಿತು. ಅದರಲ್ಲಿ ಎರಡು ಬಾರಿ ಹರ್ಮನ್‌ಪ್ರೀತ್ ಕೈಚಳಕ ತೋರಿದರು.

ಲೀಗ್‌ನ ಮುಂದಿನ ಪಂದ್ಯವು ಭುವನೇಶ್ವರದಲ್ಲಿ ನಡೆಯಲಿದ್ದು, ಭಾರತ ತಂಡವು ಸ್ಪೇನ್ ತಂಡಕ್ಕೆ ಮುಖಾಮುಖಿಯಾಗಲಿದೆ.



ಹರ್ಮನ್‌ಪ್ರೀತ್ ಸಿಂಗ್– ಟ್ವಿಟರ್ ಚಿತ್ರ

ಐಎಸ್‌ಎಲ್: ಕೇರಳ ತಂಡಕ್ಕೆ ಗೆಲುವು

ವಾಸ್ಕೊ (ಪಿಟಿಐ): ರೋಚಕ ಹಣಾಹಣಿಯಲ್ಲಿ ಕೇರಳ ಬ್ಲಾಸ್ಟರ್ಸ್ ಎಫ್‌ಸಿ ತಂಡವು ಎಸ್‌ಸಿ ಈಸ್ಟ್ ಬೆಂಗಾಲ್ ತಂಡವನ್ನು ಮಣಿಸಿ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯ ಪಾಯಿಂಟ್ಸ್ ಪಟ್ಟಿಯ ಅಗ್ರ ನಾಲ್ಕರೊಳಗೆ ಸ್ಥಾನ ಗಳಿಸಿತು.

ಸೋಮವಾರ ನಡೆದ ಪಂದ್ಯದಲ್ಲಿ 1-0ಯಿಂದ ಗೆದ್ದ ಕೇರಳ ಆರನೇ ಸ್ಥಾನದಿಂದ ಮೂರನೇ ಸ್ಥಾನಕ್ಕೇರಿತು. ತಂಡದ ಪರ ಎನೆಸ್ ಸಿಪೊವಿಚ್ ಅವರು 49ನೇ ನಿಮಿಷದಲ್ಲಿ ಕಾಲ್ಚಳಕ ತೋರಿದರು.

ಮಂಗಳವಾರ ಬ್ಯಾಂಬೊಲಿಮ್‌ನ ಅಥ್ಲೆಟಿಕ್ಸ್ ನಡೆಯುವ ಪಂದ್ಯದಲ್ಲಿ ಎಫ್‌ಸಿ ಗೋವಾ ತಂಡವು ಎಟಿಕೆ ಮೋಹನ್ ಬಾಗನ್ ವಿರುದ್ಧ ಆಡಲಿದೆ.

ಏಷ್ಯಾ ಬ್ಯಾಡ್ಮಿಂಟನ್ ಟೀಮ್ ಚಾಂಪಿಯನ್‌ಷಿಪ್ ಇಂದಿನಿಂದ

ಲಕ್ಷ್ಯ ಸೇನ್ ಮೇಲೆ ಭರವಸೆ

ಷಾ ಆಲಂ, ಮಲೇಷ್ಯಾ (ಪಿಟಿಐ): ವಿಶ್ವ ಚಾಂಪಿಯನ್‌ಷಿಪ್ ಕಂಚಿನ ಪದಕ ವಿಜೇತ ಲಕ್ಷ್ಯ ಸೇನ್ ಮತ್ತು ಮಾಳವಿಕಾ ಬಂಸೋಡ್ ನೇತೃತ್ವದಲ್ಲಿರುವ ಭಾರತ ಯುವ ತಂಡವು ಏಷ್ಯಾ ಬ್ಯಾಡ್ಮಿಂಟನ್ ಟೀಮ್ ಚಾಂಪಿಯನ್‌ಷಿಪ್‌ನಲ್ಲಿ ಉತ್ತಮ ಸಾಮರ್ಥ್ಯ ತೋರುವ ನಿರೀಕ್ಷೆಯಲ್ಲಿದೆ.

ಮಂಗಳವಾರ ಇಲ್ಲಿ ಚಾಂಪಿಯನ್‌ಷಿಪ್ ಆರಂಭವಾಗಲಿದ್ದು, ಮೊದಲ ದಿನ ಭಾರತ ಪುರುಷ ಮತ್ತು ಮಹಿಳಾ ತಂಡದವರು ಗುಂಪು ‘ಎ’ ಮತ್ತು ಗುಂಪು ‘ಬಿ’ ನಲ್ಲಿ ಕ್ರಮವಾಗಿ ಕೊರಿಯಾ ಮತ್ತು ಮಲೇಷ್ಯಾ ತಂಡಗಳ ಎದುರು ಸೆಣಸಲಿದ್ದಾರೆ.

ಅನುಭವಿ ಆಟಗಾರರ ಅನುಪಸ್ಥಿತಿಯಲ್ಲಿ ಭಾರತ ಪುರುಷರ ತಂಡವನ್ನು ಲಕ್ಷ್ಯ ಮುನ್ನಡೆಸುತ್ತಿದ್ದಾರೆ. ಕಿರಣ್ ಜಾರ್ಜ್ ಮತ್ತು ಮಿಥುನ್ ಮಂಜುನಾಥ್ ಅವರು ಟೂರ್ನಿಯಲ್ಲಿ ಪ್ರಮುಖ ಪಾತ್ರ ವಹಿಸುವ ಸಾಧ್ಯತೆಯಿದೆ. ಮೂರು ಬಾರಿಯ ಹಾಗೂ ಹಾಲಿ ಚಾಂಪಿಯನ್ ಇಂಡೊನೇಷ್ಯಾ, ಹಾಂಗ್‌ಕಾಂಗ್ ಮತ್ತು ಕೊರಿಯಾ ತಂಡಗಳಿರುವ ಗುಂಪಿನಲ್ಲಿ ಭಾರತ ಇದೆ.

ಡಬಲ್ಸ್‌ನಲ್ಲಿ ರವಿಕೃಷ್ಣ ಪಿಎಸ್– ಶಂಕರ್ ಪ್ರಸಾದ್ ಉದಯಕುಮಾರ್ ಮತ್ತು ಮಂಜಿತ್ ಸಿಂಗ್ ಖ್ವೈರಕ್‌ಪಾಮ್ ಮತ್ತು ಡಿಂಕು ಸಿಂಗ್ ಕೊಂತೌಜಮ್ ಉತ್ತಮ ಸಾಧನೆ ಮಾಡುವ ನಿರೀಕ್ಷೆಯಲ್ಲಿದ್ದಾರೆ.

ಮಹಿಳೆಯರ ತಂಡದಲ್ಲಿ ಮಾಳವಿಕಾ ಅವರೊಂದಿಗೆ ಆಕರ್ಷಿ ಕಶ್ಯಪ್ ಮತ್ತು ಅಸ್ಮಿತಾ ಚಲಿಹಾ ಇದ್ದಾರೆ. ಬಿ ಗುಂಪಿನಲ್ಲಿ ಮಲೇಷ್ಯಾ ಮತ್ತು ಜಪಾನ್ ತಂಡಗಳೂ ಇವೆ.

ಪ್ರತಿ ಗುಂಪಿನಲ್ಲಿ ಅಗ್ರ ಎರಡು ಸ್ಥಾನ ಪಡೆಯುವ ತಂಡಗಳು ಸೆಮಿಫೈನಲ್‌ಗೆ ಅರ್ಹತೆ ಗಳಿಸಲಿವೆ. ಅಲ್ಲದೆ ಬ್ಯಾಂಕಾಕ್‌ನಲ್ಲಿ ಮೇ 17ರಿಂದ 22ರವರೆಗೆ ನಡೆಯುವ ಥಾಮಸ್ ಕಪ್ ಫೈನಲ್ಸ್‌ಗೆ ಪ್ರವೇಶ ಪಡೆಯಲಿವೆ.

ಟೂರ್ನಿಯಲ್ಲಿ ಈ ಹಿಂದೆ ಭಾರತ ಪುರುಷರ ತಂಡವು ಎರಡು ಕಂಚಿನ ಪದಕ ಗೆದ್ದಿತ್ತು. 1965ರಲ್ಲಿ ದಿನೇಶ್ ಖನ್ನಾ ವೈಯಕ್ತಿಕ ವಿಭಾಗದಲ್ಲಿ ಚಿನ್ನದ ಪದಕ ಗೆದ್ದಿದ್ದರು.



ಲಕ್ಷ್ಯ ಸೇನ್– ಪಿಟಿಐ ಚಿತ್ರ

‘ಜೋಶ್’ ತುಂಬುವರು ಡುಪ್ಲೆಸಿ

ಆರ್‌ಸಿಬಿ ಮುಖ್ಯ ಕೋಚ್ ಸಂಜಯ್ ಬಾಂಗರ್ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತಿ ವರ್ಷ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ‘ಈ ಸಲ ಕಪ್ ನಮ್ದೇ’ ಎಂಬ ನಿರೀಕ್ಷೆಯೊಂದಿಗೆ ಕಣಕ್ಕಿಳಿಯುವ ತಂಡ ರಾಯಲ್ ಚಾಲೆಂಜರ್ಸ್ ಬೆಂಗಳೂರು. ಆದರೆ ಇದುವರೆಗೂ ಒಂದು ಬಾರಿಯೂ ಕಪ್ ಗೆದ್ದಿಲ್ಲ. ಭಾನುವಾರ ಮುಕ್ತಾಯವಾದ ಮುಂಬರುವ ಐಪಿಎಲ್‌ಗಾಗಿ ನಡೆದ ಮೆಗಾ ಹರಾ ಜಿನಲ್ಲಿ ಆರ್‌ಸಿಬಿಯು ತಂಡಕ್ಕೆ ಕೆಲವು ಪ್ರಮುಖ ಆಟಗಾರರನ್ನು ಆಯ್ಕೆ ಮಾಡಿದೆ.

‘ದಕ್ಷಿಣ ಆಫ್ರಿಕಾ ತಂಡದ ಮಾಜಿ ನಾಯಕ ಫಫ್ ಡುಪ್ಲೆಸಿ ನಮ್ಮ ತಂಡಕ್ಕೆ ಬಂದಿದ್ದಾರೆ.ಐಪಿಎಲ್‌ನಲ್ಲಿ ಅವರ ಆಟವನ್ನು ನಾವು ಈಗಾಗಲೇ ಹಲವು ಬಾರಿ ನೋಡಿದ್ದೇವೆ. ಅವರ ಕೌಶಲ, ಅನುಭವ ಮತ್ತು ನಾಯಕತ್ವದ ಗುಣಗಳು ನಮ್ಮ ತಂಡದ ಶಕ್ತಿವರ್ಧನೆ ಮಾಡಲಿದೆ’ ಎಂದು ಆರ್‌ಸಿಬಿಯ ಮುಖ್ಯ ಕೋಚ್ ಸಂಜಯ್ ಬಾಂಗರ್ ತಂಡವು ಬಿಡುಗಡೆ ಮಾಡಿರುವ ಪ್ರಕಟಣೆಯಲ್ಲಿ ಉಲ್ಲೇಖಿಸಿದ್ದಾರೆ.

‘ನಮ್ಮ ತಂಡದ ಅಗ್ರಕ್ರಮಾಂಕದ ಬ್ಯಾಟಿಂಗ್ ಫಫ್ ಆಗಮನದಿಂದ ಬಲಿಷ್ಠವಾಗಲಿದೆ. ಎಲ್ಲ ಮಾದರಿಗಳಲ್ಲಿಯೂ ಆಡಿರುವ ಫಫ್ ತಂಡಕ್ಕೆ ದೊಡ್ಡ ಗೌರವ ತರುವ ನಿರೀಕ್ಷೆ ಇದೆ’ ಎಂದರು.

ಆರ್‌ಸಿಬಿಯು ಹರಾಜಿನಲ್ಲಿ ಹರ್ಷಲ್ ಪಟೇಲ್, ಶ್ರೀಲಂಕಾ ಲೆಗ್‌ಸ್ಪಿನ್ನರ್ ವಣಿಂದು ಹಸರಂಗಾ, ಆಸ್ಟ್ರೇಲಿಯಾದ ಜೋಶ್ ಹ್ಯಾಜಲ್‌ವುಡ್ ಮತ್ತು ಭಾರತದ ವಿಕೆಟ್‌ಕೀಪರ್ ದಿನೇಶ್ ಕಾರ್ತಿಕ್ ಅವರಿಗೆ ದೊಡ್ಡ ಮೊತ್ತ ಕೊಟ್ಟು ಖರೀದಿಸಿತು

‘ತಂಡವನ್ನು ಸಮತೋಲನಗೊಳಿಸುವುದು ನಮ್ಮ ಗುರಿ. ಟಿ20 ಕ್ರಿಕೆಟ್‌ನಲ್ಲಿ ಬಹಳಷ್ಟು ಬದಲಾವಣೆಗಳು ಆಗುತ್ತಿವೆ. ಅದಕ್ಕೆ ತಕ್ಕಂತೆ ಸಿದ್ಧಗೊಳ್ಳುವುದು ನಮ್ಮ ಆದ್ಯತೆ’ ಎಂದರು.

‘ಜೋಶ್ ಹ್ಯಾಜಲ್‌ವುಡ್ ಬೌಲಿಂಗ್ ವಿಭಾಗದ ಬಲವರ್ಧನೆ ಮಾಡುವುದು ಖಚಿತ. ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಅವರು ಅಮೋಘ ಲಯದಲ್ಲಿದ್ದಾರೆ. ಅವರ ಅನುಭವವು ನಮಗೆ ಅನುಕೂಲವಾಗಲಿದೆ’ ಎಂದಿದ್ದಾರೆ.

‘ಹಸರಂಗಾ ಮಣಿಕಟ್ಟಿನ ಕೌಶಲ ಹೊಂದಿರುವ ಸ್ಪಿನ್ನರ್– ಆಲ್‌ರೌಂಡರ್. ಅಲ್ಲದೇ ಬ್ಯಾಟಿಂಗ್‌ನಲ್ಲಿಯೂ ಉತ್ತಮ ಕಾಣಿಕೆ ನೀಡಬಲ್ಲ ಸಮರ್ಥರು. ಅನುಭವಿ ದಿನೇಶ್ ಕಾರ್ತಿಕ್ ಫಿನಿಷರ್ ಆಗಿ ಅಚ್ಚುಕಟ್ಟಾಗಿ ಕಾರ್ಯನಿರ್ವಹಿಸಬಲ್ಲರು’ ಎಂದರು.



ಸಂಜಯ್



ಫಫ್ ಡುಪ್ಲೆಸಿ

‘₹ 13 ಕೋಟಿಗೆ ಬಿಡ್ ನಿಲ್ಲಲಿ ಅನಿಸಿತ್ತು’

ನವದೆಹಲಿ (ಪಿಟಿಐ): ಐಪಿಎಲ್ ಟೂರ್ನಿಗಾಗಿ ನಡೆದ ಮೆಗಾ ಹರಾಜಿನಲ್ಲಿ ತಮ್ಮ ಮೌಲ್ಯವು ₹ 13 ಕೋಟಿಯವರೆಗೆ ಮುಟ್ಟಿದಾಗ. ಇಷ್ಟೇ ಸಾಕು ಎನಿಸಿತ್ತು. ಇಲ್ಲಿಗೆ ನಿಲ್ಲಿಸಿಬಿಡಿರೆಂದು ಹೇಳಬೇಕಿನಿಸಿತ್ತು ಎಂದು ಚೆನ್ನೈ ಸೂಪರ್ ಕಿಂಗ್ಸ್ ತಂಡದ ಆಲ್‌ರೌಂಡರ್ ದೀಪಕ್ ಚಾಹರ್ ಹೇಳಿದ್ದಾರೆ.

ದೀಪಕ್ ಈ ಮೊದಲಿದ್ದ ಚೆನ್ನೈ ತಂಡವೇ ₹ 14 ಕೋಟಿ ಕೊಟ್ಟು ಖರೀದಿಸಿದೆ. ಈ ಕುರಿತು ಸೋಮವಾರ ಅವರು ಸಂತಸ ಹಂಚಿಕೊಂಡಿದ್ದಾರೆ.

‘ನಾನು ಚೆನ್ನೈ ತಂಡದಲ್ಲಿಯೇ ಆಡಲು ಆಶಿಸಿದ್ದೆ. ಬೇರೆ ತಂಡಗಳ ಪೋಷಾಕಿನಲ್ಲಿ ನನ್ನನ್ನು ಊಹಿಸಿಕೊಳ್ಳುವುದು ಕಷ್ಟ. ಹಳದಿಪೋಷಾಕು ಪಂಚಪ್ರಾಣ. ಸಿಎಸ್‌ಕೆಯಿಂದ ₹ 13 ಕೋಟಿ ಬಿಡ್ ಬಂದಾಗ ನಾನು, ಇಲ್ಲಿಗೆ ನಿಲ್ಲಲಿ. ದುಡ್ಡು ಸಾಕು, ಸಿಎಸ್‌ಕೆ ಬೇಕೆಂಬ ಭಾವ ಮೂಡಿತ್ತು’ ಎಂದು ಚಾಹರ್ ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ಕೀಗನ್, ನೈಟ್‌ಗೆ ಐಸಿಸಿ ಪ್ರಶಸ್ತಿ

ದುಬೈ (ಪಿಟಿಐ): ದಕ್ಷಿಣ ಆಫ್ರಿಕಾ ತಂಡದ ಬ್ಯಾಟರ್ ಕೀಗನ್ ಪೀಟರ್ಸನ್ ಮತ್ತು ಇಂಗ್ಲೆಂಡ್ ಮಹಿಳಾ ಕ್ರಿಕೆಟ್ ತಂಡದ ನಾಯಕಿ ಹೀಥರ್ ನೈಟ್ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಜನವರಿ ತಿಂಗಳ ಪ್ರಶಸ್ತಿ ಗಳಿಸಿದ್ದಾರೆ.

ಹೋದ ತಿಂಗಳು ಭಾರತ ತಂಡದ ಎದುರು ನಡೆದಿದ್ದ ಸರಣಿಯಲ್ಲಿ ದಕ್ಷಿಣ ಆಫ್ರಿಕಾ ಜಯಿಸಲು ಕೀಗನ್ ಅವರ ಉತ್ತಮ ಆಟ ಕಾರಣವಾಗಿತ್ತು. ಪುರುಷರ ವಿಭಾಗದಲ್ಲಿ ಕೀಗನ್, 19 ವರ್ಷದೊಳಗಿನವರ ದಕ್ಷಿಣ ಆಫ್ರಿಕಾ ತಂಡದ ಡಿವಾಲ್ಡ್ ಬ್ರೆವೈಸ್ ಮತ್ತು ಬಾಂಗ್ಲಾದೇಶದ ವೇಗಿ ಇಬಾದತ್ ಹುಸೇನ್ ಅವರನ್ನು ನಾಮನಿರ್ದೇಶನ ಮಾಡಲಾಗಿತ್ತು.

ಮಹಿಳೆಯರ ವಿಭಾಗದಲ್ಲಿ ಶ್ರೀಲಂಕಾ ತಂಡದ ನಾಯಕಿ ಚಾಮರಿ ಅಟಪಟ್ಟು ಮತ್ತು ವೆಸ್ಟ್ ಇಂಡೀಸ್‌ನ ದಿಂದ್ರಾ ಡಾಟಿನ್ ಅವರ ಪೈಪೋಟಿಯನ್ನು ಮೀರಿದ ಹೀಥರ್ ನೈಟ್ ಪ್ರಶಸ್ತಿ ಗಳಿಸಿದರು.



ಕೀಗನ್ ಪೀಟರ್ಸನ್

ಮಹಿಳಾ ಕ್ರಿಕೆಟ್: ಪುಟಿದೇಳುವ ಛಲದಲ್ಲಿ ಭಾರತ

ಕ್ವೀನ್ಸ್‌ಟೌನ್ (ಪಿಟಿಐ): ಭಾರತ ಮಹಿಳಾ ಕ್ರಿಕೆಟ್ ತಂಡವು ಮಂಗಳವಾರ ಇಲ್ಲಿ ನ್ಯೂಜಿಲೆಂಡ್ ಎದುರು ನಡೆಯಲಿರುವ ಎರಡನೇ ಏಕದಿನ ಪಂದ್ಯದಲ್ಲಿ ತಿರುಗೇಟು ನೀಡುವ ಛಲದಲ್ಲಿದೆ.

ಸರಣಿಯ ಮೊದಲ ಪಂದ್ಯದಲ್ಲಿ ಭಾರತ ತಂಡವು ಸೋತಿತ್ತು. ಆ ಪಂದ್ಯದಲ್ಲಿ ಮಿಥಾಲಿ ರಾಜ್ ಮತ್ತು ಯಸ್ತಿಕಾ ಭಾಟಿಯಾ ಅವರು ಉತ್ತಮವಾಗಿ ಬ್ಯಾಟಿಂಗ್ ಮಾಡಿದ್ದರು.

ಆದರೆ ಉಪನಾಯಕಿ ಹರ್ಮನ್‌ಪ್ರೀತ್ ಕೌರ್ ಲಯಕ್ಕೆ ಮರಳುವಲ್ಲಿ ಮತ್ತೆ ವಿಫಲರಾದರು. ಆದರೆ ದೀಪ್ತಿ ಶರ್ಮಾ, ಪೂಜಾ ವಸ್ತ್ರಕಾರ್, ಜೂಲನ್ ಗೋಸ್ವಾಮಿ ಮತ್ತು ರಾಜೇಶ್ವರಿ ಗಾಯಕವಾಡ್ ಉತ್ತಮ ಬೌಲಿಂಗ್ ಮಾಡಿದ್ದರು.

ಸ್ಮೃತಿ ಮಂದಾನ ಮತ್ತು ಮೇಘನಾ ಸಿಂಗ್ ಅವರು ಎರಡನೇ ಪಂದ್ಯದಲ್ಲಿ ಕಣಕ್ಕಿಳಿಯುವ ನಿರೀಕ್ಷೆ ಇದೆ.

‘ಮ್ಯಾಂಚೆಸ್ಟರ್ ಸಿಟಿಯಿಂದ ಉತ್ತಮ ಸಾಧನೆ ನಿರೀಕ್ಷೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮ್ಯಾಂಚೆಸ್ಟರ್ ಸಿಟಿ ತಂಡವು ಉತ್ತಮ ಲಯದಲ್ಲಿದೆ. ಈ ಬಾರಿಯ ಚಾಂಪಿಯನ್ಸ್ ಲೀಗ್ ಟ್ರೋಫಿ ಗೆಲ್ಲುವ ವಿಶ್ವಾಸದಲ್ಲಿದೆ ಎಂದು ತಂಡದ ಮಾಜಿ ಆಟಗಾರ ಟೆರಿ ಫಲಾನ್ ಹೇಳಿದ್ದಾರೆ.

ಸೋನಿ ಸ್ಪೋರ್ಟ್ಸ್ ವರ್ಚುವಲ್ ಆಗಿ ಆಯೋಜಿಸಿದ್ದ ಸಂವಾದದಲ್ಲಿ ಅವರು ಮಾತನಾಡುತ್ತಿದ್ದರು. ರಹೀಂ ಸ್ಟರ್ಲಿಂಗ್ ಸೇರಿದಂತೆ ಅನುಭವಿ ಆಟಗಾರರು ತಂಡದ ಬಲವಾಗಿದ್ದು, ಉತ್ತಮ ಸಾಮರ್ಥ್ಯ ತೋರುವ ಸಾಧ್ಯತೆಯಿದೆ ಎಂದು ಅವರು ಅಭಿಪ್ರಾಯಪಟ್ಟರು.

ಯುಇಎಫ್‌ಎ ಚಾಂಪಿಯನ್ಸ್ ಲೀಗ್‌ನ 16ನೇ ಸುತ್ತಿನ ಪಂದ್ಯಗಳು ನಾಳೆಯಿಂದ ನಡೆಯಲಿದ್ದು, ಮೊದಲ ಪಂದ್ಯದಲ್ಲಿ ಕಿಲಿಯನ್ ಬಾಪೆ ಇರುವ ಪ್ಯಾರಿಸ್ ಸೇಂಟ್ ಜರ್ಮನ್ ಮತ್ತು ರಿಯಲ್ ಮ್ಯಾಡ್ರಿಡ್ ತಂಡಗಳು ಸೆಣಸಲಿವೆ. ರಾತ್ರಿ 1.30ರಿಂದ ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್‌ನಲ್ಲಿ ನೇರ ಪ್ರಸಾರವಾಗಲಿವೆ.



ಕಿಲಿಯನ್ ಬಾಪೆ



ಬೆಂಗಳೂರಿನ ಏರೋಸ್ಪೇಸ್ ಪಾರ್ಕ್‌ನಲ್ಲಿ ನಿರ್ಮಾಣವಾಗಲಿರುವ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯ ಕಟ್ಟಡಕ್ಕೆ ಬಿಸಿಸಿಐ ಅಧ್ಯಕ್ಷ ಸೌರವ್ ಗಂಗೂಲಿ ಮತ್ತು ಕಾರ್ಯದರ್ಶಿ ಜಯ್ ಶಾ ಸೋಮವಾರ ಭೂಮಿಪೂಜೆ ನೆರವೇರಿಸಿದರು –ಬಿಸಿಸಿಐ ಟ್ವಿಟರ್

ಎನ್‌ಸಿಎ ನೂತನ ಕಟ್ಟಡ ಕಾಮಗಾರಿಗೆ ಶಿಲಾನ್ಯಾಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯ ನೂತನ ಕಟ್ಟಡ ಕಾಮಗಾರಿಗೆ ಸೋಮವಾರ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಅಧ್ಯಕ್ಷ ಸೌರವ್ ಗಂಗೂಲಿ ಶಿಲಾನ್ಯಾಸ ಮಾಡಿದರು.

ಜಾಲ ಹೋಬಳಿಯ ಬಂಡೆ ಕೊಡಿಗೆಹಳ್ಳಿಯ ಹೈಟೆಕ್ ಡಿಫೆನ್ಸ್ ಮತ್ತು ಏರೋಸ್ಪೇಸ್ ಪಾರ್ಕ್‌ನಲ್ಲಿರುವ ಜಮೀನಿನಲ್ಲಿ ನೂತನ ಕಟ್ಟಡ ಮತ್ತು ಕ್ರಿಕೆಟ್ ಮೈದಾನ ನಿರ್ಮಾಣವಾಗಲಿದೆ.

2000ರಲ್ಲಿ ಬೆಂಗಳೂರಿನಲ್ಲಿ ಎನ್‌ಸಿಎ ಆರಂಭವಾಗಿತ್ತು. ಆಗಿನಿಂದಲೂ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕಾರ್ಯನಿರ್ವಹಣೆ ಮಾಡುತ್ತಿದೆ. ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯು ಇಲ್ಲಿಯ ‘ಬಿ’ ಗ್ರೌಂಡ್ ಅನ್ನು ಹೊರಾಂಗಣ ಅಭ್ಯಾಸ ಮತ್ತು ಒಳಾಂಗಣ, ಜಿಮ್ನಾಶಿಯಂಗಳನ್ನು ನೀಡಿದೆ.

ಇದೀಗ ನೂತನ ಅಕಾಡೆಮಿಯ ಕಟ್ಟಡವು ಒಂದು ವರ್ಷದಲ್ಲಿ ಸಿದ್ಧಗೊಳ್ಳುವ ನಿರೀಕ್ಷೆ ಇದೆ. ಇದರಲ್ಲಿ ಮೂರು ಮೈದಾನಗಳೂ ಇರಲಿವೆ. ಇದರಲ್ಲಿ ದೇಶಿ ಟೂರ್ನಿಯ ಪಂದ್ಯಗಳನ್ನು ಆಡುವ ಎಲ್ಲ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಬಿಸಿಸಿಐ ಜಮೀನನ್ನು 99 ವರ್ಷಗಳ ಅವಧಿಗೆ ಭೋಗ್ಯಕ್ಕೆ ಪಡೆದುಕೊಂಡಿದೆ.

‘ನೂತನ ಎನ್‌ಸಿಎ ನಿರ್ಮಾಣವಾಗಲಿದೆ. ಹೊಸ ತಾಣದಲ್ಲಿ ಶಿಲಾನ್ಯಾಸ ನೆರವೇರಿಸಲು ಸಂತಸವಾಗುತ್ತಿದೆ’ ಎಂದು ಗಂಗೂಲಿ ಟ್ವೀಟ್ ಮಾಡಿದ್ದಾರೆ.

‘ಕ್ರಿಕೆಟ್ ಪ್ರತಿಭೆಗಳಿಗೆ ಪ್ರೋತ್ಸಾಹ ನೀಡಲು ಮತ್ತು ಕ್ರೀಡೆಯ ಬೆಳವಣಿಗೆಗೆ ಈ ಮೂಲಸೌಲಭ್ಯವು ನೆರವಾಗಲಿದೆ. ಇದು ಸಾಮೂಹಿಕ ದೂರದೃಷ್ಟಿಯ ಫಲವಾಗಿದೆ’ ಎಂದು ಕಾರ್ಯದರ್ಶಿ ಜಯ್ ಶಾ ಟ್ವೀಟ್ ಮಾಡಿದ್ದಾರೆ.

ಬಿಸಿಸಿಐ ಉಪಾಧ್ಯಕ್ಷ ರಾಜೀವ್ ಶುಕ್ಲಾ, ಖಜಾಂಚಿ ಅರುಣ ಧುಮಾಲ್, ಜಂಟಿ ಕಾರ್ಯದರ್ಶಿ ಜಯೇಶ್ ಜಾರ್ಜ್, ಎನ್‌ಸಿಎ ಮುಖ್ಯಸ್ಥ ವಿವಿಎಸ್ ಲಕ್ಷ್ಮಣ್, ಕೆಎಸ್‌ಸಿಎ ಅಧ್ಯಕ್ಷ ರೋಜರ್ ಬಿನ್ನಿ, ಉಪಾಧ್ಯಕ್ಷ ಜೆ.ಅಭಿರಾಮ್, ಕಾರ್ಯದರ್ಶಿ ಸಂತೋಷ್ ಮೆನನ್, ಖಜಾಂಚಿ ವಿನಯ್ ಮೃತ್ಯುಂಜಯ, ಜಂಟಿ ಕಾರ್ಯದರ್ಶಿ ಶಾವೀರ್ ತಾರಾಪುರ್ ಹಾಜರಿದ್ದರು.

ಪ್ರೊ ಕಬಡ್ಡಿ ಲೀಗ್: ತೆಲುಗು ಟೈಟನ್ಸ್ ಎದುರು ಗೆದ್ದ ಪಟ್ನಾ ಪೈರೇಟ್ಸ್

ಪ್ರದೀಪ್ ಮಿಂಚು; ಯೋಧಾಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರದೀಪ್ ನರ್ವಾಲ್ ಮತ್ತು ಸುರೇಂದರ್ ಗಿಲ್ ಅವರ ಅಮೋಘ ದಾಳಿಯ ಬಲದಿಂದ ಯುಪಿ ಯೋಧಾ ತಂಡವು ಪ್ರೊ ಕಬಡ್ಡಿ ಟೂರ್ನಿಯಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಜಯಭೇರಿ ಬಾರಿಸಿತು.

ವೈಟ್‌ಫೀಲ್ಡ್‌ನ ಶೆರಟಾನ್ ಗ್ರ್ಯಾಂಡ್ ಹೋಟೆಲ್‌ನಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಯೋಧಾ ತಂಡವು 44–28ರಿಂದ ದಬಂಗ್ ಡೆಲ್ಲಿ ಎದುರು ಜಯಿಸಿತು. ಪ್ರದೀಪ್ ನರ್ವಾಲ್ 14 ಮತ್ತು ಗಿಲ್ ಆರು ಅಂಕಗಳನ್ನು ಗಳಿಸಿದರು. ಡಿಫೆಂಡರ್ ಶುಭಂ ಕುಮಾರ್ ನಾಲ್ಕು ಅಂಕ ಗಳಿಸಿದರು.

ಪಂದ್ಯದ ಆರಂಭದಿಂದಲೇ ಯೋಧಾ ತಂಡವು ಪಾರಮ್ಯ ಸಾಧಿಸಿತು. ಅರ್ಧವಿರಾಮದ ವೇಳೆಗೆ 18–12ರಿಂದ ಮುನ್ನಡೆಯನ್ನೂ ಸಾಧಿಸಿತು. ನಂತರದ ಅವಧಿಯಲ್ಲಿ ಡೆಲ್ಲಿ ತಂಡವು ಗಳಿಸಿದ್ದು ಕೇವಲ 16 ಅಂಕಗಳನ್ನು ಮಾತ್ರ. ಯೋಧಾ ತಂಡವು 26 ಅಂಕಗಳನ್ನು ಕಲೆಹಾಕಿತು. ಇದರಿಂದಾಗಿ ದೊಡ್ಡ ಅಂತರದ ಜಯದತ್ತ ಮುನ್ನಡೆಯಿತು.

ಇನ್ನೊಂದು ಪಂದ್ಯದಲ್ಲಿ ಪಟ್ನಾ ಪೈರೆಟ್ಸ್ ತಂಡವು 38–30ರಿಂದ ತೆಲುಗು ಟೈಟನ್ಸ್ ವಿರುದ್ಧ ಜಯಗಳಿಸಿತು.

ಪಟ್ನಾ ತಂಡದ ಗೆಲುವಿನಲ್ಲಿ ಸಚಿನ್ (14) ಮತ್ತು ಗುಮಾನ್ ಸಿಂಗ್ (4) ಮಿಂಚಿದರು. ಟೈಟನ್ಸ್ ತಂಡದ ರಜನೀಶ್ 10 ಮತ್ತು ಅಂಕಿತ್ ಬೆನಿವಾಲಾ 7 ಅಂಕಗಳನ್ನು ಗಳಿಸಿದರು.

ಮೊದಲಾರ್ಧದಲ್ಲಿ ಪಟ್ನಾ ತಂಡವು 21–20ರಿಂದ ಮುನ್ನಡೆಯಲ್ಲಿತ್ತು. ಪಂದ್ಯ ಸಾಗಿದಂತೆ ಮುನ್ನಡೆಯನ್ನು ಹೆಚ್ಚಿಸುತ್ತಾ ಸಾಗಿತು. ಮೊದಲಾರ್ಧದಲ್ಲಿ ಪಟ್ನಾ 15 ರೇಡಿಂಗ್ ಪಾಯಿಂಟ್ಸ್ ಗಳಿಸಿತ್ತು.

ದಿನದ ಮೂರನೇ ಹಣಾಹಣಿಯಲ್ಲಿ ಗುಜರಾತ್ ಜೈಂಟ್ಸ್ ಮತ್ತು ಪುಣೇರಿ ಪಲ್ಟನ್ ತಂಡಗಳ ನಡುವಣ ಪಂದ್ಯವು 31–31ರಿಂದ ಟೈನಲ್ಲಿ ಅಂತ್ಯವಾಯಿತು.



ದಬಂಗ್ ಡೆಲ್ಲಿ ತಂಡದ ವಿಜಯ್ ಮಲಿಕ್ ಅವರ ರೇಡಿಂಗ್ ವೈಖರಿ

ಇಂದಿನ ಪಂದ್ಯ (ರಾತ್ರಿ)

ಯು ಮುಂಬಾ– ಜೈಪುರ ಪಿಂಕ್ ಪ್ಯಾಂಥರ್ಸ್ Vs 7.30

ಪಟ್ನಾ ಪೈರೇಟ್ಸ್ – ಬೆಂಗಳೂರು ಬುಲ್ಸ್ 8.30

ಪುಣೇರಿ ಪಲ್ಟನ್ – ತಮಿಳ್ ತಲೈವಾಸ್ 9.30

ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಮುಖ್ಯಾಂಶಗಳು

- 14 ಅಂಕ ಗಳಿಸಿದ ಪ್ರದೀಪ್ ನರ್ವಾಲ್
- ಪಟ್ನಾ ತಂಡದ ಗೆಲುವಿನಲ್ಲಿ ಮಿಂಚಿದ ಸಚಿನ್

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್ಸ್
ಪಟ್ನಾ ಪೈರೇಟ್ಸ್	19	14	4	1	75
ದಬಂಗ್ ಡೆಲ್ಲಿ	20	10	6	4	65
ಯು ಪಿ ಯೋಧಾ	21	9	9	3	63
ಹರಿಯಾಣ ಸ್ಟೀಲರ್ಸ್	20	10	7	3	63
ಬೆಂಗಳೂರು ಬುಲ್ಸ್	20	10	8	2	60
ಗುಜರಾತ್ ಜೈಂಟ್ಸ್	20	8	8	4	57
ಪುಣೇರಿ ಪಲ್ಟನ್	19	10	8	1	55
ಯು ಮುಂಬಾ	19	7	7	5	53
ಜೈಪುರ ಪಿಂಕ್ ಪ್ಯಾಂಥರ್ಸ್	19	8	9	2	52
ತಮಿಳ್ ತಲೈವಾಸ್	19	5	8	6	47
ಬೆಂಗಾಲ್ ವಾರಿಯರ್ಸ್	20	7	10	3	47
ತೆಲುಗು ಟೈಟನ್ಸ್	20	1	15	4	27

(ಸೋಮವಾರದ ಪಂದ್ಯಗಳ ಅಂತ್ಯಕ್ಕೆ)

ಚಳಿಗಾಲದ ಒಲಿಂಪಿಕ್ಸ್: ಸ್ಪೀಡ್ ಸ್ಕೇಟಿಂಗ್

ಪದಕ ಗೆದ್ದ ಕಪ್ಪು ಜನಾಂಗದ ಮೊದಲ ಮಹಿಳೆ ಎರಿನ್

ಬೀಜಿಂಗ್ (ರಾಯಿಟರ್ಸ್/ ಎಎಫ್‌ಪಿ): ಅಮೆರಿಕದ ಎರಿನ್ ಜಾಕ್ಸನ್ ಮಹಿಳೆಯರ 500 ಮೀಟರ್ಸ್ ಸ್ಪೀಡ್ ಸ್ಕೇಟಿಂಗ್ ವಿಭಾಗದ ಸ್ಪರ್ಧೆಯ ಮುಕ್ತಾಯದ ಗೆರೆ ದಾಟುತ್ತಿದ್ದಂತೆ ಚಾರಿತ್ರಿಕ ಸಾಧನೆಯೊಂದು ದಾಖಲಾಯಿತು. ಚಳಿಗಾಲದ ಒಲಿಂಪಿಕ್ಸ್‌ನಲ್ಲಿ ಚಿನ್ನ ಗೆಲ್ಲುವುದರೊಂದಿಗೆ ಪದಕದ ಸಾಧನೆ ಮಾಡಿದ ಕಪ್ಪು ಜನಾಂಗದ ಮೊದಲ ಮಹಿಳೆ ಎಂಬ ಶ್ರೇಯ ಅವರದಾಯಿತು.

ರಾಷ್ಟ್ರೀಯ ಸ್ಪೀಡ್ ಸ್ಕೇಟಿಂಗ್ ಓವಲ್‌ನಲ್ಲಿ ನಡೆದ ಸ್ಪರ್ಧೆಯ ಆರಂಭದಿಂದಲೂ ಎರಿನ್ ಅಮೋಘ ಸಾಮರ್ಥ್ಯ ತೋರಿದರು. ಅಮೆರಿಕ ತಂಡಕ್ಕೆ ಈ ಒಲಿಂಪಿಕ್ಸ್‌ನ ಸ್ಪೀಡ್ ಸ್ಕೇಟಿಂಗ್‌ನಲ್ಲಿ ಒಲಿದ ಮೊದಲ ಚಿನ್ನವೂ ಇದಾಗಿದೆ.

ಎರಿನ್ ಜಾಕ್ಸನ್ ಅವರು 37.04 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರೆ, ಬೆಳ್ಳಿ ಗೆದ್ದ ಜಪಾನ್‌ನ ಮಿಹೊ ತಕಾಗಿ 37.12 ಸೆಕೆಂಡುಗಳಲ್ಲಿ ರೇಸ್ ಮುಗಿಸಿದರು. ಕಂಚಿನ ಪದಕವು ರಷ್ಯಾ ಒಲಿಂಪಿಕ್ಸ್ ಸಮಿತಿಯ ಎಂಜೆಲಿನಾ ಗೋಲಿಕೊವ (37.21 ಸೆಕೆಂಡು) ಅವರ ಪಾಲಾಯಿತು.

ವೇಲಿವಾ ಸ್ಪರ್ಧೆಗೆ ಅನುಮತಿ: ಉದ್ದೀಪನ ಮದ್ದು ಸೇವಿಸಿ ಸಿಕ್ಕಿಬಿದ್ದಿರುವ ರಷ್ಯಾದ ಯುವ ಫಿಗರ್ ಸ್ಕೇಟಿಂಗ್ ಅಥ್ಲೀಟ್ ಕ್ಯಾಮಿಲಾ ವೇಲಿವಾ ಸ್ಪರ್ಧೆಗೆ ಕ್ರೀಡಾ ನ್ಯಾಯಾಲಯ ಅನುಮತಿ ನೀಡಿದೆ. ಉದ್ದೀಪನ ಮದ್ದು ಸೇವನೆ ಪರೀಕ್ಷೆಯಲ್ಲಿ ವಿಫಲವಾದ ಕಾರಣಕ್ಕೆ ಅವರನ್ನು ಅಮಾನತು ಮಾಡುವಂತಿಲ್ಲ ಎಂದು ಕೋರ್ಟ್ ಹೇಳಿದೆ.

ಮಂಗಳವಾರ ಆರಂಭವಾಗುವ ಮಹಿಳಾ ಸಿಂಗಲ್ಸ್ ಸ್ಪರ್ಧೆಯಲ್ಲಿ 15 ವರ್ಷದ ಅಥ್ಲೀಟ್ ಭಾಗವಹಿಸಬಹುದು ಎಂದು ಕೋರ್ಟ್ ತೀರ್ಪು ನೀಡಿದೆ. ಆದರೆ ಅವರು ಪ್ರಕರಣದಿಂದ ಮುಕ್ತರಾಗಿಲ್ಲ. ಮುಂದೆಯೂ ಶಿಕ್ಷೆ ಎದುರಿಸಬಹುದಾಗಿದೆ.



ಎರಿನ್ ಜಾಕ್ಸನ್– ಎಎಫ್‌ಪಿ ಚಿತ್ರ

ವಾಲಿಬಾಲ್: ಕ್ಯಾಲಿಕಟ್ ಹೀರೊಸ್‌ಗೆ ಮಣಿದ ಬೆಂಗಳೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಟಾರ್ಪಿಡೋಸ್ ತಂಡವನ್ನು ಮಣಿಸಿದ ಕ್ಯಾಲಿಕಟ್ ಹೀರೊಸ್ ತಂಡವು ಪ್ರೈಮ್ ವಾಲಿಬಾಲ್ ಲೀಗ್‌ನಲ್ಲಿ ಮೊದಲ ಗೆಲುವು ಸಂಪಾದಿಸಿತು.

ಹೈದರಾಬಾದ್‌ನ ಗಚ್ಚಿಬೌಳಿ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಕ್ಯಾಲಿಕಟ್ 15-12, 15-12, 15-9, 14-15, 15-13ರಿಂದ ಬೆಂಗಳೂರು ವಿರುದ್ಧ ಗೆದ್ದಿತು. ಈ ಜಯದ ಮೂಲಕ ಕ್ಯಾಲಿಕಟ್ ಎರಡು ಪಾಯಿಂಟ್ಸ್ ಗಳಿಸಿತು. ತಂಡದ ನಾಯಕ ಜೆರೋಮ್ ವಿನೀತ್ ಪಂದ್ಯದ ಆಟಗಾರ ಗೌರವ ಗಳಿಸಿದರು.

ಮಂಗಳವಾರ ನಡೆಯುವ ಪಂದ್ಯದಲ್ಲಿ ಕೋಲ್ಕತ್ತ ಥಂಡರ್ ಬೋಲ್ಟ್ಸ್ ತಂಡವು ಹೈದರಾಬಾದ್ ಬ್ಲಾಕ್ ಹಾಕ್ಸ್ ತಂಡವನ್ನು ಎದುರಿಸಲಿದೆ.

ಸ್ಮಿತ್ ಕಂಕಷನ್: ಸರಣಿಗೆ ಅಲಭ್ಯ


ಸ್ಟೀವನ್ ಸ್ಮಿತ್

ಸಿಡ್ನಿ (ಪಿಟಿಐ): ಶ್ರೀಲಂಕಾ ಎದುರು ಭಾನುವಾರ ನಡೆದಿದ್ದ ಟಿ20 ಪಂದ್ಯದಲ್ಲಿ ಆಸ್ಟ್ರೇಲಿಯಾ ಬ್ಯಾಟರ್ ಸ್ಟೀವನ್ ಸ್ಮಿತ್ ಅವರಿಗೆ ಫೀಲ್ಡಿಂಗ್ ಮಾಡುವ ಸಂದರ್ಭದಲ್ಲಿ ತಲೆಗೆ ಪೆಟ್ಟಾಗಿತ್ತು. ಆದ್ದರಿಂದ ಅವರನ್ನು ಸರಣಿಯಲ್ಲಿರುವ ಮುಂದಿನ ಮೂರು ಪಂದ್ಯಗಳಿಂದ ಕೈಬಿಡಲಾಗಿದೆ.

ಕಂಕಷನ್ ನಿಯಮದ ಪ್ರಕಾರ ಅವರ ಆರೋಗ್ಯ ತಪಾಸಣೆ ನಡೆಸಲಾಯಿತು.

‘ಹೆಚ್ಚು ಪೆಟ್ಟಾಗಿಲ್ಲ. ಆದರೆ, ಶಿಷ್ಟಾಚಾರದ ಪ್ರಕಾರ ಕೆಲವು ದಿನಗಳವರೆಗೆ ಅವರಿಗೆ ಚಿಕಿತ್ಸೆ ನೀಡಲಾಗುವುದು. 6–7 ದಿನಗಳಲ್ಲಿ ಅವರು ಗುಣಮುಖರಾಗುವ ನಿರೀಕ್ಷೆ ಇದೆ’ ಎಂದು ಕ್ರಿಕೆಟ್ ಆಸ್ಟ್ರೇಲಿಯಾ ಪ್ರಕಟಣೆಯಲ್ಲಿ ತಿಳಿಸಿದೆ.

ಲಂಕಾ ಎದುರಿನ ಪಂದ್ಯದಲ್ಲಿ ಚೆಂಡು ಸಿಕ್ಸರ್ ಆಗುವುದನ್ನು ತಪ್ಪಿಸಲು ಬೌಂಡರಿಲೈನ್ ಬಳಿ ಸ್ಮಿತ್ ಡೈವ್ ಮಾಡಿದರು. ಕೆಳಗೆ ಬಿದ್ದಾಗ ತಲೆಗೆ ಪೆಟ್ಟಾಯಿತು. ಕೂಡಲೇ ವೈದ್ಯರನ್ನು ಕರೆಸಿ ಪ್ರಥಮ ಚಿಕಿತ್ಸೆ ಕೊಡಿಸಿ ನಂತರ ಸ್ಮಿತ್ ಅವರನ್ನು ಡ್ರೆಸಿಂಗ್ ಕೋಣೆಗೆ ಕರೆದೊಯ್ಯಲಾಯಿತು.

ಮಾರ್ಚ್ ತಿಂಗಳಲ್ಲಿ ಆಸ್ಟ್ರೇಲಿಯಾ ತಂಡವು ಪಾಕಿಸ್ತಾನ ಪ್ರವಾಸಕ್ಕೆ ತೆರಳಲಿದೆ. ಅಲ್ಲಿಯವರೆಗೆ ಸ್ಮಿತ್ ಚೇತರಿಸಿಕೊಂಡು ಪಾಕ್‌ಗೆ ತೆರಳುವ ನಿರೀಕ್ಷೆ ಇದೆ.